THE BOOK WAS DRENCHED

UNIVERSAL LIBRARY
OU_200567
UNIVERSAL LIBRARY

University of Mysore

Oriental Library Publications

KANNADA SERIES No. 23

GENERAL EDITOR

M. S. BASAVALINGAYYA, M.A., B.L.,

Curator, Govt. Oriental Library, Mysore

ಕುಮಾರವ್ಯಾಸ ಮಹಾಕವಿ ವಿರಚಿತ

ಕರ್ಣಾಟಕ ಮಹಾಭಾರತ

ಒಂಬತ್ತನೆಯ ಸಂಪುಟ

ಕರ್ಣಪರ್ವ

THE

KARNĀTAKA MAHĀBHĀRATA

BY

KUMĀRA VYĀSA

Vol. IX

KARNA PARVA

EDITED BY

THE KANNADA MAHABHARATA

EDITORIAL COMMITTEE

ASSISTED BY

N. ANANTHARANGACHAR, M.A., B.T.,

Kannada Pandit, Govt. Oriental Library, Mysore

MYSORE

PRINTED BY THE ASST. SUPDT., GOVT. BRANCH PRESS

1940

ಮುನ್ನುಡಿ

ಮೈಸೂರು ಪ್ರಾಚ್ಯಕೋಶಾಗಾರದಿಂದ ಹಿಂದೆ ಪ್ರಕಟವಾದ ಭೀಷ್ಮ ದ್ರೋಣಪರ್ವಗಳಂತೆ ಈ ಕರ್ಣಪರ್ವವೂ ಪ್ರಾಚ್ಯಕೋಶಾಗಾರದ ಕಾರ್ಯ ನಿರ್ವಾಹಕ ಸಮಿತಿಯಿಂದ ಮಹಾಭಾರತದ ಶೋಧನೆಗೆ ನಿಯಮಿತವಾದ ಸಂಪಾದಕ ಮಂಡಲಿಯಿಂದ ಶೋಧಿತವಾಗಿ ಮುದ್ರಿಸಲ್ಪಟ್ಟಿದೆ. ಈ ಮಂಡಲಿಯ ಸದಸ್ಯರಲ್ಲಿ ಈ ಪರ್ವದ ಶೋಧನೆಯು ಪ್ರಾರಂಭವಾದಮೇಲೆ ಶ್ರೀಮಾನ್ ಡಿ. ಶ್ರೀನಿವಾಸಾಚಾರ್ಯ, ಎಂ.ಎ., ಅವರು ವಿಶ್ರಾಂತಿಯನ್ನು ಪಡೆದುದರಿಂದಲೂ, ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯ, ಎಂ.ಎ., ಅವರು ಪರಂಧಾಮವನ್ನೈದಿದುದರಿಂದಲೂ ಸಮಿತಿಯನ್ನು ಕೆಳಗೆ ಕಂಡಂತೆ ಮಾರ್ಪಡಿಸಲಾಯಿತು :

೧. ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು, ಎಂ.ಎ , ಬಿ ಎಲ್.

೨. ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳು ಎಂ ಎ.

೩. ಶ್ರೀಮಾನ್ ಎಂ. ಎಸ್. ಬಸವಲಿಂಗಯ್ಯನವರು, ಎಂ.ಎ., ಬಿ.ಎಲ್.

೪. ಶ್ರೀಮಾನ್ ಆಸ್ಥಾನ ಧರ್ಮಾಧಿಕಾರಿ ತಿರುವಳ್ಳೂರು ಶ್ರೀನಿವಾಸರಾಘವಾಚಾರ್ಯರು.

೫. ಶ್ರೀಮಾನ್ ತಿ. ನಂ. ಶ್ರೀಕಂಠಯ್ಯನವರು, ಎಂ ಎ.

ಈ ಪರ್ವವನ್ನು ಹನ್ನೊಂದು ಕೈಬರಹದ ಪ್ರತಿಗಳ ಸಹಾಯದಿಂದ ತಿದ್ದಿದೆ. ಇವುಗಳಲ್ಲಿ (ಘ. ಚ. ತ. ನ. ಪ. ಬ.) ಪ್ರತಿಗಳನ್ನು ಬಿಟ್ಟು ಉಳಿದುವು ಕೋಶಾಗಾರದಲ್ಲಿರತಕ್ಕುವು. (ಘ) ಎಂಬುದು ಶಾಸನದ ಇಲಾಖೆಯ ಪಂಡಿತರಾದ ಶ್ರೀಮಾನ್ ಆರ್. ರಾಮಾನುಜ ಚಕ್ರವರ್ತಿಗಳು ಕೊಟ್ಟುದು. (ಚ) ಎಂಬುದು ಅಳಿಲುಘಟ್ಟದ ಶಾನುಭೋಗರು ಕೊಟ್ಟ ಪ್ರತಿ. (ತ) ಎಂಬುದು ಶಾಸನದ ಇಲಾಖೆಯ ಅಸಿಸ್ಟೆಂಟರಾದ ಶ್ರೀಮಾನ್ ಆರ್. ರಾಮರಾಯರ ಮೂಲಕ ಗೌಜುಗ್ರಾಮದ ಗಣೇಶಭಟ್ಟರಿಂದ ಬಂದ ಪ್ರತಿ. ಈಗಿರುವ ಪ್ರತಿಗಳಲ್ಲಿ ಇದೇ ಉತ್ತಮವಾದುದು. (ನ) ಎಂಬುದು ಮೈಸೂರು ಇಂಟರ್‌ಮೀಡಿಯೇಟ್ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್ಯರು ಕೊಟ್ಟ ಪ್ರತಿ.

(ಪ) ಮತ್ತು (ಬ) ಎಂಬುವು ಕ್ರಮವಾಗಿ ಮದ್ರಾಸ್ ಪ್ರಾಚ್ಯಕೋಶಾಗಾರದ ೧೬-೮-೧೦ ಮತ್ತು ೧೮-೧-೨೦ನೆಯ ನಂಬರಿನ ಪ್ರತಿಗಳು.

ಕೋಶಾಗಾರದ ಪ್ರತಿಗಳಲ್ಲಿ—

(ಕ) ಇದು ಕೈಬರಹದ ಕೆ. ೨೦೫ನೆಯ ನಂಬರಿನ ಪ್ರತಿ. ಕ್ರಿ. ಶ. ೧೫೫೪ರಲ್ಲಿ ಪ್ರತಿಯಾದುದು. ಇದುವರೆಗೆ ನಮಗೆ ದೊರೆತಿರುವ ಕನ್ನಡ ಮಹಾಭಾರತದ ಕೈಬರಹದ ಪ್ರತಿಗಳಲ್ಲಿ ಇದೇ ಅತ್ಯಂತ ಪ್ರಾಚೀನವಾದುದು.

(ಖ) ಇದು ಕೆ. ೫೪೧ನೆಯ ನಂಬರಿನ ಪ್ರತಿ. ಸಾಮಾನ್ಯವಾಗಿ ಶುದ್ಧವಾಗಿದೆ.

(ಗ) ಇದು ಕೆ. ೭೦ನೆಯ ನಂಬರಿನ ಪ್ರತಿ. ಶಾ. ಶ. ೧೬೬೩ರಲ್ಲಿ ಪ್ರತಿಯಾದುದು.

(ಟ) ಇದು ಕೆ. ೨೫೧ನೆಯ ನಂಬರಿನ ಪ್ರತಿ.

(ದ) ಇದು ಕೆ. ೧೬೩ನೆಯ ನಂಬರಿನ ಪ್ರತಿ.

ಹಿಂದಿನ ಪರ್ವಗಳಂತೆ ಈ ಪರ್ವವನ್ನು ಶೋಧನೆಮಾಡುವುದರಲ್ಲಿಯೂ ಎಲ್ಲ ಪ್ರತಿಗಳಲ್ಲಿಯೂ ದೊರೆಯುವ ಪದ್ಯಗಳನ್ನೇ ಮೂಲಪಾಠವನ್ನಾಗಿಟ್ಟುಕೊಂಡು ಕೆಲವು ಪ್ರತಿಗಳಲ್ಲಿ ಮಾತ್ರ ದೊರೆಯುವ ಪದ್ಯಗಳಲ್ಲಿ ಸೂಕ್ತವಾಗಿ ಕಂಡುಬಂದುವುಗಳನ್ನು ಒಂದೆರಡು ಪದ್ಯಗಳಾಗಿದ್ದರೆ ಪುಟದಡಿಯಲ್ಲಿಯೂ ಅನೇಕ ಪದ್ಯಗಳಾಗಿದ್ದರೆ ಕೊನೆಯಲ್ಲಿ ಪರಿಶಿಷ್ಟವಾಗಿಯೂ ಕೊಟ್ಟಿದೆ.

ಪಾಠಗಳನ್ನು ಶೋಧಿಸುವುದಕ್ಕೆ ಪ್ರತಿಗಳನ್ನು ದಯವಿಟ್ಟು ಕೊಟ್ಟು ಸಹಾಯಮಾಡಿದ ಎಲ್ಲ ಮಹನೀಯರಿಗೂ ಪ್ರಾಚ್ಯಕೋಶಾಗಾರವು ಋಣಿಯಾಗಿದೆ.

ವಿಷಯಾನುಕ್ರಮಣಿಕೆ

ಸಂಧಿ	ವಿಷಯ	ಪುಟ
೧.	ಕರ್ಣನ ಸೇನಾಧಿಪತ್ಯಾಭಿಷೇಕ ...	೧–೮
೨.	ಭೀಮನು ಕ್ಷೇಮಧೂರ್ತಿಯನ್ನು ಕೊಲ್ಲುವುದು	೯–೧೪
೩.	ಸಾತ್ಯಕಿಯ ಯುದ್ಧ	೧೫–೨೨
೪.	ಧರ್ಮರಾಯನು ದುರ್ಯೋಧನನನ್ನು ಗೆಲ್ಲುವುದು	೨೩–೩೨
೫.	ಶಲ್ಯನನ್ನು ಕರ್ಣನ ಸಾರಥಿಯನ್ನಾಗಿ ನೇಮಿಸುವುದು.	೩೩–೪೧
೬–೭.	ತ್ರಿಪುರದಹನದ ಕಥೆ	೪೨–೬೦
೮.	ಸಾರಥಿಯಾದ ಶಲ್ಯನೊಡನೆ ಕರ್ಣನ ಯುದ್ಧರಂಗ ಪ್ರವೇಶ.	೬೧–೭೦
೯.	ಕರ್ಣ ಶಲ್ಯರ ಒಳಜಗಳ	೭೧–೮೦
೧೦.	ಭೀಮನಿಂದ ಸುಷೇಣನ ಮರಣ	೮೧–೯೨
೧೧.	ಕರ್ಣನು ಧರ್ಮರಾಯನನ್ನು ಗೆಲ್ಲುವುದು	೯೩–೧೦೭
೧೨.	ಭೀಮನು ಕರ್ಣನನ್ನು ಗೆಲ್ಲುವುದು ...	೧೦೮–೧೧೫
೧೩.	ಭೀಮನಿಂದ ಕೌರವಾನುಜರು ಸಾಯುವುದು ಮತ್ತು ಧರ್ಮರಾಯನನ್ನು ಕರ್ಣನು ಸೋಲಿಸುವುದು.	೧೧೬–೧೨೬
೧೪.	ಅರ್ಜುನನು ಕೌರವ ಸೈನ್ಯವನ್ನು ಗೆಲ್ಲುವುದು ...	೧೨೭–೧೩೬
೧೫.	ಭೀಮನ ಘೋರ ಯುದ್ಧ	೧೩೭–೧೪೫
೧೬.	ಪಾರ್ಥನು ಕೃಷ್ಣನೊಡನೆ ಧರ್ಮರಾಯನನ್ನು ಕಾಣುವುದು.	೧೪೬–೧೫೪
೧೭.	ಧರ್ಮರಾಯನನ್ನು ಬಯ್ದುದಕ್ಕಾಗಿ ನೊಂದ ಅರ್ಜುನನನ್ನು ಕೃಷ್ಣನು ಸಮಾಧಾನಪಡಿಸುವುದು.	೧೫೫–೧೬೬

ಸಂಧಿ	ವಿಷಯ	ಪುಟ
೧೮.	ಕರ್ಣನ ವಧೆಗೆ ಧರ್ಮರಾಯನ ಅಪ್ಪಣೆಯನ್ನು ಪಡೆದು ಅರ್ಜುನನು ಯುದ್ಧಕ್ಕೆ ಹೊರಡುವುದು.	೧೬೭–೧೭೩
೧೯.	ದುಶ್ಶ್ಯಾಸನನ ವಧೆ	....೧೭೪–೧೯೭
೨೦.	ವೃಷಸೇನನ ಮರಣ	....೧೯೮–೨೦೭
೨೧.	ಕರ್ಣಾರ್ಜುನರ ಯುದ್ಧರಂಗಪ್ರವೇಶ	....೨೦೮–೨೧೩
೨೨.	ಪ್ರಪಂಚದ ಎಲ್ಲ ವಸ್ತುಗಳೂ ಕರ್ಣಾರ್ಜುನರ ಸಹಾಯಕ್ಕಾಗಿ ಹಂಚಿಕೆಯಾಗುವುದು.	೨೧೪–೨೨೫
೨೩–೨೪.	ಕರ್ಣಾರ್ಜುನರ ಕಾಳೆಗ	....೨೨೬–೨೪೯
೨೫.	ಕರ್ಣನು ಸರ್ಪಾಸ್ತ್ರವನ್ನು ಪ್ರಯೋಗಿಸುವುದು	....೨೫೦–೨೬೦
೨೬.	ಕರ್ಣನ ವಧೆ	....೨೬೧–೨೭೩
೨೭.	ಕರ್ಣನ ಸಾವಿಗಾಗಿ ದುರ್ಯೋಧನನ ಪ್ರಲಾಪ	....೨೭೪–೨೮೧
	ಪರಿಶಿಷ್ಟ	....೨೮೨–೩೦೦

ಕನ್ನಡ ಮಹಾಭಾರತ

ಕರ್ಣ ಪರ್ವ

ಮೊದಲನೆಯ ಸಂಧಿ

ಸೂಚನೆ ॥ ರಾಯಕಟಕಾ[1]ಚಾರ್ಯನಾ[1] ತಱು
ವಾಯು ಸೇನಾಪಟ್ಟವನು ರಾ
ಧೇಯನಲಿ ರಚಿಸಿದನು ಮುದದಲಿ ಕೌರವರ ರಾಯ ॥

ಕೇಳು ಜನಮೇಜಯ ಧರಿತ್ರೀ
ಪಾಲ ತೆಗೆದವು ಬಲವೆರಡು ನಿಜ
ಪಾಳಯಕೆ ಪರಿತೋಷಖೇದಸ್ತಿಮಿತ[2]ವಿಕ್ರಮರು[2] ।
ಕೋಲ ಗುರುವಿನ ಮರಣ ವಾರ್ತಾ
ಕಾಲ ಸರ್ಪನ ತಂದು ಸಂಜಯ
ಹೇಳಿಗೆಯನೀಡಾಡಿದನು ಧೃತರಾಷ್ಟ್ರನಿದಿರಿನಲಿ ॥ ೧

ಬೆದಱಿತಾಯಾಸ್ಥಾನ ಧಿಗಿಲೆಂ
ದುದು ಧರಾಧೀಶ್ವರನ ತಂದೆಯ
ಹೃದಯದಲಿ ಹುರು[3]ಳೇನು[3] ಬಳಿಕುಳಿದವರ ಮೋಱೆಗಳ ।
ಕದಡಿತಂತಃಕರಣವರಸನ
ಕದಪು ಕೈಯಲಿ ಕೀಲಿಸಿತು ಹೇ
ಳಿದನು ಸಂಜಯ ಮತ್ತೆ ಮೇಲಣ ರಣದ ವಾರ್ತೆಯನು ॥ ೨

ಗುಡಿಯ ಕಟ್ಟಿಸು ಜೀಯ ಬಱಿತುದು
ಕಡಲು ಮುಱಿದುದು ಮೇರು [4]ತಿರುಗಿತು[4]
ಪೊಡವಿ ಬಿದ್ದುದು ಭಾನುಮಂಡಲವ[5]ಹಹ[5] ವಿತಳದಲಿ ।
ಮಡಿದುದೈ ನಿನ್ನಾನೆ ನಿನ್ನು
ಗ್ಗಡದ ಭಟ ಬೀಳ್ಕೊಂಡನೈ ಕಡಿ
ವಡೆದನೈ ಕಲಿಕರ್ಣನೊಸಗೆಯ ಮಾಡಹೇಳೆಂದ ॥ ೩

[1] ಚಾರಿಯನ (ಪ). [2] ವಿಗ್ರಹರು (ಕ). [3] ಳಿಲ್ಲ (ಕ). [4] ತಗ್ಗಿತು (ಟ), ಕರಗಿತು (ತ.ಪ). [5] ಮಮ (ಗ.ಟ).

ಮೊದಲಲಿದ್ದುದು ಜೀವಕಳೆ ಹೃದ
ಯದಲಿ ಹೃದಯವನೊಡೆದು ಮಿಗೆ ಕಂ
ಠದಲಿ ಕವಿದುದು ಮಂಚದಲಿ ಮೈಮುಱಿದು ಮಲಗಿದನು।
ಕೆದಱಿತಲ್ಲಿಯದಲ್ಲಿ ರಾಯನ
ಹದನನಱಿದೊಳಗೊಳಗೆ [1]ರಾ[1]ಣಿಯ
ರೊದಱಲಂತಃಪುರದಲುಕ್ಕಿತು ಶೋಕರಸಜಲಧಿ ॥ ೪

ಬಾಯ ಬಸುಱಿನ ನೊಸಲ ಹೊಯ್ಲಿನ
ರಾಯನರಸಿಯರ[2]ರಸನಿದಿರಲಿ[2]
ಹಾಯಿದರು ಭಿತ್ತಿಗಳನೊದಱಿದರೊಡನೆ ದೆಸೆಯೊದಱೆ।
ರಾಯನಾವೆಡೆ [3]ಜೀಯ[3] ಕಲಿರಾ
ಧೇಯನಾವೆಡೆ ನೂಱು ಮಕ್ಕಳು
ಬೀಯವಾದರೆ ಮಾವ ಎಂದರು ಸೊಸೆಯರಡಗೆಡೆದು ॥ ೫

ರವಕುಳವ ನಾನೇನ ಹೇಳುವೆ
ನವನಿಪತಿಯಾ ಕರ್ಣ ಮೊದಲಾ
ದವರ ರಾಣೀವಾಸ ಬಹಳಾಕ್ರಂದನ ಧ್ವನಿಯು।
ಕವಿದುದೊಳಸೂಱೆಗರು ಕೋಟೆಯ
ತವಕಿಗರು ಗುಜುಗುಜಿಸೆ ಬಿಗಿದವು
ಭವನಭವನಕವಾಟ [4]ತ[4]ತಿಗಾಳಾಯ್ತು ಗಜನಗರ ॥ ೬

ನೆರೆದುದಲ್ಲಿಯದಲ್ಲಿ ಸೂಱೆಗೆ
ಹರಿದುದಲ್ಲಿಯದಲ್ಲಿ ಮನ ಮ
ತ್ಸರದ[5]ಜಗಳಕೆ[5] [6]ಸೂಳುಬಂಟರು[6] ಹೊಯ್ದರೊಳಗೊಳಗೆ ।
ಅರಮನೆಯಲಾ ಬೊಬ್ಬೆ ಹಸ್ತಿನ
ಪುರದಲೀ ಬೊಬ್ಬಾಟವಿನ್ನಳಿ
ದರಸುಗಳ ಪಾಡಾವುದೆಂದನು ಮುನಿ ನೃಪಾಲಂಗೆ ॥ ೭

ಸೂಱೆ[7]ಹೋದುದು[7] ನಗರಿ ಖಳರಿಗೆ
ಮಾಱಿದರು ಪಟ್ಟಣವನಕಟಾ
ಕಾಱುಮ[8]ದ್ದಿಗೆ ಹೋಹುದೇ ಕೈಮುಸಕ[8]ವವನಿಪನ।

[1] ರವು (ಕ). [2] ರತ್ತಯಿದಿರಲಿ (ನ.ಪ.ಬ). [3] ಮಾವ (ಕ). [4] ವ (ತ).
[5] ಬಳಿವಿಗೆ (ಕ), ಬೆಳವಿಗೆ (ನ). [6] ಸೂಳೆಬಂಟಿಕೆ (ಕ). [7] ಯೋದುದು (ನ), ಪೋಯಿತು (ತ). [8] ನಲಾಯ್ತಲಾ ಕೈಮುಸಕಿದ (ಕ.ಗ).

ನೂಱು ಮಕ್ಕಳನಿಕ್ಕಿ ಸಾಧಿಸ
ಲಾಱನೇ ಜಯಸಿರಿಯನೆಂದುಱೆ
[1]ಮಿಱಿ[1] ನುಡಿ[2]ದುದು[2] ಮಂತ್ರಿಗಳು ಧೃತರಾಷ್ಟ್ರನಿದಿರಿನಲಿ ‖ ೮

ಎರಡು ಗಲ್ಲದ ನಯನವಾರಿಯ
ಹರಿಕುಣಿಯ [3]ನಿಲಿ[3]ಸಿದನು ಸಂಜಯ
ನರಸನನು ಕುಳ್ಳಿರಿಸಿ ಬೆನ್ನಿಗೆ ಚಾಚಿದನು ಮಲಗ ।
ಅರಸ ಹದುಳಿಸು ನಿನ್ನ ಸೊಸೆಯರ
ಕರೆದು ಸಂತೈಸೆಕಟ ಹಸ್ತಿನ
ಪುರದ ಗಾವಳಿ ಗಜಬಜಕೆ ಡಂಗುರವ ಹೊಯ್ಸೆಂದ ‖ ೯

ಬೀದಿಬೀದಿಗಳೊಳಗೆ ಡಂಗುರ
ನಾದವೆಸೆ[4]ದವು[4] ಕೇರಿಕೇರಿಗೆ
ಕೈದುಕಾಱರು ನೆರೆದು ನಿಂದರು ಸೂಱೆಗರ ಕೆಡಹಿ ।
ಸುಯ್ದನಡಿಗಡಿಗೊಲೆದೊಲೆದು ಪರಿ
ಖೇದ ಶೋಕ ಜ್ವಲನ ಜನಿತ
ಸ್ವೇದ ಸಲಿಲ ಸ್ತಿಮಿತ ಕಾಯನು ರಾಯನಿಂತೆಂದ ‖ ೧೦

ಹೇಳು ಸಂಜಯ ನಮ್ಮ ಭಾಗ್ಯದ
ಶಾಳಿ ವನ ಫಲವಾಯ್ತಲಾ ಕೈ
ಮೇಳವಿಸಿದನೆ ಕರ್ಣನಮರಸ್ತ್ರೀ ಕದಂಬದಲಿ ।
ಹೇಳು ಹೇಳೆನ್ನಾಣೆ ಮಾತಿನ
ಜಾಳಿಗೆಯ ಮಱೆ ಬೇಡ ಕುರುಪತಿ
ಕಾಳಿಗದೊಳಸ್ತಮಿಸಿದನೆ ನುಡಿಯಂಜಬೇಡೆಂದ ‖ ೧೧

ಸಾವೆನಾನೆಂದಂಜದಿರು ಕ
ರ್ಣಾವಸಾನವ ಕೇಳಿ ತನ್ನಯ
ಜೀವವಿದಲಾ ದೇಹದಲಿ ಬೇಱಿನ್ನು ಕೆಲ[5]ಬರಲಿ[5] ।
[6]ಸಾವೆನೇ[6] [7]ತಾ[7]ನಕಟ ಕೌರವ
ಜೀವಿಸಲಿ ಮೇಣಳಿಯಲೆಮಗಿ
ನ್ನಾವ ತೊಡ[8]ಕಿಲ್ಲಿನ್ನು[8] ವಜ್ರಶರೀರ ತಾನೆಂದ ‖ ೧೨

[1] ದೂ (ಕ). [2] ದರು (ಭ) [3] ಕೆಡ (ಕ). [4] ದುದು (ತ). [5] ವುದಿನ (ಕ). [6] ಸಾವವನೆ (ತ). [7] ನಾ (ತ). [8] ಕುಗಳಿಲ್ಲ (ಕ).

ಘಾಯವಡೆದನು ಭೀಷ್ಮ ಬಳಿಕಿನೊ
ಳಾಯುಧದ ಗುರು ತೊಡಬೆಗಳಚಿದ
ನೀಯವಸ್ಥೆಗೆ ನಮ್ಮ ತಂದನು [1]ಭಾನುನಂದನನು[1] |
ಸಾಯನೇ ಮಗನಿನ್ನು ಸಾಕಾ
ನಾಯ ನುಡಿಯಂತಿರಲಿ ಕರ್ಣಂ
ಗಾಯಿತೇ ಕಡೆ ಶೋಕವನು ವಿಸ್ತರಿಸಿ ಹೇಳೆಂದ || ೧೩

ಸರಳ ಕೊಱತೆಯೊ ಸಾರಥಿಯ ಮ
ತ್ಸರವೊ ರಥದ ವಿಘಾತಿಯೋ ದು
ರ್ಧರ ಧನುರ್ಭಂಗವೊ ಮಹಾಸ್ತ್ರವ್ಯಥೆಯೊ ರವಿಸುತನ |
ಹುರುಳುಗೆಡಿಸಿದರೆಂತು ರಿಪುರಾ
ಯರಿಗೆ ನಾವ್ ಗೋಚರವೆ ದುರಿತೋ
ತ್ಕರುಷವೈಸಲೆ ನಮ್ಮ ಕೆಡಿಸಿತು ಶಿವಶಿವಾ ಎಂದ || ೧೪

ಹರುಹುಗೆಟ್ಟುದು ತೇರು ಸಾರಥಿ
ಹುರುಳುಗೆಡಿಸಿಯೆ ನುಡಿದನಂಬಿನ
ಕೊಱತೆ ತಾ ಮುನ್ನಾಯ್ತು ದೈವದ್ರೋಹಿಗಳು [2]ನಿ[2]ಮಗೆ |
ಅರಿವಿಜಯವೆಲ್ಲಿಯದು ನೀವ್ ಮನ
ಬಱಿದರೈ ನಿಮ್ಮನ್ವಯವ ಸಂ
[3]ಹರಿಸಿ[3]ದಿರಿ ಸಾಕೆಂದು ಸಂಜಯ ತೂಗಿದನು ಶಿರವ || ೧೫

ಸುರನರೋರಗರಱಿಯೆ ನಾವ್ ಬಾ
ಹಿರರು ಭಂಗಿಸಬೇಡ ಸಾಕಂ
ತಿರಲಿ ಕರ್ಣಾಹವದ ಕರ್ಣಾಮೃತವ ಸುರಿ ಸಾಕು |
ಅರಿಗಳಭ್ಯುದಯವನು ನಮ್ಮಪ
ಸರಣವನು ಕಿವಿಯಾರೆ ಕೇಳುವ
ಪರಮ ಸುಕೃತಿಗಳಾವು ನೀ ಹೇಳಂಜಬೇಡೆಂದ || ೧೬

ಹೇಳಿದನು ಬಳಿಕೆರಡು ಥಟ್ಟಿನೊ
ಳಾಳು ಕುದುರೆಯ ಗಜರಥವ ಭೂ
ಪಾಲರಳಿದುಳಿದವರ ಲೆಕ್ಕವನೈದೆ ವಿಸ್ತರಿಸಿ |

---

1 ಕೌರವರರಾಯ (ಕ). 2 ತ (ಕ). 3 ವರಿಸ (ಕ.ಗ.ಚ).

ಕೇಳು ನಿನ್ನಾತನ ವಿನೋದದ
ಖೂಳ ಬೋಳೆಯತನದಲೊದಗಿದ
ಬಾಳಿಕೆಯ ಬೀಸರವನೆಂದನು ಸಂಜಯನು [1]ನಗುತ[1] ॥ ೧೭

ತೊಡರ ತೆಗೆದರು ಕೈಯಡಾಯ್ದವ
[2]ಜಡಿಯಲಮ್ಮರು[2] ಹೊತ್ತ ದುಗುಡದ
ನಿಡುಮುಸುಕುಗಳ ಬಿಗಿದ ಬೆಱಗಿನ ಬಿಟ್ಟ ಕಣ್ಣುಗಳ ।
ಒಡೆಯನಿದಿರಲಿ ಕುಳ್ಳಿರದೆ ಕೆಲ
ಕಡೆಯ ಕೈದೀವಿಗೆಯ ಮಱೆಯಲಿ
ಮಿಡುಕ[3]ದಿರ್ದುದು[3] ರಾಯನೋಲಗದೊಳಗೆ ಪರಿವಾರ ॥ ೧೮

ಸಾಲ ಸಾವಿರ ದೀವಿಗೆಯ ಹರಿ
ದಾಳಿಗಳುಕದೆ ನೃಪರ ಮೋಱೆಗ
ಳೋಳಿಗಳ ನೆಱೆ ಹೊದ್ದಿ ಕತ್ತಲೆ ನಿಂದುದಲ್ಲಲ್ಲಿ ।
ಹೇಳಲೇನದ ಬಹಳ ದುಗುಡದ
ಪಾಳೆಯವೊ ನಿನ್ನಾತನೋಲಗ
ಶಾಲೆಯೋ ನಾವಱಿಯೆವೆಂದನು ಸಂಜಯನು [4]ನೃಪಗೆ[4] ॥ ೧೯

ಎಲೆ ಮಿಡುಕದಾಸ್ಥಾನ ವೀಳೆಯ
ದೆಲೆಯ ಮಡಿಸುವ ರಭಸವಿಲ್ಲೊಳ
ಗೊಳಗೆ ಸನ್ನೆಗಳೋರೆಗೊರಳುಗಳೌಡುಗಚ್ಚುಗಳ ।
ಹಳ[5]ಸಿ[5]ದಗ್ಗಳಿಕೆಗಳ ಮಾಸಲು
ಗಳೆದ ಬಿರುದಿನ ಮಾನಭಂಗದ
ಕಳವಳದ ಕನಸುಗಳಲಿದ್ದುದು ರಾಯನಾಸ್ಥಾನ ॥ ೨೦

ಕೆತ್ತುಕೊಂಡಿರಲೇಕೆ ನೀವಿ
ನ್ನುತ್ತರಾಯಿಗಳೆಮ್ಮ ಭಾಗ್ಯದ
ಬಿತ್ತು ಹುರಿದರೆ ಬಿರುದ ಭಟರಿದ್ದೇನಮಾಡುವರು ।
ಮೆತ್ತಿದಂಬಿನ ಮೆಯ್ಯ ಭೀಷ್ಮನು
ಹೊತ್ತ ಕೈದುವ ಬಿಸುಟ ಕಳಶಜ
ನುತ್ತಮಿಕೆಗಳ ಮೆಱೆದರೆಂದನು ಕೌರವರ ರಾಯ ॥ ೨೧

---

[1] ನೃಪಗೆ (ಬ.ನ). [2] ನೊಡನೆ ಬಿಸುಟರು (ಕ). [3] ದಿರ್ದರು (ಚ.ಟ.ತ).
[4] ನಗುತ (ಕ). [5] ಟಿ (ಕ).

ಬಿಗಿದ ತಿಮಿರದ ಕೆಚ್ಚು ಸೂರ್ಯನ
ಸೊಗಡು ಹೊಯ್ದರೆ ಮುಱಿಯದೇ ಕಾ
ಳೆಗಕೆ ಕರ್ಣನ ಕೈದು ಭಂಡಾರಿಸಿದುದಿನ್ನಬರ ।
ತೆಗೆಸುವೆವು ನಾಳಿನಲಿ ನಿಮ್ಮಯ
ಮೊಗದ ದುಗುಡದ ದಡ್ಡಿಯನು ಮ್ಯಾ
ದೆಗೆಯದಿರಿ ಕಲಿಯಾಗಿಯೆಂದನು ನೃಪತಿ ಸುಭಟರಿಗೆ ॥ ೨೨

ಜೀಯ ಸಂಶಯ[1]ವಿಲ್ಲ[1] ಗುರು ಗಾಂ
ಗೇಯರಳುಕಿದ[2]ರೇನು[2] ಕಲಿ ರಾ
ಧೇಯನೇ ವಜ್ರಾಂಗಿ[3]ಯಲ್ಲಾ[3] ನಮ್ಮ ಮೋಹರಕೆ ।
ರಾಯ ನೀ ಪತಿಕರಿಸಿದರೆ ಚ
ಕ್ರಾಯುಧನ ಚಾತುರ್ಯ ಕೊಳ್ಳದು
ಜೀಯ ಕರ್ಣನ ಮುಂದೆಯೆಂದುದು ನಿಖಿಳ ಪರಿವಾರ ॥ ೨೩

ಬೇಱೆ [4]ತನ[1]ಗಗ್ಗಳಿಕೆಯೋಲೆಯ
ಕಾಱತನವೇ ರಾಯ ಮನವೊಲಿ
ದೇಱಿಸಿದರೇಱುವುದು ದೊರೆ ಮನಮುಱಿಯೆ ಕುಂದುವುದು ।
ತೋಱಿ ನುಡಿದರೆ ಭೀಷ್ಮದ್ರೋಣರು
ಜಾಱಿಸಿದ ರಣವೆಮಗೆ ಸದರವೆ
ದೂಱುವವರಾವಲ್ಲವೆಂದನು ಭಾನುಸುತ ನಗುತ ॥ ೨೪

ನಾಕದಂತಿರಲಿನ್ನು ಥಟ್ಟಿಂ
ಗಾಕೆವಾಳರ ಮಾಡು [5]ನಾಕಾ[5]
ಶ್ಲೋಕಪುಣ್ಯರ ಮಾತದೇತಕೆ ಗುರುನದೀಸುತರ ।
ಸಾಕಿ ಸಲಹಿದೆ ಕರ್ಣನನು ಹುರು
ಡೇಕೆ [6]ಗುಣದೊಳಗೀತ[6] ಸೇನಾ
ನೀಕಭಾರದ ಹೊಱಿಗೆಗಹನೆಂದನು ಕೃಪಾಚಾರ್ಯ ॥ ೨೫

ಎಮ್ಮ ತೋ[7]ಱಿಸ[7]ಬೇಡ ಸುಖದಲಿ
ನಿಮ್ಮ ಚಿತ್ತಕೆ ಬಹುದ ಮಾಡುವು
ದೆಮ್ಮ ಹೃದಯವ್ಯಥೆಯು ನಾವಿನ್ನಾಡಿ ಫಲವೇನು ।

---

[1] ವೇನು (ಕ). [2] ರಿಂದು (ಕ), [3] ಯಹುದಲೆ. [4] ನವು (ತ.ಬ).
[5] ಭೂಪ (ಕ), ನಾಕೀ (ತ.ಪ.ಬ). [6] ಗುಣದಲಿ ಕರ್ಣ (ದ.ಪ). [7] ಱಲು (ತ).

ಎಮ್ಮ ಪುಣ್ಯದ ಬೆಳೆಗಳೊಣಗಿದ
ಡೆಮ್ಮಿ ಮಾಡುವುದೇನು ಕರ್ಣನು
ನಮ್ಮ ದಳವಾಯೆಂದನಶ್ವತ್ಥಾಮನರಸಂಗೆ ॥ ೨೬

ಆ ಮಹಾರಥ ಭೀಷ್ಮನೇ ಸ್ವೇ
ಚ್ಛಾಮರಣಿಯಾಚಾರ್ಯಚಾಪ
ವ್ಯೋಮಕೇಶನು ಹೊಕ್ಕು ಕಾಣರು ಹಗೆಗೆ ಹಱಿವುಗಳ ।
ಆ ಮಹಾನಾರಾಯಣಾಸ್ತ್ರದ
ಸೀಮೆ [1]ಸೀದುದು[1] ಮಿಕ್ಕ ಭಟರು
ದ್ದಾಮರೇ ಸಾಕಿನ್ನು ಸೇನಾಪತಿಯ ಮಾಡೆಂದ ॥ ೨೭

ಕರಸಿದನು ಭೂಸುರರನೌದುಂ
ಬರದ ಮಣಿ ಮಡಿವರ್ಗ ದೂರ್ವಾಂ
ಕುರ ಸಿತಾಕ್ಷತ ಧವಳಸರ್ಷಪ ವರಫಲಾವಳಿಯ ।
ತರಿಸಿದನು ಹೊಂಗಳ[2]ಶ[2] ತತಿಯಲಿ
ವರ[3]ನದೀವಾರಿಗಳ[3]ನಾಡಂ
ಬರದ ಲಗ್ಗೆಯಲೊದಱಿದವು ನಿಸ್ಸಾಳ ಕೋಟಿಗಳು ॥ ೨೮

ವಿರಚಿಸಿತು ಪಟ್ಟಾಭಿಷೇಕೋ
ತ್ಕರುಷ ಮಂತ್ರಾಕ್ಷತೆಯ ಮಳೆಗಳ
ಕರೆದರವನೀಸುರರು ಜಯರವ[4]ಮೇಘ[4]ಘೋಷದಲಿ ।
ಗುರುಸುತಾದಿ ಮಹಾಪ್ರಧಾನರು
ದರುಶನವ ನೀಡಿದರು ಕರ್ಣನ
ಬಿರುದಿನುಬ್ಬಟೆ ಲಹರಿ ಮಸಗಿತು ವಂದಿ ಜಲಧಿಯಲಿ ॥ ೨೯

ಅರಳಿತರಸನ ವದನ ಶಕುನಿ[5]ಯು[5]
ಹರುಷ ಮಿಗೆ ದುಶ್ಶಾಸನಂಗು
ಬ್ಬರಿಸೆ ರೋಮಾವಳಿ ವಿಕರ್ಣಾದಿಗಳ ಮನ ನಲಿಯೆ ॥

1 ಬಿದ್ದುದು (ಕ). 2 ಸ (ತ) 3 ಜಲವದೀಪಗಳ (ಕ).
4 ವೇದ. 5 ಗೆ (ತ).

ಗುರುಜ ಕೃಪ ಕೃತವರ್ಮ ಶಲ್ಯಾ
ದ್ಯರಿಗೆ ಹೊಸಕದೊಲಹು ಮಿಗಿಲಾ
ಯ್ತಿರುಳು ಕರ್ಣಗೆ ಪಟ್ಟವಾ[1]ಯಿತು[1] ಭೂಪ ಕೇಳೆಂದ ॥* ೩೦

ಮೊದಲನೆಯ ಸಂಧಿ ಮುಗಿದುದು.

---

[1] ದುದು (ತ).

* ಈ ಪದ್ಯವಾದಮೇಲೆ (ಚ.ತ.ಪ.ಬ) ಪ್ರತಿಗಳಲ್ಲಿ ಕೆಳಗಿನ ಪದ್ಯ ಹೆಚ್ಚಾಗಿದೆ :—

ನಾರಿಯರು ಮಣಿರತ್ನದೊಡಿಗೆಯ
ಭಾರಿಯರು ಕಂದರ್ಪವನಸಹ
ಕಾರಿಯರು ನೆರೆದಡಿಸಿ ಕೈಕೈ ಮುಂಚಿ ತಮತಮಗ ।
ವೀರಸೇಸೆಯನಳವಡಿಸಿ ವಿಮ
ಳಾರತಿಯ ಸುಳಿಸಿದರು ನಿಜಪರಿ
ವಾರವೋಲಾಡಿತ್ತು ಬಹಳಾನಂದ ಜಲಧಿಯಲಿ ॥

ಎರಡನೆಯ ಸಂಧಿ

ಸೂಚನೆ ॥ ಭೀಮವಿಕ್ರಮ ಕುರುಬಲದೊಳು
ದ್ದಾಮ ಕರ್ಣಾಹವದೊಳಗ್ಗದ
ಕ್ಷೇಮಧೂರ್ತ ನೃಪಾಲಕನ ಕೆಡಹಿದನು ಕಲಿಭೀಮ ॥ *

ಮಗನು ದಳಪತಿಯಾದ ಗಡ ಕಾ
ಳೆಗವ ನೋಡುವೆನೆಂಬವೊಲು ಜಗ
ದಗಲದಲಿ ನೆಱೆ ಕಡಿತವಿಕ್ಕಿತು ತಿಮಿರವನದೊಳಗೆ ।
ಹೊಗರು ಕುವಳಯಕಳಿಯೆ ಸೊಂಪಿನ
ನಗೆ ಸರೋರುಹಕೊಗೆಯೆ ವಿರಹದ
ಧಗೆ ರಥಾಂಗ[1]ದೊಳ[1]ಳಿಯೆ ರವಿಯುದಯಾಚಳಕೆ ಬಂದ ॥ ೧

ಸೂಳು ಮಿಗಲಳ್ಳಿಱಿದವುರು ನಿ
ಸ್ಸಾಳಕೋಟಿಗಳು[2]ದ[2]ಯದಲ ದಿಗು
ಜಾಲ ಬಿರಿಯಲು ಝಾಡಿಗೆದಱುವ ಗೌಱುಗಹಳೆಗಳ ।
ತೂಳುವಱೆಗಳ ರಾಯಗಿಡ್ಡಿಗನ
[3]ಘೋಳ[3] ಘೋರದ ಘೋಷವವನಿಯ
ಸೀಳೆ ನಡೆದುದು ಸೇನೆ ರವಿನಂದನನ ನೇಮದಲಿ ॥ ೨

ಮೋಹರಿಸಿತಿದು ನಡೆದು ಮಕರ
ವ್ಯೂಹದಲಿ ಬಳಿಕರ್ಧಚಂದ್ರ
ವ್ಯೂಹದಲಿ ಬಂದೊಡ್ಡಿ ನಿಂದುದು ಪಾಂಡುಸುತಸೇನೆ ।

---

* ಇದರ ಮುಂದೆ (ಗ.ದ.) ಪ್ರತಿಗಳಲ್ಲಿ ಮುಂದಿನ ಪದ್ಯವು ಹೆಚ್ಚಾಗಿದೆ :—

ಕೇಳು ಜನಮೇಜಯಧರಿತ್ರೀ
ಪಾಲ ಕರ್ಣನ ವೀರಪಟ್ಟದ
ಮೇಲೆಯಿರುಳಿನ ಜಾವಗಳು ಕ್ಷಣವಾಗಿ ತೋಱಿದವು ।
ಹೇಳಲೇನದ ಕುರುಪತಿಯ ಹೇ
ರಾಳದುಬ್ಬಿನ ಗಂಡನಾಗಲೆ
ಸೋಲದನಲೈ ಪಾಂಡುಸುತಸೇನೆಯನುದಯದೊಳಗೆ ॥

[1] ಕ್ಕ (ಪ). [2] ಭ (ಕ). [3] ಸಾಲ (ಕ).

ಮೋಹರಿ[1]ಸಲೊ[1]ಡವೆರಸಿ ಹೊಯ್ದರು
ಗಾಹುಗತಕವನುಳಿದು ಚೂಣಿಯ
ಸಾಹಸಿಗರು ಸನಾಮ[2]ರೊದಗಿ[2]ದರೆರಡು ಥಟ್ಟಿನಲಿ ॥ ೩

ಹೊಯ್ದು ಮುಗ್ಗಿತು ಭಟರು ವೆಗ್ಗಳ
ಕೈದುಕಾಱರು [3]ತ[3]ಲೆಗೆ ಸಂದರು
[4]ಮೈದೆಗೆಯದೊಡವೆರಸಿ[4] ಹೊಕ್ಕರು ಬೇಹಬೇಹವರು ।
ಕೊಯ್ದ ಕೊರಳಿನ ಕೊಱೆದ ತೋಳಿನ
ಹಾಯ್ದ ಮೂಳೆಯ ಸುರಿ[5]ವ[5] ಕರುಳಿನ
ಲೆಯ್ದೆ ಪಡೆ[6]ಗೇಱಾಯ್ತು[6] ಚೂಣಿಯ ಚಾತುರಂಗದಲಿ ॥ ೪

ಇಂದು ಬರಹೇಳರ್ಜುನನ ರಣ
ವಿಂದಲೇ ಭೀಮಂಗೆ ಮನದಲಿ
ಕಂದುಕಸರಿಕೆ ಬೇಡ ಕಾದಲಿ ಧರ್ಮನಂದನನು ।
ಹಿಂದೆ ನಂಬಿಸಿ ಭೀಷ್ಮಗುರು[7]ವನು[7]
ಕೊಂದ ಗೆಲುವಿನಲುಬ್ಬಬೇಡೆಮ
ಗಿಂದು ದಳ[8]ವಾಯ್[8] ಕರ್ಣನೆಂ[9]ದುದು[9] ಭಟರು ಬೊಬ್ಬಿಱಿದು ॥ ೫

ತೇರು ಬಿಟ್ಟವು ಸೂಠಿಯಲಿ ಜ
ಜ್ಝರ ರಾವ್ತರು ವಾಘೆಸರಿಸದ
ಲೇಱಿದರು ಕಾರ್ಮುಗಿಲ ಬಲವೆನೆ ಕವಿದವಾನೆಗಳು ।
ಆರಿದರೆ ನೆಲ ಬಿರಿಯೆ ಬೆರಸಿತು
ಪೌರಕರು ಸಬಳಿಗರು ಬಿಲ್ಲಿನ
ಭೂರಿಭಟರಳ್ಳಿಱಿದು ಕೆಣಕಿತು ಕದಱಿ ರಿಪುಬಲವ ॥ ೬

ಮುಱಿಯ[10]ದ[10]ಹಿತರ ಥಟ್ಟು ನಮ್ಮದು
ತೆಱಹುಗೊಡ[11]ದೌಂಕಿತು[11] ದೊರೆಗಳು
ಹೊಱಗೆ ಲಗ್ಗೆಯ ಮಾಡಿ ತೋಱಿದರೊಡನೆ ಪಡಿಬಲವ ।
ಉಱುಬಿದರು ವೃಷಸೇನ ಸೌಬಲ
ಗುರುಜ ಕೃಪ ಕೃತವರ್ಮ ದುರ್ಮುಖ
ವರವಿಕರ್ಣ ಕ್ಷೇಮಧೂರ್ತಿ ಬೃಹದ್ರಥಾದಿಗಳು ॥ ೭

---

[1] ಸಿತೊ (ಕ). [2] ರೈದಿ (ತ). [3] ಕ (ಕ), ಕೊ (ದ). [4] ಬೈದು ಮೂದಲಿಸಿದರು (ಕ). [5] ದ (ಕ). [6] ಜಾರಿತ್ತು (ಗ), ನುಗ್ಗಾಯ್ತು (ಟ.ನ), ಗಾರಾಯ್ತು (ತ.ಪ). [7] ಗಳ (ತ). [8] ಪತಿ (ತ.ದ). [9] ದರು (ತ). [10] ಲ (ತ). [11] ದೌಕಿದರೆ (ತ.ನ.ಪ).

ಸೂತಸುತ ದಳಪತಿಯೆ ಘಡ ಮು
ಯ್ಯಾಂತರೇ [1]ಮುಂಬಿಗರು[1] ಬಿರುದಿನ
ಬೂತುಗಳ ಬೊಬ್ಬಾಟ ಬಿಡದೇ ಕಂಡು [2]ಕಾಣರಲ[2] ।
ಸೋತ ಸಮರದ ಕೇಣಿಕಾಱರು
[3]ಕೂತರೋ ಜಯಸಿರಿಗೆ[3] ಹೊಯ[4]ಹೊ
ಯ್ಯಾತಗಳನೆನುತೇಱಿದರು ಪಾಂಡವ ಮಹಾರಥರು ॥ ೮

ನೂಕಿತೊಂದೇ ವಾಘೆಯಲಿ ರಥ
ನಾಕುಸಾವಿರ ಬಲುಗುದುರೆ ಹದಿ
ನಾಕುಸಾವಿರ ನೂಱು ಕರಿಘಟೆ ಲಕ್ಕ ಪಾಯದಳ ।
ಜೋಕೆ ಜವಗೆಡೆ ಮುಱಿವಡೆದು ಬಲ
ದಾಕೆವಾಳರು ಸರಿಯೆ ಸೋಲ[4]ದ[4]
ನೂಕು ನೂಕಾಯಿತ್ತು ಕೌರವರಾಯ ಸೇನೆಯಲಿ ॥ ೯

[5]ಘಡ[5]ಘಡೆತ್ತಲು ಸ್ವಾಮಿದ್ರೋಹರು
ಸಿಡಿದರೋ ನಿಜಕುಲದ ಬೇರ್ಗಳ
ಕಡಿದರೋ ಕುರುಬಲದ ಕಾಹಿನ ಪಟ್ಟದಾನೆಗಳು ।
ಕೊಡನ ಫಣಿಯಿದು ಪಾಂಡವರ ಬಲ
ತುಡುಕಬಹುದೇಎನುತ ಸೇನೆಯ
ತಡೆದು ನಿಂದನು ಕ್ಷೇಮಧೂರ್ತಿ ಸಹಸ್ರಗಜಸಹಿತ ॥ ೧೦

ತರಿಸಿ ಲೋಹದ [6]ಜತ್ತರಟ್ಟವ[6]
ಹರಹಿದರು ಸೂಲಿಗೆಯ ಬಂಡಿಯ
ನಿರಿಸಿದರು ಕೆಲಬಲದ ಕಡೆಯಲಿ ಸಬಳಿಗರ ನಿಲಿಸಿ ।
ತುರಗ ರಥ ಬಿಲ್ಲಾಳನೊತ್ತಾ
ಗಿರಿಸಿ ಲಗ್ಗೆಯ ಲಹರಿಯಲಿ ವೋ
ಹರಿಸಿದರು ಪಾಂಚಾಲ ಕೈಕೆಯರವರ ಥಟ್ಟಿನಲಿ ॥ ೧೧

ನೀಡಿ ಬರಿಕೈಗಳಲಿ ಸೆಳೆದೀ
ಡಾಡಿದವು ಬಂಡಿಗಳನೌಕಿದ
ಕೋಡ ಕೈಯೆಲಿ ಸಬಳಿಗರ ಸೀಳಿದವು ದೆಸೆದೆಸೆಗೆ ।

[1] ಮುಗ್ಗಿದಿರೆ (ಕ). [2] ಕಾಳೆಗವ (ಕ). [3] ಕಾತರಿಸುತಿವೆ ಶಿರಕೆ (ನ). [4] ವು (ತ ಬ). [5] ಸಡಿ (ಟ.ತ.ಬ). [6] ಜಂತ್ರರಾಟವ (ಗ.ದ), ಜತ್ತಗಂಟವ (ಬ).

ಹೂಡು ಜಂತ್ರದ ಜತ್ತರಟ್ಟವ
ನಾಡಲೇತಕೆ ಹಿಂದಣೊಡ್ಡನು
ಝಾಡಿಸಿದವೀ ಕ್ಷೇಮಧೂರ್ತಿನೃಪಾಲನಾನೆಗಳು ॥ ೧೨

ರಾಯದಳ [1]ಕಳವಳಿಸೆ[1] ಗಜಘಟೆ
ಘಾಯಘಾಯಕೆ ನೆಲನ ಕೊಂಡವು
ಹಾಯಿದವು [2]ರಥ ಹಯವ[2] ಸೆಳೆದವು ಹೊದಱ ಹರೆಗಡಿದು ।
ನಾಯಕರ ಕೆಡೆನುಡಿವ ಬೈಗುಳ
ದಾಯ ಬೊಬ್ಬೆಯ ಕೈಯ ಹೊಯ್ಲ್ಗಳ
ದಾಯಿಗರಲೇ ಎನುತ ಮೂದಲಿಸಿದನು ತಮ್ಮೊಳಗೆ ॥ ೧೩

[3]ಕೆ[3]ದಱಿತರೆನೆಲೆ ರಾಯ ಥಟ್ಟನು
ಕೆದಱಿಸಿದವಾನೆಗಳು ಹಗೆಗಳ
ಮದಮುಖಕೆ ಮಾಱೊಡ್ಡ ಮೆಱೆದರೆ ಪೂತು[4]ರೇ[4] ಎನುತ ।
ತುದಿವೆರಳ ತುಟಿಯಬ್ಬರಕೆ ಗಜ
ಬೆದಱೆ [5]ಗಜರೋಹಕರ[5] ಗರ್ಜಿಸಿ
ಗದೆಯ ತಿರುಹುತ ಹೊಕ್ಕನಿವರೊಡ್ಡಿನಲಿ ಕಲಿ ಭೀಮ ॥ ೧೪

ಗರುಡನೂರವರೆಱೆವರೇ ನಾ
ಗರಿಗೆ ತನಿಯನು ಭೀಮಸೇನನ
ಬಿರುದಿನೋಲೆಯಕಾಱರೇನಂಜುವರೆ ಮಾರ್ಬಲಕೆ ।
ಕರಿಘಟೆಯ ಕೆದಱಿದರು ಕೇಣದ
ಧುರವ ಬಲ್ಲರೆ ಗಜದ ಕರುಳಲಿ
ಕರುಳ ತೊಡಕ[6]ಲು[6] [7]ಬಿದ್ದುದೈ[7]ಸಾವಿರ ಮಹಾರಥರು ॥ * ೧೫

ಮುಂಗುಡಿಯ ಮುಱಿದೌಕಿ ಭೀಮಂ
ಗಂಘವಿಸಿದನು ಕ್ಷೇಮಧೂರ್ತಿ ಮ
ತಂಗಜದ ಮೇಲೆಸು[8]ತ[8] ಬಲುನಾರಾಚಸೋನೆಯಲಿ ।
ಅಂಘವಣೆಯಹುದೋ ಮಹಾದೇ
ವಂಗೆ ನೂಕದು ಪೂತು ಮಝುರೆಯ
ಭಂಗನೋ ನೀನೆನುತ [9]ಮೂದಲಿಸಿದನು ಕಲಿ[9]ಭೀಮ ॥ ೧೬

[1] ಗಜಬಜಿಸೆ (ತ). [2] ಹಿಂಡೊಡೆದು (ಕ). [3] ಬೆ (ಗ.ಬ), ಹೆ (ಚ.ತ).
[4] ಮಝು (ಕ). [5] ನಿಜನಾಯಕರ (ಗ). ನಿಜಪಾಠಕರು (ಟ.ಚ.ತ.ದ.ಪ.ಬ.ನ).
[6] ಲಿ (ಕ). [7] ಕೆಡೆದರೈ (ನ). * ಈ ಪದ್ಯ (ತ) ಪ್ರತಿಯಲ್ಲಿಲ್ಲ.
[8] ವ (ಕ). [9] ಹೊಯ್ದೊಡವೆರಸಿದನು (ಟ.ತ.ನ.ಪ.ಬ).

ಮೇಲುವಾಯ್ದಾರೋಹಕರ ಹಿಂ
ಗಾಲ ಹಿಡಿದೀಡಾಡಿ ರಿಪುಗಜ
ಜಾಲದೊಳಗೊಂದಾನೆಯನು ತಾನೇಱಿ ಬೊಬ್ಬಿಱಿದು ।
ಘೀಳಿಡುವ ಕರಿ ಕೆದಱಿಲಂಕುಶ
ವಾ[1]ಳೆ[1] ನೆತ್ತಿಯನಗೆದು ದಂತಿಯ
ತೂಳಿಸಿದನಾ ಕ್ಷೇಮಧೂರ್ತಿಯ ಗಜದ ಸಮ್ಮುಖಕೆ ॥ ೧೭

ಇದು ವಿನೋದವಲೇ ಮದೀಯಾ
ಭ್ಯುದಯ[2]ವಿದಲೇ[2] ನಮ್ಮ ಕೋಪವ
ನಿದಿರುಗೊಂಡವನಿವನಲೇ ಎನುತೆಚ್ಚನಾ ಭೀಮ ।
ಸದೆಗ [3]ನೀ ಸಾರೆಲವೊ[3] ಭಾರಿಯ
ಮದಗಜದ ಬಡಿಹೋರಿ ಹೋಗೆನು
ತೊದಱಿ ಭೀಮನ ಮುಸುಕಿದನು ನಾರಾಚಸೋನೆಯಲಿ ॥ ೧೮

ಆಗಲೀ ನಾಲಗೆಯ [4]ಸಾಲವ[4]
ನೀಗ ಕೈಯಲಿ ತಿದ್ದಿಕೊಡುವರೆ
[5]ಹೋಗದೇ ಹೊತ್ತಿಹವೆ ಹೇಳೆನುತೆ[5]ಚ್ಚನಾ ಭೀಮ ।
ಆಗಳಾವುದು ನೆಲನು ನಭ ದಿಗು
ಭಾಗ[6]ವೆಲ್ಲಿಯ[6]ದೆನಲು ಕಣೆಗಳ
ತೂಗಿ ತುಱುಗಿದವರಿಭಟನ ಕರಿಘಟೆಯ ಮೈಗಳಲಿ ॥ ೧೯

ಸರಳ ಮಳೆಯಲಿ ನನೆದು ಕರಿಘಟೆ
ಯುರುಳಿದವು ಕಲ್ಪಾಂತ ವರುಷದೊ
ಳುರುಳುವದ್ರಿಗಳಂತೆಯೆಸೆದವು ವೈರಿದಂತಿಗಳು ।
ಎರಡು ಸೀಳಾಯ್ತವನ ಕರಿ ಧರೆ
ಗಿರದೆ ಧೊಪ್ಪನೆ ಹಾಯ್ದು ಖಾತಿಯೊ
ಳುರವಣಿಸಿದನು ಕ್ಷೇಮಧೂರ್ತಕ ಸೆಳೆದಡಾಯುಧದಿ ॥ ೨೦

[1] ಳ (ಕ). [2] ವೈಸಲೆ (ತ.ಪ.ಬ). [3] ನೋನೀನಾರು (ಚ.ಟ.ತ.ನ.ಪ.ಬ). [4] ಗಳಹ (ಚ.ತ.ದ.ಪ.ಬ). [5] ಹೋಗೆನೆ ಹಾಯೆನುತೆ (ಗ), ಹೊಗೆನೈಹೊಲ್ಲಹವ ಹೋಗೆನುತೆ (ಚ.ಟ.ತ.ಬ), ಹೋಗೆಹೊಲ್ಲಹವಲ್ಲ ಹೋಗೆನುತೆ (ನ.ಪ). [6] ಹೂ ಳಿದು (ಕ).

ಕುಣಿದು ಪುಟನೆಗೆದರಿಗಜವ ಹೊ
ಯ್ದಣೆದು ಹಿಂಗಿದ ಮುನ್ನ ತಲೆ ಮೇ
[1]ಲ[1]ಣಿಗೆ ಚಿಗಿದುದು ಮುಂಡ ನಡೆದುದು ನೂಱು ಹಜ್ಜೆಯನು ।
ಬಣಗು ನೀನಕಟಕಟ ಭೀಮನ
ಕೆಣಕಿ [2]ಬದುಕಿದೆ[2]ಯೆನುತಲಪ್ಸರ
ಗಣಿಕೆಯರು ನಗುತವನ ಕೊಂಡೊಯ್ದರು ವಿಮಾನದಲಿ ॥ ೨೧

ಎರಡನೆಯ ಸಂಧಿ ಮುಗಿದುದು.

---

[1] ಗ (ಚ). [2] ನೊಂದ್ಯೆ (ತ.ಪ).

ಮೂರನೆಯ ಸಂಧಿ

ಸೂಚನೆ || ರಣಭಯಂಕರನಹಿತಸುಭಟರ
ಹಣಿದ[1]ವನು[1] ಹೊಯ್ದಾಡಿ [2]ಸಾತ್ಯಕಿ[2]
ಕೆಣಕಿದನು ಕಲಕಿದನು [3]ಕುರುಸೇನಾ ಮಹಾರ್ಣವವ[3] ||*

ಬೀಳಲಗ್ಗದ ಕ್ಷೇಮಧೂರ್ತಿನೃ
ಪಾಲಕನ ಪರಿವಾರ ರೋಷಕ
ರಾಳ ಶಿಖಿ ಪರಿ[4]ತಪ್ತ[4]ಕಂಪಿತ ಖಡ್ಗ[5]ದೊ[5]ಗ್ಗಿನಲಿ |
ಆಳಿದನ ಮರಣದಲಿ ಹಿಂದಣ
ಕೂಳಿನಾಸೆಯ ಕುನ್ನಿಗಳಿರೆನು
ತಾಳು ಕವಿದುದು ಭೀಮ ಘಡ [6]ಘಡ ನಿಲ್ಲು[6] ನಿಲ್ಲೆನುತ || ೧

ಕರೆದು ಮೂದಲಿಸಿದರೆ ಹುಲ್ಲೆಯ
ಮಱಿಗಳಿಗೆ ಖತಿಗೊಂಬುದೇ ಮದ
ಕರಿ [7]ಕರೂಷದ ಕೊಬ್ಬಿನ[7]ವದಿರು ಹಿಂದೆ ಹತ್ತಿದರೆ |
[8]ಮರಳ ಬಲ್ಲನೆ[8] ಭೀಮನಿವರ
ಬ್ಬರಿಸಿ ಕವಿದರು ಹತ್ತು ಸಾವಿರ
ತುರಗ ಸರಿಸದಲೇಱಿದವು ಪಡಿಮುಖದ ಬಲ ಬೆದಱೆ || ೨

ರಾವುತೋ ಎನಿತೊಂದು ಹಂತಿಯು
ಸಾವಿನಾತಗಳೇಱಿದರು ಪರಿ
ಧಾವನೋದ್ಗತ ಧೂಳಿ ಮುಸುಕಿತು ತರಣಿಮಂಡಲವ |
ಆ ವೃಕೋದರ ಗತಿಯ ಕಂಡನು
ರಾವುತರ ದೃಢವಾಘೆ ವಾಘೆಯು
ಲಾವಣಿಗೆ ಲೇಸೆನುತ ಸಾತ್ಯಕಿ [9]ತುಡುಕಿ[9]ದನು ಧನುವ || ೩

---

[1] ದಲಿ (ಪ). [2] ಫಲುಗುಣ (ಕ). [3] ಸಮಸಪ್ತಕಚತುರ್ಬಲವ (ಕ).

* ಇಲ್ಲಿರುವ ಸೂಚನೆಗೆ ಬದಲಾಗಿ (ದ) ಪ್ರತಿಯಲ್ಲಿ ಈ ಕೆಳಗಿನ ಸೂಚನೆಯಿದೆ :—

ಧುರದೊಳಗೆ ವಿಂದಾನುವಿಂದರ
ನೊರಸಿದನು ಸಾತ್ಯಕಿ ವೃಕೋದರ
ಗುರುಸುತರು ಬಲುಘಾಯದಲಿ ಬಸವಳಿದು ಮರಳಿದರು ||

[4] ಕಂಪ (ತ). [5] ರೆಖ (ತ). [6] ಹೋಗದಿರು (ಕ). [7] ಮಹಾರಥರೊಗ್ಗಿನ (ಚ.ಟ.ತ.ಪ.ಬ). [8] ತೆರಳಲಱುವನೆ (ಕ). [9] ನುಡಿಸಿ (ಕ.ದ).

* ಅರರೆ ರಾವುತು ಜಾಗು ಸ್ವಾಮಿಯ
ಹರಿಬಕೋಸುಗ ಹಗೆಯ ಹೊಯ್ದರಿ
ಬಿರುದರ[1]ಹುದೋ[1] ಎನುತ ಮಾಱುವ ಹಯವ ಮುಱಿಯೆಸುತ ।
ಸರಳನೊಂದನೆ ತೊಡಚಿ ತುರಗದ
ಕೊರಳ ವಾಘೆಯ [2]ಕರವ[2] ರಾವುತರ
ಶಿರವನೆಚ್ಚನು ಕೊಂದನೀ ಪರಿ ಹತ್ತುಸಾವಿರವ ॥ ೪

ಬಿ[3]ದ್ದವ[3]ಗಣಿತ ತುರಗದಳ ಕೈ
ಮುದ್ದೆಗೊಂಡನು ಕಾಲನಸು[4]ವಿಡಿ[4]
ದಿದ್ದವರ ನಾ ಕಾಣೆ [5]ತೊಡಕಿದ ವೈರಿಬಲದೊಳಗೆ[5] ।
ಹದ್ದು ಕಾಗೆಗೆ ನಿನ್ನವರು ಸಾ
ಲಿದ್ದು ಬೋನವ ಸವಸಿದರು ಬಲ
ವಿದ್ದು ಮಾಡುವುದೇನು ನಿಮಗಿನ್ನರಸ ಕೇಳೆಂದ ॥ ೫

ಥಟ್ಟು ಮುಱಿದುದು ಕೊಂಡ ನೆಲನನು
ಬಿಟ್ಟು ಹಿಂಗಿತು ನಮ್ಮ ಬಲ ಮೈ
ಬಿಟ್ಟು ತಲೆದೋಱಿದನು ಸಾತ್ಯಕಿ ದೊರೆಗಳಿದಿರಿನಲಿ ।
ದಿಟ್ಟನಾರಿವನೀಸು ಮುಷ್ಟಾ
ಮುಷ್ಟಿಯಲಿ [6]ಬಂ[6]ದವನೆನುತ ಜಗ
ಜಟ್ಟಿಗಳು ವಿಂದಾನುವಿಂದರು [7]ನಿಂದರಿದಿರಿನಲಿ[7] ॥ ೬

ಕವಿದು[8]ದಿವದಿರ[8] ಸೇನೆ ಸಾತ್ಯಕಿ
ಹವಣನಱಿಯದೆ ಹೊಕ್ಕು ಸಿಕ್ಕಿದ
ನವರೊಳಗೆ [9]ಕಟ್ಟಿದವು[9] ಸುತ್ತಲು ಸಾವಿರಾನೆಗಳು ।

---

* ಈ ಪದ್ಯಕ್ಕೆ ಮೊದಲು (ಗ.ಚ.) ಪ್ರತಿಗಳಲ್ಲಿ ಕೆಳಗಿನ ಪದ್ಯ ಹೆಚ್ಚಾಗಿದೆ :—

ಹೊಯ್ದು ಮುಗ್ಗಿತು ಭಟರು ವೆಗ್ಗಳ
ಕೈದುಕಾಱರು ತಲೆಗೆ ಸಂದರು
ಮೈದೆಗೆಯದೊಡವೆರಸಿ ಹೊಕ್ಕರು ಬೇಹಬೇಹವರು ।
ಕೊಯ್ದು ಕೊರಳಿನ ಕೊರೆದ ತೋಳಿನ
ಹಾಯ್ದು ಮೂಳೆಯ ಸುರಿದ ಕರುಳಿನ
ಲೈದೆ ಪಡೆ ಬೆಱಗಾಯ್ತು ಚೋಣಿಯ ಚಾತುರಂಗದಲಿ ॥

1 ಹಿರೋ (ತ) 2 ಕಡಿದು (ಗ). 3 ದ್ದುದ (ತ). 4 ಪುಳಿ (ಕ). 5 ನವನೊಳು ತೊಡಕಿದವರೊಳಗೆ (ಚ.ಟ.ದ.ನ.ಬ). 6 ಮುನಿ (ಕ). 7 ಬಂದರಿದಿರಾಗಿ (ದ.ನ.ಪ.ಬ). 8 ದಿಲ್ಲಿಯ (ಕ). 9 ಕುಟಿಲದವು (ಕ)

ನವಸಹಸ್ರ ತುರಂಗ ಕಾಲಾ
ಳವಗಡಿಸಿತ್ತೈವತ್ತು ಸಾವಿರ
ಪವನಿತಳ ನಾಗ್ಗಾಯ್ತು ಪದಘಟ್ಟಣೆಯ ಘಲ್ಲಣೆಗೆ ‖ ೭

ಕೆಣಕಿದರೆ ಭುಗಿಲೆಂದುದೀತನ
ರಣ ಪರಾಕ್ರಮ ವಹ್ನಿ ಕರಡದ
ಬಣಬೆ ಸಿಕ್ಕಿತು ಕಾಳುಗಿಚ್ಚಿನ ಬಾಯ ಬಗರಗೆಗೆ ।
ಕಣೆಯ ಕಾಣೆನು ಸುತ್ತಲೊಟ್ಟುವ
ಹೆಣನ ಕಂಡೆನಿದಾವ ಬಾಳೆಯ
ಹಣಿದವೋ ನಿನ್ನಾಳು ಕುದುರೆಯನರಿಯೆ ನಾನೆಂದ ‖ ೮

ದೊರೆಗಳವದಿರು ತಮ್ಮ ಬಲಸಂ
ವರಣೆ ನೆಗ್ಗಿದ ಹೇವದಲಿ ಹೊಡ
ಕರಿಸಿ ಹೊಕ್ಕರು ಹೂಳಿದರು ಸಾತ್ಯಕಿಯನಂಬಿನಲಿ ।
ಸರಳ ಬರವೊಳ್ಳಿತು ಮಹಾದೇ
ವರಸುಮಕ್ಕಳಲೇ ವಿರೋಧವೆ
ಹರಹರತಿಸಾಹಸಿಕರಹುದಹುದೆನುತ ತೆಗೆದೆಚ್ಚ ‖ ೯

ಏನನೆಂಬೆನು ಮೊದಲ ಲಗ್ಗೆಯ
ಲಾ ನಿಶಿತಶರ ದೈತ್ಯಭಟ ವಿಂ
ದಾನುವಿಂದರ ಜೀವ ಧುಮ್ಮಿಕ್ಕಿದುದು ಜವಪು[1]ರಿಗೆ[1] ।
ಚೀನ ಭೋಟ ಕರೂಷ ಖರ್ಪರ
ಸೂನು [2]ಜೋನೆಗ ತುರಕ ಬರ್ಬರ[2]
ಸೇನೆ ತಾಗಿತು ತಾಗಿದಾಗಳೆ ನೀಗಿದುದು ತಲೆಯ ‖ ೧೦

ಮುರಿದುದಿದು ನಮ್ಮವರು ಸಾತ್ಯಕಿ
ಯುರುಬೆಗಾನುವರಿಲ್ಲ ದೊರೆ ಕೈ
ಮರೆದನೋ ಕಾಳಾಯ್ತು ನುತ ಕುರುಸೇನೆ ಕಳವಳಿಸೆ ।
ಜರಿದು ಮೂದಲಿಸಿದನು ಮಾದ್ರೇ
ಶ್ವರನ ದುಶ್ಶಾಸನನ ಸೌಬಲ
ಗುರುಜ ಕೃತವರ್ಮಾದಿಪರಿವಾರವನು ಕಲಿಕರ್ಣ ‖ ೧೧

---

[1] ರಕೆ (ತ). [2] ಜಾವಗವಂಗಮಾಳವ (ಕ.ಗ).

ಪೂತು ಮಝು ದಳಪತಿಯ ಚಿತ್ತದ
ಖಾತಿ ಕೊಬ್ಬಿತು ನಮ್ಮ ಭುಜಬಲ
ವೇತಕಿದು [1]ಬಳಿಕೇನು[1] ಸಾತ್ಯಕಿ ಸರಸವೇ ತಮಗೆ ।
ಭೂತನಾಥನ ಕಡುಹ ತಡೆವಭಿ
ಜಾತರಲ್ಲಾ ತಾವೆನು[2]ತ ನಿಜ
ಸೂತರನು[2] ಬೋಳೈಸಿ ನೂಕಿತು ಗುರುಸುತಾದಿಗಳು ॥ ೧೨

ಮುಱಿದ ಬಲ ಗಱಿಗಟ್ಟಿತೊಗ್ಗಿನ
ಲೊಱಲಿದವು ನಿಸ್ಸಾಳಕಹಳೆಯ
ಬಿಱುಸರದ ಬಹುವಿಧದ ವಾದ್ಯಧ್ವನಿಯ ಕಳಕಳದ ।
ತುಱುಗಿ ತೂ[3]ಳು[3]ವ ಸಿಂಧ ಸೆಳೆ ಮಡ
ಲಿಱಿವ ಝಲ್ಲರಿ ಪಲ್ಲವದ ನಿಡು
ದೆಱೆಯ ಧವಳಚ್ಛತ್ರ ಚಮರದೊಳೊದಗಿತತಿರಥರು ॥ ೧೩

ಮುಂಕಣಿಯಲಿಟ್ಟಣಿಸಿದರು ಭಾ
ರಂಕದಾಳುಗಳೆಂಟುಸಾವಿರ
ಬಿಂಕದತಿರಥರೆಂಟುಕೋಟಿ ತುರಂಗ ಪಾಯದಳ ।
ಶಂಕಿಸುವನೇ ಬಳಿಕ ಯದುಕುಲ
ದಂಕಕಾಱನು ನಿಂದನನಿಬರಿ
ಗಂಕ ಝುಂಕೆಯನೇನನೆಂಬೆನು ಸಾತ್ಯಕಿಯ ಮನದ ॥ ೧೪

ಭಾರಿಯಾಹವವಾಯ್ತು ಖಿಳದಳ
ಭಾರ ಬಿದ್ದುದು ಸಾತ್ಯಕಿಯ ಸುರ
ನಾರಿಯರ ತೋಳಿನಲಿ ಕಾಱುದು ನೆಲನ ರಿಣ ಹಱಿದು ।
ಹೋರಿದರೆ ಹುರುಳಿಲ್ಲೆನುತ ಪರಿ
ವಾರವೊಱಲಿತು ಪಾಂಡ್ಯ ಕೈಕೆಯ
ಕೇರಳರ ಹಿಂದಿಕ್ಕಿ ಪಡಿಬಲವಾದನಾ ಭೀಮ ॥ * ೧೫

ಮುಂ[4]ದೆ ಹ[4]ರಿದರು ಪಾಂಡುತನಯರ
ನಂದನರು ತಾವೈವರೀತನ
ಹಿಂದುಳುಹಿ ಹಿಂಡಿದರು ಹೇರಾಳದ ಚತುರ್ಬಲವ ।

---

[1] ನಮಗೆನುತ (ಕ.ಗ.ಚ). [2] ತ್ರಿಭೀತರನು (ಕ). [3] ಗು (ತ).
* (ತ.ಪ.) ಪ್ರತಿಗಳಲ್ಲಿ ಈ ಪದ್ಯವಿಲ್ಲ. [4] ದುವ (ತ.ಪ).

ಕೊಂದರಗ್ಗದ ಚಿತ್ರಸೇನನ
ಬಂದ ಹರಿಬದ ಚಿತ್ರನನು ಗುರು
ನಂದನನು ಬಳಿಕವರ ಬೆದಱಿಸಿ ನೂಕಿದನು ರಥವ॥ ೧೬

ಹೆಱಿತೆಗೆದು ಕೆಲಸಾರಿ ಮಕ್ಕಳು
ಮಱಿಗಳಿಗೆ ರಣವೇಕೆ ಪಾಂಡವ
ರುಱುವ ಸಂತತಿ ನೀವಕಟ ಎನುತವರನೊಡಹಾಯ್ದು ।
ಇಱಿವ ಭಟನಹೆ ಯಾದವರ ಬಡ
ಕಱುವೆ ಬಾ ಬಾ ಎಂದು ಚಿಟಿಕಿಸಿ
ಕರೆದು ಗುರುಸುತ ಸಾತ್ಯಕಿಯು [1]ತಾಗಿ[1]ದನು ನಗೆವಾಡಿ ॥ ೧೭

ಸಾರು ನೀ ಸಾರೆಲವೊ ಭೀಮನ
ತೋರಗರುಳಿನ ದಂಡೆಯನು ಕೈ
ಯಾರೆ ಮಾರಿಗೆ ಮುಡಿಸುವೆನು ಘಡ ಭೀಮ ನಿಲ್ಲೆನುತ ।
ಆರಿದನು ಜಗ ನಡು[2]ಗಲಾ[2] ಜಂ
ಭಾರಿ ಜವಗೆಡೆ [3]ಬೊಬ್ಬಿಱಿದನಾ
ಭಾರತದ ಭಾರಣೆಯಲೈದಿದನನಿಲನಂದನನ[3] ॥ ೧೮

ಗುರುತನೂಜ ಕಣಾ ವಿರೋಧಿ
ಸ್ಮರಕಪರ್ದಿ ಕಣಾ ವೃಕೋದರ
ಕರಿಮೃಗೇಂದ್ರ ಕಣಾ ಕಣಾಳಿಯ ಕಾಯ್ದುಕೊಳ್ಳೆನುತ ।
ಸರಳನೆಚ್ಚನು ಸರಳನಾ ಬಳಿ
ಸರಳು [4]ಮುಂಚಿದುದಾ ಸರಳ ಬಳಿ
ಸರಳು ಮುಂಚಿದುದಾವ ಕೈಚಳಕವೊ ಶಿವಾ ಎಂದ[4] ॥ ೧೯

ತಿರುಗಿ ನಿಂದನು ಪವನಸುತನೆಲೆ
ಗುರುಜ ನಿನ್ನಗ್ಗಳಿಕೆಗಳ ಜಗ
ವಱಿಯದೇ ಘಡ [5]ಭಟ್ಟನಾದೈ[5] ನಿನಗೆ ನೀನೆನುತ ।

[1] ಕಾದಿ (ಚ.ತ.ಪ.ನ). [2] ಗೆ ಘನ (ಕ). [3] ಜೋಡಿಸಿದನಾಭಾರದಲಿ ಭಾರವಣೆಯಂಬನು ಭೀಮಸೇನಂಗೆ (ಚ.ಟ.ತ.ನ.ಪ.ಬ). [4] ಮುಂಚಿತು ಗುರುಸುತನ ಕೈಚಳಕದನುಸಂಧಾನವಾವುದೊ ಶಿವಶಿವಾಯೆಂದ (ಕ), ಮುಂಚಿದುದಾವ ಚಳಕವೋ ಗುರುತನೂಭವನೆಚ್ಚು ಮುಂಗೆಡಿಸಿದನು ಪವನಜನ (ದ.ಬ), ಮುಂಚಿದುದಾ ಸರಳಬಳಿಸರಳು ಮುಂಚಿದುದಾವ ಚಳಕವನಱಿಯೆನಾನೆಂದ (ನ). [5] ಧಂಟನಾರೇ (ಕ).

ಸರಳ ಬಳಿಸರಳುಗಳನಾ ಲಘು
ತರದ ಲೆಕ್ಕದಲೆಸೆವ ವಿವರದ
ಪರಿವಿಡಿಯ ವೇಗಾಯ್ಲತನವನು ತೋಱಿದನು ಭೀಮ ॥ ೨೧

ಜಾಗು ಮಝುರೇ ಭೀಮ ಬಲುಗೈ
ಲಾಗು ಮಱೆಯದಲಾ ಶರೌಘ
ತ್ಯಾಗದಸ್ತ್ರ ಪ್ರ[1]ವರ[1]ಬಂಧವ ಮತ್ತೆ ನೋಡೆನುತ ।
ಆ ಗಗನವಿದು ಧರಣಿಯಿದು ದಿ
ಗ್ಭಾಗ[2]ವೆಲ್ಲಿಯದೆಂಬ[2] ವಿವರವ
ನಾಗಳಱಿಯೆನು ದ್ರೋಣನಂದನನೆಚ್ಚನನಿಲಜನ ॥ ೨೧

ಎಲೆಲೆ ಹಾರುವನೇಕೆ ಹರಿಮೇ
ಖಳೆಯ ಕೇಳಿಕೆಯೇಕೆ [3]ಪಡಿ[3]ಮ
ದ್ದಳೆಯ ಬಡಿಕರ ಬಿಂಕ ಮೇಳವವಿಲ್ಲಲಾ ನಿನಗೆ ।
ಹೊಲಬುಗೆಡುವನೆ ಭೀಮನೀ ಸರ
ಳೊಳಗೆ ಹುಸಿ[4]ಯೇಕೆ[4]ನುತ ಬಾಣಾ
ವಳಿಯ ನಿಮಿಷಕೆ ಕಡಿದು ಗುರುಜನನೆಚ್ಚನಾ ಭೀಮ ॥ ೨೨

ರಥದಮೇಲಂಬುಗಳು ರಿಪುಸಾ
ರಥಿಯ ಮೈಯಲಿ ಘಾಯ ತುರಗ
ವ್ಯಥೆಯನೇವೇಳುವೆನು ಟೆಕ್ಕೆಯವ್ವೆದೆ ಬಾಣಮಯ ।
ಶಿಥಿಲವಾದವು ಗಾಲಿಗಳು ಬಳಿ
ರಥಿಕರೀತನ [5]ಬಿಟ್ಟು[5] ಹಾಯ್ದರು
ಪೃಥುಳಬಲನೈ ಭೀಮನೆಚ್ಚನು ಗುರುತನೂಭವನ ॥ ೨೩

ನೊಗನನೀಡಾಡಿದವು ಕುದುರೆಗ
ಳೊಗಡಿಸಲು ರಕುತವನು ಸಾರಥಿ
ಬಿಗಿದ ಹಿಳುಕುಗಳೌಕಿದವು ತೇರಿನಲಿ ಸಿಂಧದಲಿ ।
ಒಗುವ ನೆತ್ತರ ಸುಱಿವ ಬಾಣದ
ನುಗು[6]ತೆ[6]ಗಂಡಿಯ ಮೆಯ್ಯ ಭೀಮನ
ಬೆಗಡು ಮೊಳೆತುದು ಗುರುತನೂಭವನೆಚ್ಚನನಿಲಜನ ॥ ೨೪

[1] ಸ (ಕ). [2] ವಿದುತಾನೆಂಬ (ತ.ದ.ನ.ಬ). [3] ಘಡ (ಗ.ಟ), ಬಡಿ (ಚ). [4] ಹೋಗೆ (ತ). [5] ಬಿಸುಟು (ತ). [6] ಳು (ಗ.ತ.ದ.ಪ.ದ).

ಈತನೆಚ್ಚನು ಮತ್ತೆ ಶರಸಂ
ಘಾತವೋ ಗುರುಸುತನ ತನುವೋ
ಪೂತ ಮುತ್ತುವೊ ತಳಿತೆಸೆವ ಕೆಂದಾವರೆಯ ಬನವೊ ।
ಭೀತಿ ಬಿಗಿದುದು ದಿಟ್ಟತನದನು
ಧಾತುಗೆಟ್ಟುದು ನೋಡಿ ಕಂಗಳು
ಸೋತು ಮರಳಿದನಿತ್ತಲಶ್ವತ್ಥಾಮ ಮೈಮಱೆದ ॥ ೨೫

ನನೆದ ಜಾಜಿನ ಗಿರಿಯೊ ಭೀಮನ
ತನುವೊ ಖಂಡಿತ ರಕ್ತಚಂದನ
ಬನವೊ ರಥವೋ ತಳಿತಶೋಕೆಯ ಮರನೊ ಸಾರಥಿಯೊ ।
ಮನ ಹಣುಗಿ ತುಟಿಯೊಣಗಿ ನೋಟದ
ಮೊನೆ ಮುಱಿದು ಝೊಂಪಿಸುತ ಮುಂದಣಿ
ಗೊನೆದು ಬಿದ್ದನು ಭೀಮ ಪಾಂಡವಸೇನೆ ಕಳವಳಿಸೆ ॥ ೨೬

ಅಹಹ ವೈರಿಗೆ ಧರೆಗೆ ಪ್ರಾಣಿ
ಗ್ರಹಣವಾಯಿ[1]ತೆ[1] ಪಾಂಡುಸುತರಿಗೆ
ಬಹ ವಿಪತ್ತುಗಳೊಳಗಿದೊಂದೇ ಕಳ[2]ಶ[2]ವಾದುದಲ ।
ಅಹಿತರಿಗೆ [3]ಗೆಲು[3]ವಾಯ್ತು ನಮಗಿ
[4]ಲ್ಲಿ[4]ಹುದು ಮತವಲ್ಲೆನುತ ಸಾರಥಿ
ಸಹಸಿಗನ ಸಂತೈಸಿ [5]ತಂದನು[5] ರಾಜಮಂದಿರಕೆ ॥ ೨೭

ತಂದೆಯಳಿದಾ ಹೊತ್ತು ಹಗೆಯನು
ಕೊಂದು ಸಾಯ[6]ದ[6] ದೇಹಮೋಹಕೆ
ನಿಂದು ನೀ ನಿಶ್ಶಂಕನಾದೈ ವೈರಿಶರಹತಿಗೆ ।
ಎಂದು ಸಾರಥಿ ಶೋಕಿಸುತ ಗುರು
ನಂದನನ ಕೊಂಡೊಯ್ದನಿತ್ತಲು
ಸಂದಣಿಸಿತತಿರಥರು ಸೌಬಲ ಶಲ್ಯಮೊದಲಾಗಿ ॥* ೨೮

ದೊರೆಗಳಿಬ್ಬರ ಸೋಲವನು ವಿ
ಸ್ತರಿಸಿ ಹೊಕ್ಕರು ಮತ್ತೆ ಮಾದ್ರೇ
ಶ್ವರ ಶಕುನಿ [7]ಕೃತವರ್ಮ ಕೃಪ ದುಶ್ಶಾಸನಾದಿಗಳು[7] ।

---

[1] ತು (ಕ). [2] ಸ (ತ). [3] ಜಯ (ತ). [4] ನ್ನಿ (ತ). [5] ನಡೆದನು (ಕ). [6] ದ (ತ). * ಇಲ್ಲಿಗೆ (ಟ) ಪ್ರತಿಯಲ್ಲಿ ಮೂರನೆಯ ಸಂಧಿ ಮುಗಿದಿದೆ. [7] ಕೃಪಕೃತವರ್ಮ ಸಮಸಪ್ತಕಾದಿಗಳು (ಕ).

ಅರಿಬಲದಲಾ ದ್ರೌಪದೇಯರು
ಹರಿಯನುಜ ಮಾದ್ರೇಯ ಕೈಕೆಯ
[1]ವರಯುಧಾಮನ್ಯೂತ್ತಮೌಂಜಸ ಪಾಂಡ್ಯ ಶೃಂಜಯರು[1] ॥ ೨೯

ಬಲಿದುದಾಹವ ಮತ್ತೆ ಚಾತು
ರ್ಬಲ [2]ಭಡಾಳಿಸಿ[2] ಕಾದುತಿರ್ದುದು
ಮುಳಿದು ಶಲ್ಯನ ಕೂಡೆ ಪಂಚದ್ರೌಪದೀಸುತರು ।
ಅಳವಿಗೊಟ್ಟಿರಿಯಕಟಕಟ ಮ
ಕ್ಕಳಿರ [3]ನಿಮಗೇಕಿದು[3] ಯುಧಿಷ್ಠಿರ
ಫಲುಗುಣರ ಬರಹೇಳೆನುತಲೆಚ್ಚನು ಮಹಾಸ್ತ್ರದಲಿ ॥ ೩೦

ಎಚ್ಚನಿವನಿವನೊಡನೆ ಬಾಣವ
ಕೊಚ್ಚಿದರು ಕೊಡಹಿದರು ಶರದಲಿ
ಚುಚ್ಚಿದನು [4]ಜೀಕುಳಿಯ[4] ಬಿಟ್ಟನು ನೆತ್ತರನು ನೆಲಕೆ ।
ಬೆಚ್ಚಿದವು ರಥವಾಜಿ [5]ಹತ್ತಿಗೆ[5]
ಬಿಚ್ಚಿ ರಥ ನುಗ್ಗಾಯ್ತು ಶೌರ್ಯದ
ಕೆಚ್ಚು ಮುಱಿದುದು ಹಿಂಗಿದರು ಪಾಂಡವ ಕುಮಾರಕರು ೩೧

ಮೂಱನೆಯ ಸಂಧಿ ಮುಗಿದುದು.

---

[1] ಮರುಳಧೃಷ್ಟದ್ಯುಮ್ನ ಶೃಂಜಯಸೋಮಕಾದಿಗಳು (ಗ), ವರಯುಧಾಮನ್ಯೂತ್ತಮೌಂಜಸಶ್ಶಂಜಯಾದಿಗಳು (ನ). [2] ವಿಭಾಡಿಸಿ (ಕ). [3] ನೀವೇಕೆ (ಕ) [4] ಬೆಮ್ಮಡಿಯ (ಕ), ಜಗುಳೆಯನು (ಟ.ಪ), ಜೀಕೊರ್ಳವೆ (ಚ.ಬ). [5] ಹತ್ತುಗೆ (ನ).

ನಾಲ್ಕನೆಯ ಸಂಧಿ

ಸೂಚನೆ ॥ ರಾಯದಳ ಮಱು ಪೊತುಱೆನೆ ರಿಪು
ರಾಯಸೇನೆಯ ಮುಱಿದು ಪಾಂಡವ
ರಾಯ ಧರ್ಮಕುಮಾರ ಗೆಲಿದನು ಕೌರವೇಶ್ವರನ ॥

ಫಡಫಡೆಲವೋ ಶಲ್ಯ ಮಕ್ಕಳ
ಬಡಿದು ಬೆಱೆದೈ ಬಾಹುಬಲದಲಿ
ತೊಡರು ನಿನಗೆಡಗಾಲಲಿದೆಯೆನುತೊದೆದು ನಿಜರಥವ ।
ಘುಡುಘುಡಿಸಿ ರೋಮಾಂಚನದ ಹೊಱ
ಗುಡಿಯ ಸೊಂಪಿನ ಮೆಯ್ಯ ಕಡುಗಲಿ
ತಡೆದನೇಕಾಂಗದಲಿ ಸಾತ್ಯಕಿ ಶಲ್ಯಭೂಪತಿಯ ॥ * ೧

ಬಾಯಿಬಡಿಕರು ಯಾದವರು ಗರು
ವಾಯಿ ನಿನಗೆಲ್ಲಿಯದು ಸುಭಟರಿ
ಗಾಯುಧ[1]ದ ಸಿಂಗಾರವೋ[1] ಮೇಣ್ ಕಾಲ ನೇವುರವೊ ।
ಸಾಯಕವ ಹಿಡಿ ಸಾಕು ಸೋಲದ
ತಾಯಿಮನೆ ನಿನಗಿದಿರಲಿದೆ ನಿ
[2]ನ್ನಾ[2]ಯತವ ತಾನಱಿಯೆನೆನುತೋರಂತೆ ತೆಗೆದೆಚ್ಚ ॥ ೨

ಎಲವೊ ಮಾದ್ರಾ ಬಾಹಿರನೆ ಬಿಡು
ಗಳಹತನವೇ ನಮ್ಮೊಡನೆ ತೊ
[3]ಟ್ಟ[3]ಳುಕೆ ಗ[4]ಱ[4]ನಾಲಗೆಯ [5]ಕೊಯ್ವೆನು[5] [6]ವಾ[6]ಣು ಮಾಣೆನುತ ।
ಬಿಲುದಿರುವನುಗುಳಿಸಿದನಂಬಿನ
ಬೆಳಸನಾ[7]ರಳವಡಿಸುವರು[7] ದಿಗು
ವಳೆಯ ನೆಱೆಯದಿದೆತ್ತಣದು ಬಿಲುಗಾಱತನವೆಂದ ॥ ೩

* ಈ ಪದ್ಯವು (ಕ) ಪ್ರತಿಯಲ್ಲಿ ಹಿಂದಿನ ಸಂಧಿಯ ಕೊನೆಯ ಪದ್ಯವಾಗಿದೆ.
[1] ವೆ ಶೃಂಗಾರವೋ (ಸ). [2] ಮ್ಮಾ (ಕ). [3] ಟ್ಟಿ (ಕ), ಟ್ಟು (ಟ.ದ).
[4] ಡಿ (ಕ). [5] ನುಗಿವೆನು (ಗ.ಚ.ನ.ಪ). [6] ಮೋ (ಕ). [7] ರೆಣಿಸುವರ
ಕಟ (ಕ).

ಬಾಯಿ ಬಡಿಕರು ನಾವು ನೀ ಗರು
ವಾಯಿಕಾಱನು ಬಯ್ವ ಬಿರುದಿನ
ಬಾಯ [1]ನೋಡಾಯೆನುತ[1] ತೋಟಿಗೆ ತೆಱಹುಗೊಡದೆಸಲು ।
ಸಾಯಕದ ಹೊದೆ ಹಲವು ಶಲ್ಯಗೆ
ಬೀಯವಾದುವು ಬಳಿಕ ಕೌರವ
ರಾಯನನುಜನು ತಱುಬಿ ನಿಂದನು ಸಾತ್ಯಕಿಯ ರಥವ ॥ ೪

ಹಳಚಿದವು [2]ರಥ[2]ವೆರಡು ಬಲುಗೈ
ಗಳಿಗೆ ಬಲಿದುದು ಬವರ [3]ಕೌರವ
ಬಲದ ಭಟರಲಿ[3] ಹತ್ತುಸಾವಿರ ರಥಿಕ[4]ರನುವಾಯ್ತು[4] ।
ಒಳಹೊಗಿಸಿ ಸಾತ್ಯಕಿಯು ಸಿಕ್ಕಿಸಿ
ಗೆಲುವ ತವಕವ [5]ಕಂಡು[5] ಕೆಣಕಿದ
ರಳವಿಯಲಿ ಸಹದೇವನಕುಳರು ಕೌರವಾನುಜನ ॥ ೫

ತೆಗಸಿದನು ಸಾತ್ಯಕಿಯನೀತನ
[6]ಬಿಗಿ[6]ದನಂಬಿನಲವನ ಬಾಣಾ
ಳಿಗಳ ಕಡಿದನು ಘಾಸಿಮಾಡಿದನವನ ರಥ ಹಯವ ।
ಜಗುಳಿದನು ಕಲಿ ನಕುಲ ರಥವಾ
ಜಿಗಳ ಜೋಡಣಿ [7]ಬಿಟ್ಟಿ[7] ರಕುತವ
ನೊಗಡಿಸಲು ಸಹದೇವನೆಚ್ಚನು ನಿನ್ನ ನಂದನನ ॥ ೬

ಸರಳ ಸ್ವೈರಿಸಿ ನಿನ್ನ ಮಗನ
ಬ್ಬರಿಸಿ ಮಾದ್ರೀಸುತನನೆಚ್ಚನು
ತರಹರಿಸಿ ಮಗುಳೆಚ್ಚನಾತನು ಕೌರವಾನುಜನ ।
ಮರುಳೆ ನೀನೇನಹೆ ಮಹಾಸಂ
ಗರಕೆ ಕಳು[8]ಹಾ[8] ನಿನ್ನವರನೆನು
ತುರವನೆಚ್ಚನು ಜರಿಯೆ ಜೋಡಿನ ಚಿಪ್ಪು [9]ದೆಸೆದೆಸೆಗೆ[9] ॥ ೭

ನೋವನೇ ನೊಣವೂಱಿದರೆ ಸಹ
ದೇವನೆಲವೋ ನಿನ್ನ ಕೊಂದಡೆ
ಪಾವಮಾನಿಗೆ ಪಂಥ ತಪ್ಪುವುದೆನುತ ಖಾತಿಯಲಿ ।

---

[1] ನೊಡಹೊಯ್ಯೆನುತ (ಕ.ಗ). [2] ಬಲ (ಕ). [3] ರಣದಗ್ಗಳೆಯ ರೈದಿತು (ಕ). [4] ರೊಗ್ಗಿನಲಿ (ಕ). [5] ನಱಿದು (ಕ). [6] ಬಲಿ (ಕ). [7] ಬೆಟ್ಟಿ (ಕ). [8] ಹಿಸು (ಚ). [9] ಶರಹತಿಗೆ (ಸ).

[1]ತಾವಕನ[1] ಸಾರಥಿಯ ರಥ ತುರ
ಗಾವಳಿಯುನಾಯುಧವ ಖಂಡಿಸೆ
ಜೀವಗಳ್ಳರದೇವ [2]ಪಸರಿ[2]ಸಿದನು ಪಲಾಯನವ ‖ ೮

ರಾಯನನುಜನ ಹರಿಬದಲಿ ರಾ
ಧೇಯ ಹೊಕ್ಕನು ಸ್ವಾಮಿದ್ರೋಹರ
ಕಾಯಿದರೆ ಕೈಕೊಳ್ಳದೌಷಧವಾವುದಿವದಿರಿಗೆ ।
ನೋಯಿಸುವನೊಮ್ಮೆನುತ [3]ತಿರುವಿನ[3]
ಸಾಯಕದ ಕಿವಿಗಡಿಯ ತೆಱಹಿನ
ರಾಯದಳಪತಿ ತಱುಬಿದನು ಮಾದ್ರೀ[4]ಸುತನ ರಥವ[4] ‖ ೯

ಸಾರು ನೀ ಸಹದೇವ ಜಗದ ವಿ
ಕಾರಿಯಿವನೀ ಕರ್ಣನಿವನ ದೊ
ಠಾರಿಸುವ ನಾಲಗೆಯ [5]ಕೊಯ್ಲಿಗೆ[5] ಶಸ್ತ್ರವಿವೆಯೆನುತ ।
ಸಾರಥಿಯ ಬೋಳೈಸಿ ಚೌಪದ
ನಾರಿಯನು ದನಿಮಾಡಿ ನಕುಲನು
ದಾರ ಕರ್ಣನ ಮುಟ್ಟಿ ಬಂದನು ಚಾಚಿದನು ರಥವ ‖ ೧೦

ಆರಿವರು ನಕುಳಾಂಕರೇ ಜು
ಜ್ಝಾರತನವೇ ನಮ್ಮೊಡನೆ ನೀ
ವಾರು [6]ಪಾಂಡುಕುಮಾರರೋ[6] ಮಾದ್ರೀಕುಮಾರಕರೊ ।
ಭಾರಿಯಾಹವದೆಡೆಗೆ ನಿಮ್ಮನಿ
ದಾರು ಬಿಟ್ಟರುಪಾಯದಲಿ ನಿಮ
ಗಾರು ಮುನಿದರು ಶಿವ [7]ಶಿವೆಂದನು ಕರ್ಣ ನಸುನಗುತ[7] ‖ ೧೧

ತೊಲತೊಲಗು ತರುವಲಿಗೆ ರಣವಿದು
ಸುಲಭವೇ ಲೋಕೈಕವೀರರು
ಹಲಬರಿದಱೊಳು ಹೊಕ್ಕು ಹೊದಕುಳಿಗೊಂಡು ಹೋದರಲೆ ।
[8]ಗೆ[8]ಲುವ ನಂಬುಗೆ ನಿನ್ನ ತಂದುದು
ಕೊಲೆಗೆ ನೋಡಾದರೆಯೆನುತ ಕೈ
ಚಳಕದಲಿ ಮುಸುಕಿದನು ಮೊನೆಗಣೆಯಿಂದ ರಿಪುಭಟನ ‖ ೧೨

---

[1] ಲಾವಕನ (ಟ), ಲಾವತರ (ದ), ಲಾವಕದ (ಖ). [2] ಜೋಡಿಸಿ (ಚ.ತ.ಪ.ಬ). [3] ಬೆರಳಿನ (ಟ.ಚ.ಬ). [4] ಕುಮಾರಕರ (ಗ.ಟ.ದ). [5] ಶೂಲಿಗೆ (ಕ). [6] ಕುಂತಿಯತನಯರೋ (ಟ.ದ). [7] ವಾಯೆನುತ ಕಲಿಕರ್ಣ (ಕ). [8] ನಿ (ಕ).

ಬಿಗಿದ ಬಾಣದ ದಡ್ಡಿಯನು ತಳ
ಮಗುಚಿದನು [1]ನೂ[1]ಱಂಬಿನಲಿ ಹೇ
ಳಿಗೆಯ ಮುಚ್ಚುಳ ತೆಗೆದ ಹಾವಿನವೊಲು ಝೊಂಪಿಸುತ ।
ಹೊಗರನುಗುಳುವ ಹೊಸಮಸೆಯ ಕೋ
ಲುಗಳ ಕವಿಸಿದನಾತನಂಬಿನ
ಝುಗೆಯ ಝುಳದಲಿ ಮುಳುಗಿ ಮೋನದೊಳಿರ್ದನಾ ಕರ್ಣ॥ ೧೩

ಆಳು ನೀನಹುದೆಲವೊ ಕರ್ಣ ವಿ
ಶಾಲಮತಿ ನೀ ಲೇಸು ಮಾಡಿದೆ
ಬಾಲರಾದಡೆ ಭಂಗವೇ ಜಾವಳನೆ ಅಭಿಮನ್ಯು।
ಕೋಲ ಸೈರಿಸು ಸೈರಿಸಾದಡೆ
ಭಾಳಲಿಪಿ ಸಂ[2]ಕರುಷ[2]ವಿಪುಳ ಶ
ರಾಳಿಯಿವೆ ಕೊಳ್ಳೆನುತ ನಕುಳನನೆಚ್ಚನಾ ಕರ್ಣ ॥ ೧೪

ತಾಗಿದವು ನಾಲ್ಕಂಬು ದೇಹದ
ಬೇಗಡೆಯಲೆಂಟಂಬು ನುಸುಳಿದ
ವಾಗ ಹದಿನಾಱಂಬು ಹರಿದವು ಮತ್ತೆ ಬಳಿ[3]ಸಲಿಸಿ[3] ।
ಸೂಗುರಿಸಿ ಝೊಮ್ಮಿನಲಿ ಮುಂದಕೆ
ಬಾಗಿ ಬಿದ್ದನು ಸಾರಥಿಯು ಕೈ
ಲಾಗಿನಲಿ [4]ತಿರುಗಿ[4]ದನು ನಕುಳನು ರಾಜಮೋಹರಕೆ ॥ ೧೫

ಹರಿಬದಾಹವವೆನಗೆ ತನಗೆಂ
ದುರವಣಿಸಿದರು ಚೇಕಿತಾನಕ
ದುಡುಳ ಧೃಷ್ಟದ್ಯುಮ್ನ ಪಾಂಡ್ಯ ಶಿಖಂಡಿ ಶೃಂಜಯರು
ಬರಲಿ ಬರಲೀ ಹೊಟ್ಟುತೂಱುವ
ಡರಸುಮೋಹರವೇಕೆ ಸಾಕೆಂ
ದರಿಭಟರು ತಱುಬಿದರು ಕೃಪ ಕೃತವರ್ಮ [5]ಸೌಬಲರು[5] ॥ ೧೬

ದಳಪತಿಯ ಹಿಂದಿಕ್ಕಿ ಪಾಂಡವ
ಬಲಮಹಾರಥರುರವಣಿಸಿ ಮೂ
ದಲಿಸಿ ನಿಂದರು ಕೊಂದರಿದಿ[6]ರೇಱುವ[6] ಚತುರ್ಬಲವ ।

---

[1] ಕೂ (ಚ.ಪ.ಬ). [2] ಹರಣ (ಸ). [3] ಕವನ (ಕ). [4] ತೊಲಗಿ (ಕ), ಮರಳಿ (ದ). [5] ಗೌತಮರು (ಕ). [6] ರೊಡ್ಡಿದ (ಗ).

ಕೊಲೆಗೆ ಬೇಸಱಿರಿವರು [1]ಸಾವುದ
ಕ[1]ಳುಕದವದಿರು ಹೇಳುವಡೆ [2]ನಾ
ವಲಸಿದೆವು[2] ಧೃತರಾಷ್ಟ್ರ ಎಂದನು ಸಂಜಯನು ನೃಪನ ॥ ೧೭

ವಿರಥರಾದ ಶಿಖಂಡಿ ಮೊದಲಾ
ದರಿಭಟರು ಜಾಱಿದರು ಸುಭಟರ
ನೊರಸಿ ಕೊಂ[3]ದೇ[3]ಱಿದರು ಕೆದಱಿದರವರು ರಿಪುಬಲವ।
ದೊರೆಗೆ ಹತ್ತಿರೆಯಾಯ್ತು ಕಾಳೆಗ
ವರಿದೆನಲು ನಿಸ್ಸಾಳಕೋಟಿಯ
ಧರದುರದ ದೆಖ್ಖಾಳದಲಿ ತಲೆದೋಱಿದನು ಪಾರ್ಥ ॥ ೧೮

ಭಟರ ತೆಗೆತೆಗೆ ಪಾರ್ಥನೋ ರಿಪು
ಕಟಕ ಭೈರವನೋ ವೃಥಾ ಸಂ
ಕಟದ ಸನ್ನಾಹದಲಿ ಸುಭಟರ ಮಾಱಬೇಡೆನುತ।
ಲಟಕಟಿಸಿ ಬಲವೊದಱಲಪ್ರತಿ
ಭಟರು ಬಳಿಕನುವಾಯ್ತು ವಿಜಯೋ
ತ್ಕಟದಲಿಪ್ಪತ್ತೈದುಸಾವಿರ ವರಮಹಾರಥರ ॥ ೧೯

ನೂಕಿದರು ಸಂಶಪ್ತಕರು ಬಲ
ದಾಕೆವಾಳ[4]ರ[4] ತೆಗಸಿ [5]ಬಹಳೋ
ದ್ರೇಕಸಾಹಸರೊದಗಿದರು ಕಂಪಿತ[5]ಕುಳಾಚಳರು।
ತೋಕಿದರು [6]ಶರವಳೆಯ[6]ಲರ್ಜುನ
ಸಾಕು ಸಾರೈ ನಿನ್ನ ಜೊತ್ತಿನ
ಜೋಕೆಯಾಹವವಲ್ಲೆನುತ ತೆಗೆದೆಚ್ಚರಿದಿರಾಗಿ ॥ ೨೦

ಆರಿದಿಪ್ಪತ್ತೈದು ಸಾವಿರ
ತೇರು [7]ಸರಿಸದಲೊಂದು[7] ವಾಘೆಯ
ಲೇಱಿದವು ನಿಪ್ಪಸರದಲಿ ನಿಲುವಾತನಾರಿದಕೆ।
ಸಾರಿಗೆಗೆ ಸಾರಿಗೆಗೆ ಬಾಣಾ
ಸಾರವಿಪ್ಪತ್ತೈದು ಸಾವಿರ
ವಾರು ಸೈರಿಸಿ ನಿಲುವರೆನುತಿದ್ದುದು ಸುರ[8]ಸ್ತೋಮ[8] ॥ ೨೧

---

[1] ಸಾವಿಂಗ (ತ.ದ.ಪ). [2] ನಾನಲಸಿದೆನು (ಗ.ಚ.ನ). [3] ಡೇ (ತ.ದ.ನ.ಪ). [4] ರು (ಕ). [5] ದರು ಬಹಳಾಕಠೋರ ಕರಾಳಕಂಪಿತಕರ (ಕ), ಬಹಳ ಕಠೋರ ಬಾಹಾಸ್ಫಾಳಕಂಪಿತ (ದ). [6] ಸರಳುಗಳ (ಕ.ಗ.ಚ), [7] ಸರಿದವುವೊಂದು (ಕ). [8] ವ್ರಾತ (ಚ.ತ.ನ.ಪ.ಬ).

ಸುರಿದುದತಿವಳೆಯೆಂದು ಕುಲಗಿರಿ
ಕರಗುವುದೆ ಮೇಗಱೆಯ ಶಿಲೆಯಿ
ಬ್ಬೆರಳು ನೆನೆವುದೆ [1]ನಾಡ ಹಂತಿಯಲಳುಕುವರ್ಜುನನೆ[1] ।
ಅರಿಮಹಾರಥರನಿಬರೈಸಱ
ಸರಳು ಸಂಖ್ಯಾತೀತವದಱೊಂ
ದುರವಣಿಗೆ ಪೈಸರಿಸಿತಿಲ್ಲವನೀಶ ಕೇಳೆಂದ ॥ ೨೨

ಅವರ ಶರ ಸಂಘಾತವನು ಕಡಿ
ದವರ ಸಾರಥಿಗಳನು ರಥ ವಾ
ಹವನು ಧನುವನು ಸಿಂಧವನು ಸೀಗುರಿಯ ಝಲ್ಲರಿಯ ।
ಅವರ ಪದಕ ಕಿರೀಟ ಕಂಕಣ
ವಿವಿಧ ಕರ್ಣಾಭರಣ ಕೇಯೂ
ರವನು ಕಡಿಕಡಿದೊಟ್ಟಿದನು ಕಲಿ ಪಾರ್ಥ ನಿಮಿಷದಲಿ ॥ ೨೩

ಘಾಯವಡೆದರು ಘಾಸಿಯಾದರು
ಬಾಯಲೊಕ್ಕ[2]ದು[2] [3]ಕರುಳು[3] ಮಕ್ಕಳು
ತಾಯಿಗಾಗದೆ ಕೆಟ್ಟರೆಂಬುದ [4]ಕಾಣಲಾಯ್ತಿಲ್ಲ[4] ।
ನಾಯಕರು [5]ಹ[5]ಲರುಳಿದುದಧಿಕರು
ಹಾಯಿದರು ಹೂಣಿಗರು ಹಱಿಹಂ
ಚಾಯಿತಿಪ್ಪತ್ತೈದು ಸಾವಿರ ವರ ಮಹಾರಥರು ॥ ೨೪

ಎಲೆಲೆ ಸಂಶಪ್ತಕರ ಭಾರಿಯ
ಬಲ ಮುಱಿದು ಬರುತಿದೆ ವಿಘಾತಿಗೆ
ನಿಲುವರಿಲ್ಲಾ ಸೂರೆವೋ[6]ಯಿತು[6] ರಾಯನಭಿಮಾನ ।
ಜಲಧಿ ಬಱಿತುದು ರಾಜಕಾರ್ಯಕೆ
ನಿಲುವಡಿದು ಹೊತ್ತೆನುತ ಮಂತ್ರಿಗ
ಳುಲಿಯೆ ಕೌರವರಾಯ ಕಂಡನು ಪಾರ್ಥನುರವಣೆಯ ॥ ೨೫

ಕರವ ನೆಗಹಿದನಕಟ ಹೋಹೋ
ಬಿರುದರಂಜದಿರಂಜದಿರಿ ನಿ
ಮ್ಮರಿಭಟಗೆ ನಾಲ್ಕಿಲ್ಲ ಕೈ ಕಣ್ಣಿಲ್ಲ ನೊಸಲಿನಲಿ ।

---

[1] ಯಿವರ ಶರಹತಿಗಳುಕುವರ್ಜುನನೆ (ಚ.ತ.ನ.ಪ.ಬ), ಯಾಡಲೇನದನಳುಕುವರ್ಜುನನೆ (ದ). [2] ವು (ಕ). [3] ರುಧಿರ (ಜ). [4] ತಪ್ಪದಾಯ್ತಿಲ್ಲಿ (ಚ.ತ.ದ.ನ.ಪ.ಬ). [5] ಕೆ (ಕ.ಗ). [6] ದುದು (ಚ.ದ.ನ).

ದೊರೆಯ ಕೈಯನು ಕಂಡ ಬಳಿಕೋ
ಸರಿಸಿರೈ ಪರಿವಾರ ದೂರದ
ಲಿರಿ ವೃಥಾಭಯವೇಕೆನುತ ಕುರುರಾಯನನುವಾದ ॥ * ೨೬

ಕೂಡೆ ಗಱಿಗಟ್ಟಿತು ಚತುರ್ಬಲ
ಜೋಡುಮಾಡಿತು ರಾಯನಿದಿರಲಿ
ಹೇಡಿ ಕಲಿಯಹರೆಂಬರಿವದಿರು ಹೇವಮಾರಿಗ[1]ಳ[1] ।
[2]ಜಾಡಿಸುವ[2] ಝಲ್ಲರಿಯ ವೋಱಿ[3]ಗೆ[3]
ನೀಡಿ ಮರಳುವ ಸೀಗುರಿಯ ದಳ
[4]ವೇ[4]ಡಿಸಿತು ಕಲ್ಪಾಂತ[5]ರಂಜಿತ[5]ಮೇಘಡಂಬರವ ॥ ೨೭

ಸರಕಟಿಸಿ ದಳ ಸರ್ವಲಗ್ಗೆಯ
ಉರವಣಿಸೆ [6]ಯಮಸೂನು[6] ಕಂಡನು
ನರನ ತೆಗೆತೆಗೆ ಇಂದಿನಾಹವ ನಮ್ಮಮೇಲೆನುತ ।
ಅರಸ [7]ನ[7]ಡೆದನು ರಾಜಮೋಹರ
ಹೊರಳಿಗಟ್ಟಿತು ಪ್ರಳಯಸಮರ
ಸ್ಫುರಿತ ಬಹಳಾರ್ಣವದ ಲಹರಿಯ ಲಳಿಯ [8]ಲಗ್ಗೆಯಲಿ[8] ॥ ೨೮

ಎರಡು ದಳ ಗಂಟಿಕ್ಕಿದುದು ನೆಲ
ಬಿರಿಯೆ ಬೆರಸಿತು [9]ಹೊಯ್ದುರುಳುವ[9]
ಶಿರದ ಬೀಳುವ ಭಟರ ಮೆದೆಗೆಡೆವಾನೆ ಕುದುರೆಗಳ ।
ಪರಿವಿಡಿಯದಂತಿರಲಿ ದೊರೆದೊರೆ
ಯುರವಣಿಸಿ ಹಳಚಿದರು ಪಾಂಡವ
ರರಸ ಕೌರವರರಸರೆಚ್ಚಾಡಿದರು ಮೂದಲಿಸಿ ॥ ೨೯

ಅರಸರಿವರೇ ಶಿವಶಿವಾ ನಿ
ಷ್ಕರುಣರೈ ನೀವೆಮ್ಮವೋಲು ಮೊನೆ
ಸರಳು ಮಾನ್ಯರನಱಿವವೇ ನೀವೇಕೆ ರಣವೇಕೆ ।

---

* ಇಲ್ಲಿಗೆ (ಗ) ಪ್ರತಿಯಲ್ಲಿ ಮೂಱನೆಯ ಸಂಧಿ ಮುಗಿದಿದೆ; ಇಲ್ಲಿಯ ನಾಲ್ಕನೆಯ ಸಂಧಿಯ ಸೂಚನೆಯೇ ಅಲ್ಲಿಯೂ ಸೂಚನೆಯಾಗಿದೆ. [1] ಳು (ಕ), ಳೋ (ಚ.ದ). [2] ಜೋಡಿಸಿದ (ಕ). [3] ಯ (ಕ). [4] ವೋ (ಕ). [5] ಚುಂಬಿತ (ಕ.ಗ). [6] ಲರಿರಾಯ (ಚ.ಟ.ತ.ದ.ಪ.ಬ). [7] ತ (ಕ). [8] ಲಂಘಿಸುತ (ಗ.ಚ.ಟ.ತ.ಪ). [9] ಹೊಕ್ಕಡಾಗುಳುವ (ಕ.ಟ).

ಒರಟರರ್ಜುನ ಭೀಮರತಿ ನಿ
ಷ್ಠುರರು ನಾವಡಿಮೇಲಹೆವು ನೀವ್
ಮರಳಿ ಬಿಜಯಂಗೈವುದೆಂದನು ಕೌರವರ ರಾಯ ॥ ೩೦

ಕೋಲ ಬಲುಹುಂಟಾಗೆ ನಾಲಗೆ
[1]ಹೋಲ ನುಡಿಯದು[1] ಹೊಲ್ಲದೇನಿದು
ಖೂಳ ಕಟಕಿಯ ಮಾತು ಬೇಡಂಬಿನಲಿ ಮಾತಾಡು ।
ಆಳುತನಕಾಭರಣವೇ ಮಾ
ತಾಳಿತನ ಕೈದೋಱ[2]ದ[2]ಹಿತನ
ಮೇಲಣೇಱಿನ [3]ಬಾಯ[3] ಸುಭಟರ ಹೊಗಳ[4]ಬೇಡೆಂ[4]ದ ॥ ೩೧

ಖರೆಯರಲ್ಲಾ ನೀವು ಕೊಂತಿಯು
ವರಕುಮಾರರು ನಿಮ್ಮೊಡನೆ ಸಂ
ಗರಕೆ ಸರಿಸರೆ ನಾವ್ ಸಂತೈಸಾದಡೆಂದೆಸಲು ।
ಸರಳು ಗಗನವ [5]ಹೊದಿಸಿ[5]ದವು
ಹೂಂಕರಿಸಿದವು ಹರೆಗಡಿದವರಿಮೋ
ಹರವ ಮುಱಿದವು ಮುಸುಕಿದವು ಮೋದಿದವು ರಿಪು[6]ಭಟರ[6] ॥ ೩೨

ಎಚ್ಚನೆಂಟಂಬಿನಲಿ ಕೌರವ
ನೆಚ್ಚ ಬಾಣವ ಕಡಿದು ನೂಱಱ
ಲೆಚ್ಚನೀತನ ರಥವನದ ಪರಿಹರಿಸಿ ಕುರುರಾಯ ।
ಎಚ್ಚನರಸನನಾ ಶರವ ಕಡಿ
ದೆಚ್ಚನವನಿಪನುಭಯರಾಯ[7]ರ[7]
ನಿಚ್ಚಟ[8]ಕ[8] ಮಝು ಪೂತುರೆಂದುದು ಮೇಲೆ ಸುರಕಟಕ ॥ ೩೩

ದ್ಯುಮಣಿ ಪಡುವಣ ಕಡಲ ಸಾರುವ
ಸಮಯವಾಯಿ[9]ತ್ತುಭಯ ರಾಯರ[9]
ಸಮರಸೌರಂಭಾತಿಶಯವಿಮ್ಮಡಿಸಿತಡಿಗಡಿಗೆ ।
ಅಮಿತ ರೋಷ ವಿಧೂತ ಪಾಣಿ
ಭ್ರಮಿತ ಶರತತಿ ವಿಸ್ಫುಲಿಂಗ
ಭ್ರಮಿತ ಭುವನ[10]ತ್ರಯರು[10] ಕಾದಿದರರಸ ಕೇಳೆಂದ ॥ ೩೪

---

1 ಹೋಲಲುಱುವುದು (ಕ), ಹೋಲನುಡಿವುದು (ಗ.ಚ.ಟ.ನ.ಪ). 2 ಲ (ಕ). 3 ಕೈಯ (ತ). 4 ಲೇಕೆಂ (ತ). 5 ಹೂಳಿ (ಚ.ತ). 6 ರಥವ (ಚ.ಟ.ತ.ಬ.ನ). 7 ರು (ಕ). 8 ರು (ಕ). 9 ತು ರಾಯರಿಬ್ಬರ 10 ಕ್ಷಯರು (ಕ).

ಗೆಲವು ನಮಗಾಯ್ತೆಂದು ಕೌರವ
ರುಲಿದರೆಮಗಗ್ಗಳಿಕೆಯೆಂದವ
ರುಲಿವುತಿರ್ದರು [1]ಕಾದಿದರು[1] ಸಮಜೋಳಿ ಜೋಕೆಯಲಿ ।
ಬಳಿಕ ಯಮನಂದನನ ಕೈ ವೆ
ಗ್ಗಳಿಸಿ ತಾಗಿತು ನಿನ್ನ ತನುಜನ
[2]ಬಿಲು ಸರಳು ರಥ[2] ಸೂತ ವಾಜಿಗಳೊಱಗಿದುವು ಧರೆಗೆ ॥ ೩೫

ಸೆಳೆದು ಹಿರಿಯುಬ್ಬಣವನವನಿಪ
ಕೆಲಕೆ ಚಿಗಿದನು ಹಾ ಮಹಾದೇ
ವೆಲೆಲೆ ದೊರೆದೊರೆ ಹಗೆಗೆ ಸಿಕ್ಕಿದನೆನುತ ಬಲ ಬೆದಱೆ ।
ಬಿಲುದುಡುಕಿ ಕೃತವರ್ಮ ಕೃಪ ಸೌ
ಬಲ ಕೃಪಾನುಜ ಶಲ್ಯ ಗುರುಸುತ
ದಳಪತಿಗಳೇಱಿದರು ರಾಯನ [3]ಸುತ್ತುವಳಯದಲಿ[3] ॥ ೩೬

ದೊರೆಗೆ ಬಿದ್ದುದು ಭಾರಿಯಾಹವ
ವರರೆ ಬರಹೇಳೆನುತ ಕವಿದುದು
ಸರಳ ಹೊದೆಗಳ ಕೆದಱಿ ಸಾತ್ಯಕಿ ಭೀಮ ಕೈಕೆಯರು ।
ಬಿರುದ ಧೃಷ್ಟದ್ಯುಮ್ನ ಮಾದ್ರೇ
ಯರು ಶಿಖಂಡಿ ಯುಯುತ್ಸು ಸೃಂಜಯ
[4]ತರಳ ಪಂಚ[4]ದ್ರೌಪದೇಯರು ಮುತ್ತಿದರು ನೃಪನ ॥ ೩೭

ಬಳಿಕ ಸಂಕುಳ ಸಮರವತಿವೆ
ಗ್ಗಳಿಸಿತದನೇನೆಂಬೆನಂಬುಧಿ
ಗಿಳಿದನಂಬುಜಮಿತ್ರ ಬೆನ್ನಲಿ ತಿಮಿರ ಬಳಿಸಲಿಸೆ ।
ಗೆಲಿದು ಹೋಗದಿರೆಂದು ಕೌರವ
ನಳವಿಗೊಟ್ಟನು ಮತ್ತೆ ಧರ್ಮಜ
ಬಿಲುದಿರುವ ನೇವರಿಸಿ ನಿಂದನು ಸಮರಕನುವಾಗಿ ॥ ೩೮

ರಾಯರಿಬ್ಬರ [5]ಮನದ[5] ತಿಮಿರದ
ತಾಯಿಮನೆಯೆಂಬವೊಲು ತಾ [6]ಪೂ
ರಾಯ[6]ದಲಿ ನುಂಗಿದುದು ಕತ್ತಲೆ ನಿಮಿಷದಲಿ ಜಗವ ।

---

1 ವುಥಯುಬಲ (ಕ). 2 ಸರಳಿನೆಸುಗೆಗೆ (ಕ). 3 ಸುತ್ತಮುತ್ತಿದರು (ಕ). 4 ರೋಱಲಿದರು ಮಿಗೆ (ಕ), ದುರುಳಪಂಚ (ಪ.ಬ). 5 ಮನಕ (ಕ). 6 ನಿದ್ರಾಯ (ಚ.ಟ.ತ.ದ.ಪ.ಬ).

ರಾಯಮೋಹರ ತೆಗೆದವೆರಡು ವಿ
ಡಾಯಿಯಲಿ ಬಹುವಿಧದ ವಾದ್ಯ ನ
ವಾಯಿ ಮಿಗೆ ನಲವಿನಲಿ ಬಂದರು ಪಾಳೆಯಂಗಳಿಗೆ ‖ ೩೯

ನಾಲ್ಕನೆಯ ಸಂಧಿ ಮುಗಿದುದು

ಐದನೆಯ ಸಂಧಿ

ಸೂಚನೆ॥ ವೈರಿ ವಿಜಯಕೆ ತ್ರಿಪುರ ದಹನದ
ಚಾರು ಕಥನವನರುಹಿ ಶಲ್ಯನ
ಸಾರಥಿಯ ಮಾಡಿದನು ಕರ್ಣಗೆ ಕೌರವರ ರಾಯ ॥

ಕೇಳು ಜನಮೇಜಯ ಧರಿತ್ರೀ
ಪಾಲ ದಿನವೊಂದಾಯ್ತು ಕರ್ಣನ
ಕಾಳೆಗದೊಳಲ್ಲಿಂದಮೇಲಣ [1]ವರ ಕಥಾಮೃತವ[1] ।
ಕೇಳಲಿಚ್ಛೈಸಿದ ಗತಾಕ್ಷ ನೃ
ಪಾಲಕಗೆ ವಿಸ್ತರಿಸಿ ಸಂಜಯ
ಹೇಳಿದನು ಬಳಿಕೆರಡನೆಯ ದಿವಸದ [2]ರಣೋತ್ಸವವ[2] ॥ ೧

ಹೊಗಳಿ ಕೆಲವರ ಹೊಳ್ಳುಗಳೆವುತ
ನಗುತ ಕೆಲವರ[3]ನ[3]ವರ ಮೋಹರ
ತೆಗೆದು ಹೋಯಿತು ಬಂದುದಿದು ತಂತಮ್ಮ ಪಾಳೆಯಕೆ ।
ಹೊಗಳುಭಟ್ಟರ ಸಾಲ ಕೈದೀ
ವಿಗೆಯ ಕಹಳಾರವದ ಲಗ್ಗೆಯ
ಬಿಗುಹಿನಲಿ ಕುರುರಾಯ ಬಂದನು ರಾಜಮಂದಿರಕೆ ॥ ೨

ಗುಳವನಿಳುಹಿದವಾನೆಗಳು ಹ
ಲ್ಲಳವ ಬಿಡೆ ಭುಲ್ಲೈಸಿದವು ಹಯ
ಕುಳ ವರೂಥವನಿಳಿದು ಸೂತರು ನಿಲಿಸಿದರು ರಥವ ।
ಕಳಚಿ ಸೀಸಕ ಜೋಡು ಕೈದುವ
ನಿಳುಹಿ ಸಮರಶ್ರಮವ ನಿಮಿಷಕೆ
ನಿಳಯವೇದಿಯಲಿದ್ದು ಕಳೆದುದು ಕೂಡೆ ಪರಿವಾರ ॥ ೩

---

[1] ರಣಕಥಾಮೃತವ (ಚ.ಟ), ಕದನ ಕೌತುಕವ (ಗ.ದ). [2] ಮಹಾರಣವ (ಗ.ಟ.ತ.ದ.ಪ.ಬ), ಮಹಾಹವವ (ಚ). [3] ವಿ (ಕ).

ಘಾಯವಡೆದಾನೆಗಳು ಗುಳವನು
ಹಾಯಿಕಲು ನೆಲಕುರುಳಿದವು [1]ವಾ
ನಾಯುಜಂಗಳು ಬಿಗುಹ ಬಿಡೆ[1] ದೊಪ್ಪೆಂದವಾಜೆಯಲಿ ।
ಘಾಯದಲಿ ಮುಱಿದಂಬನುಗುಳಿದು
ಸಾಯದಿಹರೇ ಭಟರು ಗಜಹಯ
ಲಾಯ ಹತ್ತೊಂದಾಗಿ ಹೆಚ್ಚಿತು ಕೌರವೇಶ್ವರನ ॥ ೪

ಬಂದುದಿರುಳೋಲಗಕೆ ರಾಯನ
ಮಂದಿ ದಳಪತಿ ಶಕುನಿ ಕೃಪ ಗುರು
ನಂದನಾದಿ[2]ಪ್ರತತಿ ಸಚಿವ ಪಸಾಯಿತರು ಸಹಿತ[2] ।
ಇಂದಿನಾಹವದೊಳಗೆ ಕುಂತೀ
ನಂದನರ ಬೊಬ್ಬಾಟ ಬಲುಹಾ
ಯ್ತೆಂದು ಮೆಲ್ಲನೆ ಮಾತ ತೆಗೆದನು ಕೌರವರ ರಾಯ ॥ ೫

ಬಲುಹಲೇ ಬಳಿಕೇನು ಹಗೆಯ
ಗ್ಗಳಿಕೆ ಮೆಱೆಯದೆ ಮುರವಿರೋಧಿಯ
ಬಲುಹ ಹೇಳಾ ಪಾರ್ಥನೆಂಬವನಾವ ಮಾನಿಸನು ।
ಬಲುಹು ಸಾರಥಿಯಿಂದ ರಿಪುಗಳ
ಗೆಲವು ಸಾರಥಿಯಿಂದ ಸಾರಥಿ
ಯೊಲಿದಡೇನೇನಾಗದೆಂದನು ಭೂಪತಿಗೆ ಕರ್ಣ ॥ ೬

ಭಾರಿ ಧನುವಿದ್ದೇನು ತೋಳಿನ
ತೋರದಲಿ ಫಲವೇನು ಕೈದುಗ
ಳಾರನಂಜಿಸಲಾಪವಾಹವರಂಗ[3]ಮಧ್ಯದಲಿ[3] ।
ಸಾರಥಿಯ ಬಲುಹಿಲ್ಲದಿರ್ದಡೆ
ಭೂರಿಸಾಧನವಿವು ನಿರರ್ಥಕ
ವಾರಿಗುಸುರುವೆ [4]ತ[4]ನ್ನ ಕೊಱತೆಯನೆಂದನಾ ಕರ್ಣ ॥ ೭

ತೃಣಕೆ ಕೊಂಬೆನೆ ಫಲುಗುಣನ ಕಣೆ
ಗಣೆಯನಾ ಸಾರಥಿಯ ಕೈ ಮೈ
ಗುಣವಲೇ ಗರುವಾಯಿಗೆಡಿಸಿತು ನಮ್ಮ ಮೋಹರವ ।

---

[1] ಹಯದಾಯತದ ಬಿಗುಹಡಗಿದಡೆ (ತ). [2] ಮಹಾಪ್ರಧಾನಪಸಾಯ್ತ ಗುರುಸಹಿತ (ಸ). [3] ಭೂಮಿಯಲಿ (ಚ.ಟ.ತ.ಬ). [4] ನೆ (ಚ.ತ.ದ).

[1]ರ[1]ಣದೊಳೆನಗತಿಶಯ[2]ದ[2] ಸಾರಥಿ
ಮಣಿದನಾದಡೆ ನಾಳೆ ಹೆಣದೌ
ತಣದಲುಣಬಡಿಸುವೆನು ಜಂಬುಕ ಕಾಕಸಂತತಿಗೆ ‖ ೮

ಲೇಸನಾಡಿದೆ ಕರ್ಣ ನಿನಗಿ
ನ್ನೈಸಲೇ ಸಾರಥಿಯ ಕೊಱತೆ ಸು
ರಾಸುರರ ಥಟ್ಟಿನಲಿ ತೊಡಕುವರಾರು ನಿನ್ನೊಡನೆ ।
ಈ ಸಮಸ್ತ ನೃಪಾಲ ವರ್ಗದೊ
ಳಾಸೆಯಾರಲಿ ಸೂತ ಕರ್ಮಾ
ಭ್ಯಾಸಿಯನು ಜೋಡಿಸುವೆನೆಂದನು ಕೌರವರ ರಾಯ ‖ ೯

ಹಲವು ಮಾತೇನರಸ ನುಡಿದುದು
ಫಲಿಸಲರಿಯದು ದೈವಗತಿಯಲಿ
ಫಲಿಸಿತಾದಡೆ ರಾಜ್ಯಲಕ್ಷ್ಮಿಗೆ ಸೂಳೆತನವಹು[3]ದೇ[3] ।
ಸುಲಭವಾದಡೆ ಮಾದ್ರರಾಜನ
ತಿಳುಹಿ ಸೈರಿಸು ರಿಪುಗಳೈವರ
ತಲೆಗೆ ಹಾಯಿಕು ಸಂಚಕಾರವನೆಂದನಾ ಕರ್ಣ ‖ ೧೦

ಉಬ್ಬಿ[4]ದನು[4] ರೋಮಾಂಚ ಮೆಯ್ಯಲಿ
ಹಬ್ಬಿದುದು [5]ಹೊರೆಯೇಱು[5] [6]ಮಱುವೆಯ[6]
ಮಬ್ಬು ಕವಿದುದು ಕರ್ಣನಾಡಿದಮಾತ [7]ಸವಿಸವಿದು[7] ।
[8]ಚೆ[8]ಬ್ಬರಿಸುವಿಂದ್ರಿಯತುರಂಗದ
ಕಬ್ಬಿ ಕಳಚಿತು ಕೌರವೇಂದ್ರನು
ಸರ್ಬಲಗ್ಗೆಯ ಹರುಷದಲಿ ಹೊಱವಂಟನರಮನೆಯ ‖ ೧೧

ಹರಿದರರಸಾಳುಗಳು ರಾಯನ
ಬರವನೀತಂಗಱುಹಿದರು ಕಡು
ಹರುಷದಲಿ ಕಲಿ ಶಲ್ಯ ಹೊಱವಂಟನು ನಿಜಾಲಯವ ।
ಅರಸುಮಕ್ಕಳ [9]ವಜ್ರ[9]ಮಣಿಯಾ
ಭರಣ ಕಿರಣ ಸ್ತೋಮ ದೀಪ
ಸ್ಫುರಿತ ಜನಮಧ್ಯದಲಿ ಕಂಡನು ಕೌರವೇಶ್ವರನ ‖ ೧೨

---

[1] ಕ್ಷ (ಕ). [2] ವು (ಕ). [3] ದು (ಕ). [4] ದುದು (ಕ), ದುವು (ದ). [5] ನೆಱೆವೊಚ್ಚಿ (ಕ), ಹೊರೆಹೆಚ್ಚಿ (ಗ). [6] ಮಱುವಿನ (ಕ). [7] ನೆನೆನೆನೆದ. (ಚ.ತ.ಪ.ಬ). [8] ಅ (ಕ), ಉ (ಬ). [9] ಮೌಳಿ (ಗ.ದ.ನ).

ಅಂದಣವನಿಳಿದರಸನಾತಗೆ
ವಂದಿಸಿದನಾ ಮಾದ್ರಪತಿ ಸಾ
ನಂದದಲಿ ತೆಗೆದಪ್ಪಿ ತಂದನು ರಾಜಮಂದಿರಕೆ ।
[1]ಇಂದಿದೇನಿದ್ದಿದ್ದು ನೀನೇ[1]
ಬಂದ ಕಾರ್ಯವಿಶೇಷವೇನುಂ
ಟೆಂದು ಕೌರವರಾಯನನು ಬೆಸಗೊಂಡನಾ ಶಲ್ಯ ॥ ೧೩

ಏನ ಹೇಳುವೆ ನಮ್ಮ ಪುಣ್ಯದ
ಹಾನಿಯನು ನುಗ್ಗಾಯ್ತು ಬಲ ಸು
ಮ್ಮಾನ ಬೀತುದು ಬಿರುದರಿಗೆ ಕಾಲೂಱಿತಪಮಾನ ।
ಜೈನದೀಕ್ಷೆಯ ಹಿಡಿದುದೆನ್ನ [2]ಸ
ಮಾನ ಸುಭಟರು ಜಯಸಿರಿಯ ಸಂ
ಧಾನ ಮುಱಿದುದು[2] ಮಾವ ನಿಮಗಜ್ಞಾತವೇನೆಂದ ॥ ೧೪

ಸಮರ ಜಯ ಸಾಧಕರು ಮಂತ್ರ
ಭ್ರಮಿತರಾ[3]ಯ್ತು ಪಜಯ ವಧೂ ವಿ[3]
ಭ್ರಮ ಕಟಾಕ್ಷದ ಘಾಯದಲಿ ಕಳವಳಿಸದವರಾರು ।
ಸಮತೆಯಾಯಿತು ತವಕಿಗಳಿಗುದ್
ಭ್ರಮಿಗಳಿಗೆ ತಿಳಿವಾಯ್ತು ವಾಸಿಯ
ಮಮತೆಯವರು ವಿರಕ್ತರಾದರು ಮಾವ ಕೇಳೆಂದ ॥ ೧೫

ಮುಱಿವಡೆದು ಕಲಿ ಭೀಷ್ಮನೇ ಕು
ಕ್ಕುಱಿಸಿದನು ದ್ರೋಣಂಗೆ ಬಂದುದ
ನಱುಹಲೇತಕೆ ಬಳಿಕ ಕರ್ಣನ ವೀರಪಟ್ಟದಲಿ ।
ನೆಱವಣಿಗೆಯುಂಟಾದಡೊಂದೇ
ಕೊಱತೆಯಿದು ನಿಮ್ಮಿಂದ ಕಡೆಯಲಿ
ನೆಱತೆಯಹುದಿನ್ನುತ್ತರೋತ್ತರ ಸಿದ್ಧಿ ಬಳಿಕೆಂದ ॥ ೧೬

ದ್ರೋಣ ಭೀಷ್ಮರವೋಲು ನೆಟ್ಟನೆ
ಹೂಣಿಗರು ರಾಧೇಯ ಮಾದ್ರ
ಕ್ಷೋಣಿಪತಿಯೆಂದೆಂಬ ನುಡಿಯುಂಟೆರಡು [4]ಘಟ್ಟಿನ[4]ಲಿ ।

[1] ಇಂದಿದೇನಿದ್ದಿರುಳು (ಟ.त), ಇಂದಿನೀ ಯಿರುಳಿನಲಿ ನಟ್ಟಿರುಳು (ಪ.ಬ). [2] ಯಮಾನ ಮುಱಿದುದು ಅಱಿಯಬಾರದೆ ಹಾನಿಯನು ಎಲೆ (क). [3] ದರು ಜಯವಧುವಿನು (क). [4] ಕಟಕದ (त).

ಕೇಣವಿಲ್ಲದ ರಥ ಗತಿಯ ಬಿ
ನ್ನಾಣವನು ತೋಱಿದಡೆ ತನ್ನಯ
ಗೋಣಗೊಡ್ಡಿದ ಕೈದುವನು ನೀ ತೆಗಸಿದವನೆಂದ ॥ ೧೭

ಬಱಿದೆ ಬೋಳೈಸದಿರು ಕಾರ್ಯದ
ಹೊಱಿಗೆಯೇನದ ಹೇಳು [1]ಮೇಗಡೆ[1]
[2]ಮೆ[2]ಱೆವವರು ನಾವಲ್ಲ ನುಡಿ[3]ಯಾ ಬಯಲಡೊಂಬೇಕೆ[3] ।
ಅಱುಹು ಕೇಳುವೆನೆನಲು ಶಲ್ಯನ
ಬಿಱುನುಡಿಗೆ ಬೆಚ್ಚದೆ ಮಹೀಪತಿ
[4][ಯಱಿವು][4]ತಪ್ಪದೆ ಬಿನ್ನವಿಸಿದನು ಮಾದ್ರರಾಜಂಗೆ ॥ ೧೮

ಮಾವ ಸಾರಥಿಯಾಗಿ ಕರ್ಣನ
ನೀವು ಕೊಂಡಾಡಿದಡೆ ಫಲುಗುಣ
ನಾವ[5]ಪಾಡು[5] ಸುರಾಸುರರ ಕೈಕೊಂಬನೇ ಬಳಿಕ ।
ಆವುದೆಮಗಭ್ಯುದಯವದನೀ
ನಾವ ಪರಿಯಲಿ ಮನ್ನಿಸಿದಡರೆ
ಜೀವ ಕೌರವವಂಶವೇ ಸಪ್ರಾಣಿಸುವುದೆಂದ ॥ ೧೯

ಕೇಳಿದನು ಕುರುಪತಿಯ ಮಾತಿನ
ಗಾಳಿ ತುಡುಕಿತು ಮನದ ರೋಷ
ಜ್ವಾಲೆಯ[6]ನು[6] ಮೀಸೆಗಳು ಕುಣಿದವು ಕಾಯ ಕಂಪಿಸಿತು ।
ಮೇಲು ಮೂಗಿನ ಬೆರಳ ಕಡುಗಾ
ದಾಲಿಗಳ ಮಣಿಮಕುಟದೊಲಹಿನ
ನಾಲಗೆಯ ನಿರ್ದ್ರವದ ಮಾದ್ರಾಧೀಶ[7]ನಿಂತೆಂದ[7] ॥ · ೨೦

[8]ಖೂಳನೆಂಬೆನೆ ನೀ ಸಮಸ್ತ ಕ
ಳಾಳಿ ನಿಪುಣನು ಬಾಲನೆಂಬೆನೆ
ಮೇಲೆ ಪಲಿತದ ಬೀಡು ಬಿಟ್ಟಿದೆ ತಳಿತ ತನುವಿನಲಿ[8] ।
ಹೇಳು ಹೇಳಿನ್ನೊಮ್ಮೆ ನುಡಿ ನುಡಿ
ಕೇಳುವೆನು ಕಿವಿಯಾರೆ ಕರ್ಣನ
ಕಾಳೆಗಕೆ ನಾವ್ ಸಾರಥಿಗಳೇ ಶಿವಶಿವಾ ಎಂದ ॥ ೨೧

---

[1] ಹೇಳ್ಕೈ (ಕ). [2] ಮ (ಕ). [3] ಗಳಬಯಲಡೊಂಬಿನಲಿ (ತ.ಬ). [4] ಯಱುಹು (ಕ), ಯೊರವು (ತ.ಪ). [5] ಹಿಂದು (ಕ). [6] ಲಿ (ಕ). [7] ಬೆಱಗಾದ (ಸ). [8] ಖೂಳನಿವನೆಂಬೆನೇ ಸಮಸ್ತ । ಕಳಾನಿಪುಣನಿವಬಾಲನೆಂಬೆನೆ । ಮೇಲೆಪಳಿಕದ ಬೀಡುಬಿಟ್ಟುದೆ ಹಾಮಹಾದೇವ (ಕ).

ತಾ[1]ರ[1]ತಮತೆಯ ಬಲ್ಲೆ ಪುರುಷರ
ಚಾರು ಚರಿತವನಱಿವೆ ಸುಭಟರ
ವೀರವೃತ್ತಿಯ [2]ಬ[2]ಲ್ಲೆ ಮಾನ್ಯರ ಮೈಸಿರಿಯ [3]ತಿಳಿವೆ[3] ।
ಆರವನು ರಾಧೇಯ ದಿಟ [4]ನಾ
ವಾರವರು[4] [5]ನ[5]ಮ್ಮಂತರವ ನೀ
ನಾರ ಕೈಯಲಿ ಕೇಳಿದಱಿಯಾ ಶಿವಶಿವಾ ಎಂದ ॥ ೨೨

ಖೂಳನನು ಹಿಡಿತಂದು ಧರಣೀ
ಪಾಲ[6]ರಲಿ ಸರಿಮಾಡಿ[6] ರಾಜ್ಯದ
ಮೇಲೆ ನಿಲಿಸಿದೆ ಬಳಿಕ [7]ಬಂದುದು[7] ಖೂಳತನ ನಿನಗೆ ।
[8]ಕೀಳುಮೇಲಿನ ಸೀಮೆ ನಿನ್ನಲಿ
ಬೀಳುಕೊಂಡುದು[8] ಸಾಕು ನಮಗಿ
ನ್ನಾಳುತನವೇಕೆನುತ ಧಿಮ್ಮನೆ ನಿಂದನಾ ಶಲ್ಯ ॥ ೨೩

ಒಡನೆ ನಿಂದನು ಸೆಱಗ ಹಿಡಿದವ
[9]ಗಡಿಸಲೇಕಿನ್ನೆನುತ[9] ಗುಣದಲಿ
ನುಡಿದು ಕುಳ್ಳಿರಿಸಿದನು ಸಂತೈಸಿದನು ವಿನಯದಲಿ ।
ನುಡಿಗೆ ಕೋಪಿಸಲೇಕೆ ಮನವೊಡ
ಬಡುವುದೇ ಕೈಕೊಂಬುದಲ್ಲದ
ಡೊಡೆಯರುಂಟೇ ನಿಮಗೆ ಎಂದನು ಕೌರವರ ರಾಯ ॥ ೨೪

ಅರ್ಜುಣ ಸಾರಥಿ ಭುವನಕಾರ್ಯದ
ಧುರವ [10]ಹೊಱಿನೇ[10] ಕೃಷ್ಣನಲ್ಲಾ
ನರನ ಸಾರಥಿಯಾಗನೇ [11]ಪರಕಾರ್ಯದನುವಱಿದು[11] ।
ಹರನ ಸಾರಥಿ ಕಮಲಸಂಭವ
ಸುರರ ಕಾರ್ಯಕ್ಕೊದಗನೇ ಸ
ತ್ಪುರುಷ[12]ರೇ ಪರಕಾರ್ಯನಿಷ್ಠರು[12] ಕೋಪವೇಕೆಂದ ॥ ೨೫

---

[1] ರು (ಕ). [2] ನೊ (ಕ). [3] ಮಱಿವೆ (ಕ), ನಱಿವೆ (ತ). [4] ತಾನಾರವನು (ಕ). [5] ತ (ಕ). [6] ರನುಮಾಡಿದಡೆ (ಚ.ಟ.ತ.ಪ.ಬ). [7] ಬಹುದೈ (ಕ). [8] ಹೇಳಿಫಲವೇನಿನ್ನು ನಾವೇ ಖೂಳರೈಸಲೆ (ಸ). [9] ಗಡವಿದೇಕಿನ್ನೆನುತ (ಚ.ದ), ಗಡವಿದೇಕೀಸೆನುತ (ತ.ನ.ಪ.ಬ). [10] ಹೊರುವನೆ (ಗ). [11] ಸ್ವರಕಾರ್ಯವರಗುಣವ (ಕ). [12] ರಿಗೆ ಪರಕಾರ್ಯನಿಷ್ಠತೆ (ಚ.ತ.ದ.ನ.ಪ.ಬ).

ಸವಱಿದರು ಕುರುವಂಶವನು ಪಾಂ
ಡವ[1]ರು ಸಕಲ[1] ಮಹಾರಥರು ಸಲೆ
ಸವೆದುದಿಲ್ಲಿ ನದೀಸುತ ದ್ರೋಣಾದಿ[2]ಗಳು ಸಹಿತ[2] ।
ಅವರೊಳಳಿದವರಿಬ್ಬರೇ ನೀ
ವವಸರಕೆ [3]ಸಾರಥ್ಯವನು[3] ನಿ
ಮ್ಮವರ ಮೇಲನುರಾಗವುಳ್ಳಡೆ ಮಾಡು ಮಾಣೆಂದ ॥ ೨೬

ನಿನ್ನ ಕೈಯಲಿ ಬರಲಿ ಸತ್ತಿಗೆ
ಯೆನ್ನ ಕೈಯಲಿ ಹೊಡೆಸು ಬಂಡಿಯು
ನಿನ್ನ ತಮ್ಮನ ಹೆಗಲಲಾತನ ಹಡಪ ಹಾಯ್ಕಿರಲಿ ।
ನಿನ್ನ ಬಂಧುಗಳವನ ಬೇಂಟೆಯ
ಕುನ್ನಿಗಳ ಹಿಡಿಯಲಿ ಸುಯೋಧನ
ನಿನ್ನ ಭಾಗ್ಯವನೊದೆದು ಕಳೆ ಕೇಡಾವುದೆಮಗೆಂದ ॥ ೨೭

ಗೆಲುವೆನವದಿರನೆಂಬ ಬಱಿಕ
ಕ್ಕುಲತೆಯಲ್ಲದೆ ದ್ರೋಣ[4]ಭೀಷ್ಮರಿ
ಗಳುಕದರಿಭಟ[4]ರಿವನ ಕೊಂಬರೆ ಕಂಡು ಮರುಳಾದೈ ।
ಬಲುಬಿದಿರನುಚ್ಚಳಿಸುವಳಿಮುಖ
ಕೆಳೆಯ ಕಬ್ಬಾನುವುದೆ ಕೌರವ
ಕುಲವನದ್ದಿದೆ ಪಾಪಿ ಕಷ್ಟವ ನೆನೆದೆ ಹೋಗೆಂದ ॥ ೨೮

ಅರಿಶಿರವ ಸೆಂಡಾಡಿ ಎನ್ನೀ
ಕರವು ವಂದಿವ್ರಾತದೆಡರನು
ಪರಿಹರಿಸಿತೀ ಹದನು ನಾವ್ ಹಿಂದೀಸು ಕಾಲದಲಿ ।
ಧರಣಿಪತಿ ನಿನ್ನಿಂದ ಕರ್ಣನ
ತುರಗವಾಘೆಯ ಚಮ್ಮಟಿಗೆಗೀ
ಕರವು [5]ಹೂಡುವುದಾಯ್ತು[5] ಹರಹರ ಧನ್ಯರಾವೆಂದ ॥ ೨೯

ಜಾತಿಹೀನರ ಕರ್ಮವುತ್ತಮ
ಜಾತಿಗಳ ಕರ್ತವ್ಯ ತಿರ್ಯ
ಗ್ಜಾತಿಗಳ ಗತಿ [6]ಧರ್ಮವೃತ್ತಿಯ[6] ಸೇರುವೆಯನಱಿದು ।

---

1 ರತಿಲಕ (ಕ). 2 ನಾಯಕರು (ಕ.ದ.ನ). 3 ಸಾಹಸಿಕರ್ಕೈ (ಕ.ಗ.ದ.ನ). 4 ಭೀಷ್ಮಾದಿಗಳುಕಲಭಟ (ಕ). 5 ಹೊದ್ದುವುದಾಯ್ತು (ಚ.ತ.ದ.ನ.ಪ.ಬ). 6 ಕರ್ಮಯುಕ್ತಿಯ (ಕ).

ಆತನಳವಡಿಸಿದನು ವಿಧಿ [1]ನಿಮ
ಗಾತಮಾಡಿದ[1]ನಳಿವ ಸಾಮ
ರ್ಥ್ಯಾತಿಶಯವುಂಟೈಸಲೇ ಶಿವಯೆನುತ ಖತಿಗೊಂಡ ॥ ೩೦

ಅಸುರದ ಬೆಱಗೇಕೆ ನಮ್ಮೊಡ
ನೀಸು ಮಾತೇಕೆಮ್ಮ ರಕ್ಷಿಸು
ವಾಸೆಯುಂಟೇ [2]ಮಾಡಿ ಮಾಣ್ಬುದು[2] ಕರುಣವಿಲ್ಲದಡೆ ।
ವಾಸಿವಟ್ಟುವ ನೋಡಿದನೆ ಲ
ಕ್ಷ್ಮೀಶನವರಲಿ ಸೂತಕರ್ಮಾ
ಭ್ಯಾಸಿಯೇ ಮುರವೈರಿ ಮುನ್ನೆಂದನು ಸುಯೋಧನನು ॥ ೩೧

ಮುರಹರನ ಸಮುಜೋಳಿ ನೀವಾ
ನರನ ಸಮಗ್ಗೈ ಕರ್ಣನಿಂತಿ
ಬ್ಬರನು ನೀವಿಬ್ಬರು ವಿಭಾಡಿಸಿ ಗೆಲುವುದೇನರಿದು ।
ಸುರರ ಕಾರ್ಯದಲಂದು ಸಾರಥಿ
ಸರಸಿಜೋದ್ಭವನಾಗನೇ ಎ
ನ್ನರಸುತನವಿಂದಳಿದುದಿದನೀನುಳುಹಬೇಕೆಂದ ॥ ೩೨

ಒಣಗು[3]ತಿ[3]ದೆ ಕುರುವಂಶ[4]ಲತೆ[4] ಫಲು
ಗುಣನ ಕೋಪಾನಳನ ನಾಲಗೆ
ಕೆಣಕುತಿದೆ ಕಕ್ಕುಲಿತೆಬಟ್ಟರೆ ಕಾಣೆ ಕಾವವರ ।
ಅಣಕಿಸದೆ ಕಾರುಣ್ಯವರ್ಷವ
ನೊಣ[5]ಗಲಲಿ[5] ಸುರಿ ಪಾಪಿ ಮಕ್ಕಳ
ಹೆಣನ ಕಾಣುತ ದುಃಖವಿಲ್ಲ [6]ದುರಾತ್ಮನೀನೆಂದ[6] ॥ ೩೩

ದೇವಕೀಸುತನೇನು ಬಂಡಿಯ
ಬೋವಗುಲದಲಿ ಜನಿಸಿದನೆ ಮೇ
ಣಾ ವಿರಿಂಚಿಯದಾವ ಸಾರಥಿಕುಲದ ಪೀಳಿಗೆಯೊ ।
ಕಾವುದೊಬ್ಬರನೊಬ್ಬರಿದಱೊಳ
ಗಾವ ಹಾನಿ ಪರಪ್ರಯೋಜನ
[7]ಭಾವಕರು[7] [8]ಸತ್ಪುರುಷರಿದಕೆ ವಿಚಾರವೇನೆಂದ[8] ॥ ೩೪

---

1 ತಾನಾತಹೂಡಿದ (ಕ). 2 ಮಾವಮಾಣ್ಕೆ (ಕ). 3 ತ (ಕ). 4 ವಾ (ಕ). 5 ಗಿಸದೆ (ಗ). 6 ವೆಮಾವನಿಮಗೆಂದ (ದ.ನ). 7 ಜೀವಿಗಳು (ಗ.ಚ.ದ.ನ). 8 ಸದ್ಗುಣಕೆ ಮತ್ಸರವೇಕೆ ಹೇಳೆಂದ (ಕ).

ಗುರು ಪಿತಾಮಹರಿಂದ ಮೋಹೆಯು
ಮುರಿದ ವಿಜಯ[1]ವಧೂ ಕಟಾಕ್ಷವ[1]
ತಿರುಹಿ ಹಾಯ್ಕುವ ಗಂಡನಾವನು ನೀವು ತಪ್ಪಿದಡೆ ।
ಕುರುಕು[2]ಲೋದ್ಧಾರ[2]ಕನು ಮಾದ್ರೇ
ಶ್ವರನೆನಿಪ ವಿಖ್ಯಾತಿ ಬಂದುದು
ಪರಿಹರಿಸದಿರು ಮಾವ ಎಂದೆಱಗಿದನು ಚರಣದಲಿ ॥ ೩೫

ಶಿವಶಿವಾ ನಿರ್ಬಂಧವಿದು ಕೌ
ರವನಲಾಯಿತೆ ಮದ್ಯಮಯ ಗಂ
ಧವನು ಕುಡಿಸುವ ಪರಿಯಲಾ ತುಂಬಿಗಳ ಸೆಱೆವಿಡಿದು ।
ಅವನಿಪತಿಗಳ ಸೇವೆ[3]ಯಿದು ಕ
ಷ್ಟವಲೆ ಮೊದಲಲಿ ಬಳಿಕ ನಾವಿ
ನ್ನವಗಡಿಸಲೇನಹುದು[3] ಸಾರಥಿಯಾದೆವೇಳೆಂದ ॥ ೩೬

ಆಯಿತೇ ಸಂತೋಷ ಕಮಲದ
ಳಾಯತೇಕ್ಷಣನೊಡನೆ ಬಂಡಿಯ
ಬೋಯಿಕೆಗೆ ವೀಳೆಯವ ಹಿಡಿದೆವು ಹಲವು ಮಾತೇನು ।
[4]ದಾಯ ಬಂದುದೆ ನಿನಗೆ ಬೊಮ್ಮಂ
ಗಾಯಿತೇ ಸೂತತ್ವವಾದಡೆ[4]
ರಾಯ ಹೇಳ್ಕೆ ತ್ರಿಪುರದಹನದ ಕಥೆಯ ನೀನೆಂದ ॥ ೩೭

ಐದನೆಯ ಸಂಧಿ ಮುಗಿದುದು.

---

[1] ಕಟಾಕ್ಷದೃಷ್ಟಿಯ (ಕ). [2] ಲಾಧಾರ (ಕ). [3] ಯೆಂಬುದು ಹವಣಿಸದ ಕಡುಕಷ್ಟ ಮೊದಲಲಿ ಶಿವಶಿವಾ ನುಡಿಯೇಕೆ (ಕ.ಗ.ಬ). [4] ದಾಯವಲ್ಲದೆ ದಿಟ ವಿಧಾತೃಂಗಾಯಿತೇ ಸಾರಥ್ಯವಾದರೆ (ಚ.ತ.ದ.ಪ).

ಆರನೆಯ ಸಂಧಿ

ಸೂಚನೆ ॥ ನಗರ ಮೂರರ ದೂರುಕಾರರ
ದುಗುಡವನು ಪರಿಹರಿಸಿ ಕರುಣಾ
ಳುಗಳ[1]ರಸ ಶಿವ[1] ಸಂತವಿಟ್ಟನು ಸುರಕದಂಬ[2]ಕವ[2] ॥

ಕೇಳು ಜನಮೇಜಯ ಧರಿತ್ರೀ
ಪಾಲ ಕೌರವನೃಪತಿ ಶಲ್ಯಗೆ
ಹೇಳಿದನು ಸಾರಥ್ಯ ಸಂಯೋಜನ ಸಮಾಹಿತವ ।
ಲೋಲನಾಪರಿಕರ್ಮತರು ನಿ
ರ್ಮೂಲನೈಕಕ್ಷಮ ಸುಧಾಕರ
ಮೌಳಿ ಕೇಳೀ ಕಲಿತ ವಿಸ್ತರ ವರ ಕಥಾಂತರವ ॥ ೧

ತಾರಕನ ಮಕ್ಕಳುಗಳೆನಿಸುವ
ತಾರಕಾಕ್ಷನು ಕಮಳಲೋಚನ
ವೀರ ವಿದ್ಯುನ್ಮಾಲಿಯೆಂಬೀ ಮೂವರತಿಬಳರು ।
ಘೋರತರ ಸುತಪಃಪ್ರಭಾವಿ
ಸ್ತಾರಿಗಳಸಂಖ್ಯಾತಯುಗದಲಿ
ವಾರಿಜೋದ್ಭವನನು [3]ವಶೀಕರಿಸಿದರು[3] ಭಕುತಿಯಲಿ ॥ ೨

ಬಂದು ಕಮಲಜನಿವದಿರಿದಿರಲಿ
ನಿಂದನೆಲೆ ಋಷಿಗಳಿರ ಸಾಕಿ
ನ್ನೆಂದುಪರಿಯಂ[4]ತೀ[4] ತಪೋನುಷ್ಠಾನದಾಯಾಸ ।
ನಿಂದು ಬೇಡುವುದೊಲಿದುದನು ನಾ
ವಿಂದು ಸಲಿಸುವೆವೆನಲು ನಿಮಿಷಕೆ
ಕಂದೆರೆದು ಕಮಳಾ[5]ಸನನಂಗೆರಗಿದರು ಭಕ್ತಿಯಲಿ[5] ॥ ೩

ಎನಿತನೊಲಿದಡೆ ಏನಹುದು ದು
ರ್ಜನರು ಪುರುಷಾರ್ಥಿಗಳೆ ಹಾವಿಂ
ಗನಿಲನೇ ಆಹಾರವಾದಡೆ ಬಿಟ್ಟುದೇ ವಿಷವ ।

---

1 ದೇವನು (ಚ.ತ). 2 ವನು (ಕ). 3 ಭಜಿಸಿ ತುತಿಸಿದರು (ಕ).
4 ತರ (ಕ). 5 ಸನನ ಭಜಿಸಿದರು ವಿನಯದಲಿ (ಕ.ಗ).

ದನುಜರದ್ಭುತ ತಪವಮಾಡಿದ
ರನಿಮಿ[1]ಷಾವಳಿ[1]ಬೇಂಟೆಯಾಡಲು
ನೆನೆದು ಬಿನ್ನೈಸಿದರು ಕಮಲಭವಂಗೆ ನಿಜಮತವ ॥ ೪

ರಚಿಸುವೆವು ಪುರಮೂಱ[2]ನಗ್ಗದ[2]
ಖಚರ ಕಿನ್ನರ [3]ಸಿದ್ಧ[3] ನಿರ್ಜರ
ನಿಚಯವೆಮಗೋಲೈಸಿ ಹೋಗಲಿ ಹಲವು ಮಾತೇನು।
ಉಚಿತದಲಿ ನಿಮ್ಮಡಿಗಳನು ಪರಿ
ರಚಿಸಲಾವೋಲೈಸುವೆವು [4]ವರ[4]
ವಚನ ನಿಮ್ಮದು ಕರುಣಿಸುವುದಮರತ್ವವನು ನಮಗೆ ॥ ೫

ಹಾ ಮಹಾದೇವೀ ಕುಠಾರರ
ತಾಮಸದ ನೆನಹಿದ್ದ ಪರಿಯಿಂ
ತೀ ಮಹಾನುಷ್ಠಾನ[5]ವಿದಱಲಿ[5] ಶಾಂತಿ ಲವವಿಲ್ಲ।
ಕಾಮಿತವನಿವದಿರಿಗೆ ಕೊಟ್ಟರೆ
ಕಾಮಹರ ಕಮಳಾಕ್ಷರಿಗೆ ಸಂ
ಗ್ರಾಮದಲಿ ಜಯವಾಗದೆಂದಡಿಗಡಿಗೆ ಬೆಱಗಾದ ॥ ೬

ಹುಲಿಗೆ ಧೈರ್ಯವನೆಱಕೆಗಳನಹಿ
ಗಳಿಗೆ ಖಳರಿಗೆ ಲಕ್ಷ್ಮಿಯನು ಕ
ತ್ತಲೆಗೆ ಕಾಠಿಣ್ಯವನು ಚೈತನ್ಯವನು ಗಿರಿಗಳಿಗೆ ।
ಕೊಲೆಗಡಿಕರಿಗೆ ನಿತ್ಯದೇಹವ
ನೊಲಿದು ಕೊಟ್ಟರೆ ಲೇಸು ಬಳಿಕೇ
ನೆಲೆ ಮಹಾದೇವೇನ ನೆನೆದರೊ ಶಿವಶಿವಾ ಎಂದ ॥ ೭

ಪುರವ ವಿರಚಿಸಿ ದಿವ್ಯ ಸಾಸಿರ
ವರುಷ ಕೈಗೂಡಿದರೆ ಒಂದೇ
ಸರಳಲಾವವನೆಚ್ಚಡಾಗಳೆ ನಿಮಗೆ [6]ಕಡೆಗಾಲ[6] ।
ಬರಲಿ ಬಳಿಕಿಂದ್ರಾದಿ ನಿರ್ಜರ
ನೊರಜುಗಳ ನೀವ್ ಸದೆಯಿ [7]ಹೋಗೆಂ[7]
ದರಸ ಕೇಳೈ ಕೊಟ್ಟನವರಿಗೆ ಕಮಳಭವ ವರವ॥ ೮

---

[1] ಷಾಳಿಯ (ನ). [2] ನಗರದ (ಕ). [3] ಯಕ್ಷ (ಚ.ತ). [4] ಗುರು (ಕ), [5] ಫಲ್ಗಧಲಿ (ಕ). [6] ಕೇಡಢುದು (ಚ.), ಕಡೆಯಹುದು (ಬ). [7] ಸಾಕೆಂ (ಕ).

ಕರುಣವಿನಿತೇ ಸಾಕು ನಮ[1]ಗೇ
ನುರದಲೊಗೆದವೆ ಮೊಲೆಗಳೆಮ್ಮ ಯ[1]
ಪುರವನೊಂದಂಬಿನಲಿ ಗೆಲುವನ ತಾಯಿ ಹುಸಿಯೆನುತ।
ದುರುಳರೀತನ ಬೀಳುಕೊಂಡು
ಬ್ಬರದ ಹರುಷದಿ ಹೆಚ್ಚಿ ಮಯನನು
ಕರಸಿ ಮಾಡಿಸಿದರು ಮಹಾವಿಭವದಲಿ ನಗರಗಳ ॥ ೯

ಕನಕದಲಿ ರಜತದಲಿ ಬಲುಗ
ಬ್ಬುನದಲೊಂದೊಂದಕ್ಕೆ ಶತಯೋ
ಜನದ [2]ತೆಱಹುಗಳೆಡೆಗೆ ಹಬ್ಬಿಸುವಮಳ[2] ತೋರಣದ।
ವಿನುತ ನಗರಿಗಳಾದುವಲ್ಲಿಯ
ದನುಜರೆರೆಗಳ ಹಾಯ್ಕಿ ಗಾಣದ
[3]ಲನಿಮಿಷರನೀಡಾಡಿ[3] ಕೊಂಡರು ದುರ್ಗವನು ಸುರರ॥ ೧೦

ಸೂಱ[4]ವೋಯಿತು[4] ಸುರಪತಿಯ ಭಂ
ಡಾರ ಹೆಂಡಿರು ಸಹಿತ ನಿರ್ಜರ
ನಾರಿಯರು ತೊತ್ತಾದರಮರಾರಿಗಳ ಮನೆಗಳಿಗೆ।
ಮೂಱುಭುವನದೊಳವದಿರಾಣೆಯ
ಮೀಱಿ ಬದುಕುವರಿಲ್ಲ ಕಡೆಯಲಿ
ತಾರಕನ ಮಕ್ಕಳಿಗೆ ಕೈವರ್ತಿಸಿತು ಜಗವೆಂದ ॥ ೧೧

ನೆರೆದುದಮರರು ಹಾಳು ಹಱಿ ಸಾ
ಗರದ ಕಡೆಯಲಿ ರೂಹುಗಳೆದು
ಟ್ಟಱುವೆಗಳ ಕಾಳಿಕೆಯ ಮೋಱೆಯ ತಾಱಿದೊಡಲುಗಳ ।
ಹುರಿದ ಧೈರ್ಯದ ತಳ್ವವಾಱುವ
ತರಳ ಹೃದಯದ ದೇವರಿಂದ್ರನ
ನಱಿಸಿ [5]ಕಂ[5]ಡರು ತಮ್ಮೊಳಾಳೋಚನೆಯ ಮಾಡಿದರು॥ ೧೨

ತಾರಕನ ಮಕ್ಕಳುಗಳೇ ಹಿಂ
ದಾರ ಗೆಲಿದರು ತಪವ ಮಾಡಿ ವಿ
ಕಾರಿಗಳು ಬ್ರಹ್ಮಂಗೆ ಬಂದಿಯನಿಕ್ಕಿದರು ಬಳಿಕ।

---

[1] ಗೀಧುರದಲೊದಗುವ ವೀರನೆಮ್ಮಯ (ಕ). [2] ಗಲನೀಳಪ್ರಮಾಣವು ಮಕರ (ಟ.ತ.ನ.ಪ.ಬ). [3] ಲನಿಮಿಷಾಳಿಯತೆಗೆದು (ಚ.ತ.ನ.ಪ.ಬ). [4] ಯೋದುದು (ಚ.ತ), ಹೋದುದು (ಟ.ನ.ಪ.ಬ). [5] ಕೊಂ (ತ).

ವಾರಿಜೋದ್ಭವ ಮೇಲನಱಿಯ ಕು
ಠಾ[1]ರನಾಯ್ಗಳ[1] ಹೆಚ್ಚಿಸಿದನಿದ
ನಾರಿ[2]ಗಱುಪುವೆವೆಂದು[2] ಸುಯ್ದರು ಬಯ್ದು ಕಮಲಜನ॥ ೧೩

ಆದರೆಯು ನಮಗಾತನೇ ಗತಿ
ಯಿಾ ದುರಾತ್ಮರಿಗೆಂದು ಹಱಿವೆಂ
ದಾದರಿಸಿ ಕೇಳುವೆವೆನುತ ಕಮಲಜನ ಹೊರೆಗೈ[3]ದಿ[3] ।
ಖೇದವನು ಸುರಿದರು ಪಿತಾಮಹ
ನಾ ದಿವಿಜಗಣಸಹಿತ ಬಂದನು
ವೇದಸಿದ್ಧವಿಶುದ್ಧ ದೈವವ ಕಾಬ ತವಕದಲಿ ॥ ೧೪

ಬಂದು ಕೈಲಾಸಾದ್ರಿಯಲಿ ಗಿರಿ
ನಂದನಾ ವಕ್ಷೋಜ ಘುಸೃಣ
ಸ್ಕಂಧತನು ಚಿನ್ಮಯ ನಿರಂಜನ ಭೂರಿ ಪಂಜರನ।
ವಂದ್ಯಮಾನ ಸುರಾಸುರೋರಗ
ವೃಂದ ಮಣಿಮಕುಟ ಪ್ರಭಾ ನಿ
ಷ್ಯಂದ ಭೂಯಸ್ತಿಮಿತ ಕಾಯನ ಕಂಡನಬುಜಭವ ॥ ೧೫

ಕೊರಳ ಕಪ್ಪಿನ ಚಾರು ಚಂದ್ರಾ
ಭರಣ ಮೂರ್ಧದ ಭಾಳನಯನದ
ಭರಿತ ಪರಿಮಳದಂಗವಟ್ಟದ ಜಡಿದ ಕೆಂಜಡೆಯ।
ಕರಗಿ ಕಾಸಿದವಿದ್ಯೆಯನು ಬೇ
ಱಿರಿಸಿ ಶುದ್ಧಬ್ರಹ್ಮವನು ಕಂ
ಡರಿಸಿದಂತಿರಲೆಸೆವ ಶಿವನನು ಕಂಡನಬುಜಭವ॥ ೧೬

ವೇದವಱಿಯದ ತರ್ಕವಿದ್ಯಾ
ವಾದ ನಿಲುಕದ ಬುಧರ ಮತಿ ಸಂ
ಪಾದನೆಗೆ ಮುಖಗೊಡದ ವಾಚ್ಯಾಯನರ ಚೇತನಕೆ।
ಹೋದ ಹೊಲಬಳವಡದ ಬ್ರಹ್ಮೇಂ
ದ್ರಾದಿ ಸುರರುಬ್ಬಟೆಗೆ [4]ಸೋಲದ[4]
ನಾದಿದೇವರದೇವ ಶಿವನನು ಕಂಡನಬುಜಭವ ॥ ೧೭

---

[1] ರಿಗಳಿಗಾಯುಗಳ (ಕ). [2] ಗುಸುರುವೆವೆನುತ (ಚ.ತ.ನ.ಪ.ಬ).
[3] ದೆ (ಕ). [4] ಸಾಲದ (ಕ).

ಕಂತುಹರನನು ವಿಮಳನನು ವೇ
ದಾಂತವೇದ್ಯನನದ್ವಿತೀಯನ
ಚಿಂತ್ಯಮಹಿಮನ ಸಚ್ಚಿದಾನಂದ್ಯೆಕರಸಮಯನ ।
ಅಂತ್ಯರಹಿತನನಪ್ರಮೇಯನ
ನಂತರೂಪನನಂಘ್ರಿಭಜಕ ಭ
ವಾಂತಕನನುದ್ದಂಡದೈವವ ಕಂಡನಬುಜಭವ ॥ ೧೮

ಇದ್ದುದಗಣಿತ ರುದ್ರಕೋಟಿಗ
ಳಿದ್ದುದನುಪಮ ವಿಷ್ಣುಕೋಟಿಗ
ಳಿದ್ದುದಂಬುಜಭವ ಸುರೇಂದ್ರಾದಿಗಳು ಶತಕೋಟಿ ।
ಇದ್ದುದಮಳಾಮ್ನಾಯಕೋಟಿಗ
ಳಿದ್ದುದಗಣಿತ ಮಂತ್ರಮಧ್ಯದೊ
ಳಿದ್ದನಿರ್ಮಳ ಖಂಡಪರಶುವ ಕಂಡನಬುಜಭವ ॥ ೧೯

ಪುಳಕಜಲವುಬ್ಬರಿಸೆ ಕುಸುಮಾಂ
ಜಳಿಯನಂಘ್ರಿದ್ವಯಕೆ ಹಾಯಿಕಿ
ನಳಿನಭವ ಮೆಯ್ಯಿಕ್ಕಿದನು ಭಯಭರಿತ ಭಕ್ತಿಯಲಿ ।
ಬಳಿಯಲಮರೇಂದ್ರಾದಿ ದಿವಿಜಾ
ವಳಿಗಳವನಿಗೆ ಮೆಯ್ಯ ಚಾಚಿದ
ರುಲಿವುತಿರ್ದುದು ಜಯಜಯಧ್ವಾನದಲಿ ಸುರಕಟಕ ॥ ೨೦

ಪರಮ ಕರುಣಕಟಾಕ್ಷ ರಸದಲಿ
ಹೊರೆದು ಕಮಳಾಸನನ ಹತ್ತಿರೆ
ಕರೆದು ಮನ್ನಿಸಿ ನಿಖಿಳ ನಿರ್ಜರಜನವ ಸಂತೈಸಿ ।
ಬರ[1]ವಿ[1]ದೇನಿದ್ದಂತೆ ವಿಶ್ವಾ
ಮರಕದಂಬಕಸಹಿತ ಎಂದಂ
ಬುರುಹಭವನನು ನಸುನಗುತ ನುಡಿಸಿದನು ಶಶಿಮೌಳಿ ॥ ೨೧

ತಾರಕನ ಮಕ್ಕಳುಗಳಿಗೆ ನೆಱೆ
ಸೂಱೆವೋದುದು ಸುರರ ಸಿರಿ ಮು
ವ್ಮಾಱುವೋದುದು ಸುರರ ಸತಿಯರು ಖಳರ ಮನೆಗಳಿಗೆ ।

[1] ಲ (ಕ).

ಚಾರುವೈದಿಕ ಹವ್ಯಕವ್ಯ ವಿ
ಹಾರವೃತ್ತಿಗ[1]ಳಳಿದ[1]ವಿದನವ
ಧಾರಿಸೆಂದಬುಜಾಸನನು ಮಾಡಿದನು ಬಿನ್ನಹವ ॥ ೨೨

[2]ನಗೆಯ ಮೊಳೆ[2] ನಸುಹೊಳೆಯೆ ಬೊಮ್ಮನ
ಮೊಗವ ನೋಡಿದನಭವನೀಶನ
ಬಗೆಯ ಭಾವವನಱಿದ ತಲೆಗುತ್ತಿದನು ಕಮಲಭವ ।
ದುಗುಡವನು ಬಿಡಿ ನಿಖಿಳ ದಿವಿಜಾ
ಳಿಗಳು ಪಶುಗಳಲಾ ವಿರಿಂ[3]ಚನ[3]
ವಿಗಡತನದಲಿ ಕೆಟ್ಟ[4]ರಕಟ[4]ನ್ನಂಜಬೇಡೆಂದ ॥ ೨೩

ಪಶುಪತಿತ್ವವ ನಮಗೆ ಕೊಡಿ ನೀವ್
ಪಶುಗಳಾಗಿರಿ ಪಾಶುಪತ ವರ
ನಿಶಿತಶರದಲಿ ದೈತ್ಯದುರ್ಗವನುರುಹಿ ತೋಱುವೆವು ।
ದೆಸೆದೆಸೆಗೆ ಹರೆದಖಿಳದೇವ
ಪ್ರಸರವನು ನೀವ್ ನೆರಹಿ [5]ಮೇಲ[5]
ನ್ನಸಮಸೆಗೆ ಹೆದಱದಿರಿ ಎಂದನು ನಗುತ ಮದನಾರಿ ॥ ೨೪

ಜಾಱಿದುಬ್ಬಿನ ಹೊತ್ತ ದುಗುಡದ
ಮೋಱೆಗಳ ಮೋನದ [6]ನಿ[6]ಹಾರದ
ದೂಱುಗಂಗಳ ದೇವನಿಕರವ ಕಂಡು ಕರುಣದಲಿ ।
ಏಱುವಡೆದುದು ಮನವವಿದ್ಯೆಗೆ
ಮಾಱುವೋದಿರಲಾ ಎನುತ ಶಿವ
ತೋಱಿ ನುಡಿದನು [7]ಪಾಶುಪತ್ಯದ ಸಾರ[7] ಸಂಗತಿಯ ॥ ೨೫

ಕರ್ಮಕಿಂಕರರಾಗಿ ಕೃತದು
ಷ್ಕರ್ಮವಾಸನೆವಿಡಿದು ತಾನೇ
ಕರ್ಮಕರ್ತನು ಭೋಗಿ ತಾನೇ ದುಃಖಿಸುಖಿಯೆಂದು ।
ನಿರ್ಮಳಾತ್ಮನೊಳೀಯಹಂಕೃತಿ
ಧರ್ಮವನೆ ನೇವರಿಸಿ ಮಱುಗುವ
ದುರ್ಮತಿಗಳನು ಪಶುಗಳೆಂದರೆ ಖೇದವೇಕೆಂದ ॥ ೨೬

---

1 ಳಿಲ್ಲ (ಕ). 2 ಮುಗುಳುನಗೆ (ಚ.ತ.ನ.ಪ.ಬ). 3 ಚಿಯ (ಚ.ತ.ನ.ಪ.ಬ). 4 ರಿದಕಿ (ಟ.ಪ.ಬ). 5 ಸಾಕಿ (ಪ.ಬ). 6 ದು (ಕ). 7 ಪಶುಪತಿತ್ವವ್ಯಾಪ್ತಿ (ಚ.ಟ.ತ.ದ.ಪ.ಬ).

ಪಂಚವಿಂಶತಿ ತತ್ತ್ವರೂಪದ
ಸಂಚವಱಿಯದೆ ನೀತಿಮುಖದಲಿ
ರಂಚೆಗಾಣದೆ ಸಗುಣಮಯ ನೀಹಾರದಲಿ ಮುಳುಗಿ |
ಮಿಂಚುವೆಳಗಿನ ಬಳಕೆಯಲಿ ಮನ
ಮುಂಚಿ ಮೈಗೊಂಡಳಲುವಾತುಮ
ವಂಚಕರು ನೀವ್ ಪಶುಗಳೆಂದರೆ ಖೇದವೇಕೆಂದ || ೨೭

ತೋಱುವೀ ಜಗವೆಲ್ಲ [1]ಬೊಮ್ಮವೆ
ತೋಱುತಿದೆಯೆನಿಪರ್ಥದಲಿ[1] ಸಲೆ
ತೋಱುವೀ ಜಗಕೆಲ್ಲ ಪರತತ್ತ್ವದಲಿ ಪರಿಣಾಮ |
ತೋಱುವೀ ತೋಱಿಕೆಯೊಳಗೆ ಸಲೆ
ಮೀಱಿ ತೋಱುವ [2]ನಿಜವ[2]ನಱಿಯದ
ಗಾಱುಗಳು ನೀವ್ ಪಶುಗಳೆಂದರೆ ಖೇದವೇಕೆಂದ || ೨೮

ಆದಿಭೌತಿಕದಿಂದ ನೊಂದು ವಿ
ರೋಧಿ ಷಡ್ವರ್ಗದ ವಿಕಾರದ
ವ್ಯಾಧಿಯಲಿ ಬೆಂಡಾಗಿ ಭವಪಾಶದಲಿ ಬಿಗಿವಡೆದು |
ವಾದರಚನೆಯ ಬಲೆಗೆ ಸಿಲುಕಿ ವಿ
ರೋಧಗೊಂಬೀ ಮೋಹವಿದ್ಯಾ
ಸಾಧಕರು ನೀವ್ ಪಶುಗಳೆಂದರೆ ಖೇದವೇಕೆಂದ || ೨೯

ಪಶುಪತಿಯೆ ಪರಮಾತ್ಮ ಜೀವರು
ಪಶುಗಳೀ ಪರಿ ಜೀವಭಾವದೊ
ಳೆಸಗುವರು ನೀವ್ ಪಶುಗಳೀಗಳು ನಿಮ್ಮ ರಕ್ಷಣವ |
ಪಸರಿಸುವ ಪರಮಾತ್ಮ ತಾ[3]ನೀ[3]
ಘಸಣಿ ನಿಮಗೇಕೆಂದು ದೇವ
ಪ್ರಸರವನು ತಿಳುಹಿದನು ಕಾರುಣ್ಯದಲಿ ಕಾಮಾರಿ || ೩೦

[4]ತುಬ್ಬಿ[4]ಕೊಬ್ಬುದವಿದ್ಯೆಯನು ಸುಧೆ
ಗೊಬ್ಬುಗಳ ಗಂಡಿಗರ ಗಾಢದ
ಗರ್ಭವನು [5]ಹೊಳ್ಳಿಸಿತು[5] ಗರಳಗ್ರೀವನುಪದೇಶ |

---

[1] ಬೊಮ್ಮಲೆತೋಱುತೆನಿತೆನಿತರ್ಥದಲಿ (ಕ), ಬ್ರಹ್ಮದತೋಱಿಕೆಯೊಳು ವಿವರ್ತದಲಿ (ಗ), ಬೊಮ್ಮವೆ ತೋಱುತಿವೆ ನಿವೃತ್ತಿಯಲಿ (ಟ). [2] ಜಗವ (ಕ). [3] ನಿರೆ (ಚ.ತ.ದ.ಬ). [4] ಉಬ್ಬಿ (ನ), ತುಂಬಿ (ಬ). [5] ಗಾಢಿಸಿತು (ಸ.ಕ.ನ), ಹಿಂಗಿಸಿತು (ನ).

ಹುಬ್ಬಿನಲಿ ಮಾತಾಡಿ ತಮ್ಮೊಳ
ಗೊಬ್ಬರೊಬ್ಬರು ತಿಳಿದು ಸಕಳ ಸು
ಪರ್ಬಜನವೆಱಗಿದುದು ಜಯಜಯ ಎನುತ ಪಶುಪತಿಗೆ ॥ ೩೧

ಜಗವುಘೋ ಎಂದುದು ಜಯಧ್ವನಿ
ಜಗವ ಝೊಂಪಿಸಿತೊಗ್ಗಿನಂಜುಳಿ
ಗಗನದಗಲಕೆ ಕುಣಿವುತಿದ್ದುದು ಸುರರ ಭಾಳದಲಿ ।
ಬೆಗಡು ಬೀತುದು ಬೇಸಱಿನ ಬಲು
ದಗಹು ಸೋತುದು ಶಿವಗೆ ದೈತ್ಯಾ
ರಿಗಳು ಮುದದಲಿ ಮಾಡಿದರು ಮೂರ್ಧಾಭಿಷೇಚನವ ॥ ೩೨

ಪಾಶುಪತ್ಯದ ಪಟ್ಟವಾಯ್ತು ಮ
ಹೇಶನಲಿ ಬ್ರಹ್ಮಾದಿದೇವರು
ವಾಸಿವಟ್ಟವ ಬಿಟ್ಟರೋಲೈಸಿದರು ಪಶುಪತಿಯ ।
ಪಾಶುಪತ ಸುವ್ರತವ ಧರಿಸಿದು
ದಾ ಸುಪರ್ವಸ್ತೋಮ ವಿಶ್ವಾ
ಧೀಶನೆಸೆದನು ಕೋಟಿಶತಸೂರ್ಯಪ್ರಕಾಶದಲಿ ॥ ೩೩

ಆಱನೆಯ ಸಂಧಿ ಮುಗಿದುದು.

ಏಳನೆಯ ಸಂಧಿ

ಸೂಚನೆ॥ ಕಾಮಕೋಳಾಹಳನು ದಕ್ಷನ
ಹೋಮದಳವುಳಕಾಱ ಹರ ನಿ
ಸ್ಸೀಮದಲಿ ಪುರ ಮೂಱ ಗೆಲಿದನುಃ ಸಲಹಿದನು ಸುರರ ॥

ರಚಿಸಿ ರಥವನು ಭೀತಿ ಬೇಡಿ
ನ್ನುಚಿತವೇನದ ಮಾಡಿ ದೈತ್ಯ
ಪ್ರಚಯವನು ಪರಿಹರಿಸಿಕೊಡುವುದು ಪಾಶುಪತ ಬಾಣ ।
ಕುಚಿತರಿನ್ನೇಗುವರು ಖಳರಿ
ನ್ನಚಳಿತವಲೇ [1]ನಿಮ್ಮ ಪದವೆನೆ[1]
[2]ನಿ[2]ಚಿತಹರುಷ[3]ರು[3] ವಿಶ್ವಕರ್ಮಂಗಱುಹಿದರು ಹದನ ॥ ೧

ಮಾವ ಕೇಳದುಭುತವನೀ ವಿ
ಶ್ವಾವನೀತಳವಾಯ್ತು ರಥ ತಾ
ರಾವಳಿಗಳೇ[4]ಸಾ[4]ಯ್ತು ಸತ್ತಿಗೆಯಾಯ್ತು ಕನಕಾದ್ರಿ ।
ಆವುದಯ[5]ಘನ[5]ಶೈಲವಸ್ತ್ರ
ಗ್ರಾವ ಕೂಬರ ರಥ[6]ದಧಿಷ್ಠಾ[6]
ನಾವಲಂಬನವಾಗೆ ರಚಿಸಿದನಾತ ನಿಮಿಷದಲಿ ॥ ೨

ಆಸುರವಲೇ ವಿಂಧ್ಯ ಹಿಮಗಿರಿ
ಹಾಸುಹಲಗೆಗಳಾದವಚ್ಚು ಮ
ಹಾಸಮುದ್ರವೆ ಆಯ್ತು ಗಾಲಿಗೆ ಬೇಱೆ ತರಲೇಕೆ ।
ಆ ಸಸಿಯ ಸೂರಿಯನ ಮಂಡಲ
ವೈಸಲೇ ಗಂಗಾದಿ ಸಕಲ ಮ
ಹಾಸರಿತ್ಕುಲವಾಯ್ತು ಚಮರಗ್ರಾಹಿಣಿಯರಲ್ಲಿ ॥ ೩

ರಾಯ ಕೇಳ್ಕೈ ಮತ್ತೆಯಾಹವ
ನೀಯ ಗಾರುಹಪತ್ಯ ದಕ್ಷಿಣ
ವಾಯುಸಖರಾದರು ತ್ರಿವೇಣುಕವಾ ರಥಾಗ್ರದಲಿ ।

[1] ನಮ್ಮ ಶರವೆನೆ (ಕ), ನಿಮ್ಮ ಪಥವೆನೆ (ದ.ಬ). [2] ರ (ಕ). [3] ದಿ (ಗ.ಚ.ನ). [4] ಜಾ (ಕ). [5] ಸುರ (ಕ). [6] ವೆನಿಪ್ಪಾ (ಕ).

ಆಯಿತಲ್ಲಿ ವರೂಥ ನಕ್ಷ
ತ್ರಾಯತವು ಬಳೆಯನುಕರುಷವೊಂ
ದಾಯಿ[1]ತಾಗ್ರಹ[1]ರಾಜಿಯಾದವು ಮಾವ ಕೇಳೆಂದ ॥ ೪

ಆ ರಥಾ[2]ಗ್ರಕೆ[2] ವೇದ ನಾಲುಕು
ವಾರುವಂಗಳ ಹೂಡಿದರು ನೊಗ
ನಾ ರಜನಿ ದಿನ ಮಾಸವುತ್ತರದಕ್ಷಿಣಾಯನವು ।
ಸಾರ [3]ಧೃತಿವೇದಪ್ರತತಿ ವಿ
ಸ್ತಾರ[3]ವಾದವು ನೊಗನ ಕೀಲ್ಗಳು
ಚಾರು [4]ಕುಲಫಣಿ[4]ನಿಕರ ಹಯಬಂಧನದ ನೇಣುಗಳು ॥ ೫

ಮಿ[5]ಳಿ[5]ಗಳಾದವು ಕುಹು ಸುತಾರಾ
ವಳಿಗಳಮಳಪ್ರಣವವಾದುದು
ಮೊಳೆಯ ಬಲುಚಮ್ಮಟಿಗೆ ಹಗ್ಗಕೆ ವರ ಷಡಂಗಮವು ।
ನಿಲಿಸಲಖಿಳ ಕ್ರತು ರಥಾಂಗಾ
ವಳಿಗಳಾದವು ವಿವಿಧ ವರ್ಣದ
ಜಲದ ಪಟಲ ಪತಾಕೆಯಾದವು [6]ರಥದ ಬಳಸಿನಲಿ[6] ॥ ೬

ಕಾಲದಂಡದ ರೌದ್ರದಂಡ ಕ
ರಾಳರಥಸೀಮಾಗ್ರದಂಡ ವಿ
ಶಾಲ ವಿಮಳ ಬ್ರಹ್ಮದಂಡದ ಸಾಲು ಚೆಲುವಾಯ್ತು ।
[7]ಮೇಲು[7]ವಲಗೆಯ ಸುತ್ತ ಚಮರೀ
ಜಾಳ ಕನಕಧ್ವಜದ ತುದಿಯಲಿ
ಮೇಳವಿಸಿದನು ವಿಶ್ವಕರ್ಮನು ವಿಪುಳ [8]ಶಾಕ್ವರವ[8] ॥ ೭

ಅರಸ ಕೇಳ್ ಋತು ಚರಿತ ಸಂವ
ತ್ಸರವೆ ಧನು [9]ತತ್ಕಾ[9]ಳರಾತ್ರಿಯೆ
ತಿರುವಿದೇನಾಶ್ಚರ್ಯವೈ ಶಿವ ಕಾಲರೂಪಿನಲಿ ।
ಸರಳ ರಚನೆಗೆ ವಿಷ್ಣುವನೆ ಸಂ
ಸ್ಮರಿಸಿದರು ವೈಕುಂಠತೇಜ
ಸ್ಫುರಿತ ಮಾರ್ಗಣ ಮೆಱೆದುದಗ್ನಿಷ್ಟೋಮ ಮುಖವಾಗಿ ॥ ೮

---

[1] ತಗ್ಗದ (ಕ.ಚ.ದ.ಪ). [2] ದಿಗ (ಕ). [3] ಶ್ರುತಿವೇದಪ್ರತತಿವಿಸ್ತಾರ (ಕ), ಧೃತಿವೇದೋಪನಿಷತುವಿಚಾರ (ಟ). [4] ಫಣಿಕುಲ (ಗ.ಚ.ಟ.ತ.ಬ). [5] ಣಿ (ಕ). [6] ಮಾವ ಕೇಳೆಂದ (ಕ). [7] ಮೂಲೆ (ಕ). [8] ಸಾಕ್ಷಕವ (ಕ.ಗ.ಪ.ನ). [9] ತತುಕಾ (ಕ).

ಶ್ರುತವೆ ನಿಮಗಿದು ಮಾವ ಬಹಳಾ
ದ್ಭುತದ ರಥನಿರ್ಮಾಣ ದೇವ
ಪ್ರತತಿ ನೆರೆದುದು ನೆಱೆ ಚತುರ್ದಶ ಭುವನವಾಸಿಗಳ |
ಶತಮುಖಬ್ರಹ್ಮಾದಿಗಳು ತ
ಮ್ಮತಿಶಯದ ತೇಜೋರ್ಧವನು ಪಶು
ಪತಿಯ ಪದ[1]ಕೋಲೈ[1]ಸಿದರು ಮಾದ್ರೇಶ ಕೇಳೆಂದ ॥ ೯

ಆ ಮಹಾಶಾಂಭವ ಸುತೇಜ
ಸ್ತೋಮ[2]ಕೇ[2]ನದು ಕೊಱತೆಯೇ ಮ
ತ್ತೀ[3] ಮಹೇಂದ್ರ ಬ್ರಹ್ಮಮುಖ ತೇಜಸ್ವಿಗಳ ಶಕ್ತಿ[3]|
ಆ ಮಹಾದೇವನಲಿ ಸೇರಿದು
ದೀ ಮಹಾರಥಕಾಗಿ ವಿಮಳ
ವ್ಯೋಮಕೇಶನು ನಗುತ ಬಿಜಯಂಗೆಯ್ಯಲನುವಾದ ॥ ೧೦

ಕಳಚಿ ತಲೆಮಾಲೆಯನು ಕೊಟ್ಟನು
ಕೆಲದವರ ಕೈಯಲಿ ವಿಭೂತಿಯ
ಗುಳಿಗೆಯನು ನೆಗ್ಗೊತ್ತಿ ಸರ್ವಾಂಗದಲಿ [4]ಧೂಳಿಸಿದ[4] |
ಹೊಳೆಹೊಳೆವ ಕೆಂಜೆಡೆಯನಹಿಪತಿ
ಯಳುಕೆ ಬಿಗಿದನು ದಂತಿಚರ್ಮವ
ನೆಲಕೆ ಮುಂಜೆಱಗೆಳೆಯಲುಟ್ಟನು ದೇಸಿ ಪರಿ ಮೆಱೆಯೆ ॥ ೧೧

ಖಡೆಯ ಸರಪಣಿ ತೋಳಬಂದಿಗೆ
ಪೆಡೆವಣಿಯ ಮಱಿವಾವುಗಳನಳ
ವಡಿಸಿದನು ಜೋಡಿಸಿದ ಶೇಷನ ಜಳವಟಿಗೆ ಮೆಱೆಯೆ |
ಜಡಿವ ಕಿಱುಗೆಜ್ಜೆಗಳ ಬಿಗುಹಿನ
[5]ಲುಡೆಯ[5] ಬದ್ದುಗೆದಾರ ಉರಗನ
ಪೆಡೆವಣಿಯ ಗೊಂಡೆಯದ ಕಿಗ್ಗಟ್ಟೆಸೆಯೆ ಪಶುಪತಿ[6]ಯ[6] ॥ ೧೨

ನೆರೆದುದಭವನ ಕೆಲಬಲದಲು
ಬ್ಬರದ ಬೊಬ್ಬೆಯ ಜಡಿವ ಖಡ್ಗದ
ಬೆರಳ ಚಕ್ರದ ಭವಣಿಗಳ [7]ಥವಣಿಸುವ[7] ಥಾಣೆಗಳ |

---

[1] ಕೇಱಿಸಿ (ಕ). [2] ವೇ (ಕ). [3] ಮಹೇಂದ್ರ ಬ್ರಹ್ಮಮುಖತೇಜಸ್ಸು ಘನಶಕ್ತಿ (ಕ), ಮಹೇಂದ್ರ ಬ್ರಹ್ಮಾದಿಗಳ ತೇಜಸ್ವಿಗಳಶಕ್ತಿ (ಗ.ಚ). [4] ಲೇಪಿಸಿದ (ಕ.ನ.ಬ). [5] ತೊಡರ (ಕ), ಲುಡಿಯ (ಚ.ಟ.ದ.ಪ). [6] ಗೆ (ಚ.ದ). [7] ಡಾವರಿಪ (ತ).

ಪರಿಪರಿಯ ಕೈದುಗಳ ಕರ್ಕಶ
ತರದ ಚರಿತದ [1]ರೌ[1]ದ್ರವೇಷದ
ವರ ಮಹಾಗಣನಿಕರವೊದಗಿತು ಮಾವ ಕೇಳೆಂದ ॥ ೧೩

ಸುರಬಲದ ನಿಸ್ಸಾಳ ಕೋಟಿಯು
ಮೊರಹು ಮೊಳಗಿತು ಬಿಲುದಿರುವಿನ
ಬ್ಬರದಲಾ ದನಿಯಡಗಿತಗಣಿತ ವಂದಿಘೋಷದಲಿ ।
ಅರರೆ ವಂದಿಧ್ವನಿಯ ಗರ್ಭೀ
ಕರಿಸಿ ಹೆಚ್ಚಿತು ಜಯಜಯಧ್ವನಿ
ನೆಱೆ ಚತುರ್ದಶ ಜಗವ ಜಡಿದುದು [2]ಮಾವ ಕೇಳೆಂದ[2] ॥ ೧೪

ಮುರಿಯೆ ಬಲವಂಕದಲುಘೇ ಎಂ
ದೆಱಗಿದವು ಶ್ರುತಿಕೋಟಿ ವಾಮದ
ಕೊರಳ ಕೊಂಕಿನಲುಪನಿಷತ್ತುಗಳೆಱಗಿದವು ಕೋಟಿ ।
ತಿರುಗೆ ಬೆನ್ನಲಿ ನೆರೆದ ಸಚರಾ
ಚರವುಘೇ ಎಂದುದು ಕಪರ್ದಿಯ
ಸರಿಸದಲಿ ಸಿಡಿಲಂತೆ ಮೊಳಗಿತು ವೀರ[3]ಗಣನಿಕರ[3] ॥ ೧೫

ನಡೆದು ರಥದಲಿ ವಾಮಚರಣವ
ನಿಡುತ ಧೂರ್ಜಟಿ ದೇವನಿಕರಕೆ
ನುಡಿದನಾವ[4]ನನೀ ರಥಕೆ ಸಾರಥಿಯ ಮಾಡಿದಿರಿ[4] ।
ಕಡೆಗೆ ಸಾರಥಿಯಿಲ್ಲದೀ ರಥ
ನಡೆವುದೇ ದಾನವರ ಥಟ್ಟಣೆ
ತೊಡೆವುದೇ ಲೇಸಾಯ್ತುನುತ ನೋಡಿದನು ಸುರಪತಿಯ ॥ ೧೬

ಮಾವ ಕೇಳೈ ಬಳಿಕ ಹರಿದುದು
ದೇವ[5]ಕುಲ[5] ಪರಮೇಷ್ಠಿಯಲ್ಲಿಗೆ
ಭಾವವನು ಬಿನ್ನೈಸಿದರು ನಿಜ ರಾಜಕಾರಿಯದ ।
ಆ ವಿಭುವನೊಡಬಡಿಸಿದರು ದಿವಿ
ಜಾವಳಿಗಳಿಂದಿನಲಿ ಕರ್ಣಗೆ
ನೀವು ಸಾರಥಿಯಾದಡಭಿಮತಸಿದ್ಧಿ ತನಗೆಂದ ॥ ೧೭

---

[1] ರು (ಕ). [2] ಹೇಳಲೇನೆಂದ (ಗ.ಚ.ಟ.ತ.ದ). [3] ಭದ್ರಗಣ (ದ).
[4] ವನಿಗಿಲ್ಲ ಸಾರಥಿ ಮಾಡಿದಿರಿ ರಥಕೆ (ಕ). [5] ತತಿ (ಚ.ಟ.ದ).

ಕೋಗಿಲೆಯ [1]ಠಾಯಕ್ಕೆ[1] ಬಂದು[2]ದು[2]
ಕಾಗೆಗಳ ಧುರಪಥವದಂತಿರ
[3]ಲಾಗಳಬುಜಾಸನನ ಸಾರಥಿತನವದೇನಾಯ್ತೊ[3] ।
ಹೋಗಲದು ಸಾರಥ್ಯಕಾಯತ
ವಾಗಿ ಬಂದು ವಿರಿಂಚ ಮಕುಟವ
ತೂಗಿದನು ಹೊಗಳಿದನು ತ್ರಿಪುರನಿವಾಸಿಗಳ ಬಲುಹ ॥ ೧೮

ಹುಸಿಯೆ ಬಳಿಕದು ಸಕಲ ಜಗವೊಂ
ದೆಸೆ ಪುರತ್ರಯದೈತ್ಯಭಟರೊಂ
ದೆಸೆ ಮಹಾದೇವನುತ ಕಮಲಜನೇಱಿದನು ರಥವ ।
ಸಸಿನೆ ವಾಘೆಯ ತಿದ್ದಿ ತುರಗ
ಪ್ರಸರವನು ಬೋಳೈಸಿ ರಥವನು
ದೆಸೆದೆಸೆಗೆ [4]ಹೊಳ[4]ಸಿದನು ಉಳಿ[5]ವಡಿಸಿದ ಮಹಾರಥವ[5] ॥ ೧೯

ದೇವ ಬಿಜಯಂಗೈವುದೆನೆ ದಿವಿ
ಜಾವಳಿಗಳುಬ್ಬರದ ಬೊಬ್ಬೆಯ
ಡಾವರದಲೇಱಿದನು ಧೂರ್ಜಟಿ ವೇದಮಯರಥವ ।
ಮಾವ ಕೇಳದುಭುತವನೀ ವಿ
ಶ್ವಾವನೀತಳ ರಥ ರಥಾಂಗ
ಗ್ರಾವತತಿ ನುಗ್ಗಾಯ್ತು ಮುಗ್ಗಿತು ತೇರು ನಿಮಿಷದಲಿ ॥ ೨೦

ಕುದುರೆ ತಲೆಕೆಳಗಾದುದಿಳೆಯೆ
ದ್ದುದು ರಸಾತಳಕವರ ಭಾರಕೆ
ಕೆದಱಿದವು ಕುಲಗಿರಿಯ ಹೂಟದ ಸಂಚ ದೆಸೆದೆಸೆಗೆ ।
ಕುದಿದುದಮರವ್ರಾತ [6]ಸಂತಾ
ಪ[6]ದಲಿ ವಿತಳಕೆ ಹಾಯ್ದು ನಿಮಿಷಾ
ರ್ಧದಲಿ ಹೆಗಲಿಂದೆತ್ತಿದನು ಹರಿ ವೃಷಭರೂಪಿನಲಿ ॥ ೨೧

ಅದ್ದ ರಥ ಹರಿಯುರವಣೆಗೆ ಚಿಗಿ
ದೆದ್ದು ಸಮವಾಯ್ತುಭಯ ಪುಟ ನೆಗೆ
ದೆದ್ದು ವಳಯವ ಕೊಡಹಿ ನಿಂದವು ವೇದವಾಜಿಗಳು ।

---

1 ಸಾಮ್ಯಕ್ಕೆ (ಗ), ಠಾಣಕ್ಕೆ (ಟ), ರಾಯತಕೆ (ಪ). 2 ದೆ (ತ). 3 ಲಾಗ ಕಮಳಾಸನನಸಾರಥಿ ಬಳಿಕದೇನಾಯ್ತು (ಕ). 4 ಹರಿ (ಪ). 5 ಯಡಗಿದನು ನಿಮಿಷದಲಿ (ಗ). 6 ಸನ್ನಾಹ (ಕ).

ಎದ್ದುದೋ ರಥ ಖಳ ಮನೋರಥ
ವದ್ದುದೋ ಮುಝು ಪೂತುರೆನುತು
ಬ್ಬೆದ್ದುದಮರಕದಂಬ ಭಾರಿಯ ಭುಜದ [1]ಬೊಬ್ಬೆಯಲಿ[1] ‖ ೨೨

ಪ್ರಣವನಾದಾಹತಿಗೆ ಗತಿಯಲಿ
ಕುಣಿದವಗ್ಗದ [2]ವೇದ[2]ಹಯ ಹ
ಲ್ಲಣಿಯ ಹೇಷಿತ ರವಕೆ ಹೆದರಿತು ರಾಕ್ಷಸವ್ರಾತ ।
ಗಣಸಮೂಹದ ಚೂಣಿಯಲಿ ಸುರ
ಗಣ ಸುರಾರಿಗಳೂರ ಮುತ್ತಿತು
ಕೆಣಕಿದರು ಕಾಳೆಗವನಸುರ[3]ರ ಥಟ್ಟು ಕಳವಳಿಸೆ[3] ‖ ೨೩

ಭಟರು ವಿದ್ಯುನ್ಮಾಲಿಯದು [4]ಲಟ[4]
ಕಟಿಸಿ ನೂಕಿತು ತಾರಕಾಕ್ಷನ
ಚಟುಳ ಹಯ [5]ಬಲ[5] ಹೊಕ್ಕು ಹೊಯ್ದುದು ಬಿಟ್ಟಸೂಠಿಯಲಿ ।
ಲಟಕಟಿಸೆ ಸುರಸೇನೆ ಬಲುಗಜ
ಘಟೆಗಳೌಕಿತು ದೈತ್ಯಸುರಸಂ
ಘಟಿತ ಸಮರವನೇನನೆಂಬೆನು ಮಾವ ಕೇಳೆಂದ ‖ ೨೪

ಹೊಯ್ದುದಮರರನಸುರ[6]ರಗ್ಗದ[6]
ಕೈದುಕಾಱರು ಮತ್ತೆ ನೂಕಿತು
ಮೈದೆಗೆಯಲೊಡವೆರಸಿ ನೂಕಿತು ಬೇಹಬೇಹವರು ।
ಬೈದರಿಂದ್ರನನಿಂದುವೌಳಿಗೆ
ನೆಯ್ದ ರಥ ನುಗ್ಗಾಯ್ತು ನಾಳವ
ಕೊಯ್ದರೋ [7]ಹುಗ್ಗಿಗರೆನುತೊಱಲಿದುದು[7] ಸುರಸ್ತೋಮ ‖ ೨೫

ಹೊಗಲಿ ಸಮರಕೆ ಸ್ವಾಮಿದ್ರೋಹರು
[8]ತೆಗೆಯಬೇಡೋ[8] ಬೆನ್ನ[9]ಲಾಂಕೆಗೆ[9]
ಜಗದೊಡೆಯನೋ ಘಡಘಡಂಜದಿ[10]ರೆನಲು ಸುರರಾಜ[10] ।

---

[1] ಹೊಯ್ಲಿನಲಿ (ಚ.ತ.ಪ.ಬ). [2] ಮಂತ್ರ (ಕ). [3] ರಸುರರ ಥಟ್ಟಿನಲಿ (ಪ). [4] ಸರ (ಟ.ತ.ದ.ಪ). [5] ವ್ರಾಳ (ಕ). [6] ರಾಗಳೆ (ಚ.ತ.ಪ). [7] ನುಗ್ಗುಗಳನೆನುತಿರ್ದುದು (ಕ). [8] ಹೋಗಲಿಬೇಡಾ (ಚ.ತ.ಪ). [9] ನಾಂಕೆಗೆ (ಗ), ಲ್ಕೈದನೆ (ಟ.ದ). [10] ರಂಜದಿರಿಯೆನುತ (ಕ), ರೆನುತ ಸುರನಾಥ (ಗ.ಟ.ದ).

ಉಗಿದ ಖಡುಗದ [1]ತಿರುವಿನಂ[1]ಬಿನ
ಬಿಗಿದ ಬಿಲ್ಲಿನ ಸುರಪನಿದಿರಿನೊ
ಳಗಣಿತಾಮರಭಟರು ಹೊಕ್ಕುದು ದೈತ್ಯಬಲದೊಳಗೆ ॥ ೨೬

ಮೊಲನ ಮಱಿ ಕೈವೊಯ್ದು ನಕ್ಕುದು
ಹುಲಿಯೊಡನೆ ಗಡ ಶಿವಶಿವಾ ವೆ
ಗ್ಗಳೆಯರನು ವಿಗ್ರಹದಲಱಿವೆವು ಕಂಡು ಕೈಗುಣವ ।
ಹುಲುಪ[2]ಱ[2]ಯ ದೇವಾಳಿ ತ್ರಿಪುರದ
ನೆಲನ ಮೆಟ್ಟಿತು ನಾಯ್ಗಳಿರ ಮುಂ
ದಲೆಯ ಕೊಯ್ ಕಡಿ ಬೆರಳನೆಂದರು ಖಳರು ತಮ್ಮೊಳಗೆ ॥ ೨೭

ಕಾದ ಲೋಹದ ಪುಳಿಯುವೋಲು ಕೆಂ
ಪಾದವಸುರರ ಮೋಱೆಗಳು ತಿದಿ
ಯೂದುಗಿಚ್ಚಿನ ಹೊದಱಿನಂತಿರೆ ಬಿಡದೆ ಭುಗಿಲಿಡುತ ।
ಸೇದುವೆರಳಿನ ತಿರುವಿನಂಬಿನ
ವಾದಿನೆಸುಗೆಯ ಬಿರುದರಗ್ಗದ
ಕೈದುಕಾಱರು ಕೆಣಕಿದಮರರ ಹೊಟ್ಟ ತೂಱಿದರು ॥ ೨೮

ಮುಱಿದುಡಿದು ಕಲ್ಪಾಂತವಹ್ನಿಯ
ಸೆಱೆಯ ಬಿಟ್ಟರೊ ಶಿವಶಿವಾ ಖಳ
ರುಱುಬೆ ಘನ ನಾವೇಕೆ ರಣವೇಕಿವರ ಕೂಡೆನುತ ।
ಒಱಲುವಮರರ ಬಾಯಿ ಕೈಗಳ
ಮೊಱೆಯ ತೆಗಸಿ ಮಹಾಗಣಂಗಳೊ
ಳುಱುವ ನಂದೀಶ್ವರನು ಹೊಕ್ಕನು ಹೊಯ್ದು ದಾನವರ ॥ ೨೯

ದಿಂಡುದಱಿದನು ದಾನವರ ಕಡಿ
ಖಂಡಮಯಮಾಯ್ತವನಿ ರಕುತದ
ದೊಂಡೆಗೆಸಱಿನೊಳದ್ದುದಗಣಿತ ರಥಗಜಾಶ್ವಚಯ ।
ಹಿಂಡೊಡೆದು ಹೇರಾಳ ರಕ್ಕಸ
ದಿಂಡೆಯರು ಧಿಮ್ಮೆನಲು ಹೊಯ್ದರು
ಖಂಡಪರಶುವಿನಾಳು ಹೊಯ್ದನು ಸಾಲ ಹೆಣ ಹರೆಯೆ ॥ ೩೦

[1] ಬೆಗಳಲಂ (ಚ.ತ.ಬ), ಬೆರಳಿನಂ (ಪ). [2] ತಿ (ದ).

ಅರೆನೆಲೆಯ ಮುಱಿದಿಟ್ಟಣಿಸಿ ತಲೆ
ವರಿಗೆಯಲಿ ಹೊಕ್ಕೌಕಿ ದುರ್ಗದ
ಹಿರಿಯ ಹುಲಿಮುಖದೊಳಗೆ ಹೊಯ್ದರು ಬೇಹಬೇಹವರ ।
ಅರಸ ಕೇಳ್ಳೈ ದೈತ್ಯ[1]ಭಟರ[1]
ಚ್ಚರಿಯ ಮಾಡಿದರಳಿದವರನೆ
ಚ್ಚಱಿಸಿದರು ಮಯವಿರಚಿತಾವೃತಸಲಿಲಕೂಪದಲಿ ॥ ೩೧

ಮಯನ ಬಿನ್ನಾಣವನು ದೇವ
ತ್ರಯವಱಿದುದಿದು ತೀರಲಸುರರ
ಲಯವೆನುತ ಹರಿ ಧೇನುವಬುಜಾಸನನು ಕಱುವಾಗಿ ।
ಭಯವಿಹೀನರು ಹೊಕ್ಕರಾ ಬಾ
ವಿಯನು ಬತ್ತಿಸಿ ಬಳಿಕ ದೈತ್ಯರ
ಜಯವ ಮುಱಿದರು ಮೋಹನದ ಬೌದ್ಧಾವತಾರದಲಿ ॥ ೩೨

ಭವನ ಭಕುತಿಯ ಬಿಡಿಸಿದರು ಶಾಂ
ಭವಸುಸಿದ್ಧಾಂತವನು ಬೌದ್ಧ
ವ್ಯವಹರಣೆಗಳ ಮಾಯೆಯಲಿ ಕೆಡಹಿದರು ಕಪಟದಲಿ ।
ಯುವತಿಯರು ಪರಪುರುಷಯೋಗ
ಪ್ರವರದೀಕ್ಷಿತರಾಯ್ತು ಬೌದ್ಧನ
ವಿವಿಧ ಮಾಯೆಗೆ ಮಾಱುವೋದುದು ಮನ [2]ಸುರಾರಿಗಳ[2] ॥ ೩೩

ಹರಿ ಸರೋಜಾಸನರು ಶೂಲಿಯ
ಹೊರೆಗೆ ಬಂದರು ದೇವದೈತ್ಯರ
ಪುರವಧರ್ಮದ [3]ಪೇಟೆ[3]ಯಾದುದು ನಯನಪಾವಕನ ।
ಕರೆದು ಬೆಸಸುವಡಿದು ಸಮಯವೀ
ಸುರರ [4]ಸಲಹುವ ಚಿತ್ತ[4]ವುಳ್ಳರೆ
ಕರುಣಿ ಬಿಜಯಂಗೈವುದೆಂದರು ಪಾರ್ವತೀಪತಿಗೆ ॥ ೩೪

ಬಿಲ್ಲ ತುಡುಕಿದನಭವನೆಡಬಲ
ದಲ್ಲಿ ಜಯಜಯಜಯಜಯಧ್ವನಿ
ಘಲ್ಲಿಸಿತ್ತೀರೇಳುಭುವನಶ್ರವಣವೀಧಿಗಳ ।

---

1. ರೊಂದ ಚ.ತ.ದ.ಪ.ಬ). 2 ಮಹಾಸುರರ (ಕ). 3 ಮೇರೆ (ಕ), ಪೀಠೆ (ಟ.ಪ.ಚ.ತ), ವೇಢೆ (ದ), ಪೇಠೆ (ಬ). 4 ಸಾಕುವ ಸಮಯ (ಕ).

ಭುಲ್ಲವಿಸಿ ಹಯ ಪದಸಮೂಹವ
ಚೆಲ್ಲಿದವು ಸಕ್ರಮದ ಪಾಳಿಯ
ಪಲ್ಲವಿಕೆ ಪರಿವಡೆದುದಮಳಪ್ರಣವಮಯವಾಗಿ ॥ ೩೫

ಅಡಿಗಡಿಗೆ ಚಮ್ಮಟಿಗೆಯಳ್ಳೆಯ
ತುಡುಕೆ ಕುಣಿದವು ವೇದಹಯ ಬಲ
ನೆಡಪುರಃಪಶ್ಚಿಮದ[1]ಲೆಱಗುವ[1] ಮಂತ್ರಕೋಟಿಗಳ ।
ನುಡಿಯಲರಿದಾಕಾಶ[2]ಸರಸಿ[2]ಯೊ
ಳಿಡಿದ ತಾವರೆಮುಗುಳುಗಳೊ ಸುರ
ಪಡೆಯೊಳೆತ್ತಿದ ಮುಗಿದ ಕೈಗಳೊ ಚಿತ್ರವಾಯ್ತೆಂದ ॥ ೩೬

ಪರಮ ಶ್ರುತಿ ವೇದಾಂ[3]ಗ[3] ಮಂತ್ರೋ
ತ್ಕರ ಧರಿತ್ರಿ ಕುಲಾದ್ರಿ ಸಸಿ ಭಾ
ಸ್ಕರ ಸುರೋರಗ ಜಲಧಿ ನದಿ ನಕ್ಷತ್ರರಾಶಿಗಳು ।
ಸರಸಿರುಹಭವ ವಿಷ್ಣು ವಿವಿಧಾ
ಧ್ವರ ಮುನೀಂದ್ರ ಗ್ರಹವು ಸಚರಾ
ಚರವುಘೇ ಎಂ[4]ದೆಱಗು[4]ತಿರ್ದುದು ಶಿವನ ಬಳಸಿನಲಿ ॥ ೩೭

ಒದಗಿತೀ ಹೇಳಿದ ಸಮಸ್ತ
ತ್ರಿದಶ ಸಚರಾಚರವು ತಮ್ಮಂ
ಗದಲಿ ರಚಿಸಿದ ವಿಶ್ವಕರ್ಮನ ಕೃತನಿಯೋಗದಲಿ ।
ಅದುಬಳಿಕ ನಿರ್ಜರಸಮೂಹಾ
ಭ್ಯುದಯವೈಸಲೆ ಧನುವ ಕೊಂಡನು
ಮದನರಿಪು ತಿರುಹಿದನು ಬೆರಳಲಿ ಪಾಶುಪತಶರವ ॥ ೩೮

ಕೃತಕವೋ ದಿಟವೋ [5]ದು[5]ರಂತರ
ಶ್ರುತಿಗಳಱಿಯವು ನಮ್ಮ ಮಿಡುಕುವ
ಮತಿಯ ಪಾಡೇ ನಿಮಿಷಕಬುಜಭವಾಂಡ ಕೋಟಿಗಳ ।
ಸ್ಥಿತಿಗತಿಯುನಗ್ಗಳದ ನಯನಾ
ಹುತಿಯ ಮಾಡುವ ತ್ರಿಪುರಹರ ಸಂ
ಗತಿಯ ಸಮಯವ ಹಾರಿದನು ಸುರವರುಷ ಸಾವಿರವ ॥ ೩೯

---

[1] ಮಣಿವಿನ (ಕ). [2] ಶರಧಿ (ಕ.ಗ.ಟ). [3] ತ (ಕ.ಗ.ಚ.ಟ)
ದೊಱಲು (ಕ). [5] ನಿ (ಕ.ಚ).

ಕೂಡಿದವು ಪುರ ಮೂಱು ನಿಮಿಷದೊ
ಳೀಡಿಱಿದುದುರಿ ನಯನವಹ್ನಿಯು
ಕೂಡಿ ಹುರಿಗೊಂಡೌಕಿ ಹರಿದುದು ಪಾಶುಪತಬಾಣ ।
ಝಾಡಿ ಹೊರಳಿಯ ಹೊಗೆಯ ಜೋಡಿಯ
ನೀಡುನಾಲಗೆ ಪುರದ ಸುತ್ತಲು
ಕೂಡೆ [1]ವೇಢಯವಾಯ್ತು[1] ಹರಹಿನ ಕಿಡಿಯ ಗಡಣದಲಿ ॥ ೪೦

ಕಟ್ಟಿತುರಿ ದೆಸೆ ನಾಲ್ಕಱಲಿ ಬೆ
ನ್ನಟ್ಟಿ ಹೊಯ್ದುದು ಬಿನುಗುಗಳ ಜಗ
ಜಟ್ಟಿಗಳನೊಱಗಿಸಿತು ಮಱುಗಿಸಿತಸುರನಾರಿಯರ ।
ದಿಟ್ಟರುರಿದುದು ವೀರರಸುಗಳ
ಬಿಟ್ಟರಭವದ್ರೋಹಿಗಳು ನೆಱೆ
ಕೆಟ್ಟ ಕೇಡಿಂಗಾರು ಮಱುಗುವರರಸ ಕೇಳೆಂದ ॥ ೪೧

ಸರಳ ಮೊನೆಯಲಿ ಸಿಡಿದ ಕಿಡಿಯೊಂ
ದೆರಡಱಲಿ ಬೆಂದುದು ಪುರತ್ರಯ
ವರಸ ಕೇಳ್ಕೈ ಬಳಿಕ ಬಾಣದ ಬಾಯಿಧಾರೆಗಳ ।
ಹರನ ನಯನದ ಕಿಚ್ಚು ಕಾಣದು
ಪುರವನಾ ಖಾತಿಯಲಿ ಭೇದಿಸಿ
ಮುರಿಮುರಿದು ಸುಡತೊಡಗಿತಬುಜಭವಾಂಡಮಂಡಲವ ॥ ೪೨

ಎಲೆ ಚತುರ್ದಶಜಗವನುರಿಯ
ಪ್ಪಳಿಸಿತೇ ಬೆಂದುದು ಸುರೌಘದ
ಗೆಲವು ಕರೆಯಾ ಕಲ್ಪಮೇಘವನುರಿಯ ಮಾಣಿಸಲಿ ।
ಬಲುಕಣಿಗಳಲ್ಲಾ ಜನಾರ್ದನ
ನಳಿನಭವರಾವೆಡೆಯೆನುತ ಕಳ
ವಳಿಸಿದುದು ಮೊಱೆಯಿಟ್ಟುದಭವನ ಮುಂದೆ ಭುವನಜನ ॥ ೪೩

ಅರಿಪುರತ್ರಯದಹನಕರ್ಮ
ಸ್ಫುರಣವಸ್ಮತ್ಕಾರ್ಯವದು ಗೋ
ಚರಿಸಿತಲ್ಲಿಂ ಮೇಲಣುಚಿತಾನುಚಿತಕೃತ್ಯವನು ।

---

[1] ಮೊಳೆಯಾಯಿತ್ತು (ಕ), ವಿಂಡಯವಾಯ್ತು (ಗ).

ಕರುಣಿ ನೀನೇ ಬಲ್ಲೆ ಜನಸಂ
ಹರಣಕಾಲವೊ ಮೇಣು [1]ರಕ್ಷಾ
ಕರಣ[1] ಕಾಲವೊ ದೇವ [2]ಎಂದೊರಲಿದುದು[2] ಭುವನಜನ ‖ ೪೪

ತ್ರಾಹಿ ಮದನಾಂತಕ ಪುರತ್ರಯ
ದಾಹ ಹರ ಶಂಕರ [3]ಮಹೇಶ[3]
ತ್ರಾಹಿ ಮೃತ್ಯುಂಜಯ ಪಿನಾಕಿ ತ್ರಾಹಿ ಲೋಕೇಶ ।
ದ್ರೋಹಿಗಳು [4]ಧೂಳಾಯ್ತು[4] ಬಳಿಕಿನೊ
ಳೀ ಹದನು ಬಂದಿದೆ ಜಗತ್ರಯ
ರೂಹುಗೆಡುತಿದೆ [5]ದೇವ ಎಂದುದು ಸಕಲ ಭುವನಜನ[5] ‖ ೪೫

ಕರುಣರಸದಲಿ ನನೆದು ನಗೆಯಂ
ಕುರಿಸಲಾಜ್ಞಾಹಸ್ತದಲಿ ಶಂ
ಕರನ ಹೂಂಕರಣೆಯಲಿ ತಳಿತುರಿ ತಗ್ಗಿತಲ್ಲಲ್ಲಿ ।
ಶಿರವ ತಡಹುತ ದೇವತತಿ ಪುರ
ಹರನ ಬೀಳ್ಕೊಂಡರು ಮಹಾರಥ
ಹರಿದು ನಿಜಸಂಸ್ಥಾನಸಂಗತವಾಯ್ತು ನಿಮಿಷದಲಿ ‖ * ೪೬

ಏಳನೆಯ ಸಂಧಿ ಮುಗಿದುದು.

---

[1] ದಕ್ಷಾಧ್ವರಣ (ಕ), ರಕ್ಷಾಭರಣ (ದ). [2] ಯೆಂದುದು ಸಕಲ (ಕ), ಯೆಂದೆಱಗಿದುದು (ಪ). [3] ಮಹೇಶ್ವರ (ಕ). [4] ಬಯಲಾಯ್ತು. [5] ಜಯ ಜಯೆಂದೊರಲಿತ್ತು ಭುವನಜನ (ಕ).

* ಐದನೆಯ ಪದ್ಯದಿಂದ ಇಲ್ಲಿಯವರೆಗೆ (ನ) ಪ್ರತಿಯಲ್ಲಿ ಗ್ರಂಥಪಾತವಿದೆ.

ಎಂಟನೆಯ ಸಂಧಿ

ಸೂಚನೆ ॥ ಪೃಥವಿಪತಿ ಮಾದ್ರೇಶನನು ಸಾ
ರಥಿಯ ಮಾಡಿದನೊಲವು ಮಿಗಲತಿ
ರಥ ಭಯಂಕರ ಭಾನುಸುತ[1]ನಾಹವಕೆ ನಡೆತಂದ[1] ॥

ಹರನ ಬೀಳ್ಕೊಂಡಖಿಳ ದಿವಿಜರು
ಹರೆದುದೀ ಪರಿ ಕಮಲಭವನೀ
ಶ್ವರನ ಸಾರಥಿಯಾಗೆ ಸಾರಿದುದಮರರಭ್ಯುದಯ ।
ಹರಿಯು ಸಾರಥಿತನದಿ ಜಯವಂ
ಕುರಿಸಿತವರಿಗೆ ನಿಮ್ಮ ಕೃಪೆಯಲಿ
ಕುರುಬಲಕೆ ಗೆಲವಾದಡೊಳ್ಳಿತು ಮಾವ ಕೇಳೆಂದ ॥ ೧

ಹರನು ಬಿಲುವಿದ್ಯವನು ಕೊಡುತವೆ
ಪರಶುರಾಮಂಗೆಂದನಧಮರಿ
ಗೊರೆಯದಿರು ಸತ್ಪಾತ್ರ[2]ಕಿದನಾ[2]ದರಿಸಿ ಕಲಿ[3]ಸೆಂದ[3] ।
ಸುರರ ಮೆಚ್ಚದ ರಾಮನೀತನ
ಕರೆದು ಗರುಡಿಯ ಹೊಗಿಸಿದನು [4]ಕಡು[4]
ಗರುವನೀ ರಾಧೇಯನಧಮನೆ ಮಾವ ಕೇಳೆಂದ ॥ ೨

ಸೂತಕುಲಸಂಭವನೆ ಭುವನ
ಖ್ಯಾತ ಕರ್ಣನು ಸಾಕಿದಾತನು
ಸೂತನಾದಡೆ ಮಾವ ಕೇಳನ್ವಯಕೆ ಹಳಿವುಂಟೆ ।
ಸ್ವಾತಿಯುದಕದೊಳಾದ ಮೌಕ್ತಿಕ
ವ್ರಾತಕಯ್ಯನೆ ಚಿಪ್ಪು ನಿಮಗಿ
ನ್ನೇತಕೀ ಸಂದೇಹ [5]ರವಿಸುತ ಸೂತನಲ್ಲೆಂದ[5] ॥ ೩

ಈ ದುರಾಗ್ರಹ ನಿ[6]ನ್ನ[6] ಚಿತ್ತದೊ
ಳಾದುದೇ ತಪ್ಪೇನು ಕೋಗಿಲೆ
ಯಾದರಿಸಿದಡೆ ಬೇವು ಮಾವಹುದಾದಡೆಮಗೇನು ।

---

[1] ಹೊಱವಂಟನಾಹವಕೆ (ಕ). [2] ವಱಿದಾ (ಟ.ಪ). [3] ಸೆನಲು (ಕ.ಗ). [4] ಖರ (ಕ). [5] ಸಾರಥಿಯಾಗು ಸಾಕೆಂದ (ಗ.ದ). [6] ಮ್ಮ (ಕ).

ಕಾದಿ ಗೆಲು[1]ವುದು ಭಾರಿ ಗುರು[1] ಭೀ
ಷ್ಮಾದಿಭಟರೇನಾದರೈ ತಾ
ನಾದುದಾಗಲಿ ನಾವು ಸಾರಥಿಯಾದವೇಳೆಂದ ॥ ೪

ನಿಮ್ಮ ವಿಜಯಶ್ರೀಯ ಕಡೆಗ
[2]ಣ್ಣೆಮ್ಮ ಮುಖದಲಿ[2] ಮುರಿದುದಾದಡೆ
ನಮ್ಮ ಕೊರತೆಯದೇಕೆ ಕರಸೈ ಸೂತನಂದನನ ।
[3]ನ[3]ಮ್ಮ ಹೇಳಿಕೆಯಾವುದದನೀ
ತಮ್ಮ ಮೀ[4]ಱಿದು[4] ನಡೆದನಾದಡೆ
ನಮ್ಮ[5]ವಾಘೆಯ ಬೀಳುಕೊಡುವೆವು[5] ರಾಯ ಕೇಳೆಂದ ॥ ೫

ಹೊತ್ತ ದುಗುಡವ ಹಾಯ್ಕಿ ಕೈವಿಡಿ
ದೆತ್ತಿ ಕರ್ಣನ ಕೊಟ್ಟು ವೀಳ್ಯಗಳ
ಲೆತ್ತುಗುಡಿಗಳ ರೋಮ ಪುಳಕದ ಪೂರ್ಣಹರುಷದಲಿ ।
ಬತ್ತಿತಂತಸ್ತಾಪಜಲನಿಧಿ
ಚಿತ್ತದುರುಸಂದೇಹತರುವಿನ
ಬಿತ್ತು ಕರಿವೊಳೆವೋಯ್ತು ನಿನ್ನ ಮಗಂಗೆ [6]ನಿಮಿಷದಲಿ[6] ॥ ೬

ಬೀಳುಕೊಂಡನು ಶಲ್ಯನನು ಭೂ
ಪಾಲನಿತ್ತಲು ಕರ್ಣನಾಯುಧ
ಶಾಲೆಯಲಿ ಶುಚಿಯಾಗಿ ಶಸ್ತ್ರಾಸ್ತ್ರ[7]ವನು ಪೂಜಿಸಿದ[7] ।
ಸಾಲದೀವಿಗೆಗಳನು ಶಸ್ತ್ರ
ಜ್ವಾಲೆ ಮಿಕ್ಕವು ತೀಕ್ಷ್ಣಧಾರಾ
ಭೀಳವಿಕ್ರಮ ವಿಸ್ಫುಲಿಂಗಿತವಾದವಡಿಗಡಿಗೆ ॥ ೭

ಕುಱಿಯ ಹಣಿದದ ಕೋಳಿಕೋಣನ
ಮುಱಿದಲೆಯ ಮಿಾಸಲಿನ ರಕುತದ
ದುಱುದುಱಿಪ ದಂಡೆಯಲಿ ಕಲಸಿದ ಕೂಳ ಮುದ್ದೆಗಳ ।
ಹೊಱಗೆ ಬಡಿ[8]ಸಿದ[8] ಭೂತಬಲಿ ಬೊ
ಬ್ಬಿಱಿತದೊಡನುಬ್ಬೇಳ್ವ ಲಗ್ಗೆಯ
ಹಱೆಗಳಬ್ಬರವಾಯ್ತು ಕರ್ಣನ ಶಸ್ತ್ರಪೂಜೆಯಲಿ ॥ ೮

[1] ವರಭಾರವಿದು (ಗ). [2] ಣ್ಣೊಮ್ಮೆ ನಮ್ಮಲಿ (ಕ). [3] ಎ (ಕ). [4] ಱಿದೆ (ಕ), ಱಿಯೆ (ಚ.ಪ.ತ). [5] ವಾಸೆಯ ಬೀಳುಕೊಟ್ಟೆವು. [6] ಹರುಷದಲಿ (ನ). [7] ಗಳನರ್ಚಿಸಿದ. [8] ಸುವ.

ವಿರಚಿಸಿತು ಶಸ್ತ್ರಾಸ್ತ್ರಪೂಜಾ
ಪರಿ[1]ಸರಣ[1] ರವಿಸೂನು ದರ್ಭಾಂ
ಕುರದ ಶಯನಸ್ಥಾನದಲಿ ಮಾಡಿದನು ಜಾಗರವ।
ಕುರುನೃಪಾಲನ ಪಾಳೆಯದೊಳಾ
ಯ್ತಿರುಳು ಮನೆಮನೆಗಳಲಿ ಶಸ್ತ್ರೋ
ತ್ಕರ ಸಮಾರಾಧನೆಯೊಳಿರ್ದುದು [2]ಕೂಡೆ ನೃಪಕಟಕ[2] ॥ ೯

ಸವೆದುದಿರುಳರುಣೋದಯದಲಾ
ಹವದ ಸಂಭ್ರಮರಭಸವೆದ್ದುದು
ವಿವಿಧ ಬಲಭಾರಣೆಯ ಭುಲ್ಲವಣೆಯ ಛಡಾಳದಲಿ ।
ತವಕಿಸುತ ಬಿಗಿ ವಾರುವನ ತಾ
ಸವಗವನು ಬಲ್ಲೆಹವ ಸೀಸಕ
ಕವಚಗಳನೆಂಬಬ್ಬರಣೆ ರಂಜಿಸಿತು ರಾವ್ತರಲಿ ॥ ೧೦

ಬಿಡು ಗಜವ ಬಿಗಿ [3]ಜುಂಚೆ[3]ಗಳ ತೆಗೆ
[4]ದಡಿ[4]ಯ ಹಾಯಿಕು ಗುಳವ ತಾ ಮೊಗ
ವಡವ ಕೊಡು ಪಟ್ಟೆಯವ ಕೈಯಲಿ ಬೀಸು [5]ಚೌರಿ[5]ಗಳ ।
ತಡವಿದೇನೋ ಸಾಯಿ ಸಡಿಫಡ
ಕೆಡೆಯೆನುತ ತಮ್ಮೊಬ್ಬರೊಬ್ಬರ
ಜಡಿಯಲಬ್ಬರವಾ[6]ದುದಾ[6]ರೋಹಕರ ಕೇರಿಯಲಿ ॥ ೧೧

ಕೀಲ ತೆಗೆಯುಚ್ಚುಗಳ ಹೆರೆ ಬಲು
ಗಾಲಿಗಳ ಜೋಡಿಸು ಪತಾಕಾ
ಜಾಲವನು ನಿಲಿಸೀಸ ಬಲಿ ಬಲುಮಿಣಿಯ ಬಗಿಯೆನುತ ।
ಮೇಲೆಮೇಲಬ್ಬರದ ಘೋಳಾ
ಘೋಳಿ ಘಲ್ಲಿಸೆ ದೆಸೆಯುಲತಿರಥ
ಜಾಲ [7]ಕವಿದುದು[7] ಕದನಕೌತೂಹಲರ [8]ಕೇರಿಯಲಿ[8] ॥ ೧೨

ನೀಡು ಬಿಲುಬತ್ತಳಿಕೆಯನು ನಡೆ
ಜೋಡ ತೆಗೆ ತಾ ಸವಳವನು ರಣ
[9]ಖೇಡನೇ[9] ಫಡ ಘಾಯವನು [10]ಬಿಗಿ ಮದ್ದನರೆಯೆನುತ[10] ।

---

[1] ಚರಿಯು (ಕ), ಕರಣ (ದ). [2] ವರಮಹಾಕಟಕ (ಗ·ದ), ಸಕಲಬಲ ವೆಂದ (ಟ.ತ). [3] ಗಂಟೆ (ಬ). [4] ತಡೆ (ಕ). [5] ಚಮರಿ (ಕ). [6] ಯಿತಾ (ಕ.ಗ.ಚ). [7] ವೆದ್ದುದು (ಕ.ಗ.ನ). [8] ಕಡುಹಿನಲಿ (ಕ.ಗ.ದ.ನ). [9] ಹೇಡಿ ಯೇ (ಕ.ಗ), ಬೀಡನೇ (ಪ). [10] ತೊಳೆಮದ್ದನಿಕ್ಕೆನುತ (ಕ).

ಕೂಡೆ ತಮತಮಗಾಹವದ ಖಯ
ಖೋಡಿಯಿಲ್ಲದೆ [1]ಸುಭಟ[1]ರಬ್ಬರ
ಝಾಡಿ [2]ಮಸಗಿತು ಕದನಗಲಿ[2] ಕಾಲಾಳ ಕೇರಿಯಲಿ ॥ ೧೩

ಬಿರಿದುದಬುಜಭವಾಂಡವೆನೆ ಭೋಂ
ಕರಿಸಿದವು ನಿಸ್ಸಾಳತತಿ ನಿ
ಬ್ಬರದ ಬಿರುದನು ಬೀಱುತಿರ್ದುವು ಗೌಱುಗಹಳೆಗಳು ।
ಎರಲು ಸುಳಿದುದು ದೀಪಶಿಖಿ ಪರಿ
ಹರಿಸಿದತಿಬಲದಬ್ಬರದ ನಿ
ಷ್ಠುರತೆಗಂಜದೆ ಮಾಣದೆನೆ ಹೆಱಹಿಂಗಿತಾ ರಜನಿ ॥ ೧೪

ಅರಸ ಕೇಳಭ್ಯುದಿತವಾ[3]ದುದು[3]
ಸರಸಕೈರವರಾಜಿ ಕೋಮಲ
ಸರಸಿರುಹವನವಾದುದಾಕ್ಷಣ [4]ಸುರಭಿ[4]ನಿರ್ಮುಕ್ತ ।
ಕಿರಣ ತೋಮರ ದಕ್ಷಿಣೋರು
ಸ್ಫುರಣ ತಿಮಿರ ಮೃಗೀಕದಂಬಕ
ತರಣಿ ನೂಕಿದನುದಯ[5]ಶೈಲಕೆ[5] ರತುನಮಯ ರಥವ ॥ ೧೫

ಉಲಿವ ಮಂಗಳಪಾಠಕರ ಕಳ
ಕಳಿಕೆ ಮೆಱೆಯಲು ಹೊಳೆವ ಹೊಂಬ
ಟ್ಟಲಲಿ ಸೂಸಿದನರ್ಘ್ಯ ಜಲವನು ಜನಕನಿದಿರಿನಲಿ ।
ಲಲಿತ ಮಂತ್ರಾಕ್ಷತೆಗಳನು ಕರ
ತಳದೊಳಾಂತು ಮಹೀಸುರರಿಗ
ಗ್ಗಳೆಯನಿತ್ತನು ಧೇನುಮಣಿಕನಕಾದಿ ವಸ್ತುಗಳ ॥ ೧೬

ವರ ನಿಭಾರಿಯ ಬಳಿವಿನಲಿ ಬಲ
ಮುರಿಯ ಬಿಗಿದನು ಪದಮುಖಕೆ ಮುಂ
ಜೆಱಗ ಬಿಟ್ಟನು ಬಿಗಿದ ಬದ್ದುಗೆ ದಾರ ಗೊಂಡೆಯವ ।
ಕಿರಣ ಲಹರಿಯ ವಜ್ರಮಾಣಿಕ
ಪರಿರಚಿತ ಭುಜಕಂಠಕರ್ಣಾ
ಭರಣ ಚರಣದ ಖಡೆಯದಲಿ ರಂಜಿಸಿದನಾ ಕರ್ಣ ॥ ೧೭

---

[1] ಖರೆಯ (ಕ). [2] ಕವಿದುದು ದೆಸೆದೆಸೆಗೆ (ಕ.ಗ.ದ.ನ). [3] ಯಿತು (ಕ). [4] ವನಧಿ (ತ.ದ). [5] ಗಿರಿಯಲಿ (ಕ.ಗ.ಚ.ಟ.ನ.ಪ).

ದಿನಗಣನೆ ಹದಿನೆಂಟು ಕೋಟಿಯು
ಕನಕವಂದಿ[1]ನ ದಿನದಿ ಚೆಲ್ಲಿದ[1]
ನನುಪಮಿತ [2]ಧನರತುನ ಭಂಡಾರವನು ತೆಗೆತೆಗಸಿ[2] ।
[3]ಮನದಣಿಯೆ[3] ಯಾಚಕ[4]ರಿಗಿತ್ತುದ[4]
ನೆನಗೆ ಬಣ್ಣಿಸಲಳವೆ ಕೇಳೈ
ಜನಪ ಕರ್ಣನದೇನ ನಿಶ್ಚಯಿಸಿದನೊ ಮನದೊಳಗೆ ॥ ೧೮

ಹೊಳೆಹೊಳೆದವಾಭರಣ ತಾರಾ
ವಳಿಗಳಂತಿರೆ ಪೂರ್ಣಶಶಿಮಂ
ಡಲದವೊಲು ತನುಕಾಂತಿ ತಿವಿದುದು ನಿಖಿಳ ದಿಗುತಟವ ।
ತಳಿತ ವಿಕ್ರಮ ಸುಪ್ರತಾಪೋ
ಜ್ವಲಿತ ಸೂರ್ಯಪ್ರಭೆ ಜಗತ್ರಯ
ದೊಳಗೆ ಝಳಪಿಸೆ ಕರ್ಣನೆಸೆದನು [5]ದಿವ್ಯ[5]ತೇಜದಲಿ ॥ ೧೯

ದೇವ ಗುರು ವಿಪ್ರರಿಗೆ ಬಹು ಸಂ
ಭಾವನೆಯ ಮಾಡಿದನು [6]ಶಸ್ತ್ರಾ[6]
ಸ್ತ್ರಾವಳಿಯ [7]ತರಿಸಿ[7]ದನು ತುಂಬಿಸಿದನು ವರೂಥದಲಿ ।
ರಾವುತರಿಗಾರೋಹಕರಿಗೆ ಭ
ಟಾವಳಿಗೆ ರಥಿಕರಿಗೆ ಚೆಲ್ಲಿದ
ನಾ ವಿವಿಧ ಸೌಗಂಧಭಾವಿತ ಯಕ್ಷಕರ್ದಮವ ॥ ೨೦

ನಡೆದು ಬಂದನು ರಥಕೆ ದೆಸೆ ಕಂ
ಪಿ[8]ಡುತ[8] ನೆರೆದ ಮಹಾಪ್ರಧಾನರ
ನಡುವೆ ಚಲಿಸುವ ಚಾತುರಂಗದ ಸುಳಿಯ ಸಂದಣಿಯ ।
ಒ[9]ಡನೆ[9] ನೆಲನಳ್ಳಿಱು[10]ಯೆ[10] ವಾದ್ಯದ
ಗಡಣ [11]ಮೊರೆದುದು[11] ಪಾಠಕರ ಗಡ
ಬಡಿ[12]ಯು ಕಳರವ[12] ಬಗಿದುದಬುಜಭವಾಂಡಮಂಡಲವ ॥ ೨೧

---

[1] ಜನಕ್ಕೆ ಸೂಸಿದ (ಕ.ಗ.ಚ). [2] ನಾ ಧನವನು ಭಂಡಾರವನು ತೆಗಸಿ (ಕ), ಭಂಡಾರವನು ಧನರತುನ ಮಣಿಗಣವ (ಗ), ನಾ ಧನಭಾರ ಭಂಡಾರವನು ತೆಗಸಿ (ತ), ಧನವನು ಸುಭಂಡಾರದಲಿ ತೆಗತೆಗಸಿ (ದ.ನ). [3] ಕನಕವನು (ಕ). [4] ರುಹೊತ್ತುದ (ಗ). [5] ನಿಖಿಳ (ಕ.ಗ.ಟ). [6] ಶರಶ (ಕ.ಗ). [7] ತೆಗೆಸಿ (ಪ.ತ.ದ). [8] ಡಲು (ದ). [9] ಡೆಯ (ಕ). [10] ವ (ಕ). [11] ಮೊರೆದುದು (ದ.ಪ.ಬ.ನ), ಮೊರೆದುವು (ತ), ರಭಸದ (ಕ). [12] ಕೆ ಗಳರವ (ಕ), ಯು ಕಳೆ ಕಳೆ (ಪ).

ಅತಿರಭಸದಿಂದಾಯ್ತು ಸೇನಾ
ಪತಿಯ ಪಯಣವಲಾ ಎನುತ ಗುರು
ಸುತ ಶಕುನಿ ಕೃತವರ್ಮ ಕೃಪ ದುಶ್ಶಾಸನಾದಿಗಳು ।
ವಿತತ ಸನ್ನಾಹದಲಿ ಕುರುಭೂ
ಪತಿ ಸಹಿತ ಹೊಱವಂಟು ಭಾಸ್ಕರ
ಸುತನ ಸನ್ನೆಯ ಮೇಲೆ ನಡೆ[1]ದರು ಮುಂದೆ ಸಂದಣಿಸಿ[1] ॥ ೨೨

ಬಳಿಯ ನೆಲನುಗ್ಗಡಣೆ[2]ಗಳ[2] ವೆ
ಗ್ಗಳೆಯ ಸುಭಟರ ಮೇಳದಲಿ ಬಂ
ದಿಳಿದು ದಂಡಿಗೆಯಿಂದ ನಸುನಗುತೇಱಿದನು ರಥವ ।
ಚಳಹಯಂಗಳು ಹುರಿಯ [3]ವಾಘೆಯ[3]
ನಳವಡಿಸೆ ಬಲನೆಡಕೆ ವಾಜಿಯ
ಸುಳಿಸಿ ಸಾರಥಿತನವ ತೋಱಿದನಂದು ಕಲಿ ಶಲ್ಯ ॥ ೨೩

ಬಳಿಯ ಪಾಯವಧಾರುಗಳ ಕಳ
ಕಳದೊಳಗೆ ರಥವೇಱಿದನು ನೆಲ
ಹಿಳಿಯೆ ಹೇರಾಳಿಸಿತು ಬಹುವಿಧ ವಾದ್ಯನಿರ್ಘೋಷ ।
ತಳಿತವಮಳಚ್ಛತ್ರ ಚಮರಾ
ವಳಿಯ ಝಲ್ಲಿಯ ಪಟ್ಟಿಗಳ ನವ
ಪಳಹರಧ್ವಜದಂಡವೆತ್ತಿತು ವರ ರಥಾಗ್ರದಲಿ ॥ ೨೪

ಇಕ್ಕೆಲದ ರಾವುತರ ತೇರಿನ
ತೆಕ್ಕೆಗಳ ಗಜಘಟೆಯ ಕಾಲಾ
ಳಕ್ಕಜದ ನಿಸ್ಸಾಳ ಸೂಳಿನ ಲಗ್ಗೆ[4]ದಂ[4]ಬಟದ ।
ಉಕ್ಕಿತೋ ವಿಲಯಾಬ್ಧಿಯೆನೆ ಸಾ
ಲಿಕ್ಕಿ ನಡೆದುದು ಸೇನೆ ರಾಯನ
ಸಿಕ್ಕಿನವಸರದಾನೆ ನಿಜಪಾಳೆಯವ [5]ಬೀಳ್ಕೊಂಡ[5] ॥ ೨೫

ರಾಯ ಕೇಳ್ಕೈ ಬಳಿಕ ಕಲಿ ರಾ
ಧೇಯ ಬರುತಿರೆ ತೋಱಿದುತ್ಪಾ
ತಾಯತವನೇನೆಂಬೆನೈ ಶಿವಶಿವ ಮಹಾದೇವ ।

---

[1] ದುದು ನಿಖಿಳ ಪರಿವಾರ (ಕ). [2] ಯಲ (ಗ). [3] ಹಗ್ಗವ (ಕ).
[4] ತಂ (ದ). [5] ಹೊಱವಂಟ (ಕ.ಗ.ದ).

ವಾಯಸದ ತಡೆ ಭೂಮಿಕಂಪ ನಿ
ಜಾಯುಧಂಗಳ ಕಿಡಿ ಗಜಾಶ್ವನಿ
ಕಾಯ[1]ರಥವಾಜಿಗಳ[1] ಕಂಬನಿ ಕಾಣಲಾಯ್ತೆಂದ ‖ ೧೬

ಒದಱಿದವು ನರಿ ಮುಂದೆ ಕರ್ಣನ
ಕುದುರೆಗಳು ಮುಗ್ಗಿದವು ಪರಿವೇ
ಷದಲಿ ಸಪ್ತಗ್ರಹದ ವಕ್ರತೆ ಸೂರ್ಯ[2]ಮಂಡಲಕೆ[2] ।
ಇದಿರಿನಲಿ [3]ಬಿಱು[3]ಗಾಳಿ ಧೂಳಿಯು
ಕೆದಱಿ ಬೀಸಿತು ನಿಖಿಳ ಬಲ ಮು
ಚ್ಚಿದುದು ಕಂಗಳನವನಿಪತಿ ಕಂಡನು ಮಹಾದ್ಭುತವ ‖ ೧೭

ತೃಣಕೆ [4]ಕೊಂಬನೆ[4] ಕರ್ಣನಿದನಾ
ರೆಣಿಸುವರು ದುಷ್ಕರ್ಮಶೇಷದ
ಋಣನಿಬದ್ಧರು ಕಂಡು ಮಾಡುವುದೇನು ಕೌರವರು ।
ರಣಮನೋರಾಗದಲಿ ದಳಸಂ
ದಣಿಯ ನಿಲಿಸಿದನತಿರಥರ ಲಾ
ವಣಿಗೆಗೊಂಡನು ಕರ್ಣ ಪರಿವಾರಕ್ಕೆ ಕೈಮುಗಿದು ‖ ೧೮

ನೊಂದವರು ನಿಲಿ ಸ್ವಾಮಿಕಾರ್ಯಕೆ
ಹಿಂದುಗಳೆವರು ಮರಳಿ ಮನೆಗಳ
ಹಿಂದಣಾಸೆಯ ಹೇವ ಹಱುಕರಿಗಿಂದು ಮಹನವಮಿ ।
ನಿಂದರೊಳ್ಳಿತು ನೃಪನ [5]ದೆಸೆಯಲಿ[5]
ಕಂದು ಕಲೆಯುಳ್ಳವರು ಕಾಳೆಗ
ವಿಂದು ಬೆಟ್ಟಿತು ಬೀಳುಕೊಂಬುದು ಭೀತಿ ಬೇಡೆಂದ ‖ ೧೯

ಓಡಿ ನಾಚಿಸುವವರು ನಿಲಿ ರಣ
ಖೇಡರೀಗಳೆ ಮರಳಿ ಮನವ
ಲ್ಲಾಡಿ ಮಱು[6]ಗುವರೇಳಿ[6] ಮರಣದಲಾವ ಫಲಸಿದ್ಧಿ ।
ಕೂಡುಗಲಕರು ನಿಲ್ಲಿಯಿಹಪರ
ಗೇಡಿಗರು ಹೆಱಿಸಾರಿ ಗುಣದಲಿ
ಬೇಡಿಕೊಂಬೆನು ಖಾತಿಗೊಳ್ಳೆನು ಹೋಗಿ ನೀವೆಂದ ‖ ೨೦

---

[1] ಗಳ ಬಲುತರದ (ಕ). [2] ಬಿಂಬದಲಿ (ಕ), ಮಂಡಲದ (ತ), ಮಂಡಲವ (ಬ.ನ). [3] ಬಲು (ಕ). [4] ಕೊಳ್ಳನು (ಕ). [5] ಕಾರ್ಯಕೆ (ಕ). [6] ಗಲದೇಕೆ (ಕ).

ಸಂದ ಸುಭಟರು ಬನ್ನಿ ಸ್ವರ್ಗದ
ಬಂದಿಕಾಱರು ಬನ್ನಿ ಮನದಿಂ
ಮುಂದೆ ಹಜ್ಜೆಯ ತವಕಿಗರು ಬಹುದೆನ್ನ ಸಂಗಾತ।
ನೊಂದಡು[1]ಬ್ಬುವರಿತ್ತ[1] ಬನ್ನಿ ಪು
ರಂದರನ [2]ಸರಿ[2]ಗದ್ದುಗೆಗೆ ಮನ
[3]ಸಂ[3]ದವರು ಹೊಗಿ ರಣವನೆಂದನು [4]ಕರ್ಣ ನಿಜಬಲಕೆ[4] ॥ ೩೧

ವೀರಭಟರಾಹವವ ಹೊಗಿ ಜ
ಝ್ಝರಿತ್ತಲು [5]ನಡೆಯಿ[5] ಕದನವಿ
ಚಾರ[6]ಶೀಲರು[6] ಮುಂದೆ ಹೋಗಿ ಮಹಾರಥಾದಿಗಳು ।
ಆರು ಬಲ್ಲರು ಸಮರಯಜ್ಞದ
ಸಾರವನು ಪಾಪಿಗಳರಕಟ ಶ
ರೀರವನು [7]ಕೊಡಿ ಪಡೆಯಿ ಮುಕ್ತಿಯನೆಂದನಾ ಕರ್ಣ[7] ॥ ೩೨

ರಾಯ ಕೇಳೈ ಕರ್ಪುರದ ತವ
ಲಾಯಿಗಳನೊಡೆದೊಡೆದು ಭಟರಿಗೆ
ಹಾಯಿಕಿದನಂಜುಳಿ[8]ಗಳಲ[8] ಮೊಗೆಮೊಗೆದು ಬೇಸಱದೆ ।
ಸಾಯದಿಹರೇ ರಣದೊಳಗೆ ರಾ
ಧೇಯನೀ ಮನ್ನಣೆಗೆ [9]ಬದುಕುವ[9]
ನಾಯಿಗಿಹಪರವುಂಟೆ ಎಂದುದು ನಿಖಿಳ ಪರಿವಾರ ॥ ೩೩

ಕೇಳಿರೈ ಪರಿವಾರವಿಂದಿನ
ಕಾಳೆಗವಲೇ ನಮಗೆ ಭೀಷ್ಮರ
ಕೋಲ ಗುರುವಿನ ಹರಿಬವನು ಮನವಾರೆ ಹೊತ್ತವಲ।
ಸೋಲವೋ ಕೌರವನ ಭಾಗ್ಯದ
ಕಾಲವೋ ವಿಧಿ ಬಲ್ಲದೆನ್ನಯ
ತೋಳ ಬಲುಹನು ಹಗೆಗೆ ತೋಱುವೆನೆಂದನಾ ಕರ್ಣ ॥ ೩೪

---

[1] ಬ್ಬರಿಸುವರು (ಕ). [2] ಸವು (ತ). [3] ಬಂ (ಕ). [4] ದಳಕೆ ಕಲಿ ಕರ್ಣ (ಗ), ದಳಕೆ ಕೈಮುಗಿದು (ಕ). [5] ಹೋಗಿ (ಕ), ಮರಳಿ (ಗ). [6] ವೀರರು (ಕ). [7] ಕಡೆನೂಕಿ ಮುಕ್ತಿಯ ಹಡೆಯಿ ನೀವೆಂದ (ಕ). [8] ಯುಲೇ. [9] ಸಾಯದ (ಗ), ಬದುಕಿದ (ತ).

ಆವ ತೋ(ಱಿಸಲಾಪನರ್ಜುನ
ದೇ(ವನನು ರಿಪುಬಲದೊಳಾತಂ
ಗೀ(ವೆನೀ(ಪದಕವನು ಖಡೆಯವ ವಜ್ರಮಾಣಿಕದ ।
ಆವನೀ(ಫಲುಗುಣನ ತೇ(ರಿನ
ಠಾವಿದೇ(ಎಂದವಗೆ ಇದೆ ಮು
ಕ್ತಾವಳಿಯಲಂಕಾರವೆಂದನು ಕರ್ಣ ನಿಜಬಲಕೆ ॥ ೩೫

ನರನ [1]ತೋ(ಱಿಸದವಗೆ ಶತ[1]ಸಾ
ವಿರದ ಪಟ್ಟಣವರ್ಜುನನ ಮೋ(
ಹರವಿದೇ(ಎಂದವಗೆ ಕೊಡುವೆನು ಹತ್ತು ಸಾವಿರವ ।
ನರನ ತೆರಳಿಚಿ ತಂದು ತನ್ನೊಡ
ನಱುಹಿದಗೆ ನೂಱಾನೆ ಹಯ ಸಾ
ವಿರದ ವಳತವ ಬರಸಿ ಕೊಡುವೆನು ರಾಯನಾಣೆಂದ ॥ ೩೬

ತೋ(ಱಿರೈ ಫಲುಗುಣನನಿದಿರಲಿ
ತೋ(ಱಿರೈ ಸಿತ[2]ಹಯ[2]ನನಕಟಾ
ತೋ(ಱಿರೈ ವಿಜಯನನು ನಿಮ[3]ಗೆಯು[3] ಸ್ವಾಮಿಕಾರ್ಯವಲ ।
ತೋ(ಱಿ ಪಾರ್ಥನನವನ ನೆತ್ತರ
ಸೂಱೆ ಶಾಕಿನಿಯರಿಗೆ ನಿಮಗುಱೆ
ಸೂಱೆಯೋ(ಭಂಡಾರ ಕೌರವರಾಯನಾಣೆಂದ ॥ ೩೭

ನರನ ಶರಹತಿಗೆನ್ನ ತನು ಜ
ರ್ಝ್ಝರಿತವಾಗಲಿ ನನ್ನ ಕಣೆಯಲಿ
ಬಿರಿಯಲಾತನ ದೇ(ಹ ಖಾಡಾಖಾಡಿ ಯುದ್ಧದಲಿ ।
ಕರುಳು ಕರುಳಲಿ ತೊಡಕ ನೊರೆನೆ
ತ್ತರಲಿ ನೆತ್ತರು ಕೂಡಿ ಕಡಿ[4]ಯಲಿ[4]
ಬೆರಸಿ ಕಡಿ ಪಲ್ಲಟಿಸೆ ಕಾದುವೆನೆಂದು ಹಗೆಯೊಡನೆ ॥ ೩೮

ಸರಳು ಸರಳಿಂಗೊಮ್ಮೆ ರೋ(ಮಾಂ
ಕುರದ ಗುಡಿಯಲಿ ರಕ್ತಜಲದಲಿ
ಕರುಳ ಹೂಮಾಲೆಯಲಿ ವೀ(ರರಣಾಭಿಷೇ([5]ಕವನು[5] ।

---

[1] ನೆಲೆಗಾಣಿಸದವಗೆ (ಕ). [2] ವಹ (ಕ.ಗ.ಚ). [3] ಗಿದು (ಕ).
[4] ಯಲು (ಕ). [5] ಚನವಾ (ಕ).

ಧರಿಸಿ ವೈರಿಯ ಘಾಯಘಾಯದ
ಧರಧುರಕೆ ತನಿಹೆಚ್ಚಿ ಮನದು
ಬ್ಬರದಲಿಱಿದಾಡಿದರೆ ದಿಟ ಕೃತಕೃತ್ಯ ತಾನೆಂದ ‖ ೩೯

ಅವನ ಮುಂದಲೆ ತನ್ನ ಕೈಯಲಿ
ಅವನ ಕೈಯಲಿ ತನ್ನ ಮುಂದಲೆ
ಅವನ ದೇಹದ ಘಾಯವೆನ್ನಯ ಘಾಯ ಚುಂಬಿಸುತ ।
ಅವನ ಖಡುಗದಲೆನ್ನ ಮೈ ನಾ
ತಿವಿದ ಖಡ್ಗಕೆ ನರನ ಮೈ ಲವ
ಲವಿಸಲಡಿಮೇಲಾಗಿ ಹೊರಳ್ದರೆ ಧನ್ಯ ತಾನೆಂದ ‖ ೪೦

ಕೈದಣಿಯೆ ಹೊಯ್ದರಿಯ ಸೀಳಿದು
ಬಾಯ್ದಣಿಯೆ ಮೂದಲಿಸಿ ಹೆಚ್ಚಿದ
ಮೈದಣಿಯೆ ರಿಪುಭಟನ ಹೊಯ್ಲಲಿ ಘಾಯವನು ಪಡೆದು ।
ಹಾಯ್ದ ಕರುಳಿನ ಮಿದುಳ ಜೋರಿನ
ತೊಯ್ದ ರಕ್ತಾಂಬರದಿ ತಾನಿರ
ಲೈದಿ ಕುರುಪತಿ ಕಂಡನಾದರೆ ಧನ್ಯ ತಾನೆಂದ ‖ ೪೧

ನರನ ರಕುತದ ಮದ್ಯಪಾನವ
ನೆಱೆದು ಶಾಕಿನಿಯರಿಗೆ ಪಾರ್ಥನ
ಕರುಳ ದೊಂಡೆಯ ಕೂಳ ಮುದ್ದೆಯ ಬಡಿಸಿ ದೈತ್ಯರಿಗೆ
ಅರಿಯ ಖಂಡದಿ ಹಸಿಯ ಸುಂಟಿಗೆ
ವೆರಸಿ ಭೂತಾವಳಿಯ ದಣಿಸಿದ
ಡರಸು ಕೌರವನೆನ್ನ ಸಾಕಿ[1]ತಕಿಂದು[1] ಫಲವೆಂದ ‖* ೪೨

ಎಂಟನೆಯ ಸಂಧಿ ಮುಗಿದುದು.

---

[1] ಮುದಕ್ಕೆ (ಕ). * (ಕ) ಮೊದಲಾದ ಕೆಲವು ಪ್ರತಿಗಳಲ್ಲಿ ೪೧–೪೨ನೆಯ ಪದ್ಯಗಳ ಕ್ರಮವು ವ್ಯತ್ಯಾಸವಾಗಿದೆ

ಒಂಬತ್ತನೆಯ ಸಂಧಿ

ಸೂಚನೆ ॥ ಸೆಣಸು ಮಿಗಲೊಳಗೊಳಗೆ ಖತಿಯಲಿ
ಕೆಣಕಿ ಬೈದಾಡಿದರು ಸಮರಾಂ
ಗಣಭಯಂಕರ ಶಲ್ಯಭಾಸ್ಕರಸುತರು [1]ರಥದೊಳಗೆ[1] ॥

ಕೇಳು ಧೃತರಾಷ್ಟ್ರಾವನಿಪ ನಿ
ನ್ನಾಳ ಖರೆಯದ ನುಡಿಯನಾಲಿಸಿ
ಕೇ[2]ಳಿದನು ಕಲ[2] ಶಲ್ಯ ಬೆರಳಲಿ ಮೀಸೆಗಳ ಮುರಿದು ।
ಹೇಳು ಹೇಳೆನ್ನೊಮ್ಮೆ ಪಾರ್ಥನ
ಹೇಳಿ ತೋಱಿಸಲೇನ ಕೊಡುವೆ ನೃ
ಪಾಲಕನ ಪದದಾಣೆ ನುಡಿ ನುಡಿ ಕರ್ಣ ನುಡಿಯೆಂದ ॥ ೧

[3]ಹಾರ ಖಡೆಯವ ಬೇಹ[3] ಗಜಹಯ
ನಾರಿಯರ ಕೊಡಬೇಡ ಪಾರ್ಥನ
ತೋಱು ಕೊಡುವೆನು ತನಗೆ ಹೇಳದೆ ಬಱಿದೆ ಹಲುಗಿರಿದೈ ।
ಸ್ವೈರಿಸೀಗಳೆ ನಿನ್ನ ಕರುಳಿನ
ತೋರಣದ ಬಾಗಿಲಲಿ ವಿಜಯ
ಶ್ರೀರಮಣಿಯನು ತಹ ಕಿರೀಟಿಯ ತೋಱಿಸುವೆನೆಂದ ॥ ೨

ಮೊಲನ ಕಾ[4]ಹಿ[4]ನ [5]ಕಾಡಿ[5]ನಲಿ ಹೆ
ಬ್ಬುಲಿ ವಿಭಾಡಿಸುವಂತೆ ನರಿಗಳು
ಬಲಿದ ಬೇಲಿಯು ಕದಳಿಯನು ಕಾಡಾನೆ ಹೊಗುವಂತೆ ।
ದಳವ ಬಗಿದು ಮಹಾರಥರನೊಡೆ
ದುಳಿದು ನಿನ್ನಯ ನಾಲಗೆಯ ಹೆಡ
ತಲೆಯಲುಗಿವರ್ಜುನನನೀಗಳೆ ತೋಱಿಸುವೆನೆಂದ ॥ ೩

---

[1] ತಮ್ಮೊಳಗೆ (ಗ.ಚ.ದ), ಕಳದೊಳಗೆ (ಟ). [2] ಳುತಿದ್ದನು (ಕ).
[3] ಊರುಗಳ ಕೊಡಬೇಡ (ಗ. ಟ. ಚ. ತ. ದ. ಪ. ಬ. ನ). [4] ಪಿ (ಕ. ಗ. ಚ).
[5] ತೋಹಿ (ಬ).

[1]ಹೊ[1]ಱಗೆ ಕೊಡುವುದನಿತ್ತ ತಾ ನಾ
ನಱಿಸಿ ತಹೆನರ್ಜುನನನೇತಕೆ
ಬಱಿದೆ ಭಟರಿಗೆ ಬಾಯ ಬಿಡುತಿಹೆ [2]ಕರ್ಣ[2] ಖೂಳನಲಾ ।
ಅಱಿಸಲೇತಕೆ ಕಾಲಮೃತ್ಯುವ
ನಱಿಸುವರೆ ಕಾಲಾಗ್ನಿಯನು [3]ನೀ
ನ[3]ಱಿಸಲೇಕರ್ಜುನನನೀಗಳೆ ತೋಱಿಸುವೆನೆಂದ ॥ ೪

ಆವನೊಬ್ಬನ ಬಿಲ್ಲ ಬೊಬ್ಬೆಯ
ಡಾವರದಲೆದೆ [4]ಬಿ[4]ರಿವುದಹಿತರಿ
ಗಾವನೊಬ್ಬನ ದನಿಗೆ ಬಿರಿವುದು ಧೈರ್ಯಗಿರಿಶಿಖರ ।
ಆವನೊಬ್ಬನ ಕಂದರರಿಗಳ
ಜೀವ ತಲೆಕೆಳಕಹುದು ಸುಭಟರ
ದೇವನಾತನು ಪಾರ್ಥ [5]ಬೇಕೇ[5] ತೋಱಿಸುವೆನೆಂದ ॥ ೫

[6]ಹಸುಳೆ[6] ನಿದ್ದೆಯ ಹಾವ ಹೊಯ್ದೆ
ಬ್ಬಿಸುವರೇ ಮೈಮಱೆದ ಮಾರಿಯ
ಮುಸುಕನುಗಿವುದು ಬುದ್ಧಿಯೇ ಜೀವಾಭಿಲಾಷರಿಗೆ।
ನುಸಿಗಳುರಿಜಾಳಿಗೆಯೊಡನೆ ಝೊಂ
ಪಿಸುವು[7]ದುಚಿತವೆ[7] ಕರ್ಣ ಪಾರ್ಥನ
ಘಸಣಿಯೇಕೈ ನಿನಗೆ ಬೇ[8]ಕೇ[8] ತೋಱಿಸುವೆನೆಂದ ॥* ೬

ಗರುಡನೆತ್ತಲು ಕೊಬ್ಬಿದೊಳ್ಳೆಯ
ಮಱಿಯದೆತ್ತಲು ಸಿಂಹವೆತ್ತಲು
ನರಿಗಳೆತ್ತಲು ದಿಗಿಭವೆತ್ತಲು ನಾಯ ಮಱಿಯೆತ್ತ ।
ನರನೊಡನೆ ಸಮ[9]ದಂಡಿಯೇ[9] ಜಗ
ವಱಿಯದೇ [10]ನಿನ್ನಾತನ[10]ಭ್ಯಂ
ತರವ[11]ನಕಟಾ[11] ಕರ್ಣ ಸುಡು [12]ನೀ[12] ಕಷ್ಟ [13]ಹೋಗೆಂದ[13] ॥ ೭

---

[1] ಹೊ (ಕ). [2] ಸಾರು (ಕ.ಗ.ಬ). [3] ದಿಟವ (ಕ.ಚ.). [4] ಜ (ಗ.ಚ.ತ.ಪ). [5] ನೀಗಳೆ (ಕ.ಗ). [6] ಹಸಿದ (ಗ.ಟ.ತ.ದ.ಪ.ಬ.ನ). [7] ದೇಕೈ (ಕ.ಗ.ಚ). [8] ಕೈ (ಕ.ಗ.ಚ). * ಈ ಪದ್ಯ (ದ) ಪ್ರತಿಯಲ್ಲಿಲ್ಲ. [9] ಜೋಳಿಯೇ (ಬ). [10] ನಿಮ್ಮಿಬ್ಬರ (ಕ). [11] ನಱಿಯಾ (ಕ.ಗ). [12] ಸುಡು (ಕ). [13] ನಿನಗೆಂದ (ಬ).

ದಿಟಕೆ ಪಾರ್ಥನ ತೋಱಿದರೆ ಸಂ
ಕಟವ ಮಾಡದೆ ಮಾಣಲಾ ಕಟ
ಕಟ ಧನಂಜಯನೆಂದು ಸೋತ[1]ನು ಹಿಂದೆ[1] ನಿನ್ನೊಡನೆ ।
ಕುಟಿಲಮತಿ ಗೋಗ್ರಹಣದಲಿ ಲಟ
ಕಟಿಸಿದನಲಾ ಮದುವೆ[2]ಯೊಳಗು[2]
ಬ್ಬಟೆಯ ಬಿಲ್ಲಿನೊಳೊದಸಿಕೊಂಡವ ಪಾರ್ಥನಹುದೆಂದ ‖ ೮

ನರನ ತೋಱಿಸಿದವಗೆ ಶತಸಾ
[3]ಸಿ[3]ರವ ಸೂಸುವೆನೆಂದಲಾ ನಿ
ನ್ನರಸನನು ಗಂಧರ್ವರೆಳೆದೊಯ್ದಂದು ಗಗನದಲಿ ।
ಅರಸಿಯರು ಸ[4]ಚಿ[4]ವರು ಕುಮಾರರು
ಮೊಱೆಯಿಡಲು [5]ಫಲುಗುಣನ ಬಿಡಿಸಿದ
ಪರಿಯ ನೀ ನೆಱೆ ಕಂಡು ಮುಱಿವರೆ ಕರ್ಣ ಹೋಗೆಂದ[5] ‖ ೯

ಕಂಡು ಮಾಡುವುದೇನು ಭೀಷ್ಮರು
ಕಂ[6]ಡುದಿ[6]ಲ್ಲಾ ಚಾಪವಿದ್ಯಾ
ಖಂಡಪರಶು ದ್ರೋಣನರ್ಜುನನನು ರಣಾಗ್ರದಲಿ ।
ಕಂಡು ನೀನೇಗುವೆ ಸುಯೋಧನ
ಭಂಡನೋ ಸಾರಥಿತನದ ನಾ
ಭಂಡನೋ ನೀ ಭಂಡನೋ ನಾವಱಿಯೆವಿದನೆಂದ ‖ ೧೦

ಕಡುಪರಾಕ್ರಮಪಿತ್ತ ನೆತ್ತಿಯ
ಹಿಡಿದು ನೀ ಗಳಹಿದರೆ ನಿನ್ನೀ
ಹಡಪದವರೀ ಚಮರದವರೀ ಛತ್ರಧಾರಿಗಳು ।
ಒಡೆಯ ನೀನೆಂದಂಜಿ ನಿರುತವ
ನುಡಿಯಲಮ್ಮರು ತಮ್ಮ ಮನದೊಳ
ಗೊಡಬಡುವರೇ ಕದನಬಾಹಿರ ಕರ್ಣ ಹೋಗೆಂದ ‖ ೧೧

ಕೇಳುತಿರ್ದನು ಕರ್ಣ[7]ನಿವನಾ
ಭೀಳವಚನವನಧಿಕ[7]ರೋಷ
ಜ್ವಾಲೆ ಝಳಪಿಸೆ ಮೀಸೆಗಡಿದನು ತೂಗಿದನು ಶಿರವ ।

---

[1] ನೋ ಮುನ್ನ (ಕ.ಗ).　[2] ಯಲವು (ಕ.ಗ).　[3] ವಿ (ತ.ದ).
[4] ತಿ (ಕ).　[5] ಫಲುಗುಣನನೊ ಖೇಚರನನೋ ನೀನಾರ ಬಿಡಿಸಿದೆ ಕರ್ಣ ಹೇಳೆಂದ (ಕ), ಫಲುಗುಣನೊ ನೀನೋ ಕುರುಪತಿಯ ಬಿಡಿಸಿದವ ಹೇಳೈ ಕರ್ಣ ನೀನೆಂದ (ಬ).　[6] ಡನ (ಕ).　[7] ನಾತನಬೀಳವಚನವನಧಿಕ (ಕ), ಕುಣಿದವು ಕಾಯ ಕಂಪಿಸಿತು (ಗ.ಟ), ಕುಣಿದುವು ತೂಗಿದವು ಶರವ (ಬ), ನೀತನ ಕೀಳು ವಚನವನಧಿಕ (ಚ).

ಖೂಳನಿವನನು ಹೊಯ್ದರೊಳಗೊಳ
ಗಾಳು[1]ದೋಟಿ ವಿಕಾರಿ[1]ವಿಪ್ರನ
ಕಾಳುಶಾಪದ ಫಲವಲಾ ಸಂಪ್ರಾಪ್ತ[2]ವಾಯ್ತೆಂ[2]ದ ॥ ೧೨

ಈಸು ನೀನರ್ಜುನನ ಪಕ್ಷಾ
[3]ವೇಶಿ[3]ಯೇ ಶಿವಶಿವ ಮಹಾದೇ
ವೇಸು ನಂಬಿ[4]ಹ[4]ನೋ ಸುಯೋಧನನೇನ ಮಾಡು[5]ವೆ[5]ನೊ ।
ಸೀಸಕವೆ ರವಿಕಾಂತವಾಗಿ ದಿ
ನೇಶನನು ಕೆಣಕಿದವೊಲಿಂದವ
ನೀಶನೀತನ ನಂಬಿ ಕೆಟ್ಟನು [6]ಕೆಟ್ಟನಕಟೆಂದ[6] ॥ ೧೩

[7]ಸೆಣಸಿದ್ದೈ ತನ್ನೊಡನೆಯಾ[7] ಫಲು
ಗುಣನ ಭಟನೋ ನೀನು ನೃಪತಿಯು
ರಣವಿಜಯವಿದ್ವೇಷಿಯೋ ನಾವೆಱಿಯೆ[8]ವಿಂದೀಗ[8] ।
ಅಣಕವೇ ತುಱುಗಾಹಿ ಕಾಜಿನ
ಮಣಿ[9]ಯ ಬಲ್ಲನು ಗಡ[9] ಕಿರೀಟಿಯ
ಗುಣಪರಾಕ್ರಮ[10]ತನವ ನೀನೇ ಬಲ್ಲೆ ದಿಟವೆಂದ[10] ॥ ೧೪

ರೂಢಿ[11]ಯೋ[11]ಳೆಯಕಾಟನರ್ಜುನ
ನಾಡಿ ಪತಿಕರಿಸುವನು ನೀನದ
ನೋಡಿ ಸಂತಸಬಡುವರಿಬ್ಬರು ಕೃಪನು ಗುರುಸುತನು ।
ಕೋಡಗದ ಮೊಗಸಿರಿಗೆ ಕಾವಲಿ
ಯೋಡು ಕನ್ನಡಿಯಾಯ್ತು ಗಡ ಕೃತ
ಗೇಡಿಗುಚಿತವನೇನ ಮಾಡುವೆ[12]ನೆಂದನಾ ಕರ್ಣ[12] ॥ ೧೫

ಹಗೆ[13]ಯನೇ[13] ಕೊಂಡಾಡಿ ಸ್ವಾಮಿ[14]ಗೆ[14]
ಬೆಗ[15]ಡ ಬೆಳಸಿ[15] ರಣಾಗ್ರಸುಭಟರ
ನಗಡುಮಾಡಿ ವೃಥಾತ್ಮ[16]ಕುಕ್ಷಿಂಭರಿಕರೆಂದೆನಿಸಿ[16] ।

---

1 ವಾಸಿವಿಕಾರ (ಟ.ಚ.ದ.ಪ.ನ). 2 ವಹುದೆಂ (ಕ). 3 ಭ್ಯಾಸಿ (ದ) 4 ಧ (ಕ). 5 ವ (ಕ). 6 ಶಿವಶಿವಾಯೆಂದ (ಕ). 7 ಸೆಣಸುವುದು ನಿನ್ನೊಡನೆಯೋ (ಚ), ಸೆಣಸುವುದು ಮಿಗೆ ನಮ್ಮೊಡನೆಯೋ (ಟ.ದ.ತ.ಬ.ನ). 8 ವೀಹದನ (ಗ), ವೇನೆಂದು (ದ.ಪ). 9 ಸೆಣಸುವವ್ರೞಲು (ಕ). 10 ನಮ್ಮೊಡನೆ ಮಾದ್ರೇಶ ಬೇಡೆಂದ (ಕ). 11 ಗೋ (ಕ). 12 ನೆನೞತ ಘರ್ಜಿಸಿದ (ಕ.ಗ.ಚ). 13 ಗಳನು (ಕ), ಯಱಪನ (ದ). 14 ಯ (ಕ). 15 ಡುಗೊಳಿಸಿ (ಕ). 16 ಕುಕ್ಷಿವಿಕಾರರೆಂದೆನಿಸಿ (ಕ), ಕುಕ್ಷಿಯಧರಿತನೆಂದೆನಿಸಿ (ಬ).

ಹೊಗಳಿಕೆಗೆ ಹೊಱಗಾದರ್ವೈವರು
ವಿಗಡರದಱೊಳಗಿಬ್ಬರಳಿದರು
ಹಗೆಗಳುಳಿದಿರಿ ಮೂವರೆಂದನು ಭಾನುಸುತ [1]ಮುಳಿದು[1] ॥ ೧೬

ನಾವು ಭಂಡರು ಗರುವ ರಾಯರು
ನೀವಲೇ ಭುವನದಲಿ ಬಾಹಿರ
ರಾವು ನೀವತಿ ಚದುರರಾದಿರಲಾ ಮಹಾದೇವ ।
ತಾವು ತಮ್ಮಯ ಹೆಚ್ಚು ಕುಂದಿನ
ಜೀವಕಳೆಯಱಿಯದ ನಿರರ್ಥಕ
ಜೀವಿಗಳಹಂಕಾರತನಕೇನೆಂಬುದಿದಕೆಂದ ॥ ೧೭

ಮುನಿದೆನಾದರೆ ಕೋಟಿ ಕೃಷ್ಣಾ
ರ್ಜುನರ ಕೊಂಬೆನೆ ರಣಕೆ ದುರ್ಯೋ
ಧನಗೆ ಮಲೆವರ ಮಾರಿ ಪಾಂಡವಮೇಘಪವಮಾನ ।
ತನಗೆ ಸರಿಯಾರಿಲ್ಲ ನೆಣಗೊ
ಬ್ಬಿನಲಿ ನುಡಿದ್ಯೆ ನಿನ್ನ ಬಾಂಧವ
ಜನ ಸಹಿತ ಹಿಂಡುವೆನು ಹಿಂದಿಕ್ಕುವನ ತೋಱೆಂದ ॥ ೧೮

ಆರಿಗಾವುದು ದೇಶವಾ ಸಂ
ಸ್ಕಾರವವರಿಗೆ ಬಿಡದು ಬುದ್ಧಿಗೆ
ಬೇರುಗೊಲೆಯಲ್ಲಾ ಕುದೇಶ ಕುವಂಶಸಂಭೂತಿ ।
ಊರುಗರಲಾ ಮಾದ್ರದೇಶದ
ಭೂರಿ ದುರಿತರು ಕ್ಷತ್ರತಿಮಿರ ವಿ
ಕಾರಿಗಳ ಜಾತಿಯಲಿ ಜನಿಸಿದೆ ಶಲ್ಯ ಕೇಳೆಂದ ॥ ೧೯

ಖೂಳರಿಗೆ ತಾ [2]ಜನ್ಮ[2]ಭೂಮಿ ವಿ
ಟಾಳಚರಿತರ ತೌರುಮನೆ ದು
ಶ್ಶೀಲರಿಗೆ ದರ್ಪಣ ವಿಕಾರಿಗಳಿಗೆ ವಿಹಾರವನ ।
ಹೇಳುವರೆ ಪರಮಾಣುಗುಣವಾ
ಬಾಲವೃದ್ಧರೊಳಿಲ್ಲ ಠಕ್ಕಿನ
ಠೌಳಿಕಾಱರು ಮಾದ್ರದವರೆಲೆ ಶಲ್ಯ ಕೇಳೆಂದ ॥ ೨೦

---

[1] ನಗುತ (ಕ).   [2] ನಾತ್ಮ (ಕ).

ರಣದೊಳೊಡೆಯನ ಜಱೆದು ಜಾಱುವ
ಗುಣಸಮುದ್ರರು ಮಾದ್ರದೇಶದ
ಭಣಿತೆ ತಾನದು ಬೇಱೆ ನಡೆವಳಿಯಂ[1]ಗವದು[1] ಬೇಱೆ ।
ಗಣಿಕೆಯರ ಮಧ್ಯದಲಿ ಮದ್ಯದ
ತಣಿವಿನಲಿ ತನಿಸೊಕ್ಕಿ ಬತ್ತಲೆ
ಕುಣಿವ ಭಂಗಿಯ ಭಂಡರೆಲವೋ ಶಲ್ಯ ಕೇಳೆಂದ ॥ ೨೧

ಕುಟಿಲ ಸೃಷ್ಟಿಗೆ ನೀವರಸು ಚಾ
ವಟೆಯರಿಗೆ ಮನೆ ದುರ್ವ್ಯಸನ ಲಂ
ಪಟರಿಗಾಚಾರಿಯರು ಖಳರಿಗೆ ನಿಮ್ಮೊಳುಪದೇಶ ।
ಅಟಮಟದ ಘನ ದೇಹ[2]ಸಿದ್ಧಿಯ[2]
ಘುಟಿಕೆ ನಿಮ್ಮಲಿ ರಣಪಲಾಯನ
ಪಟುಭಟ[3]ರಲಾ ಗುಣ[3]ವಿಹೀನರು ಶಲ್ಯ ನೀವೆಂದ ॥ ೨೨

ಗರುಡ ಮತದಲಿ ಸರ್ಪವಿಷ ಪರಿ
ಹರಿಸುವುದು ದುರ್ಜನ ವಚೋನಿ
ಷ್ಠುರ ಮಹಾವಿಷಕಾವ ಗಾರುಡವಾವ ಮಂತ್ರ[4]ಮುಖ[4] ।
ದುರುಳ ನೀ ದುಱುದುಂಬಿತನದಲಿ
ಹುರುಳುಗೆಡಿಸಿದಡೇಸಱಲಿ ನೀ
ಗರುವನೇ ಬಾಹಿರನು ನಾನೇ ಶಲ್ಯ ಕೇಳೆಂದ ॥ ೨೩

[5]ಏ[5]ಸು ಪರಿಯಲಿ [6]ನುಡಿದು[6] ನಮ್ಮಯ
ದೇಶವನು ನೀ ಹಳಿದಡೆಯು ನೀ
ನೇಸು ಪರಿಯಲಿ ಬಯ್ದು ಭಂಗಿಸಿ ನಮ್ಮ ದೂಱಿದಡೆ ।
ಆ ಸಿತಾಶ್ವನ ಬಿಲ್ಲನೊದೆದಾ
ಕಾಶಕವ್ವಳಿಸುವ ಶರೌಘಕೆ
ಮೀಸಲಱಿಯಾ ಕರ್ಣ ನಿನ್ನೊಡಲೆಂದನಾ ಶಲ್ಯ ॥ ೨೪

ಅರಳಿದಂಬುಜದೆಸಳಿನಲಿ ಕಡ
ದುಱುವ ಕಂಡಡೆ ಕೂಡುವುದೆ ಮಧು
ಕರನ ಲಾಯದೊಳೆಲವೊ ಕರ್ಣ ದುರಾತ್ಮ ನಿನ್ನೊಡನೆ ।

---

[1] ಘವಣಿ (ದ.ನ). [2] ಶುದ್ಧಿಯ (ಟ.ದ). [3] ರುಸದ್ಗುಣ (ಕ).
[4] ಚಯ (ಕ). [5] ಈ (ಕ). [6] ಜಱೆದು (ಕ).

ನರನ ಸರಿದೂಗುವರೆ ತೋಱಿದ
ಪರಿಯಲೆಮ್ಮನು ಹೊಳ್ಳುಗಳೆ ಸಾ
ವಿರವನಿದಱಲಿ ಖಾತಿಗೊಂಡಡೆ ಪಾರ್ಥನಾಣೆಂದ॥ ೨೫

ಕ್ಷಣದೊಳೀಗಳೆ ಭೀಮ ಪಾರ್ಥರ
ರಣದೊಳಗೆ ತೋಱುವೆನು ಕದಳಿಯು
ಹಣ್ದವೋ ನಿನ್ನಾಳು ಕುದುರೆಯ ಕಾಣ[1]ಲಹುದೀಗ[1] ।
ಬಣಗು ನೀ ಭಾರಂಕ ಭಟನೊಳ
ಗಣಕಿಸುವೆ ಫಡ ಪಾಡನಱಿಯದೆ
ಸೆಣಸಿದರೆ ನೀ ಶೂರನೆಂಬರೆ ಕರ್ಣ ಕೇಳೆಂದ ॥ ೨೬

ಜಲಧಿ ಗಹನವೆ [2]ನಿ[2]ನ್ನೊಡನೆ ಹೊ
ಕ್ಕಳವಿಗೊದಗುವೆನೆಂದು ವಾಯಸ
[3]ಕಳ[3]ನುಡಿದು ಹಾಱಿತ್ತು ಹಂಸೆಯು ಕೂಡೆ ಗಗನದಲಿ ।
ಬಳಿಕ ತಲೆಕೆಳಗಾಗಿ ಸಾಗರ
ದೊಳಗೆ ಬಿದ್ದುದು ಹಂಸೆ [4]ತಂದಿಳೆ[4]
ಗಿಳುಹಿತಾ ಪರಿ ಕಾಕಪೌರುಷ ಕರ್ಣ ನೀನೆಂದ ॥ ೨೭

ಆಡಲಱಿಯದೆ ಬಱಿದೆ ಸೈನ್ಯವ
ಹೂಡಿ ಹಲಬರ ಕೊಲಿಸಿ ಬಲವ
ಕ್ಕಾಡೆ ಕುರುಪತಿ ಕಟ್ಟುವಡೆಯುನೆ [5]ಕಳನ ಮಧ್ಯದಲ[5] ।
ಆಡಿದಾತನು ಗೆಲವ[6]ನರಸಿಗೆ[6]
ಮಾಡಿದಾತನು ಸಾಕು ಪಾರ್ಥನ
ಕೂಡೆ ವಿಗ್ರಹ ಬೇಡ ತೆಗೆ ಮರಳೆಂದನಾ ಶಲ್ಯ ॥ ೨೮

ಬಱಿಯ ಪಕ್ಷಭ್ರಮೆಯಲಾಡಿದ
ಡುಱುವ ನುಡಿಯೇ ಶಲ್ಯ ಪಾರ್ಥನ
ನಱಿವೆ ನಾನೆನ್ನಂಘವಣೆಯನು ಬಲ್ಲನಾ ಪಾರ್ಥ ।
ನಱಿ ಹೃದಯ ನೀ ನಿನ್ನೊಡನೆ ಸರಿ
ಗೊಱಲಲಾಱೆನು ಭೀಮ ಪಾರ್ಥರ
ನೊಱಲಿಸುವೆನೀ ಬಾಣದಲಿ ಮಾದ್ರೇಶ ಕೇಳೆಂದ ॥ ೨೯

---

[1] ಬಹುದಿನ್ನು (ಕ). [2] ಸಿ (ಕ). [3] ಕುಳ (ಕ.ಗ.ಚ). [4] ಕಂಡಿಳೆ (ಕ.ಗ). [5] ಮಧ್ಯಚೌಕದಲಿ (ಕ). [6] ನರಸಗೆ (ಚ.), ನಾತಗೆ (ಪ).

ಝಳದ ಝಾಡಿಗೆ ಹೆದಱಿ ಸೂರ್ಯನ
ನುಳುಹುವನೆ ಕಲಿರಾಹು ದಾವಾ
ನಳನ ದಳ್ಳುರಿ[1]ಗಳುಕುವುದೆ[1] ಜೀಮೂತಸಂದೋಹ ।
ಫಲುಗುಣನ ಕಣೆ ಗಿಣೆಯು ಪವನಜ
ನಳಬಳವ ಕೈಕೊಂಬ ಕರ್ಣನೆ
ತಿಳಿಯಲಾ ಮಾದ್ರೇಶ [2]ನನ್ನಯ ವ್ಯಥೆಯು[2] ಕೇಳೆಂದ ॥ ೩೦

ಪರಶುರಾಮನ ಕಂಡು ಹೊಕ್ಕೆನು
ಗರುಡಿಯನು ದ್ವಿಜನೆಂದು ಕಲಿತೆನು
ವರ ಧನುರ್ವೇದವನು ಪಡೆದೆನು ದಿವ್ಯಮಾರ್ಗಣವ ।
ಸುರಪತಿಯ ಬೇಳಂಬವನು ವಿ
ಸ್ತರಿಸಲೇತಕೆ ವಜ್ರಕೀಟೋ
ತ್ಕರವ ಕಳುಹಿದ[3]ರೆನ್ನ ತೊಡೆಗಳನುಗಿದವವು ಬಳಿಕ ॥ ೩೧

ಅರುಣಜಲ ಹೊನಲೆದ್ದು ಮಗ್ಗುಲ
ಲುರವಣಿಸಲಾ ರಾಮ ನಿದ್ರಾ
ಭರದಲಿದ್ದವನೆದ್ದು ನೋಡಿದನೆನಗೆ ಕಡುಮುಳಿದು ।
ಧರಣಿಸುರನೆಂದೆನ್ನ ಠಕ್ಕಿಸಿ
ಶರವ ಬೇಡಿದೆ ಕಾಳೆಗದೊಳೀ
ಶರ ನಿರರ್ಥಕವಾಗಲೆಂದನು ಶಾಪಹಸ್ತದಲಿ ॥ ೩೨

ಅದಱಿನೀ ದಿವ್ಯಾಸ್ತ್ರ ಕಾಳೆಗ
ಕೊದಗಲಱಿಯವು ಶಲ್ಯ ಪಾರ್ಥನ
ಸದೆವುದೇನರಿದಲ್ಲ ಕುರುಪತಿ ಹೀನಪುಣ್ಯನಲೆ ।
ಇದು ನಿದಾನವು ಬಾಣ ಮತ್ತೆ ನ
ಗೊದಗುವುವು ಬೇಱುಂಟು ನೃಪನ
ಭ್ಯುದಯವುಳ್ಳಡೆ ಗೆಲುವೆನಹಿತರನೆಂದನಾ ಕರ್ಣ ॥ ೩೩

ಅರಸನಭ್ಯುದಯವನು ನೀ[4]ನಧಿ[4]
ಕರಿಸಿ ಗೆಲುವಡೆ ನಿನ್ನ ಹಂಗೇ
ಕರಿಗಳನು ಜಯಿಸುವರು [5]ನವಿಮ್ಮಾ ಛತ್ರಧಾರಕರು[5] ।

---

[1] ಗಂಜುವನೆ (ಗ.ದ). [2] ತನ್ನಯ ವಿಧಿಯ (ದ). [3] ನೆ (ಕ).
[4] ಪತಿ (ಕ). [5] ನಮ್ಮಯಚಮರಧಾರಿಗಳು (ಕ).

ಸೊರಹದಿರು [1]ಸಾರತ್ತ ತಾಗಿತು[1]
ಪರಶುರಾಮನ ಶಾಪ ಗಡ ಮರು
ಳರಸು ಕೌರವ ನಿನ್ನ ಸಾಕಿದನೆಂದನಾ ಶಲ್ಯ ॥ ೩೪

ಕುಲಕೆ ಸೇರುವೆ ಮಾತು ಮಾತಿನ
ಬಳಿಗೆ ಸೇರುವ ಬಾಹುಬಲ ಭುಜ
ಬಲದ ತೂಕದ ಕೀರ್ತಿ ಕೀರ್ತಿಯ ಪರಿಯ ಪರಲೋಕ।
ಇಳೆಯೊಳಗೆ ನಿನಗಲ್ಲದಾರಿಗೆ
[2]ಸಲುವುದೆಲವೋ[2] ಸೂತಸುತ [3]ನಿ
ರ್ಘೃಣಪುರುಷ[3] ನಿನ್ನಂಗದೇಶದ ವಿಧಿಯ ಕೇಳೆಂದ ॥ ೩೫

ವೇದ[4]ಕರ್ಮ[4]ವಿರೋಧಿಗಳು ಪ[5]ರಿ[5]
ವಾದಶೀಲರು ವರ್ಣಜಾತಿ ವಿ
ಭೇದಹೀನರು ಸಾರ[6]ಸಪ್ತ[6]ವ್ಯಸನಸಂಗತರು।
ಕಾದುವರು ಬೆನ್ನಿನಲಿ ಗೆಲುವರು
ಪಾದದಲಿ ಪರಬಲವನಿಱುವರು
ಬೀದಿಯಲಿ ನಿನ್ನಂಗದೇಶದ ಸಿರಿಯ ಕೇಳೆಂದ ॥ ೩೬

ನಿನಗೆ ಸಾರಥಿಯಾದ ಬಾಹಿರ
ತನವೆ ತಾನದು ಸಾಲದೇ ಬೇ
ಱನೆಗೆ [7]ತಲೆಗುತ್ತಾ[7]ವುದೆನುತವೆ ಬಿಸುಟು ವಾಘೆಯವ।
ಮನಕತದ ಮೋಱೆಯಲಿ ತತ್ಸ್ಯಂ
ದನವನಿಳಿಯಲು ಭಂಡ ಘಡ ಹೋ
ಗೆನುತ ಖಡುಗವ ಜಡಿದು ನುಡಿದನು ಭಾನುಸುತ ಮುಳಿದು ॥ ೩೭

ಹೊಡೆದು ತಲೆಯನು ನಿನ್ನ ರಕುತವ
ಕುಡಿಸುವೆನು ಕೂರಸಿಗೆ ಪವನಜ
ನೊಡಲನೆತ್ತರ ತುಂಬುವೆನು ಪಾರ್ಥನ ಕಪಾಲದಲಿ।
ಮಿಡುಕಬಾರದಲೇ ಸುಯೋಧನ
ತೊಡಗಿದಗ್ಗದ ರಾಜಕಾ[8]ರಿಯ[8]
ಕೆಡುವುದೆಂದೇ ನಿನ್ನನುಳಿಹಿದೆನೆಂದನಾ ಕರ್ಣ ॥ ೩೮

[1] ಸಾಮರ್ಥ್ಯ ತಾನಿದು (ಕ). [2] ಸುಲಭವೆಲವ್ಕೋ (ಕ). [3] ನೀಕಲು ಹೃದಯ (ಟ.ಚ.ತ.ದ.ಪ.ಬ.ನ). [4] ಸಂಗ (ಕ). [5] ರ (ಕ). [6] ಮಾರ್ಗ (ಗ), ಧರ್ಮ (ಟ.ಚ.ತ.ದ.ನ). [7] ಕುಲಕುಂ (ತ), ತಲೆಗುಂ (ಗ.ಚ.ತ.ದ). [8] ರ್ಯವು (ನ).

ಒಳಗೆ ಗಜಬಜವಾಯ್ತು ಶಲ್ಯನ
[1]ಬಲುಭಟರು[1] ಮುಕ್ಕುಱುಕಿದರು ಕುರು
ಬಲದ ಮೆಳೆಯಲ್ಲಾಡಿತಲ್ಲಿಯದಲ್ಲಿ ಗುಜುಗುಜಿಸಿ।
ಬಳಿಕ ಕೌರವರಾಯ ಹರಿತಂ
ದಿಳಿದು ದಂಡಿಗೆಯಿಂದ ಗುಣದಲಿ
ತಿಳುಹಿ ಶಲ್ಯನ ಬೇಡಿಕೊಂಡನು ರಥಕೆ ಮರಳಿಚಿದ ॥ ೩೯

ನುಡಿದು ಕರ್ಣನ ತಿಳುಹಿ ಶಲ್ಯನ
ನೊಡಬಡಿಸಿ ರವಿಸುತನನಂಘ್ರಿಗೆ
ಕೆಡಹಿ ಮಾದ್ರೇಶನ ಮನಸ್ತಾಪವನು ನೆಱೆ ಬಿಡಿಸೆ।
ಕ[2]ಡಹ[2]ದಂಬುಧಿಯಂತೆ ವಾದ್ಯದ
ಗಡಣ [3]ಮೊರೆ[3]ದವು ಪ್ರಳಯ ಸಮಯದ
ಸಿಡಿಲವೊಲು ಸೂಳೈಸಿದವು ನಿಸ್ಸಾಳಕೋಟಿಗಳು ॥ ೪೦

ಒಂಬತ್ತನೆಯ ಸಂಧಿ ಮುಗಿದುದು.

---

[1] ದಳದವರು (ಕ). [2] ದಡಿ (ಕ). [3] ಮೊಱೆ (ಕ.ಗ.ಚ.ಪ.ನ).

ಹತ್ತನೆಯ ಸಂಧಿ

ಸೂಚನೆ || ರಾಯದಳ ಹಳಚಿದುದು ಕಲಿ ರಾ
ಧೇಯನಲಿ ಸಂಕುಳದೊಳೊದಗಿದ
ವಾಯುಸುತ ಸಮರದಲಿ ಕೊಂದನು ಕರ್ಣನಂದನ[1]ನ[1] ||

ಕೇಳು ಧೃತರಾಷ್ಟ್ರಾವನಿಪ ತ
ಮ್ಮಾಳ ಮೇಳಾಪದಲಿ ಪಾಂಡುನೃ
ಪಾಲಕರ ದಳ [2]ನಡೆದು[2] ಬಂದುದು ಭೂರಿ ರಭಸದಲಿ |
ಆಳೊಳಗ್ಗಳೆಯರಿಗೆ ಕೊಟ್ಟನು
ವೀಳೆಯವನಾ ಕರ್ಣನತಿರಥ
ಜಾಳವನು [3]ಪರುಠವಿಸಿ[3] ನಿಲಿಸಿದ[4]ನೆರಡು[4] ಪಕ್ಕದಲಿ || ೧

ರಾಯಘಟ್ಟಿನ ಬಲದ ಬಾಹೆಯ
ನಾಯಕರು ಸಂಶಪ್ತಕರು ವಿವಿ
ಧಾಯುಧದ ಕಾಂಭೋಜ [5]ಬರ್ಬರ ಚೀನ[5] ಭೋಟಕರು |
ಸಾಯಕದ ಕಿವಿ[6]ವರೆ[6]ಯ ತೆಗಹಿನ
ಘಾಯ ತವಕಿಗ[7]ರೆಡಬಲದ ಕುರು[7]
ರಾಯನನುಜರು ರಂಜಿಸಿತು ದುಶ್ಶಾಸನಾದಿಗಳು || ೨

ಗುರುಸುತನ ಕೂಡೆಂಟು ಸಾವಿರ
ವರ ಮಹಾರಥರೈದು ಸಾವಿರ
ಕರಿಘಟೆಗಳಿಪ್ಪತ್ತು ಸಾವಿರ [8]ರಾವ್ತರೊಗ್ಗಿನಲಿ[8] |
ಧರಣಿಪತಿ ಕೃತವರ್ಮ ಕೃಪ ಹ
ನ್ನೆರಡು ಸಾವಿರ ರಥಸಹಿತ ಮೋ
ಹರಿಸಿದರು ಬಲವಂಕದಲಿ ದಳಪತಿಯ ನೇಮದಲಿ || ೩

---

[1] ರ (ಕ.ಚ ತ). [2] ಕೂಡಿ (ಕ). [3] ಕರೆಕರೆದು (ಗ.ಟ.ಚ.ತ.ದ.ಪ.ನ). [4] ನೆಡದ (ಚ.ಟ.ದ). [5] ಖರ್ಪರ ಯವನ (ಕ). [6] ಗಡಿ (ಗ). [7] ಳೆರಡು ಬಾಹೆಯ (ಗ.ದ). [8] ರಾವುತೊಗ್ಗಿನಲಿ (ಕ), ರಾಯರಾವುತರು (ಗ), ರಾವುತರರೊಗ್ಗಿನಲಿ (ನ), ರಥಿಕರೊಗ್ಗಿನಲಿ (ಪ).

ಘಟ್ಟಿನೆಡವಂಕದಲಿ ಹಗೆಗೊರೆ
ಗಟ್ಟಿ ನಿಂದರು ಕುರುಬಲದ ಜಗ
ಜಟ್ಟಿ ವೃಷಸೇನನು ಸುಷೇಣನು ಶಕುನಿ ಬಲಸಹಿತ ।
ಬೆಟ್ಟ [1]ಬೀಳಲು[1] [2]ವರಿದವೆನೆ[2] ಕೈ
ಮುಟ್ಟಿ ಮಹಿಯನು ದಂತಿಘಟೆ ಸಾ
ಲಿಟ್ಟುದೆತ್ತಣ ಸೇನೆಯೋ ನಾವಱಿಯೆವಿದನೆಂದ ॥ ೪

ಆ ನದೀನಂದನನ ಸಮರದಿ
ಸೇನೆ [3]ಸವೆದುದನಂತ[3] ಬಳಿಕಿನ
ಸೇನೆ [4]ಗಱಿ ಸೋಂಕಿಲ್ಲ[4] ಕಂಡೆನು ದ್ರೋಣ[5]ಪರ್ವದಲಿ[5] ।
ಏನನೆಂಬೆನು ಜೀಯ ಮತ್ತೀ
ಭಾನು ತನಯನ ಕದನಕೊದಗಿದ
ಸೇನೆ ಸಂಖ್ಯಾತೀತವೆಂದನು ಸಂಜಯನು [6]ನೃಪಗೆ[6] ॥ ೫

ಒಡ್ಡಿತೀ ಬಲ ರಿಪುಭಟರು ಮಾ
ಱೊಡ್ಡ ಮೆಱೆದರು ತಮ್ಮ [7]ನೆಱೆತೆ[7]ಯೊ
ಳೊಡ್ಡಿಗೊಬ್ಬರ ಕರೆದು ಪರುಠವಿಸಿದನು ಮುರವೈರಿ ।
ಒಡ್ಡಿನೆಡದಲಿ ಭೀಮನಾ ಬಲ
ದೊಡ್ಡಿನಲಿ ಕಲಿ ಪಾರ್ಥ ದಳಪತಿ
ಯೊಡ್ಡಿನಲಿ ನಿಂದನು ಯುಧಿಷ್ಠಿರರಾಯ ದಳ ಸಹಿತ ॥ ೬

ಈ ಮಹಾಮೋಹರವನತಿನಿ
ಸ್ಸೀಮರಾಂತರು ಮೂವರೇ ಬಳಿ
ಕಾ ಮಹಾರಥರಾಜಿಯಡಗಿದುದವರ ರಶ್ಮಿಯಲಿ ।
ಸೋಮಸೂರ್ಯಾ[8]ಗ್ನಿ[8]ಗಳಿದಿರೊಳು
ದ್ದಾಮತೇಜಸ್ವಿಗಳೆ ದಿಟ ಕುರು
ಭೂಮಿಪತಿ ಹೇಳೆಂದು ನುಡಿದನು ಸಂಜಯನು ನಗುತ ॥ ೭

ಎರಡು ಬಲವುಬ್ಬದ್ದುದಿದಱೊಳು
ಮೊರೆವ ಭೇರಿಯ ಭಟರ ಬೊಬ್ಬೆಯ
[9]ಕರಿಯ ಗಜಱಿನ[9] ಹಯದ ಹೇ[10]ಷಾ[10]ರವದ [11]ಹ[11]ಲ್ಲಣೆಯ ।

---

[1] ಬೇಗರ್ಗಳು (ಚ.ತ). [2] ಬಿದ್ದುವೆನೆ (ದ). [3] ಸಂಖ್ಯಾತೀತ (ಗ.ಟ. ಚ.ತ.ದ.ಬ.ನ). [4] ಯೊಳುತಪ್ಪಲ್ಲ (ಟ.ದ), ಗಱಿಸೋಂಪಿಲ್ಲ (ಪ.ನ). [5] ನಾಡಿಯಲಿ (ಗ), ಕದನದಲಿ (ದ). [6] ನಗುತ (ಕ). [7] ಸೇನೆ (ಟ). [8] ದಿ (ಕ). [9] ಮುರಿವ ಗಜರಥ (ಕ). [10] ಷಿತ (ಕ). [11] ಘು (ದ).

ಜಱಿವ ಕಹಳೆಯ ಝಾಡಿಸುವ ಜ
ಝ್ಝುರದ ಡಿಂಡಿಮ ಡಮರು ಪಟಹದ
ಧರಧುರದ ದನಿ ಧೈರ್ಯಗೆಡಿಸಿತು [1]ಸಕಲ[1] ಸಾಗರವ ॥ ೮

ಬೆರಸಿದವು ಬಲವೆರಡು ಹೊಕ್ಕವು
ಕರಿಘಟೆಗಳೇಱಿದವು ಕುದುರೆಗ
ಳುರವಣಿಸಿದವು [2]ತೇರ ತಿವಿದರು[2] ಹೊಂತಕಾರಿಗಳು ।
ಉರುಳ್ವ ತಲೆಗಳ ಬಸಿವ ಮಿದುಳಿನ
ಸುರಿವ ಕರುಳಿನ ಸೂಸುವೆಲುವಿನ
ಹೊರಳ್ವ ಮುಂಡದ ರೌದ್ರರಣ ರಂಜಿಸಿತು ಚೂಣಿಯಲಿ ॥ ೯

ಜೋಡನೊಡೆದವಯವದ ರಕುತವ
ತೋಡಿದವು ಕೂರಂಬು ಸಬಳದ
ನೀಡು[3]ವೊ[3]ನೆ ನಿಱಿಗರುಳನೆಂಜಲಿಸಿದವು ಪಟುಭಟರ ।
ಖೇಡರಸು ಬೆ[4]ನ್ನೀಯೆ[4] ನೆತ್ತಿಯ
[5]ಬೀಡೆ ಬಿರಿ[5]ಯಲು ಬಿದ್ದ ಲೌಡೆಗ
ಳೀಡಿಱಿದವರಿಚಾತುರಂಗದ [6]ಚಪಳ[6] ಚೂಣಿಯಲಿ ॥ ೧೦

ತೆಗೆಯ ಹೇಳೋ ಚೂಣಿಯಲಿ ಕಾ
ಳೆಗದ ಕೌತುಕ[7]ವೆತ್ತ[7] ದೊರೆಗಳು
ಹೊಗಲಿ ದಳನಾಯಕರು ನುಗ್ಗಿನ ಬೀಯಕಳುಕರಲ ।
ವಿಗಡ ಭೀಮಾರ್ಜುನರ [8]ಬಸುಱಿ
ಲ್ಲುಗಿ[8] ಕರುಳನೆನುತಬ್ಬರದ ಬೊ
ಬ್ಬೆಗಳ ಬಿರುದರು ಕೆಣಕಿದರು ಸಮಸಪ್ತಕರು ನರನ ॥ ೧೧

ರಾಯನಾವೆಡೆ ಕೌರವೇಂದ್ರನ
ದಾಯಿಗನ ಬರಹೇಳು [9]ಹಿಂದಣು[9]
ಪಾಯ ಕೊಳ್ಳದು ನಿಮ್ಮ ಭೀಷ್ಮದ್ರೋಣರಾವಲ್ಲ ।
ಕಾಯಿ[10]ದೆವು[10] ಕೈಮುಗಿದನಾದರೆ
ಸಾಯಬಲ್ಲರೆ ತಿರುವನೊದೆಯಲಿ
ಸಾಯಕದ ಹಿಳುಕೆನುತ ಬಿಟ್ಟನು [11]ಸೂಠಿಯಲಿ ರಥವ[11] ॥ ೧೨

---

1 ಸಪ್ತ (ದ.ಪ). 2 ತರುಬಿ ನಿಂತರು (ದ). 3 ಕೊ (ಕ). 4 ನ್ನಟ್ಟಿ (ಕ). 5 ಬೀಡಿನಲಿ (ದ). 6 ಭಟರ (ಕ.ಗ). 7 ಮತ್ತೆ (ಕ). 8 ಬೆನ್ನೊಳುಗಿ (ಚ.ಟ.ತ.ಪ.ಬ.ನ), ನೆತ್ತಿಯಲುಗಿ (ಗ.ದ). 9 ಭೇದೋ (ಚ.ಟ.ತ.ದ.ನ.ಪ). 10 ವೆನು (ಕ). 11 ರಾಜವೋಹರವ (ಕ.ಗ).

[1]ಬಿಟ್ಟ ಸೂಠಿಯೊಳುಗಿವ[1] ಕರ್ಣನ
ಥಟ್ಟಣೆಯ ಕಂಡನಿಲಸುತನಡ
ಗಟ್ಟಿದನು ಹದಿನೆಂಟು ಸಾವಿರ ರಥಿಕರೊಗ್ಗಿನಲಿ ।
ಇಟ್ಟಣಿಸಿ ಬರೆ ರವಿಸುತನ ಕೈ
ಮುಟ್ಟಲೀಯದೆ ಕೌರವೇಂದ್ರನ
ಥಟ್ಟಿನಲಿ ಮೂವತ್ತು ಸಾವಿರ ಕರಿಗಳೌಕಿದವು ॥ ೧೩

ಕರಿಘಟೆಯಲಾ ನಮ್ಮ ಪುಣ್ಯದ
ಪರಿಣತೆಯಲಾ ನಮ್ಮ ರಥಿಕರು
ಸರಳ ತೊಡದಿರಿ ಸ್ವೈರಿಸುವುದರೆಗಳಿಗೆ ಮಾತ್ರದಲಿ ।
ಅರಿಹಿರಣ್ಯಕಬಲ[2]ಕೆ[2] ನರಕೇ
ಸರಿಯ ಪಾಡೆನಿಸುವೆನು [3]ಕಣ್ಣಿವೆ[3]
[4]ಮಱೆಗೆ ಮುಂಚುವೆನೆನುತ[4] ಹೊಕ್ಕನು ಭೀಮ ಗಜಬಲವ ॥ ೧೪

ಬಿರಿದುವೀತನ ಸಿಂಹನಾದಕೆ
ಕರಿಗಳೆದೆಮಣಿ ಗದೆಯ ಹೊಯ್ಲಲಿ
ತಿರುಗಿ [5]ಕೋಡಡಿ[5]ಯಾಗಿ ಕೆಡೆದವು ಮಡಿದವಾಕ್ಷಣಕೆ ।
ಉರು[6]ಳಿದವು[6] ಪರ್ವತದ ವಜ್ರದ
ಸರಿಸ ಹೋರಟೆ ಕಾಣಲಾದುದು
ಕರಿಘಟೆಯ ಪವನಜನ ರಣ[7]ದಲಿ ರಾಯ ಕೇಳೆಂದ[7] ॥ ೧೫

ನೀಲಗಿರಿಗಳ ನೆಮ್ಮಿ ಘನಮೇ
ಘಾಳಿ ಸುರಿದವು ಮಳೆಯನೆನೆ ಶರ
ಜಾಳ ಕವಿದುದು ಗಜದ ಜೋಧರ [8]ಝಾಡಿಯೆಸುಗೆಯಲಿ[8] ।
ಕೋಲ ಕೊಂಬನೆ ಭೀಮ ಸಿಡಿಲುರಿ
ನಾಲಗೆಗೆ ನೀರೇ[9]ಗು[9]ವುದು ಮೇ
ಲಾಳ ಮುಱಿದನು ವಿವಿಧ ಶಸ್ತ್ರಾಸ್ತ್ರ[10]ಪ್ರಹಾರ[10]ದಲಿ ॥ ೧೬

---

1 ದಿಟ್ಟತನದಿಂದುಲಿವ (ದ). 2 ದ (ಕ). 3 ಕೆಣಕಿದ (ಕ). 4 ದುರುಳ ಸುಭಟರೆನುತ್ತ(ಕ), ಮರಳೆ ಮುರಿವೆನೆನುತ್ತ (ಗ), ಮುರಿಗೆ ಮುರಿವೆನೆನುತ್ತ (ದ) 5 ಕೊರಳಡಿ (ಕ.ಗ). 6 ಳೆಕರಿ (ಕ). 7 ವದನರಸ ಕೇಳೆಂದ (ಕ). 8 ಜಡಿವ ಜೋಕೆಯಲಿ (ಚ.ಟ.ತ.ದ.ಪ.ಬ). 9 ಱು (ಚ.ತ). 10 ಪ್ರಯೋಗ (ಗ), ಪ್ರಸಾದ (ನ).

ಕರಿಯ [1]ಬ[1]ರಿಕೈಯೆಸುವ ಜೋಧರ
ಕರ ಮಹಾಂಕುಶದವನ ಕೈ ಕ
ತ್ತರಿಸಲೊಂದೇ ಶರದಲೆಚ್ಚನು [2]ಮತ್ತೆ ಗದೆಗೊಂಡು[2] ।
ತಿರುಗಿ ಹೊಯ್ದನು ಜೋಡು ಜೋಧರು
ಕರಿಯೊಡಲು ಸಮಸೀಳ ಸೀ[3]ಳಲು
ಅ[3]ರಸ ಬಣ್ಣಿಸಲಾರು ಬಲ್ಲರು ಭೀಮಸಾಹಸವ ॥ ೧೭

ಹಿಂಡೊಡೆದು ಗಜಸೇನೆ ಮುಮ್ಮುಳಿ
ಗೊಂಡು ಮುಱಿದುದು ಮುಳಿದು ಭೀಮನ
ಗಂಡುಗೆಡಿಸುವರಿಲ್ಲ ಕೌರವದಳದ [1]ಸುಭಟ[4]ರಲಿ ।
ಅಂಡುಗೊಂ[5]ಡುದು[5] [6]ಬಿರುದುಗಿರುದಿನ[6]
ಗಂಡರಕಟಕಟೆನುತ ನಿಜ ಕೋ
ದಂಡವನು ದನಿಮಾಡುತಶ್ವತ್ಥಾಮನಿದಿರಾದ ॥ ೧೮

ಎಲೆಲೆ ರಾಯನ ತಮ್ಮನೋ ಗಜ
ಬಲದೊಡನೆ ಬಳಲಿದನು ಗುರುಸುತ
ನಳವು ಕಿಱಿದೇ ಸ್ವಾಮಿದ್ರೋಹರ ನೂಕು ನೂಕೆನುತ ।
ಉಲಿದು ಧೃಷ್ಟದ್ಯುಮ್ನ ಬಲವಿ
ಟ್ಟಳಿಸಿ ನೂಕತು ಭೀಮಸೇನನ
ನೆಲನ ಕೊಂಡರು ಕಡುಹಿನಲಿ ಪಾಂಚಾಲ ನಾಯಕರು ॥ ೧೯

ಮಱುಗದಿರಿ ಪಾಂಚಾಲರಾಯನ
ಮಱುಗಳಿರ ಭೀಮಂಗೆ ತಪ್ಪೇ
ನುಱುವ ದೊರೆ ಸೊಪ್ಪಾಗದಂ[7]ತಿರೆ[7] ನೀವು ಕಾದುವಿರೆ ।
ಅಱಿವೆ[8]ನಾ[8]ದರೆಯೆನುತ ಬಾಣವ
ತಿರುಹಲಾ ನಿಮಿಷದಲಿ ನಿಂದನು
ಗುರುಸುತನ ಹಿಂದಿಕ್ಕಿ ಪಾಂಚಾಲರಿಗೆ [9]ಕಲಿ ಕರ್ಣ[9] ॥ ೨೦

ಕ್ಷಮಿ[10]ಸುವುದು ಗುರುಸೂನು ರಣವನು
ನಿಮಿಷ ಚಿತ್ತೈಸುವುದು[10] ಶೌರ್ಯ
ಭ್ರಮಿತರೀ ಪಾಂಚಾಲರನು ಬಱಿಕೈದು ತೋಱುವೆನು ।

---

1 ಭ (ಸ). 2 ಭೀಮ ವಹಿಲದಲಿ (ಟ.ಚ.ತ.ನ.ಪ). 3 ಳಿದವ (ಚ.ಟ).
4 ರಥಿಕ (ಕ). 5 ಡರು (ಬ). 6 ಬೀಗಿ ಬಿರುದಿನ (ಚ.ಟ.ತ.ನ.ಪ.ಬ).
7 ದದಿ (ದ). 8 ವಾ (ಕ). 9 ಕರ್ಣನಿದಿರಾದ (ಕ,ದ). 10 ಸಿ ರಣದೊಳಗಿವರ ಕೆಡಹುವೆ ನಿಮಿಷ ಚಿತ್ತೈಸಿ (ಕ).

ದ್ಯುಮಣಿ ಪರಿಯಂತೇಕೆ ರಶ್ಮಿಗೆ
ತಿಮಿರವಿದಿರೇ ನೀವು ನೋಟಕ
ರೆಮಗೆ ರಣದೆಖ್ಖಾಳವೆಂದನು ಕರ್ಣ ಗುರುಸುತಗೆ ॥ ೨೧

ಬಳಿಕ ಹೇಳುವುದೇನು ರಣದ
ಗ್ಗಳೆಯರವದಿರು ಮುತ್ತಿದರು ಕೈ
ಚಳ[1]ಕಿಗರು ಕವಿದೆ[1]ಚ್ಚರೀತನನೆಂಟು ದೆಸೆ[2]ಗಳಲಿ[2] ।
[3]ಲುಳಿತ ಜಲಧರ[3]ಪಟಲ ಜಠರದೊ
ಳಿಳಿದ ರವಿಮಂಡಲದವೋಲರೆ
ಘಳಿಗೆ ಕರ್ಣನ ಕಾಣೆನೈ ನರನಾಥ ಕೇಳೆಂದ ॥ ೨೨

ಗಾಳಿಯೆತ್ತಲು ಘಾಡಿಸುವ ಮೇ
ಘಾಳಿಯೆತ್ತಲು ವೈರಿಸೇನೆಯ
ನಾ[4]ಳಿ[4]ಗಡಿತದ ನೊರೆಯ [5]ರಕುತದ ನೂಕು[5]ಧಾರೆಗಳ ।
ಏಳಿಗೆಯಲಾ ಛತ್ರಚಮರೀ
ಜಾಳ ನನೆದವು [6]ಕರ್ಣನಂ[6]ಬಿನ
ಕೋಲ ಕಡಿದೊಡನೊಡನೆ ಕೊಂದನು ಕೋಟಿ ಸಂಖ್ಯೆಗಳ ॥ ೨೩

ಮೇಲೆ ಬಿದ್ದುದು [7]ಮತ್ತೆ[7] ರಿಪುಪಾಂ
ಚಾಲಬಲ ಸಾವುದಕೆ ಕಡೆಯಿ
ಲ್ಲಾಳ ಬರವಿಂಗಳುಪಿಯೆ ನಾನವಸಾನವನು ಮರಳಿ ।
ಕೋಲುಗಳ ತೆಗೆದೆಸುವನೋ ಶರ
ಜಾಳವನು ವಿರಚಿಸುವನೋ ಹಗೆ
ಯಾಳಿ ಮುಳಿದುದ ಕಾಬೆನೆಸುಗೆಯ ಕಾಣೆ ನಾನೆಂದ ॥ ೨೪

ವೈರಿಪಾಂಚಾಲಕರೊಳೈವರು
ಧಾರುಣೀಶ್ವರರಸುವ ಬಿಟ್ಟರು
ಚಾರು [8]ಚಾಪಳ[8] ಚಾತುರಂಗದ [9]ನಿಧನ[9]ನಿರ್ಣಯವ ।
ಆರು ಬಲ್ಲರು ಖಾತಿಯಲಿ ಜ
ಝ್ಝಾರರೆದ್ದುದು ಮತ್ತೆ ಸಕಲ ಮ
ಹಾರಥರು ನೂಕಿದರು ಲಗ್ಗೆಯ ಲಳಿಯ ಲಹರಿಯಲಿ ॥ ೨೫

---

1 ಕದಲಿ ತೆಗೆದ (ಸ.ಕ.ಗ). 2 ದೆಸೆಗೆ (ಕ.ಗ.ಚ). 3 ಹೊಳೆವ ಕಣೆಗಳ (ಕ). 4 ಳ (ತ). 5 ನೆತ್ತರ ನಾಲ್ಕು (ಚ.ಟ.ತ.ಪ). 6 ಸುಭಟರಂ (ಕ). 7 ಬವರ (ಕ). 8 ಸಮರದ (ಟ). 9 ಚಪಳ (ಕ).

ನಕುಲ ಧೃಷ್ಟದ್ಯುಮ್ನ ಸುತಸೋ
ಮಕ ಶಿಖಂಡಿ ಯುಯುತ್ಸು ವರ ಸಾ
ತ್ಯಕಿ ಶತಾನೀಕಾಖ್ಯ ಪ್ರತಿವಿಂಧ್ಯಕರುಃ ಶ್ರುತಕೀರ್ತಿ ।
ಸಕಲ ಕೈಕೆಯ ಪಾಂಡ್ಯ ಶಿಶುಪಾ
ಲಕಸುತ ಯುಧಾಮ[1]ನ್ಯು ಸಹದೇ
ವಕರು[1] ಸನ್ನಾಹದಲಿ ಕವಿದುದು ವರ ಮಹಾರಥರು ॥ ೨೬

ಭೀಮ ಫಲುಗುಣ ಕೃಷ್ಣ ಧರ್ಮಜ
ರೀ ಮಹಾರಥರಲ್ಲದಿತರ
ಸ್ತೋಮವವಳವಿಯ ಮೀಱಿ ಕವಿದುದು ಕರ್ಣನಿದಿರಿನಲಿ ।
ಹಾ ಮಹಾದೇವಾ ಸಮಸ್ತ ಸ
ನಾಮರಥಿಕರು ಕರ್ಣನೊಬ್ಬನ
ಕಾಮಿಸಿದರೈ ಕದನಕವನೀಪಾಲ ಕೇಳೆಂದ ॥ ೨೭

ಉರಿಯ ಪೇಟೆಗಳಲಿ ಪತಂಗದ
ಸರಕು ಮಾಱಿದೆ [2]ಮರಳು[2]ವುದೆ ನಿ
ಬ್ಬರದ ಬಿರುದಿನೊಳೀ ಮಹಾರಥರಾಜಿ ರವಿಸುತನ ।
ಕೆರಳಿಚಿದರೈ ಕೇಣವಿಲ್ಲದೆ
ಬೆರಸಿದರು ಬೇಸಱಿಸಿದರು ಹೊಡ
ಕರಿಸಿದರು ಹೊಯ್ದರು ವಿಭಾಡಿಸಿದರು ವಿಘಾತಿಯಲಿ ॥ ೨೮

ತಮ್ಮ ಸತ್ವೋದಧಿಯ ತೋಱಿದ
ರೊಮ್ಮೆ ವೊಗೆದನು ಬಳಿಕ ರಾಯನ
ಸೊಮ್ಮಿನವರಲಿ ಸೀಳಿದನು ಹದಿನೆಂಟು ಸಾವಿರವ ।
ಹಮ್ಮುಗೆಯ ಕೈಮನದ ಹೊ[3]ಣ[3]ಕೆಯ
ಹಮ್ಮಿನುಬ್ಬಟೆಯವರ ಪಾರ್ಥನ
ತಮ್ಮದಿರ ಸಾಹಸಕೆ ಸೇರಿಸಿದನು ಪಲಾಯನವ ॥ ೨೯

ರಥ ಮುಱಿದು ಬಲು ಘಾಯದಲಿ ಸು
ವ್ಯಥಿತ ಸಾತ್ಯಕಿ ಹಿಂಗಿದನು ಸಾ
ರಥಿಗಳಳಿವಿನಲೋಡಿದರು ಸುತಸೋಮಕಾದಿಗಳು ।

---

[1] ನ್ಯೂತ್ತಮೌಜಸನಿಕರ (ಗ). [2] ತಿರುಗು (ಕ). [3] ದ (ಕ)

ಪೃಥುವಿಗೊಱಗಿತು ನಾಲ್ಕು ಸಾವಿರ
ರಥಿಗಳುಳಿದ ಪದಾತಿ ಗಜ ಹಯ
ರಥವ ಕೆಡಹಿದನೆನಿತನೆಂಬುದನಱಿಯೆ ನಾನೆಂದ ॥ ೩೦

ಮುರಿದು ಮತ್ತೆ ಮಹಾರಥರು ಸಂ
ವರಿಸಿಕೊಂಡು ಶಿಖಂಡಿ ಸಾತ್ಯಕಿ
ವರ ನಕುಲ ಸಹದೇವ ಧೃಷ್ಟದ್ಯುಮ್ನ ಶೃಂಜಯರು ।
ಸರಳ ಬಿಱು[1]ಬಿ[1]ನ ಬಾಯ ಬೈಗುಳ
ಬಿರುದುಗಹಳೆಯ ಬಿಂಕದವರು
ಬ್ಬರಿಸಿ ಕವಿದರು ಕರ್ಣನಾವೆಡೆ ತೋಱು ತೋಱೆನುತ ॥ ೩೧

ನುಸಿಗಳಿರ ನಿಮಗೇಕೆ ಕರ್ಣನ
ಘುಸಣಿ ನಾವೇ ನಿಮ್ಮ ನೆತ್ತಿಯ
ಮುಸಲವಲ್ಲಾ ಫಡ ನಕುಲ ಸಹದೇವ ನಿಲ್ಲೆನುತ ।
ಮುಸುಡ ಹೊಗರಿನ ಕಣ್ಣ ಕೆಂಪಿನ
ವಿಷಮರಗ್ಗದ ಕರ್ಣತನುಜರು
ಮಸಗಿ ಮುಂಚುವ [2]ಮೋಹರವ[2]ನಡಹಾಯ್ದು ತಱುಬಿದರು ॥ ೩೨

ಏನ ಹೇಳುವೆನ[3]ವರ[3] ಶರಸಂ
ಧಾನ ಸೌರಂಭವನು ಕಲಿ ವೃಷ
ಸೇನ ವೀರ ಸುಷೇಣ[4]ರೇಱಿದರೆಚ್ಚರತಿ[4]ಬಳರ ।
ಭಾನುಸುತನಿಂದೆಂಟುಮಡಿಯು ಸ
ಘಾನರಹಿರೋ ಪೂತು ಮಝು ಎನು
ತಾ ನಿಖಿಳ ರಥನಿಕರ ಕವಿದುದು ಮತ್ತೆ ಸಂದಣಿಸಿ ॥ ೩೩

ಕಡಿದು ಬಿಸುಟರು ತೇರುಗಳನಡ
ಗೆಡಹಿದರು ಹೇರಾನೆಗಳ ಕೆಲ
ಕಡೆಯಲೌ[5]ಕುವ ಕುದುರೆ ನನೆದವು ಬಸಿವ ನೆತ್ತರಲಿ[5] ।
[6]ತುಡುಕಿ[6]ದರೆ ಕಾಲಾಳನಟ್ಟೆಯ
ನುಡಿಯಲಱಿಯೆನು ಕರ್ಣತನುಜರ
ಕಡುಹು ನಕುಲಾದಿಗಳ ಬೆದಱಿಸಿತರಸ ಕೇಳೆಂದ ॥ ೩೪

---

[1] ಸಿ (ಕ), ದಿ (ದ). [2] ಪರಬಲವ (ಚ.ಟ.ತ.ಪ). [3] ರಸ (ಕ.ಗ.ಚ). [4] ರೆಚ್ಚರು ಮಾರಿದತಿ (ಗ.ಚ.ಟ.ತ.ದ.ಪ). [5] ಕಿದ ತೇಜಿಗಳ ರಚಿಸಿದರು ರಕುತದಲಿ (ಚ.ಟ.ತ.ದ), ಕಿದ ರಾವುತರನದ್ದಿದರು ರಕುತದಲಿ (ಪ). [6] ಕಡಗಿ (ಕ), ಮಿಡುಕಿ (ಬ).

ತಿರುಗಿ ಕಂಡನು ಭೀಮ[1]ನೆಲೆ ತರು
ವಲಿಗಳಿರ[1] ಕೊಂಡಾಡಿ ಕಾದುವ
ದೊರೆಗಳೇ ನಕುಲಾಂಕ ತೆಗೆ ಸಹದೇವ [2]ಸಾರೆ[2]ನುತ ।
ಸರಳ ಕೆನ್ನೆಯ ಬಿಗಿದ ಹುಬ್ಬಿನ
[3]ಮು[3]ರಿದ ಮೀಸೆ[4]ಯಲ[4]ಡುಗಟ್ಟಿನ
ಕುರುಕುಲಾಂತಕ ಭೀಮ ಬಿಟ್ಟನು ಸೂಠಿಯಲಿ ರಥವ ॥ ೩೫

ರಾಯದಳದಲಿ ಸೆಣಸಲಿದು ಕ
ಜ್ಜಾಯವೇ ಮಕ್ಕಳಿರ [5]ಮನ್ನಿಸಿ[5]
ಕಾಯಿದೆನು ಬಳಿಕೇನು ನಿಮ್ಮಂಘವಣೆ ಲೇಸಾಯ್ತು ।
ಸಾಯ[6]ಲೇತಕೆ[6] ಹಿಂಗಿ ನಿಮ್ಮನು
ನೋಯಿಸುವುದನುಚಿತವು ಸೇನಾ
ನಾಯಕನು ನಿಮ್ಮಯ್ಯನಾತನ ಕಳುಹಿ ನೀವೆಂದ ॥ ೩೬

ಮರುಳಲಾ ಪವಮಾನಸುತ ನಿ
ನ್ನೊರೆಗೆ [7]ಪಡಿಯೊರೆ[7] ತೂಕ ತೂಕಕೆ
ಸರಿಸರಾವಿರೆ [8]ಕನಕಗಿರಿಪರಿಯಂತ ಮಾತೇಕೆ[8] ।
ತರಣಿ ಬಿಂಬದ ತತ್ತಿಗಳನು
ತ್ತರಿಸಿ ತೋಱುವ ತಿಮಿರವುಂಟೇ
ತರಹರಿಸಿ ತೋಱಾ ಎನುತ ಕವಿದೆಚ್ಚರನಿಲಜನ ॥ ೩೭

ಗಳಹತನವಿದು ನಿಮ್ಮ ತಂದೆಯು
ಗಳಿಸಿದರ್ಥವು ನಿಮ್ಮ ಬೀಯಕೆ
ಬಳಸುವಿರಿ ತಪ್ಪಾವುದೆನುತೆಚ್ಚಂಬ ಹರೆಗಡಿದು ।
ಹಿಳುಕ ಕವಿಸಿದನೀತನೀತನ
ಹಿಳುಕ ಮುಱಿದೊಡನೆಚ್ಚು ಭೀಮನ
[9]ಕೆಳರಿಚಿದರ್ರೈ[9] ಕರ್ಣನಂದನರರಸ ಕೇಳೆಂದ ॥ ೩೮

ಬಾಲರೆಂದೇ ಮನ್ನಿಸಿದರೆ ಛ
ಡಾಳಿಸಿತೆ ಚಪಳತ್ವವಾಗಲಿ
ಖೂಳರಾವ್ಯೆ ಸಲೆಯೆನುತ ನಾರಾಚಶತಕದಲಿ ।

---

[1] ನೀ ನೆಱೆ ತರಳಗನು (ಚ.ಟ.ತ.ನ.ಪ). [2] ಮರಳೆ (ಕ). [3] ಹ (ಕ). [4] ಗಳಿಸಿ (ತ.ಟ). [5] ಕಾಮಿಸಿ (ಕ.ಗ). [6] ಬೇಡಾ (ಚ.ಟ.ತ.ಪ.), ಲೆಳಸಿದೆ (ದ). [7] ಒರೆಸರಿ (ಚ.ಟ.ದ.ಪ). [8] ಕರ್ಣಪರಿಯಂತೇಕೆ ಕಾಳೆಗವು (ದ). [9] ಕೆರಳಿಚಿದರ್ರೈ (ಕ), ಬಳಲಿಸಿದನ್ಯೆ (ಗ).

ಬೀಳಲೆಚ್ಚನು ರಥವ ಗಜ ಹಯ
ಜಾಳವನು ಸಾರಥಿಗಳನು ಬಲು
ಗೋ[1]ಲೊಳಿಬ್ಬರೊಳೊಬ್ಬನನು[1] ಕೆಡೆಯೆಚ್ಚು ಬೊಬ್ಬಿಱಿದ ॥ ೩೯

* ಶಿವಶಿವಾ ಕರ್ಣಾತ್ಮಜನೆ ಮಡಿ
ದವ[2]ನು[2] ದಳಪತಿ ಮಡಿದನೋ ಕೌ
ರವನ ಕೇಡೋ ಹಾಯೆನುತ ಕುರುಸೇನೆ ಕಳವಳಿಸೆ ।
ಕವಿದರಶ್ವತ್ಥಾಮ ಕೃಪ ಕೌ
ರವ ಶಕುನಿ ದುಶ್ಶಾಸನಾದಿಗ
ಳವಗಡಿಸಲನಿಬರನು ತೊಲಗಿಸಿ ಕರ್ಣನಿದಿರಾದ ॥ ೪೦

ಆತುಕೊಳ್ಳೆ ಭ್ರೂಣಹತ್ಯಾ
ಪಾತಕಿಯೆ [3]ಪಡಿತಳಿಸು[3] ವಿಶಿಖ
ವ್ರಾತವಿವೆಯೆನುತೆಚ್ಚನಿನಸುತನನಿಲನಂದನನ ।
ಆತುಕೊಂಬರೆ ಸರಿಸ[4]ನ[4]ಲ್ಲ ವಿ
ಜಾತಿ[5]ಯಲಿ ಸಂಭವಿಸಿದನೆ[5] ಫಡ
ಸೂತನಂದನ ಎನುತ ಕರ್ಣನನೆಚ್ಚನಾ ಭೀಮ ॥ ೪೧

ಎಚ್ಚ[6]ರೊಡನೊಡನೆಚ್ಚ ಬಾಣವ[6]
ಕೊಚ್ಚಿದನು ಕಲಿ ಕರ್ಣನಾತನ
ನೆಚ್ಚನಂಬಿನಮೇಲೆ ನೂಕಿದವಂಬು ವಹಿಲದಲಿ ।
ಎಚ್ಚು ಕವಿಸಿದಡವನು ಪವನಜ
ನೆಚ್ಚಡವ ಪರಿಹರಿಸಿ ರವಿಸುತ
ನೆಚ್ಚಡಿಬ್ಬರು ಕಾದಿದರು [7]ಕೈ[7]ಮೈಯ ಮನ್ನಿಸದೆ ॥ ೪೨

---

[1] ಲನಲಿ ಕರ್ಣಾತ್ಮಜರ (ತ). * ಈ ಪದ್ಯಕ್ಕೆ ಹಿಂದೆ (ಗ) ಪ್ರತಿಯಲ್ಲಿ ಕೆಳಗಿನ ಪದ್ಯ ಹೆಚ್ಚಾಗಿದೆ :—

ಕೆಡೆದ ವೀರಸುಷೇಣನವನಿಗೆ
ಮಡಮುರಿದ ವೃಷಸೇನ ಸೇನೆಯ
ಗಡಣ ಬಿದ್ದುದು ಕಿರಿದು ಕಿರಿದೊಡೆಮುರಿದುದಗಲದಲಿ ।
ಘೊಡವಿಪನ ಮುಂದೊಱಲಿತೀ ವಂ
ಗಡದಲ್ಕೈದಿತು ವೀರಭಟರು
ಗ್ಗಡದ ಕಹಳಾರವದ ಲಗ್ಗೆಯ ಲಹರಿ ತನಿಮಸಗೆ ॥

[2] ನೇ (ಕ). [3] ಪರಿಷುವಿಸು (ಕ), ಪರಿಹರಿಸು (ಗ). [4] ವ (ಟ). [5] ನೀ ಪಡಿಘುವಿಸುವನೆ (ಕ.), ನೀ ಪಡಿತಳಿಸುವರೆ (ಗ). [6] ನೀತನು ಭೀಮನಾಳೆಗ (ಕ), ರೊಡನೊಡನೆಚ್ಚನೆಡೆಯಲಿ (ಗ.ದ). [7] ಮೈ (ಕ).

ಭಾರಿಯಂಕವು ದಳಪತಿಗೆ ಪಡಿ
ಸಾರಿ[1]ಕೆ[1]ಯ ಭಟರಿಲ್ಲಲಾ ಪರಿ
ವಾರಕಿದು ಪಂಥವೆ ಎನುತ ಕುರುರಾಯ ಮೂದಲಿಸೆ ।
ಕೂರಲಗಿನಂಬುಗಿದು ಬಳಿಯ ಮ
ಹಾರಥರ ಕೈವೀಸಿ ರವಿಸುತ
ಸಾರೆನುತ ಕೆಣಕಿದನು ದುಶ್ಶಾಸನನು ಪವನಜನ ॥ ೪೩

ಎಲವೊ ಕರ್ಣಾತ್ಮಜನ ಹೊಯ್ದ
ಗ್ಗಳಿಕೆಯಲಿ ಹೊರೆಯೇಱಿದಿರು ಪಡಿ
ಬಲಕೆ ಕರಸಾ ಕೃಷ್ಣಪಾರ್ಥರ ನಿನ್ನಲೇನಹದು ।
[2]ಬಳಿಯ ಬಿಗುಹಿನ[2] ಬಿಂಕ ನಿನ್ನಯ
ತಲೆಗೆ ಬಹುದಾವಱಿಯೆವೆನುತತಿ
ಬಳನನೆಚ್ಚನು ನಿನ್ನ ನಂದನನರಸ ಕೇಳೆಂದ ॥ ೪೪

ತಗರು ಮು[3]ಳಿದಾರಿದರೆ[3] ತೋಳನು
ತೆಗೆದು ಜೀವಿಸಲಱಿವುದೇ ನಾ
ಲಗೆಯ [4]ನೀಱ[4]ರು ನೀವು ಮೂಢರು ನಾವು ನುಡಿಗಳಲಿ ।
ಉಗಿದಡಾಯ್ದದ ಮೊನೆಯ ತುದಿನಾ
ಲಗೆಗಳಲಿ ಮಾತಾಡ ಬಲ್ಲರೆ
ಸೊಗಸುವೆವು ನಾವೆನುತ ಪವನಜನೆಚ್ಚನರಿಭಟನ ॥ ೪೫

ಪವನಸುತನೆಚ್ಚಂಬ ಹರೆಗಡಿ
ದವಿರಳಾಸ್ತ್ರವನೀತ ಕವಿಸಿದ
ನಿವನ ಬಳಿಯ ಮಹಾರಥರು ಸೂಸಿದರು ಶರವಳೆಯ ।
ರವಿಯ ಕೈ[5]ಕತ್ತಲೆಯ ಹೊರಳಿಯ[5]
ತಿವಿಗುಳಿಗೆ ತೆರಳುವುದೆ ರಿಪುಶರ
ನಿವಹವನು ಕಡಿಯೆಚ್ಚು ಕೆಡಹಿದನಾ ಮಹಾರಥರ ॥ ೪೬

ಸಿಕ್ಕಿದರೆ ಬಳಿಕೇನು ತಾಯಿಗೆ
ಮಕ್ಕಳಾಗ[6]ರು[6] ನಿನ್ನ ತನಯನ
ನಿಕ್ಕಿ ಹಾಯ್ದರು ಹಿಂಡೊಡೆದು ನೀ ಸಾಕಿದವರೆಲ್ಲ ।

---

[1] ಗೆ (ತ.ದ.ಟ). [2] ಬಳಿಕ ಬಿನುಗಿನ (ಕ), ಬಳಿಯ ಬಿರುದಿನ (ಧ. ಪ). [3] ನಿದಾಕಿದರೆ (ಚ.ಟ.ದ). [4] ವೀರ (ಗ). [5] ಮಂಜಿನ ತುಷಾರದ (ಗ.ಟ.ಚ. ದ.ಪ.ನ). [6] ರೆ (ಕ).

ಹೊಕ್ಕು ಬಳಿಕೊಂದೆರಡು [1]ಪಸರದ[1]
ಲುಕ್ಕುಡಿಯಲೊದಗಿದನು ನಿನ್ನವ
ನೆಕ್ಕತುಳದಲಿ ಸರಿಮಿಗಿಲ ಕಾದಿದನು ಹಗೆಯೊಡನೆ ॥ ೪೭

ತೇರು ಹುಡಿಹುಡಿಯಾ[2]ಗಿ[2] ರಣದಲಿ
ಸಾರಥಿಯ ತಲೆ ಹೋ[3]ಗಿ[3] ಕಾಲಿನ
ಲಾರುಭಟೆಯಲಿ ನಿನ್ನ ಮಗನೆಸುತಿರ್ದನನಿಲಜನ ।
ಸಾರು ನೀ ಸಾರೆನುತ ಕರ್ಣಕು
ಮಾರನಡಹಾಯಿದನು ಭೀಮನ
ಭೂರಿ ಬಾಣದ ಪಂಜರವ [4]ಭಂಜಿ[4] [5]ಸುತ ವಹಿಲದಲಿ[5] ॥ ೪೮

ಎಲೆಲೆ ಕರ್ಣ ಕುಮಾರನೋ ಪಡಿ
ಬಲವ [6]ಕರೆಯೋ[6] ಬಾಲನೊಬ್ಬನೆ
ನಿಲುವುದರಿದೋ ಸ್ವಾಮಿದ್ರೋಹರ ಹಿಡಿದು ನೂಕೆನುತ ।
ಉಲಿಯೆ ಕೌರವರಾಯನುಬ್ಬಿದ
ಕಳಕಳದ ಬಹುವಿಧದ ವಾದ್ಯದ
ದಳದ ದೆಖ್ಖಾದೆಖ್ಖಿಯಲಿ ಕಲಿಕರ್ಣ ನಡೆತಂದ ॥ ೪೯

ಹತ್ತನೆಯ ಸಂಧಿ ಮುಗಿದುದು

---

1 ಸರಳಿನ (ಚ.ಟ.ತ.ನ). 2 ಗೆ (ಟ.ತ.ದ). 3 ಗ (ತ.ದ.ಪ).
4 ಖಂಡ (ತ.ಪ.ನ). 5 ಸಿದ ನಿಮಿಷದಲಿ (ಸ–ಕ). 6 ಹೇಳೋ (ಕ.ಗ.ದ).

ಹನ್ನೊಂದನೆಯ ಸಂಧಿ

ಸೂಚನೆ ॥ ರಾಯರಿಪುರವಿರಾಹು ಪಾಂಡವ
ರಾಯ ಸೇನಾಜಲಧಿವಡಬನ
ಜೇಯ [1]ರವಿನಂದನನು[1] ಗೆಲಿದನು ಧರ್ಮನಂದನನ ॥

ಮಗನ [2]ತೊಲಗಿಸಿ[2] [3]ಮಿ[3]ಗುವ ಚೂಣಿಯ
ತೆಗಸಿ ಬಲವಂಕದ ಭಟಾಳಿಗೆ
ಮೊಗದ ಸನ್ನೆಯ ಮಾಡುತೆಡವಂಕಗನ ಕಟಾಕ್ಷದಲಿ ।
ತೆಗೆದು [4]ತೂಱಂ[4]ಬಿನಲಿ ಭೀಮನ
ಬಿಗಿದನಾವೆಡೆ ಧರಣಿಯಾವೆಡೆ
ಗಗನವಾವೆಡೆ ದೆಸೆಗಳೆನೆ [5]ತುಱುಗಿ[5]ದವು ಶರಜಾಳ ॥ ೧

ಭೀಮನೋ ನಿಮಿಷಾರ್ಧದಲಿ ನಿ
ರ್ನಾಮನೋ [6]ತಡವೇಕೆ ರಿಪುವೇ[6]
ಕಾಮನೋ [7]ಕರ್ಣನೆ ಕಪರ್ದಿ[7] ವಿಚಾರವೇಕೆನುತ ।
[8]ತಾಮಸದ[8] ಭುಲ್ಲವಣೆಯಲಿ ಕುರು
ಭೂಮಿಪನ ಬಲವೊದಱೆ ವೈರಿ
ಸ್ತೋಮ ಕಂಡುದು ಪವನತನಯನ ರಣದ ಭಾರಣೆಯ ॥ ೨

ಉಲಿವುತಿದೆ ಕೌರವನ ಸೇನಾ
ಜಲಧಿ ಹರುಷದಲಿತ್ತಲನಿಲಜ
ನಳುಕದೊಬ್ಬನೆ ಕಾದುತೈದನೆ ಕರ್ಣನೊಡನೆನುತ ।
ತಳಿತ [9]ಧವ[9]ಳಚ್ಛತ್ರ ಚಮರಾ
ವಳಿಯ ಮಧ್ಯದಲವನಿಪತಿ ನಿಜ
ಬಲಸಹಿತ ನೂಕಿದನು ಬಹುವಿಧವಾದ್ಯ ರಭಸದಲಿ ॥ ೩

---

[1] ನೋ ರವಿಸೂನು (ಕ.ಚ.ತ.ದ). [2] ತೆಗೆಯಿಸಿ (ದ). [3] ಹೊ (ಗ.ಚ.ದ). [4] ಮೂಱಂ (ಗ.), ನೂಱಂ (ಟ.ದ.), ಕ್ರೂರಂ (ಪ). [5] ತಱುಬಿ (ಚ). [6] ಕರ್ಣನೊ ಕಪರ್ದಿಯೊ (ಸ-ಕ.ದ). [7] ರಿಪುಸುಭಟನಿದಕೆ (ಸ-ಕ.ದ). [8] ಆ ಮೊನೆಯ (ಕ.), ಕಾಮಿಸುವ (ಗ). [9] ವಮ (ಕ).

ಒಂದು ಕಡೆಯಲಿ ಭೀಮ ಸಾತ್ಯಕಿ
ಯೊಂದು ಕಡೆಯಲಿ ನಕುಳ[1]ದ್ರೌಪದ
ರೊಂ[1]ದು ಕಡೆಯಲಿ ಚೇಕಿತಾನ ಶಿಖಂಡಿ ಶೃಂಜಯರು ।
ಒಂದುಕಡೆ ಸಹದೇವನೀ ಪರಿ
ಹಿಂದೆ ಮುಂ[2]ದಿಕ್ಕೆಲ[2]ದೊಳೀತನ
ಸಂದಣಿಸಿ ಮುತ್ತಿದರು ಮುಕ್ಕುಱಿಕಿ[3]ತ್ತು ರಿಪುಸೇನೆ[3] ॥ ೪

ರಾಯದಳ[4]ವುಬ್ಬೆದ್ದು[4]ದೋ ಪಡಿ
ನಾಯಕರನಪ್ಪಳಿಸುವೆನು ರಿಪು
ವಾಯುಜನ [5]ಗಾಢಣೆ[5]ಯ ಗರ್ವಗ್ರಹವ ಕಳಚುವೆನು ।
ರಾಯ ಕೌರವಸಹಿತ ನೀವ್ ನಿ
ಮ್ಮಾಯತದಲಿ[6]ರಿಯೆನು[6]ತ ಸಾರದ
ಸಾಯಕದ ಸರಿವಳೆಯ ಸುರಿದನು ಭಾನುಸುತ ಮುಳಿದು ॥ * ೫

ಧನುವಿನಲಿ ಸಾತ್ಯಕಿಯ ಮಾದ್ರೀ
ತನುಜರನು ತೇರಿನಲಿ ದ್ರುಪದನ
ತನಯನನು ಸಾರಥಿಗಳಲಿ ಜೋಡಿನಲಿ ಪವನಜನ ।
ಬಿನುಗ[7]ರ[7]ವರವಂಗದಲಿ ಕೈ
ಮನವ ಖಂಡಿಸಿ ಸಕಲ ರಿಪುಸಾ
ಧನವನೊಬ್ಬನೆ ಕರ್ಣ ಗೆಲಿದನು ನೃಪತಿ ಕೇಳೆಂದ ॥ ೬

ಮುಂದುಗೆಟ್ಟುದು ದೊರೆಗ[8]ಳೆನೆ[8] ರವಿ
ನಂದನನ ರಥಕಾಗಿ ಸೇನಾ
ವೃಂದ ಕವಿದುದು [9]ಚೈದ್ಯ ಶೃಂಜಯ ಮತ್ಸ್ಯ ಕೈಕೆಯರು[9] ।
ಸಂದಣಿಸಿ ಪಾಂಚಾಲ ಕೇರಳ
[10]ವಿಂದ[10] ಮಗಧ ದ್ರವಿಡ ವಂಗ ಪು
ಳಿಂದ ಬಲಬಹಳಾಬ್ಧಿ ಮುತ್ತಿತು ಮತ್ತೆ [11]ಮೂದಲಿಸಿ[11] ॥ ೭

---

[1] ಧರ್ಮಜರೊಂ (ಗ), ನಬ್ಬರವೊಂ (ಕ.ದ). [2] ದೆಡಬಲ (ಚ ಟ.ತ.ದ.ಪ). [3] ದರು ರಿಪುಭಟನ (ಟ.ತ), ದರು ಸಕಲದಳ (ಚ.ನ.ಬ), ದರು ಪಟುಭಟರು (ಪ). [4] ಲಳಿಯೆದ್ದು. [5] ಪೊಡ್ಡಣೆ (ಕ). [6] ಲಿಹುದೆ (ಕ).
* (ಟ.ತ.ದ.) ಪ್ರತಿಗಳಲ್ಲಿ ೫ನೆಯ ಪದ್ಯವಾದಮೇಲೆ ೪ನೆಯ ಪದ್ಯ ಬರುತ್ತದೆ.
[7] ನ (ಕ.ಗ). [8] ಳಲಿ (ಕ). [9] ಚೇಕಿತಾನಕ ಮತ್ಸ್ಯ ಶೃಂಜಯರು (ಚ.ತ.ಪ.ಬ). [10] ಮಂದ (ಚ.ತ.ಪ.ಬ). [11] ರವಿಸುತನ (ಗ).

ಒದೆವ ಮಂದರವನು ತರಂಗದ
ಲುದಧಿ ಹೊಯ್ವಂದದಲಿ [1]ಹೊಕ್ಕವು[1]
ಕುದುರೆ ತೂಳಿದವಾನೆ [2]ಕವಿದರು ರಥಿಕರೊಳಬಿದ್ದು[2] ।
ಒದಱಿ ವಿವಿಧಾಯುಧದ ಕಾಲಾ
ಳೊದಗಿ ಕೈದೋಱಿಸಿದರಿನಿಬರ
ಸದೆದನೊಬ್ಬನೆ ಕರ್ಣ ಕೆದಱಿದ[3]ನಾ ಮಹಾಬಲವ[3] ॥ ೮

ಬೀಳುವಂಬಿನ ಹೊಯ್ಲ ಖಡ್ಗದ
ತೂಳುವಾನೆಯ [4]ತೂ[4]ಕಿ ತಾಗುವ
ಶೂಲಿಗೆಯ ತುಂಡಿಸುವ ವಂಕಿಯ [5]ನೆ[5]ಡುವ ಬಲ್ಲೆಹದ ।
ಸೀಳುವಿಟ್ಟಿಯ ಮುಱಿವ ಪರಿಘದ
ಪಾಳಿಸುವ ಪರಶುವಿನ ಧಾಳಾ
ಧೂಳಿ ಮಸಗಿತು ಮತ್ತೆ ಕರ್ಣನ ರಥದ ಬಳಸಿನಲಿ ॥ ೯

ತುರಗ ರಾವ್ತ[6]ರಿಗ[6]ವರ ಖಡ್ಗಕೆ
ಕರಿಗೆ ಜೋಧರಿಗವರ ಶಸ್ತ್ರಕೆ
ವರ ರಥಕೆ ಸಾರಥಿಗೆ ರಥಿಕರ ಚಾಪಮಾರ್ಗಣಕೆ ।
ಸರ[7]ಳನೊಂದೊಂದೆಚ್ಚು[7] ನೆಱೆ ಕ
ತ್ತರಿಸಿದನು ಕಾಲಾಳನೊಂದೇ
ಸರಳಲೈನೂಱಳಿಯೆ ಕೊಂದನು ಕರ್ಣ ಪರಬಲವ ॥ ೧೦

ನಕುಳನನು ಹದಿ[8]ನೆಂಟ[8]ಱಲಿ ಸಾ
ತ್ಯಕಿಯನೈದಂಬಿನಲಿ ಸಹದೇ
ವಕನನೊಂಬತ್ತಱಲಿ ಭೀಮನನೆಂಟು [9]ಕೋಲಿನಲಿ[9] ।
ಸಕಲ ರಥಿಕರನೆಲ್ಲ ಶತ ಸಾ
ಯಕದಲೊಟ[10]ಗಿ[10]ಸಿ ಚೈದ್ಯ ಪಾಂಚಾ
ಲಕರ ಥಟ್ಟಿನೊಳೊಕ್ಕಲಿಕ್ಕಿದನರಸ ಕೇಳೆಂದ ॥ ೧೧

---

[1] ಬಿಟ್ಟವು (ಕ). [2] ಹೊಕ್ಕವು ರಥದೊಳೊಗ್ಗಿನಲಿ (ಕ), ಹೊಕ್ಕವು ರಥಗಳೊಳಬಿದ್ದು (ಗ.ಟ). [3] ನುಮಹಾಬಲವ (ಕ). [4] ನೂ (ಚ.ತ.ಪ.ಬ). [5] ನಿ (ಕ). [6] ರನ (ಸ). [7] ಳಿಗೊಂವೊಂದಱಲಿ (ಕ), ಳನೊಂದೊಂದಾಗಿ (ಚ.ಟ.ತ.ಬ), ಳದೊಂದೊಂದಾಗಿ (ಪ). [8] ನೈದ (ನ.ಪ). [9] ಬಾಣದಲಿ (ಚ ತ.ದ.ಪ.ಬ). [10] ಲಿ (ಚ.ತ.ದ).

ಅದು ಬಳಿಕ ಹೇರಾಳದಳ[1]ವಾಂ
ತುದು[1] ಮಹಾರಥರೆಸುಗೆಯಲಿ ಹೂ
[2]ಳಿದುದು[2] ನಭ ನುಗ್ಗಾಯ್ತು ನೆಲ ಚತುರಂಗ ಪದಹತಿಗೆ ।
ಕುದುರೆ ಕರಿ ತೇ[3]ರಾಳ[3] ತೆಕ್ಕೆಯ
ಹೊದಱಿನಲಿ ಮುಳುಗಿದನು ನಿನ್ನವ
ನದುಭುತವನೇನೆಂಬೆನೈ ಧೃತರಾಷ್ಟ್ರ ಕೇಳೆಂದ ॥ ೧೨

ತಾರಕನ ಥಟ್ಟಿನಲಿ ಹರನ ಕು
ಮಾರ ಹೊಕ್ಕಂದದಲಿ ವೃತ್ರನ
ತಾರಕಾಕ್ಷನ [4]ಜೋಡಿಯನು[4] ಜಂಭಾರಿ [5]ತ[5]ಱಿವಂತೆ ।
ಆರಿದೆಚ್ಚನು [6]ಶಿವಶಿವಾ[6] ಕಾ
ಮಾರಿಯೋ ಪಾಂಡವ ಬಲ[7]ದ[7]ಹೆ
ಮ್ಮಾರಿಯೋ ನಿನ್ನಾನೆ ಸವಱಿತು ವೈರಿಭಟವನವ ॥ ೧೩

ವಾಘೆ ಸರಿಸದ ರಾವುತೋ ದೃಢ
ವಾಘೆಯೆನುತೇಱಿದ ಹಯೌಘದ
ಮೇಘಪಟಲದ ಪಾಡೆ ಘಡಯೆನೆ ಹೊಕ್ಕ ಗಜದಳ[8]ದ[8] ।
ಲಾಘವದ ಲುಳಿಸಾರತನದ ಶ
ರೌಘರಚನೆಯ ರಥಿಕಯೂಥ
ಶ್ಲಾಘೆಗಳ ನಾ ಕಾಣೆನೊಂದು ವಿಘಳಿಗೆ ಮಾತ್ರದಲಿ ॥ ೧೪

ಬೇಱೆ ಲಗ್ಗೆಯ ಮಾಡಿ ಥೋಯೆಂ
ದೇಱಿ [9]ಹಳಚುವ[9] ರಭಸ ಕಿವಿಗಳ
ಕೀಱಿದುದು ಬಳಿಕ[10]ವರು[10] ಕರ್ಣನ ತಾಗಿದಾಕ್ಷಣಕೆ ।
ತಾಱಿ ಥಟ್ಟಿಗೆ [11]ಹರೆದು[11] ರೌದ್ರವ
ಹಾಱಿದವು ಕಣ್ಣುಗಳು ರಿಪುಬಲ
ದೇಱ ನಾಲಗೆ ಹೊಗಳಲಮ್ಮದು ನೃಪತಿ ಕೇಳೆಂದ ॥ ೧೫

ಆಳ ಕೊಂದನು ಲಕ್ಕವನು ತುರ
ಗಾಳಿಯನು ನಾಲ್ಸಾವಿರವ ಶುಂ
ಡಾಲಘಟೆಗಳ ತುಂಡಿಸಿದನೊಂದೆರಡು ಸಾವಿರವ ।

---

1 ಕವಿದುದು (ಚ.ತ.ದ.ನ.ಪ). 2 ಳಿದರು (ಗ.ಟ.ದ.ನ.ಬ). 3 ರುಗಳ (ಕ).
4 ಜೋಡಣೆಯ (ಕ.ಗ.ದ). 5 ಜ (ದ). 6 ರಿಪುಮದನ (ಚ.ಟ.ತ.ಪ.ಬ.ಸ).
7 ಕೆ (ಟ.ತ). 8 ವ (ಸ). 9 ಕೊಚ್ಚುವ (ಕ), ಯೆಱಚುವ (ದ). 10 ಮಮು (ಕ).
11 ಕೆಡೆದ (ಕ.ನ).

ಮೌಳಿ ಮಣಿಯಲಿ ಹೊಳೆಹೊಳೆವ ನರ
ಪಾಲರನು ನಾನೂಱುಮೋಲೆಯ
ಸೀಳಿದನಲ್ಕೈ ಚೈದ್ಯ ಪಾಂಚಾಲರಲಿ ಕಲಿ ಕರ್ಣ ‖ ೧೬

ತೆರಳಿದನು ಸಹದೇವ [1]ನಸು[1] ಪೈ
ಸರಿಸಿದನು ನಕುಳನು ಶಿಖಂಡಿಯ
[2][ಕ]ರಣ ತಲೆಕೆಳಕಾಯ್ತು[2] ಕಾಣೆನು ಸಾತ್ಯಕಿಯ ರಥವ ।
ಮುರಿವ ಕಂಡೆನು ಭೀಮ ದುಗುಡದ
ಭರದಲಿದ್ದನು ಮಿಕ್ಕ ಬಲ ನಾ
ಲ್ಕೆರ[3]ಡೊ ನಾಲ್ಕೊಂದೋ ನಿಧಾನಿಸಲ[3]ಱಿಯೆ ನಾನೆಂದ ‖ ೧೭

ಇಟ್ಟಣಿಸಿ ಕೊಂಡೊತ್ತಿ ರಾಯನ
ಥಟ್ಟ ಹೊಕ್ಕನು ಜರುಹಿದ[4]ನು[4] ಜಗ
ಜಟ್ಟಿ ಜೋಡಿಸಿದಂಗಸುಯ್ಧಾನದ ಮಹಾರಥರ ।
ಕೆಟ್ಟ [5]ದಳವನಘಾಟದವರೊಳ
ಗಿ[5]ಟ್ಟುಕೊಳ್ಳರದೇನು ರಾಯನ
ಮುಟ್ಟುತಿದಲಾ ರೌದ್ರರಣವೆನುತೆಚ್ಚನಾ ಕರ್ಣ ‖ ೧೮

ಕುರುಬಲದ ಸುಮ್ಮಾನ ಕಹಳೆಯ
ಬಿರಿವ ನಿಸ್ಸಾಳದ ನೃಪಾಲರ
ಹರುಷ ಪುಳುಕದ ಭುಜದ ಹೊಯ್ಲಿನ [6]ಬೊಬ್ಬೆಯಬ್ಬರದ[6] ।
ಅರಿಬಲದೊಳಕಟಕಟ ವಿಧಿ ನಿ
ಷ್ಕರುಣಿ ಹಾಹಾಯೆಂಬ ರವದ
ಬ್ಬರದ ನಿಬ್ಬರ ಕೇಳಲಾದುದು ನೃಪತಿ ಕೇಳೆಂದ ‖ ೧೯

ಎಲೆಲೆ ರಾಯನ ಮೇಲೆ ಬಿದ್ದುದು
ಕಲಹವಕಟಾ ಹೋಗಬೇಡಿ
ಟ್ಟಳಿಸಿದವ ಹಗೆ ನಮ್ಮ ಭೀಷ್ಮದ್ರೋಣನಿವನಲ್ಲ ।

---

[1] ಮಿಗೆ (ತ.ಬ). [2] ಮರಣ ತಲೆಕೆಳಕಾಯ್ತು (ಕ), ವರರಥವ ನಾನಲ್ಲಿ (ಟ.ತ.ದ.ಪ.ಬ). [3] ಡು ನಾಲ್ಕೊಂದಾದುದ್ಕೆ ನಾವ (ಕ), ಡು ನಾಲ್ಕೊಂದಾಗಿ ಸವೆದುದನ (ದ). [4] ನೊ (ಚ). [5] ಸೇನೆಯ ಕೂಟದಲಿ ಹಿಂದಿ (ಕ), ದಳವನ ಘಾತದೊಳಗಾರಿ (ದ), ದವನ ಸಘಾಟದವರೊಳಗಿ (ನ.ಬ). [6] ಬಲದ ಬೊಬ್ಬೆಗಳ (ತ.ಬ), ಬಾಯ ಬೊಬ್ಬೆಗಳ (ದ), ಭಟರ ಬೊಬ್ಬೆಗಳ (ಪ).

ಅಳುಕದಿರಿ ಕವಿಕವಿಯೆನುತ ಹೆ
ಬ್ಬಲ ಸಘಾಡದಲೌಕಿ ಕರ್ಣನ
ಹೊಲಬುಗೆಡಿಸಿ[1]ದುದಂ[1]ಬುಗಳ ಸಾರಾಯ ಸೋನೆಯಲಿ ॥ ೨೦

ಕೊಂಬನೇ ಬಳಿಕೀ ಮಹಾರಥ
ರಂಬುಗಿಂಬನು ನಿಮ್ಮ ಹಿರಿಯರ
ಡೊಂಬಿನಾಹವವ[2]ಲ್ಲಲೇ[2] ತಮತಮಗೆ ತುಡುಕುವಡೆ ।
ಅಂಬುನಿಧಿ ಮಕರಂದವಾದರೆ
ತುಂಬಿಯಾಗನೆ ವಡಬನೀತನ
ನೆಂಬ ಖುಲ್ಲರು ಸು[3]ಭಟ[3]ರೇ ಧೃತರಾಷ್ಟ್ರ ಕೇಳೆಂದ ॥ ೨೧

ರಾಯದಳದೊಳು ಮಡಿವ [4]ಕರಿ ವಾ
ನಾಯುಜಕೆ[4] ಕಡೆಯಿಲ್ಲ ರಥಿಕರು
ಪಾಯದಳವೆನಿತಳಿದುದೋ ನಾನಱಿಯೆನ[5]ದ[5]ಱೊಳಗೆ ।
ಬಾಯಬಿಟ್ಟುದು ಸೇನೆ ಕಡಿಖಂ
ಡಾಯತದ ಹೆಣ[6]ನೊ[6]ಟ್ಟಲಿನ ಮುಱಿ
ದಾಯುಧದ ಸಂದಣಿಯೆ ನಿಲಿಸಿತು [7]ಬಳಿಕ ರವಿಸುತನ[7] ॥ ೨೨

ತಱಿದ ಹೊಸಕುಮ್ಮರಿಯೊಳಗೆ ರಥ
ಹರಿಯಬಲ್ಲುದೆ ಕರ್ಣ ನಾವಿಂ
ದಱಿದೆವೈ ನೀ ನೆಟ್ಟನೋಲೆಯಕಾಱನೆಂಬುದನು ।
ಇಱಿತಕಿವರಾರಿದಿರಹರು ನಿ
ನ್ನುರವಣಿಯನಾರಾನುವರು ಮ
ತ್ಸರವ ಬಿಸುಟೆನು ಪೂತು ರವಿಸುತ ಎಂದನಾ ಶಲ್ಯ ॥ ೨೩

[8]ಕಾಲಿಡುವಡಿದು ದುರ್ಗವೆನು[8]ತಾ
ಸಾಲ ಬಿಟ್ಟನು ದಕ್ಷಿಣಕೆ ದು
ವ್ವಾಳಿಸಿದನಾ ರಥವನವನೀಪತಿಯ ಮೋಹರಕೆ ।
ಏಳು ಕಲಿಯಾಗಿನ್ನು ಕೆಲಬಲ
ದಾಳ ಹಾರದಿರೆನುತ ರಾಯನ
ಮೇಲೆ ಕಱೆದನು ಕರ್ಣ ಖತಿಯಲಿ [9]ಕಣೆಯ[9] ಬಿಱುವಳೆಯ ॥ ೨೪

---

[2] ದರಂ (ಕ.ಚ.ದ.ನ). [2] ಲ್ಲೆನುತ (ಕ.ಗ.ಚ). [3] ಜನ (ಕ). [4] ಕಲಿವಾಹಾಯುರಕೆ (ಕ). [5] ವ (ಕ). [6] ಲೊ (ಕ), ದೊ (ಗ). [7] ರವಿಸುತನ ಬವರ (ಚ.ತ.ಪ.ಬ). [8] ಕಾಲಿಡಲು ದುರ್ಘಟವಿದೆನು (ಟ.ತ.ಪ). [9] ಸರಳ (ಗ.ಟ.ದ).

ಗಳಹದಿರು ಕೆಲಬಲದ ಹಂಗಿನ
[1]ಬಳಕೆಯೇ[1] ಘಡ ಸೂತಸುತ ಬಾ
ಳ್ಗೊಲೆಯ ಬಾಹಿರ ಬಿನುಗ [2]ಬೆದಱಿಸಿ[2] ಬಱಿದೆ ಬೆಱತೆಯಲ ।
ಉಲುಕಿದರೆ ನಾಲಗೆಯ ತೊಡಬೆಯ
ಕಳಚುವೆನು ನಿಲ್ಲೆನುತಲಾ ಕುಂ
ಡಲಿತ ಕಾರ್ಮುಕನೆಚ್ಚು ಕಡಿದನು ಕರ್ಣನಂಬುಗಳ ॥ ೨೫

ಆಲಿಕಲುಗಳು ಸಿಡಿಲ ಮಱಿಗಳ
ಮೇಲುವಾಯ್ದವು ಗಡ ಯುಧಿಷ್ಠಿರ
ನಾಳುತನದಲಿ ನಮ್ಮ ಜಱೆದನು ಶಲ್ಯ ನೋಡೆನುತ ।
ಬೋಳೆಯಂಬೈದಱಲಿ ರಾಯನ
ತೋಳನೆಚ್ಚನು ಜಡಿವ ಜೋಡಿನ
ಮೇಲೆ ಮುಱಿದವು ಬಾಣ ನೃಪ ಮಗುಳೆಚ್ಚನಿನಸುತನ ॥ ೨೬

ಬಲುಹು ಕೈಗಳಲುಂಟೆ ತೋಱುವು
ದುಲಿವ ಹೊತ್ತದು ಬೇಱೆನುತ ಮುಂ
ಕೊಳಿಸಿ ಕರ್ಣನ [3]ಶರವ[3] ಕಡದೀರೇಳು ಬಾಣದಲಿ ।
ಅಳುಕದೆಚ್ಚನು ತೇರು ತುರಗಾ
ವಳಿಯ ಧವಳಚ್ಛತ್ರ ಚಮರಿಯ
ನಿಳುಹದನು ಧ್ವಜದಂಡ ಸಹಿತೈವತ್ತು ಬಾಣದಲಿ ॥ ೨೭

ಬೇಗೆವರಿ ಬೆಳುದಿಂಗಳಲಿ ನಮ
ಗೀಗ ತೋಱಿತಲಾ ಎನುತ ಮುಱಿ
ದಾಗಳೇ ಸಂಧಿಸಿದ [4]ತನ್ನಯ ಹಯ ರಥಾದಿಗಳ[4] ।
ಈಗಲಱಿಯಾದರೆಯೆನುತ ಕಿವಿ
ಗಾಗಿ ತೆಗೆದನು ನಿಶಿತ ಬಾಣವ
ತೂಗಿ ಬಿಟ್ಟನು ಬೀಳೆನುತ ಕಲಿ ಕರ್ಣ ಬೊಬ್ಬಿಱಿದ ॥ ೨೮

ಅರಸ ಕೇಳಾಶ್ಚರಿಯವನು ರಿಪು
ಶರವನೆಡೆಯಲಿ ಕಡಿದು ರವಿಸುತ
ನುರವನೆಚ್ಚನು ಧರ್ಮನಂದನನೆಂಟು ಬಾಣದಲಿ ।

---

1 ಬಲುಮೆಯೋ (ಕ). 2 ಬಡಿದೀ (ಚ.ಟ.ತ.ಪ). 3 ತೋಳ (ಪ).
4 ನಾ ರಥ ಛತ್ರ ಚಮರಿಗಳ (ಕ), ಸಾರಥಿ ರಥ ಹಯಾವಳಿಯ (ಗ).

ಬಿರಿಯೆ ಬಲುವಜ್ರಾಂಗಿ ಹಾಯ್ದುವು
ಗಱಿಸಹಿತಲುಚ್ಚಳಿಸಿ ನೆಲದಲಿ
ಸರಳು ನೆಟ್ಟವು [1]ಕರ್ಣ ನನೆದನು ರುಧಿರ ಧಾರೆಯಲಿ[1] ‖ ೨೯

ತೂ[2]ಗುವೊ[2]ಡಲರೆಮುಚ್ಚುಗಂಗಳ
ಸೂಗುರಿಸುವಂಗದ[3]ಲಿ ತಾಳದ[3]
ಮೂಗಿನುಸುರಿನ ಮೂರ್ಛೆಯಲಿ ರವಿಸೂನು ಮೈಮಱೆ[4]ದ[4] ।
ಆಗಳಂತಿರೆ ಹೊರೆಯವರ ಕೈ
ಲಾಗುಮದ್ದಿನ ಕಮಳಜಲ ಮಂ
ತ್ರಾಗಮದಲೆಚ್ಚತ್ತನೊಂದೇ ನಿಮಿಷದಲಿ ಕರ್ಣ ‖ ೩೦

ಬಸಿವ ರಕುತವ ತೊಳೆತೊಳೆದು ಮಂ
ತ್ರಿಸಿದ ಸಲಿಲವ ಮುಕ್ಕುಳಿಸಿಯುಗು
ಳ್ದಸಮಸಾಹಿಸಿ ಕೊಂಡ[5]ವರ[5] ಕರ್ಪುರದ ವೀಳೆಯವ ।
ಮುಸುಡ ದುಗುಡದ ತನ್ನ ಸೇನಾ
ಪ್ರಸರಕಭಯವ[6]ನಿತ್ತು[6] ಮಾರಿಯ
ಮುಸುಕನುಗಿದನ ತೋಱೆನುತ ತಾಗಿದನು ಭೂಪತಿಯ ‖ ೩೧

ಮಂದಿ ಕವಿಯಲಿ ಘಾಯ ತಾಗಿದ
ಹಂದಿ[7]ಯೋ[7] ರಾಧೇಯನರಸನ
ಮುಂದುಗೆಡಿಸದೆ ಮಾಣನೋ ತೆಗೆ ನೂಕು ನೂಕೆನುತ ।
ಸಂದಣಿಸಿತತಿರಥರು ರಾಯನ
ಮುಂದೆ ತಲೆವರಿಗೆಯಲಿ ಸೇನಾ
ವೃಂದ ತುಡುಕಿತು ಕುಪಿತ ಕಾಳೋರಗನ ನಾಲಗೆಯ ‖ ೩೨

ರಾಯನೆಳಲಿಗರಿವರಘಾಟದ
ನಾಯಕರು ಕಾಣಿರೆ ಸಮೀರನ
ಲಾಯದಲಿ ಲಂಬಿಸಿದವಕಟ ತುಷಾರವಾಜಿಗಳು ।
ಆಯಿತಿದು ತಪ್ಪೇನೆನುತ ಕ
ರ್ಣಾಯತಾಸ್ತ್ರದಿ ಹರೆಗಡಿದು ರಿಪು
ರಾಯನಲ್ಲಿಗೆ ರಥವ ಬಿಟ್ಟನು ಸೂರಿಯಲಿ ಕರ್ಣ ‖ ೩೩

---

[1] ನನೆದುದಾ ಸರ್ವಾಂಗ ರುಧಿರದಲಿ (ಕ). [2] ಗಿದೊ (ಟ.ತ.ದ), ಗಿತೊ (ಚ). [3] ಲಿಕಾರದ (ಕ.), ವಿಟಾಳದ (ಗ). [4] ಯೆ (ಗ.ಚ.ಟ.ತ.ದ.ಪ.ಬ). [5] ನುರು (ಪ). [6] ಕೊಡುತ (ಚ.ತ.ಪ) [7] ಯೊಲು (ದ).

ಹೊಟ್ಟ ನೂಕಿ [1]ವ್ಯಥಾಹವದ[1] ಜಗ
ಜಟ್ಟಿ ನೀ ಹೊಱಕಾಲುಗೊಂಡರೆ
ಬಿಟ್ಟನೇ ತಾ ಕರ್ಣನಱಿಯಾ ಕಾಯ್ದುಕೊಳ್ಳೆನುತ ।
ಕಟ್ಟಳವಿಯಲಿ ವೈರಿರಾಯನ
ನಿಟ್ಟಳಿಸಿ ಮುಱಿಯೆಸುತ ಬರಲಡ
ಗಟ್ಟಿ ತಡೆದರು ಮತ್ತೆ ಸಕಲ ಮಹಾರಥರು ಭಟನ ॥ ೩೪

ನಿಲ್ಲು ಸೈರಿಸು ಸೂತಸುತ ಜವ
ನಲ್ಲಿ ಮೇಳವೆ ಜೀವರಿಗೆ ಭೂ
ವಲ್ಲಭನ ಸಮಜೋಳಿಯೇ ನೀ ಸಾರು ಸಾರೆನುತ ।
ಚೆಲ್ಲಿದರು ಕೂರಂಬುಗಳನೆಡ
ದಲ್ಲಿ ಬಲದಲಿ ಹಿಂದೆ ಮುಂದೆಸೆ
ಝುಲ್ಲರಿಯ ಶರಜಾಳ ಝೊಂಪಿ[2]ಸಿತ[2]ಬುಜಸಖಸುತನ ॥ ೩೫

ತುರಗದಳವೊಂದೆಸೆಯಲೌಕಿತು
ಕರಿಘಟೆಗಳೊಂದೆಸೆಯಲತಿರಥ
ರುರವಣೆಯ ಪದಹತಿಯ ಧೂಳಿಯ ಮಬ್ಬಿನುಬ್ಬರದ ।
ಧರಧುರವದೊಂದೆಸೆ ಪದಾತಿಯ
ಹೊರಳಿಗಳದೊಂದೆಸೆ ವಿಘಾತಿಸಿ
ತರಿಭಟನನೇನೆಂಬೆನೈ ಧೃತರಾಷ್ಟ್ರ ಕೇಳೆಂದ ॥ ೩೬

ಮುಸುಕುವುದು ಮುಗಿಲೊಮ್ಮೆ ಸೂರ್ಯನ
ಮಸಕ ಮಿಗಿಲಹುದೊಮ್ಮೆ ಮೇಘ
ಪ್ರಸರ[3]ಕೊಳಗ[3]ಹನೊಮ್ಮೆ ರವಿ ತೋಱುವನು [4]ಮತ್ತೊ[4]ಮ್ಮೆ ।
ಅಸಮ ಸಮರದೊಳೀತನಾ ಪರಿ
[5]ಮಸುಳು[5]ವನು ತೋಱುವನು [6]ತೊಡೆ[6]ವನು
ದೆಸೆಗೆಡಿಸುವನು ಬಳಿಕ ಮುಳಿಸಿನೊಳಾ ಮಹಾರಥರ ॥ ೩೭

ಬಿದ್ದುದೈನೂಱಾನೆ ರುಧಿರದೊ
ಳದ್ದರಿನ್ನೂಱರಸುಮಕ್ಕಳು
ಕದ್ದನಂತಕನಾಱುಸಾವಿರ ಕುದುರೆಯುಸುರುಗಳ ।

---

[1] ಮಹಾಹವಕೆ (ಚ.ಟ.ತ.ಪ). [2] ಸೆಯ (ಕ). [3] ದೊಳಗಿ (ದ.ಪ.ಬ).
[4] ಮಗುಳೊ (ಟ.ತ.ದ.ನ.ಪ.ಬ). [5] ಮುಸುಕು (ಕ). [6] ಬಲ (ಕ).

ಬಿದ್ದವರನೊಡೆತುಳಿದು ಮೇಲು
ಬ್ಬೆದ್ದು ಕವಿಕವಿದಾಳು ಕುದುರೆಯು
ಬಿದ್ದಿನಲಿ ಬೇಸರಿಸಿದನು [1]ಪಿತೃಪತಿಯು[1] ಪರಿಜನವ ॥ ೩೮

ಆಳ ನೋಯಿಸಿ ನೋಡುತಿಹ ಹೇ
ಹಾಳಿ [2]ತಾನೇ[2]ಕಕಟಕಟ ದೊರೆ
ಯಾಳ ಧೀವಶವೆನುತ ಸಹದೇವಾದಿಗಳು ಜಱೆದು ।
ತೋಳು [3]ಬಳಲದೆ[3] ತೆಗೆದೆಸುತ ಸಮ
ಜೋಳಿಯಲಿ ನೂಕಿದರು ಕರ್ಣನ
ಮೇಲೆ ಸಾತ್ಯಕಿ ಭೀಮರವನೀಪಾಲನಿದಿರಿನಲಿ ॥ ೩೯

ಪೂತು ಮಝುರೇ ಭೀಮ ಸಾತ್ಯಕಿ
ಯಾತರೋ ತಮ್ಮೊಡೆಯನಿದಿರಲಿ
ಘಾತಕರ ಘಟ್ಟಿಸುವೆನೀಗಳೆ ಶಲ್ಯ ನೋಡೆನುತ ।
ಭೂತನಾಥನ ಭಾಳನಯನೋ
[4]ದ್ಧೂ[4]ತ ಧೂಮಧ್ವಜ ಶಿಖಾಸಂ
ಘಾತವಿವೆಯೆನೆ ಕೆದಱಿದನು ಮಾರ್ಗಣಮಹೋದಧಿಯ ॥ ೪೦

ಪವನಸುತ ಮುಖದಿರುಹಿದನು ಯಾ
ದವನ ಕಂಡವರಾರು ಸೇನಾ
ನಿವಹಗಿವಹದ ಪಾಡೆ ಕರ್ಣನ ಖಾತಿ ಖೊಪ್ಪರಿಸೆ ।
ಬವರ ಮುಱಿದುದು ವಿಜಯಲಕ್ಷ್ಮಿಯ
ಸವತಿ ಸೇರಿತು ಸುಭಟರಿಗೆ ಬಳಿ
ಕವನಿಪತಿಯೇ ತಱುಬಿ ನಿಂದನು ಭಾನುನಂದನನ ॥ ೪೧

ಅಂಜುವೆವು ನಿಮಗರಸರೇ [5]ಬಲ[5]
ಪಂಜರದ ಗಿಣಿ ನೀವು ನಿಮಗೀ
ಮಂಜರನ ಪಡಿಮುಖಕೆ ನಿಲುವುದು ನೀತಿಯೇ ನಿಮಗೆ ।
ಭಂಜನೆಗೆ ಬಲುಹುಳ್ಳಡೆಯು ನಿಮ
ಗಂಜುವರು ಗುರುಭೀಷ್ಮರಾ ಪರಿ
ರಂಜಕರು ನಾವಲ್ಲೆನುತ ತಾಗಿದನು ಭೂಪತಿಯ ॥ ೪೨

---

[1] ಕುರುಕುಲದ (ದ). [2] ತನವೇ (ಚ.ತ.ಪ). [3] ಬಲದಲಿ (ಗ.ಟ).
[4] ದ್ಧೂ (ಕ). [5] ಭಟ (ದ).

ಕಲಿತನವೆ ಹೃದಯದಲಿ ಕಾರ್ಯದ
ಬಳಕೆ ಕೈಯಲಿ ನಡುವೆ ನಾಲಗೆ
ಯುಲಿದಡೇನಗ್ಗಳಿಕೆಯಹುದೋ ವೀರ ಸಿರಿಯಹುದೊ ।
[1]ಕಲಿತನದ ಕೆಚ್ಚುಳ್ಳಡೆಸುಗೆಯ[1]
ಸುಳಿವ ತೋಱಾದರೆಯೆನುತ ನೃಪ
ತಿಲಕ ಬತ್ತಳಿಕೆಯಲಿ ಸೆಳೆದನು ಹೂಡಿದನು ಶರವ॥ ೪೩

ರೂ[2]ಪಿದೊ[2]ಳ್ಳಿತು ರೇಖೆಯುಚಿತ ಕ
ಳಾಪವತಿ ಹಸನಾಯ್ತು ಬಾಣ
ಸ್ಥಾಪನಕೆ ಮೆಚ್ಚಿದೆನು ಮೇಲಣ ತೂಕದಾಳವನು ।
ಈ ಪರಿಯ[3]ಲೆಂ[3]ಗಱಿಯೆನಹುದೈ
ಚಾಪವಿದ್ಯಾ[4]ಪಾತ್ರ[4]ವಿಂದವ
ನೀಪತಿಯಲಾ ಪೂತು ಮಝು ಎಂದೆಚ್ಚನಾ ಕರ್ಣ ॥ ೪೪

ಗಂಡು ಗರ್ವವನೆಮ್ಮೊಡನೆ ಕೋ
ದಂಡದಲಿ ಮೆಱೆ ಸಾಕು ನಿನ್ನಯ
ಭಂಡವಿದ್ಯವ ಮೆಱೆವಡದಲಾ ಕೌರವಾಸ್ಥಾನ ।
ದಿಂಡುದಱಿವೆನು ಸೈರಿಸೆನುತವ
ಖಂಡಶರನಿಕರದಲಿ ರಿಪುಮಾ
ರ್ತಾಂಡತನಯನನೆಚ್ಚು ಬೊಬ್ಬಿಱಿದನು ಮಹೀಪಾಲ ॥ ೪೫

ಇಱಿತ ಮುನ್ನವೊ ಸುಭಟರಿಗೆ ಬೊ
ಬ್ಬಿಱಿತ ಮುನ್ನವೋ ನಿಮ್ಮ ನುಡಿಯಲಿ
ಮುಱಿವಡೆದಿರೈ ನೀವೆನುತ ನೃಪನಂಬ ಹರೆಗಡಿದು ।
ತೆಱಹುಗೊಡದೆಚ್ಚನು ನೃಪಾಸ್ತ್ರವ
ತಱಿದು ಮಗುಳೆಚ್ಚನು ಶರಾವಳಿ
ಯೆಱಗಿದವು ತುಱುಗಿದವು ತೆತ್ತಿಸಿದವು ರ[5]ಥಾಂಗ[5]ದಲಿ ॥ ೪೬

ಕಾಯಲಾಪರೆ ಕರೆದುಕೊ[6]ಳ್ಳಾ[6]
ವಾಯುಜನನರ್ಜುನನ ನಕುಲನ
ನಾಯಕರೊಳುಬ್ಬಾಳುಗಳನತಿರಥ ಮಹಾರಥರ ।

---

[1] ಕಲಿಮನದ ಕೈಚಳಕದೆಸುಗೆಯ (ಗ.ಚ.ಟ.ತ.ದ), ಬಲುಗಡಿಯ ಕೈಚಳಕದೆಸುಗೆಯ (ನ.ಬ). [2] ಪುಪೊ (ಕ). [3] ದೆಂ (ತ.ದ.ಪ). [4] ಶಾಸ್ತ್ರ (ನ.ಬ).
[5] ಥಾಗ್ರ (ದ). [6] ಳೈತ್ರೆ (ಚ).

ಸಾಯಲಂಜುವಡಿಳುಹು ಧನುವನು
ನೋಯಿಸೆನು ನುಡಿಸಿದಡೆ ಕೌರವ
ರಾಯನಾಣೆ ನೃಪಾಲ ಕೇಳೆನುತೆಚ್ಚನಾ ಕರ್ಣ ॥ ೪೭

ಅರಸನೆಚ್ಚನು ಕರ್ಣ ಶರವನು
ಪರಿಹರಿಸಿ ಮಗುಳೆಚ್ಚನೀತನು
ಧರಣಿಪನ[1]ನವನೀಶ[1]ನೆಚ್ಚನು ಹಗೆಯ ರಥ ಹಯವ ।
ಮರಳಿ ಶಲ್ಯನನೆಚ್ಚಡೀತನ
ಹೊರೆಯವರನೆಚ್ಚನು ರಥಾಂಗವ
ಹುರುಳುಗೆಡಿಸಿ ಮಹೀಶನೆಚ್ಚನು ಭಾನುನಂದನನ ॥ ೪೮

ಅಕಟ ಚಂದ್ರಿಕೆ [2]ಗೆ[2]ದ್ದುದೋ ಪಾ
ವಕನ ಝುಳ[3]ವೀ[3] ಧರ್ಮಪುತ್ರನ
ವಿಕಳ ಶರದಲಿ ಕರ್ಣ ನೊಂದನಲಾ ಮಹಾದೇವ ।
ಅಕುಟಿಲರು ನೀವೆಮ್ಮವೊಲು ಬಾ
ಧಕರೆ ಪರರಿಗೆ [4]ಪರಶುಧರ[4]ಸಾ
ಯಕದ ಸವಿನೋಡಾದಡೆನುತೆಚ್ಚನು ಮಹೀಪತಿಯ ॥ ೪೯

ಏನ ಹೇಳುವೆನವನಿಪತಿ ನಿ
ನ್ನಾನೆಯಗ್ಗಳಿಕೆಯನು ಪಾಂಡವ
ಸೇನೆ ಮಗುಳ[5]ಡ್ಡವಿ[5]ಸಿತವನೀಶನ ರಥಾಗ್ರದಲಿ ।
ಆನೆ ಹೊಕ್ಕವು ಬದ್ದರದ ಬಲು
ವಾನಿಸದ ಬಂಡಿಗಳ[6]ನೊಡ್ಡಿದ[6]
ರಾ ನಿರಂತರ ಶರವ ತಡೆದರು ತೆಕ್ಕೆವರಿಗೆಯಲಿ ॥ ೫೦

ಕಡಿದು ಬಿಸುಟನು ತೆಕ್ಕೆವರಿಗೆಯ
ಗಡಣವನು ಬದ್ದರದ ಬಂಡಿಗ
ಳಡಗಿದವು ನಿಜಸೇನೆ ಸಹಿತರುಣಾಂಬು ಪೂರದಲಿ ।
ಅಡಿಗಡಿಗೆ ಮುಕ್ಕುಳಿಕಿ ತನ್ನನು
ತಡೆವ ರಿಪುಚತುರಂಗ ವಿಪಿನದ
ಕಡಿತ ತೀರಿತು ಮತ್ತೆ ರಾಯನ ಕೆಣಕಿದನು ಕರ್ಣ ॥ ೫೧

---

[1] ನಿನಸೂನು (ಕ). [2] ಯೆ (ಕ). [3] ದಲಿ (ಕ). [4] ಪುರುಷರಸ (ಚ), ಪರುಷತರ (ತ.ದ.ಬ). [5] ಡ್ಡೈ (ತ.ಪ.ಬ). [6] ಚಾಚಿದ (ಚ.ತ.ಪ.ಬ).

ಕಾವನಾರೈ ಕರ್ಣ ಮುನಿದರೆ
ಜೀವದಲಿ ಕಕ್ಕುಲಿತೆಯೇಕೆ ಶ
ರಾವಳಿಗ[1]ಳಿವಲಾ[1] ಕರಾಗ್ರದಲುಗ್ರಧನುವಿದಲಾ ।
ನಾವು ಸೂತನ ಮಕ್ಕ[2]ಳುಗಳೈ[2]
ನೀವ[3]ಲೇ[3] ಕ್ಷತ್ರಿಯರು ನಿಮಗೆಮ
ಗಾವುದಂತರವತಿಬಳರು ನೀವೆನುತ ತೆಗೆದೆಚ್ಚ ॥ ೫೨

ಅರಿಯ ಶರಹತಿ[4]ಗಡ್ಡವರಿಗೆಯ[4]
ನರಸನಭಿಮುಖಕೊಡ್ಡಿದರು ರಥ
ತುರಗವನು ಚಪ್ಪರಿಸಿ ಸಾರಥಿ ನೂಕಿದನು ರಥವ ।
ಧರಣಿಪತಿ ಕೇಳೈದು ಶರದಲಿ
ಹರಿಗೆಯನು ಮುಱಿಯೆಚ್ಚು ಸೂತನ
ಶಿರವನಿಳುಹಿದಡೊದೆದುಕೊಂಡುದು ಮುಂಡ ಸಾರಥಿಯ ॥ ೫೩

ಕೆದಱಿದನು [5]ಮಾ[5]ರ್ಗಣೆಯೊಳರಸನ
ಹೊದಸಿದನು ಹುಸಿಯೇಕೆ ರಾಯನ
[6]ಹುದಿದ[6] ಕವಚವ ಭೇದಿಸಿ[7]ದವ್ರೊ[7]ಳಬಿದ್ದವಂಬುಗಳು ।
ಎದೆಯಲೌಕಿದ ಬಾಣ ಬೆನ್ನಲಿ
ತುದಿವೊನೆಯ ತೋಱಿದವು ಪೂರಾ
ಯದ ವಿಘಾತಿಯಲರಸ ಕಳವಳಿಸಿದನು ಕಂಪಿಸುತ ॥ ೫೪

ಅರೆಮುರಳುವಾಲಿಗಳ ಹೆಗ[8]ಲಲಿ[8]
ಮುರಿದ ಗೋಣಿನ ದುಱುದುಱಿಪ ನೆ
ತ್ತರ [9]ನಿ[9]ಹಾರದ ಮೈಯ ಸಡಲಿದ ಕೈಯ ಬಿಲುಸರಳ ।
ಅರಸನನು ಕಂಡಳಲಿದರು ಚಾ
ಮರದ ಛತ್ರದ ಹಡಪದವರಾ
ಪ್ತರು ವಿಘಾ[10]ತಿಯಲಂ[10]ಬ ಕಿತ್ತರು ಬಹಳ ಶೋಕದಲಿ ॥ ೫೫

ಮಂತ್ರಜಲದಲಿ ತೊಳೆದು ಘಾಯವ
ಮಂತ್ರಿಸುತ ಕರ್ಪೂರದ ಕವಳ[11]ದ[11]
ಯಂತ್ರರಕ್ಷೆಯಲವನಿಪನ ಸಂತೈಸಿ ಮಲಗಿಸುತ ।

---

1 ಳವಲಾ (ತ). 2 ಳೀಗಳು (ಸ-ಕ). 3 ಲಾ (ತ.ದ.ನ). 4 ಗಳುಕಿ ಹರಿಗೆಯ (ಚ.ಟ.ನ.ಪ.ಬ), ಗಿರದೆ ಪರಿಘವ (ದ). 5 ಕೂ (ತ). 6 ಹೊದೆದ. (ದ.ಪ), ಪುದಿದ (ನ). 7 ಯೊವ್ರೊ (ಕ). 8 ಲನ (ತ). 9 ವಿ (ಟ) 10 ತದೊಳಂ (ಕ). 11 ವ (ಕ).

ತಂತ್ರ ತಲ್ಲಣಿಸದಿರಿ ಜಿತಶ[1]ತ[1]
ತಂತ್ರನೋ ಭೂಪತಿ ವಿರೋಧಿಭ
ಟಾಂತ್ರಭಂಜನನೀಗಳೆಂದುದು ರಾಯನಾಪ್ತಜನ ॥ ೫೬

ಸಿಕ್ಕಿದೆಯಲಾ ಸ್ವಾಮಿದ್ರೋಹಿಗ
ಳಿಕ್ಕಿ ಹೋದರೆ ಭೀಮ ಫಲುಗುಣ
ರೆಕ್ಕತುಳದಲಿ ತೊಡಕಿ ನೀಗಿದಲಾ ನಿಜೋನ್ನತಿಯ ।
ಚುಕ್ಕಿಗಳು ನಿನ್ನವರ ಮಡುವಿನ
ಲಿಕ್ಕಿ ಕೌರವರಾಯನನು ಮಱೆ
[2]ವೊ[2]ಕ್ಕು ಬದುಕಾ ಧರ್ಮಸುತ ಬಾ ಎಂದನಾ ಕರ್ಣ ॥ ೫೭

ಸಾಳುವನ ಕೂಡರಗಳಿಗೆ ಸಮ
[3]ಮೇಳವೇ[3] ಶಸ್ತ್ರಜ್ಞನಾದಡೆ
ಸೋಲುವುನೆ ವರ ಶಸ್ತ್ರವಿದ್ಯಾಪ್ರೌಢಿಯದು ಬೇಱೆ ।
ಆಳುತನದಭಿಮಾನವದು ಕರ
ವಾಳಧಾರಾಗಮನ[4]ವರ[4]ಸರೆ
ಖೂಳರಾದಿರಿ ನೀವೆನುತ ಭಂಗಿಸಿದನಾ ಕರ್ಣ ॥ ೫೮

ಶ್ರುತಿರಹಸ್ಯವನಱಿವ ಧರ್ಮ
ಸ್ಥಿತಿಗತಿಯನಾರೈವ ಶಾಸ್ತ್ರ
ಪ್ರತತಿಯರ್ಥವಿಚಾರವಾ[5]ಚರಣಾ[5]ದಿ ಕರ್ಮದಲಿ ।
ಚತುರರಹ ದರುಶನದ ತರ್ಕದ
ಮತನಿಧಾನವನಱಿವ ವರ ಪಂ
ಡಿತರು ನಿಮಗೀ ಕದನಕರ್ಕಶವಿ[6]ದ್ಯೆಯೇಕೆಂದ[6] ॥ ೫೯

ವರ ನದಿಗಳಲಿ ಮುಳುಗಿ ಮೂಗಿನ
ಬೆರಳಲೂರ್ಧ್ವಶ್ವಾಸಪವನನ
ಧರಿಸಿ ಕಾಲತ್ರಯ ಜಪಾನುಷ್ಠಾನ ಹೋಮದಲಿ ।
ಪರಮಋಷಿ ಮಧ್ಯದಲಿ ನೀವಾ
ಚರಿಸುವುದು [7]ಬಿಸುಟುಗಿವಡಾಯ್ದದ[7]
[8]ಹೊರಳಿಗಿಡಿಗಳ ಹೊದಱೊಳಾಚರಿಸುವರೆ[8] ನೀವೆಂದ ॥ ೬೦

---

[1] ರ (ಸ–ಕ). [2] ಯೊ (ಚ.ಟ.ತ.ದ). [3] ಜೋಳಿಯೇ (ಚ.ಟ.ತ.ದ.ಪ).
[4] ವಿದ (ಪ). [5] ಧರತಾ (ಕ). [6] ದ್ಯವಲ್ಲೆಂದ (ಗ), ದ್ಯವೇಕೆಂದ (ಚ.ದ.ನ.ಬ).
[7] ಮಾಡಕಟ ಕರ್ಕಶ (ಕ), ಬಿಟ್ಟೀಗಳಾಯುಧದ (ಗ) ಬಿಟ್ಟೀ ಮಹಾಸ್ತ್ರದ (ದ).
[8] ತರದ ಕದನದ ಹೊದಱಿನಲಿ ಬೆರಸುವರೆ (ಕ).

ಕೊಲುವಡವ್ವೆಗೆ ಕೊಟ್ಟ ಮಾತಿಂ
ಗಳುಕುವೆನು ನೀ ಹೋಗು ಹರಿಬಕೆ
ಮಲೆವರಾದರೆ ಕಳುಹು ಭೀಮಾರ್ಜುನರನಾಹವಕೆ ।
[1]ಉಲು[1]ಕಿದರೆ ನಿನ್ನಾಣೆಯೆನುತ
ಗ್ಗಳಿಸಿ ನೃಪತಿಯು ಕೆಡೆನುಡಿದು ಪರ
ಬಲವ ಒರಹೇಳೆನುತ ನಿಂದನು ನುಡಿಸಿ ನಿಜಧನುವ ॥ ೬೧

ಹನ್ನೊಂದನೆಯ ಸಂಧಿ ಮುಗಿದುದು.

---

[1] ಅಳು.

ಹನ್ನೆರಡನೆಯ ಸಂಧಿ

ಸೂಚನೆ ॥ ರಾಯದಳ[1]ದು[1]ಳಕಾಱ ಕೌರವ
ರಾಯಸೇನಾಸೂಱೆಕಾಱನ
ಜೇಯ[2]ನೋ ಕಲಿ[2] ಭೀಮ ಗೆಲಿದನು ಭಾನುನಂದನನ ॥

ಏನ ಹೇಳುವೆನರಸ ಪಾಂಡವ
ಸೇನೆಗಾದ ವಿಪತ್ತ[3]ನರಸನ[3] ಹಾನಿ
ಯನು ನಿನ್ನವರ ಸುಮ್ಮಾನದ ಸಘಾಡಿಕೆಯ ।
ಭಾನುಸುತನೋ ಕೌರವನ ಮದ
ದಾನೆಯೋ ಕುರುಸೈನ್ಯನಳಿನೀ
ಭಾನು ಮಝು ಭಾಪೆಂದು ಹೊಗಳಿತು ಕೂಡೆ ಪರಿವಾರ ॥ ೧

ಇವರ ಹರುಷದ ನಗೆಯನಾ ಬಲ
ದವರ ಮೋಱೆಯ ಹೊಗೆಯನೀ ಬಲ
ದವರ ಭುಜದುಱುವ್ವೊಯ್ಲನಾ ಬಲದವರ ಬಿಸುಸುಯ್ಲ ।
ಇವರೊಸಗೆ ಕೈಗುಡಿಯನಾ ಬಲ
ದವರ ಗೆಲವಿನ ಗಡಿಯ ನೀ ಚಿ
ತ್ತವಿಸಿದೈ ಧೃತರಾಷ್ಟ್ರ ಎಂದನು ಸಂಜಯನು ನಗುತ ॥ ೨

ಅಳುವವರ ನಗಿಸುವುದು ನಗುವರ
ನಳಿಸುವುದು ಗೆಲಿದವರ ಸೋಲಿಸಿ
ಗೆಲಿಸುವುದು ಸೋತವರನೀ ವಿಪರೀತಗತಿ ವಿಧಿಗೆ ।
ಅಳಲದಿರು ಸುಮ್ಮಾನದಲಿ ವೆ
ಗ್ಗಳಿಸದಿರು ನಿನ್ನವರು ನಿಮಿಷದೊ
ಳಳಲುದೊಱೆಯಲಿ ಮುಳು[4]ಗುವಂ[4]ದವನಿನ್ನು ಕೇಳೆಂದ ॥ ೩

ಲಳಿಯ ಲಹರಿಯಲಬ್ಬರದ ಕಳ
ಕಳದ ವಾದ್ಯದ ಲಗ್ಗೆಯಲಿ ಪರ
ಬಲವ ಹೊಕ್ಕನು ಮತ್ತೆ ಮೂದಲಿಸುತ್ತ ಮಹಿಪತಿಯ ।

---

[1] ವು (ಕ). [2] ಘಟನೋ. [3] ಭೂಪನ (ಕ). [4] ಗಿದಂ (ಕ.ಗ.ಚ.ನ).

ಎಲೆಲೆ ರಾಯನ ರಣಕೆ ಮಾಱಿದ
ತಲೆಯು [1]ಕದ್ದಿರೆ[1] ಕುನ್ನಿಗಳಿರೆನು
ತೊಳಗೊಳಗೆ ಬಿಡೆ ಜಱೆದು ಜೋಡಿಸಿ ನೂಕಿತರಿಸೇನೆ ॥ ೪

ಅಕಟ ರಾಯನ ಹರಿಬದಲಿ [2]ಸೇ
ವಕರಿಗಾದುದು ಸೂಱೆ ವೃಂದಾ
ರಕ ವಧೂವರ್ಗದಲಿ ಚಾಳಿಸಬೇಡ ವಿಗ್ರಹಕೆ[2] ।
ವಿಕಳ[3]ಬಲನಿವನೇನು[3] ಭಾಳಾಂ
ಬಕನೊ ಬಲಿಬಂಧಕನೊ ಸುರಪಾ
ಲಕನೊ ಫಡಫಡ ಎನುತ ಕವಿದುದು ಕರ್ಣನಿದಿರಿನಲಿ ॥ ೫

ಅರಸ ಕೇಳಾಕ್ಷಣಕೆ ರುಧಿರದ
[4]ಬಿಱು[4]ವೊನಲ [5]ಬಲುಗೆಸಱ[5]ನೆಣವಸೆ
ಯಱಿಲ ನೆಲದಲಿ ಧೂಳಿಯೆದ್ದುದು ದಳದ ಪದಹತಿಗೆ ।
ಸರಕಟಿಸಿ ರಿಪು ಸರ್ವದಳ [6]ಸಂ
ವರಿಸಿ[6] ನೂಕಿತು ಕಲ್ಪಮೇಘದ
ಸರಿವಳೆಗೆ ಸಿಗುರೆದ್ದು ಕೊಬ್ಬಿದ ಕಡಲಿನಂದದಲಿ ॥ ೬

ನೊಂದ[7]ನೇ[7] ಧರ್ಮಜನು ಭಂಗಕೆ
[8]ತಂದನೇ ರಾಧೇಯ[8]ನಕಟಕ
ಟಿಂದು ಮಡಿದರೆ ಭೀಮ ಪಾರ್ಥರು ಭೀತಿಯೇಕಿದಕೆ ।
[9]ನೊಂ[9]ದನೀ ಪರಿ ತನ್ನ ಕಂಗಳ
ಮುಂದೆ [10]ನರಪತಿ[10] ಪಾರ್ಥನಿನ್ನೇ
ನೆಂದು [11]ಮುನಿವನೊ ಶಿವ[11]ಶಿವಾ ಎಂದಳಲಿದನು ಭೀಮ ॥ ೭

ಅರಸ ಮುಱಿವಡೆ[12]ದ[12]ಲ್ಲಿ ದಿಕ್ಕನೆ
ಬೆರಸಿದನೆ ಬವರವನೆನುತ [13]ನ
ಮ್ಮರಸಿ ನಗಳೇ ಭಂಡವೀರನ ಮಾತ ತೆಗೆಯೆನುತ[13] ।

[1] ಕೊಡಿರೋ (ದ). [2] ಸೇವಕರು ನಮ್ಮೊಳು ತೊಡಕಿ ವಿಜಯಪ್ರಕಟಕೆಳಸಿತು ಶಲ್ಯ ನೋಡೈ ಶಿವಶಿವಾಯೆನುತ (ಕ) [3] ತನ ಬೇಡೆಲವೂ (ಕ). [4] ನೊರೆ (ಕ). [5] ಕೆಸಱೇಳೆ (ಕ.ಗ.ಚ). [6] ಮೋಹರಿಸಿ (ಚ.ಟ.ತ.ಬ). [7] ನೋ (ಕ). [8] ಬಂದನೋ ರಾಜೇಂದ್ರ (ಕ.ದ.ನ). [9] ಕೊಂ (ತ.ಪ). [10] ರವಿಸುತ (ಪ). [11] ಮಱುಗುವನೋ (ಕ). [12] ವ (ಕ). [13] ಪುರಪರಿಜನಂಗಳು ಹಾಸ್ಯವಾದರೆ ನಮ್ಮನಿಂದೀಗ (ಚ.ಟ.ತ.ದ.ಪ).

ಅರಸ ತಾನಿನ್ನಾವ ಪರಿ ಹೇ
ವರಿಸುವನೊ ತಾ ಮುನ್ನ ಕರ್ಣನ
ಶರಹತಿಯಲೇಕಳಿದುದಿಲ್ಲಾ ಎನುತ ಚಿಂತಿಸಿದ ॥ ೮

ನರನ ಖಾತಿಗೆ ದ್ರೌಪದಿಯ ತೊ
ತ್ತಿರುಗಳುಪಹಾಸ್ಯಕ್ಕೆ ನೃಪತಿಯ
ಮರಣಸಾದೃಶ್ಯಪ್ರಹಾರವ್ಯಥೆಯ ಕಾಣಿಕೆಗೆ ।
ಅರರೆ ಭಾಜನವಾದೆನ್ಯೆ ಹರ
ಹರ ಮಹಾದೇವಾ ಎನುತ ತುದಿ
ವೆರಳಲಾಲಿಯ ನೀರ ಮಿಡಿದಳಲಿದನು ಕಲಿ ಭೀಮ ॥ ೯

ಅರಸ ಕೇಳ್ಕೆ ಶೋಕರಸ ಸಾ
ಗರದೊಳದ್ದಿದೊ ವಡಬನೆನೆ ಕ
ಣ್ಣರಳಿದವು ಕುಡಿಮೀಸೆ ಕುಣಿದವು ಸುಯ್ಲು ಹೊಗೆ ಮಸಗೆ ।
ಕರ ನಡುಗೆ ಮೈ ಬಲಿಯೆ ಹುಬ್ಬುಗ
ಳುಬೆ ಬಿಗಿಯೆ ಕಂಗಳಲಿ ಕೆಂಗಿಡಿ
ಸುರಿಯೆ ವೀರಾವೇಶದಲಿ ಮಸಗಿದನು ಕಲಿ ಭೀಮ ॥ ೧೦

ಧರಣಿಪನ [1]ಸಂ[1]ರಕ್ಷೆಗೈಸಾ
ವಿರ ರಥವನಿಪ್ಪತ್ತು ಸಾವಿರ
ತುರಗವನು ಹದಿನಾಱು ಸಾವಿರ ಮತ್ತಗಜಘಟೆಯ ।
ದೊರೆಗಳನು ಸಹದೇವ ಸಾತ್ಯಕಿ
ವರ ನಕುಳ ಸುತಸೋಮ ಪಾಂಚಾ
ಲರ ಕುಮಾರಾನೀಕವನು ಕರೆಕರೆದು ನೇಮಿಸಿದ ॥ ೧೧

ವೈರಿ ಕರ್ಣನ ಕಾಂತೆಯರ ದೃಗು
ವಾರಿಧಾರೆಯಲೆನ್ನ ಭಾರಿಯ
ಭೂರಿ ಕೋಪಾನಳನ ಲಳಿಯನು ತಗ್ಗಿಸುವೆನೆನುತ ।
ಧಾರುಣೀಪತಿಗೆಱಗಿ ನಿಜಪರಿ
ವಾರವನು ಸುಯ್ಧಾನವರಸೆನು
ತಾರುಭಟೆಯಲಿ ಭೀಮ ಮೊಳಗಿದ[2]ನಹಿತ[2] ಮೋಹರಕೆ ॥ ೧೨

---

[1] ರಥ. [2] ನಿತ್ತ (ಕ.ಗ.ದ).

ಬೀಳ ಹೊಯ್'ಹೊಯ್' ಬಿಡೆಯದಲಿ ಹೊ
ಕ್ಕಾಳು ತೆಗೆಯಲಿ ಧರ್ಮಪುತ್ರನ
ಮೇಲುನೋಟದಲಿರಲಿ ನೋಡಲಿ ನಮ್ಮ ನಾಟಕವ ।
ಆಳ ನಿಲಿಸೋ ನಿಲಿಸೆನುತ [1]ಸಂ
ಸ್ಫಾಳಿತೋದ್ಧತ ಚಪಳ ಚಾಪ[1] ಕ
ರಾಳ ಮೌರ್ವೀನಾದ ಭೀಷಣನಾದನಾ ಭೀಮ ॥ ೧೩

ಪವನಸುತನಿಂಗಿತವ ಮನದಂ
ಘವಣೆಯನು ಮಾದ್ರೇಶ ಕಂಡನು
ರವಿಸುತನ ನೋಡಿದನು ಮುಖದಲಿ ಮುರಿದು ತೋರಿದನು ।
ಇವನ ಬಲ್ಲೈ ಭೀಮನೋ ಭೈ
ರವನೊ ಭರ್ಗನೊ ಮನುಜಕಂಠೀ
ರವನೊ ಕಾಲಾಂತಕನೊ ಕೋಳಾಹಳವಿದೇನೆಂದ ॥ ೧೪

ಉರಿಯ ಚೂಣಿಯಲುಸುರ ಹೊಗೆಯು
ಬ್ಬರಿಸುತದೆ ಕೆಂಪೇರಿದಕ್ಷಿಯ
ಲೆರಡ ಕೋಡಿಯಲೊಗುತಲದೆ ಕಿಡಿಗಳ ತುಷಾರಚಯ ।
ಸ್ಫುರದಹಂಕಾರಪ್ರತಾ[2]ಪ
ಜ್ವ[2]ರದಿ ಮೈ ಕಾಹೇರುತದೆ ನಿ
ಬ್ಬರದ ಬರವಿಂದೀತನದು ಕಲಿ ಕರ್ಣ ನೋಡೆಂದ ॥ ೧೫

ಕಾಯಲಳವೇ ಕರ್ಣ ಬರಿಯ ನ
ವಾಯಿಯಲಿ ಫಲವಿಲ್ಲ ದೇಹದ
ಬೀಯಕಿದು ಹೊತ್ತಲ್ಲ ಸಾಧಕವಿದಕೆ ಬೇರುಂಟು ।
ಸಾಯಲಡಸಿದ ಬಡತನಕ್ಕೆ ಪ
ಲಾಯನವೆ ನಿಕ್ಷೇಪವಿದೆ ಬಯ
ಲಾಯಸವು ನಮಗೇತಕೆಂದನು ಮಾದ್ರಪತಿ ನಗುತ ॥ ೧೬

ನೀ ಮರುಳಲಾ ಶಲ್ಯ ಘಡ ಸು
ತ್ರಾಮನೇ ಸಮವರ್ತಿಯೇ ಜಿತ
ಕಾಮನೇ [3]ಬಡ[3]ಭೀಮನುಱುಬೆಗೆ [4]ಖೇ[4]ಡನಾದೆಯಲ ।

---

[1] ಶರಜಾಳವನು ತನಿಗದಱು ಚಪಳ (ಕ.ಗ). [2] ಪ್ರೋತ್ಕ (ಚ.ಟ.ತ.ಬ).
[3] ಬಿಡು (ಕ). [4] ಭೇ (ಕ.ಗ).

ತಾಮಸನ ತಡೆಗಡಿದು ಭೂತ
ಸ್ತೋಮಕುಣಬಡಿಸುವೆನು ಜಯಸಂ
ಗ್ರಾಮರುದ್ರನು ಕರ್ಣನಾರೆಂದಱಿಯೆ ನೀನೆಂದ ॥ ೧೭

ಅಕಟ ಬಲುಗೈಯಹೆ ಕಣಾ ಸಾ
ಧಕನು ನಾನದಕೆನ್ನನಿಂದಿನ
ವಿಕಟ ಕೋಪಾಟೋಪ ಭೀಮನ ದಂಡಿಯದು ಬೇಱೆ ।
ತ್ರಿಕಟುಕದ ಕಷಾಯವಿದು ಬಾ
ಲಕರ ಸೊಗಸೇ ಕರ್ಣ ಹೇಳ್ ಕೌ
[1]ತು[1]ಕದ ಮಾತೇ ನಿನ್ನ ಮೇಲಾಣೆಂದನಾ ಶಲ್ಯ ॥ ೧೮

ನುಡಿನುಡಿಗೆ ಭಂಗಿಸುವೆ ನೀ ನಿ
ನ್ನಡಿಗಡಿಗೆ ತಲೆಯೊತ್ತುವೆನೊ ನಿ
ನ್ನೊಡನೆ ಬಂದರಿಯೊಡನೆ ತಲೆಯೊತ್ತುವೆನೊ ತವಕದಲಿ ।
ಪಡಿಮುಖದೊಳೌಕುವ ವಿರೋಧಿಯ
ಕಡುಹ ತಗ್ಗಿಸಿ ನಿನ್ನ ಮೆಚ್ಚಿಸಿ
ಕೊಡುವೆನಿನ್ನರೆಗಳಿಗೆ ಸೈರಿಸು ಮಾದ್ರಪತಿಯೆಂದ ॥ ೧೯

ಇತ್ತಲೀ ಮಾತಿಂಗೆ ಮುನ್ನ ವಿ
ಯತ್ತಳವನಳ್ಳಿಱಿವ ಸಿಂಧದ
ಸುತ್ತುಝಲ್ಲರಿ ಚೌರಿಗಳ ಘಲ್ಲಣೆಯ ಘಂಟೆಗಳ ।
ಹೊತ್ತ ಕೋಪದ [2]ಹೊಗೆವ ಮುಖದೌ
ಡೊತ್ತುವಧರದ[2] ವೈರಿಸೇನೆಯ
ಕುತ್ತಿ ತೇಗುವ ಮನದ ಮಾರುತಿ ಮೊಳಗಿದನು ಮುಂದೆ ॥ ೨೦

ಎಲೆಲೆ ಭೀಮನು ಶಿವಶಿವಾ ದಳ
ದುಳವ ಹಾಯ್ದನೊ ದಿಟ್ಟರಾವೆಡೆ
[3]ನಿ[3]ಲಿಸಲಾಪವರಿಲ್ಲಲಾ ಕುರುರಾಯನಾನೆಗಳು ।
ಕಳಕಳದ ಕಾಲಾಟ ರಾಯನ
ದಳಕೆ ದುರ್ಲಭವೆನುತ [4]ಮಿಗೆ[4] ಮುಂ
ಕೊಳಿಸಿ ಭೀಮನ [5]ತುಡುಕಿದರು[5] ರವಿಸುತನ ಪರಿವಾರ ॥ ೨೧

---

[1] ಳಿ (ಕ ಗ.ಚ). [2] ಹೊಗೆಮುಖದಲೌಡೊತ್ತಿದಧರದ (ನ–ಕ.ಪ).
[3] ಸ (ಟ). [4] ಮನ (ಚ.ಟ.ತ.ದ.ನ). [5] ಮುತ್ತಿದರು (ಕ).

ಕವಿದವಾನೆಗಳಟ್ಟಿ ರಾವ್ತರು
ತಿವಿದರಂಬಿನ ಸರಿಯ ಸಾರದೊ
ಳವಘಟಿಸಿದರು ರಥಿಕರುರವಣಿಸಿದರು ಸಬಳಿಗರು ।
ಸವಗ ಖಂಡಿಸಲೊದಗಿದರು ಬಿ
ಲ್ಲವರು ಕಟ್ಟಿಱಿಕಾಱರಾತನ
ಜವಗೆಡಿಸಿದರು ಕಡಲುವಡಬನ ತಡೆದು ನಿಲುವಂತೆ ॥ * ೨೨

ನುಸಿಗಳಳವಿಯು [1]ಥಟ್ಟಣೆಯ[1] ತೋ
ಱಿಸಿದರೋ [2]ಬಲುಹಾಯ್ತು[2] ರಾಯನ
ಘುಸಣಿಗಕಟ ವಿಶೋಕ ನೋಡ್ತೈ ಪೂತು ವಿಧಿಯೆನುತ ।
ಮಸಗಿ ಮೊಗೆದನು ಹೊಗುವ ಸೇನಾ
ಪ್ರಸರವನು ಕುಡಿತೆಯಲಿ ಚೆಲ್ಲಿದ
ನಸಮಬಲ[3]ನಡ[3]ಹಾಯ್ಸಿ ಕೊಂಡನು ನೆಲನನಳವಿಯಲಿ ॥ ೨೩

ಎಲವೊ ಸೂತನ ಮಗನೆ ರಾಯನ
ನಳಲಿಸಿದೆಲಾ ನಿನ್ನ ರಕುತವ
ತುಳುಕುವೆನು ಹಿಂದಿಕ್ಕಿಕೊಂಬನ ತೋಱು ತೋಱೆನುತ ।
ಬಲುಸರಿಯ ನಾರಾಚದಲಿ ಕ
ತ್ತಲಿಸೆ ದೆಸೆ ಕೈಮಾಡಿದನು ಕೈ
ಚಳಕದೆಸುಗೆಯ ಕೇಣದಳತೆಯನಱಿಯೆ ನಾನೆಂದ ॥ ೨೪

ಏನ ಹೇಳುವೆನಿತ್ತಲೀ ರವಿ
ಸೂನುವೇ ದುರ್ಬಲನೆ ಭೀಮನ
ನೂನ ಶರಸಂ[4]ಘಾತ[4]ವನು ಖಂಡಿಸಿದನಾಕ್ಷಣಕೆ ।
ದೀನನೇ ಶರನಿಕರದಲಿ [5]ಪವ
ಮಾನಜನೊ ಪಾತಾಳಿಯೋ[5] ಕಲಿ
ವೈನತೇಯನೊ ಕರ್ಣನೋ ನಾವಱಿಯೆವಿದನೆಂದ ॥ ೨೫

ಅರಸ ಕೇಳಾಶ್ಚರಿಯವನು ಚೆ
ಬ್ಬರಿಸುವನೆ ಕಲಿ ಭೀಮನುಬ್ಬಟೆ
ಯರಿಗಳಾಹವ[6]ಧೀರರಾ[6]ದರೆ ಧಾತುಗೆಡುವವನೆ ।

---

* ಈ ಪದ್ಯ (ಕ ದ) ಪ್ರತಿಗಳಲ್ಲಿಲ್ಲ. [1] ಪೌರುಷವ (ಚ.ಟ.ತ.ನ.ಪ.ಬ). [2] ಲೇಸಾಯ್ತು (ಚ.ಟ.ತ). [3] ನೊಡೆ (ಕ). [4] ಧಾನ (ಚ). [5] ಪವಮಾನತನ ಜನೊ ಪಾವಕನೊ (ಕ), ಪವಮಾನಜನೋ ಪಾತಾಳಫಣಿಯೋ ಕಲಿ (ದ), ಪವಮಾನಜನೋ ಫಣಿವಲ್ಲಭನೋ ಕಲಿ (ಪ). [6] ವಧಿಕವಾ (ಚ.ತ.ಫ.ಬ ನ).

ಶರ ಧನುವ ಹಾಯ್ಕಿದನು ಥೊಪ್ಪನೆ
ಧರೆಗೆ ಧುಮ್ಮಿಕ್ಕಿದನು ಖಡುಗವ
ತಿರುಹಿ ಬೆರಸಿದನಳವಿಯಲಿ ಕುರುಸೇನೆ ಕಳವಳಿಸೆ ॥ ೨೬

ಹೊಡೆದು ತಲೆಯನು [1]ಹಗೆಯ[1]ರಕುತವ
ಕುಡಿವೆನಲ್ಲದೊಡವನಿಪಾಲನ
ಕೆಡೆನುಡಿದ ನಾಲಗೆಯ ಕೀಳುವೆನೆನುತ ಕೋಪದಲಿ ।
ಸಿಡಿವ ಕಿಡಿಗಳ ಕೋಪಶಿಖಿಯು
ಗ್ಗಡದ ಮಾರುತಿ ಹೊಯ್ದು ಕರ್ಣನ
ಕೆಡಹಿದನು ಮುಱಿಯೊದೆದನೆದೆಯನು ಹಾಯ್ದು ಮುಂದಲೆಗೆ ॥ ೨೭

ಡಾಯ ಬಿಟ್ಟುದು ಸೇನೆ ಕೌರವ
ರಾಯನಾವೆಡೆ ದಳಕೆ ಬಲುಗೈ
ನಾಯಕರು ಕೃಪ ಗುರುಸುತರು ಕೈಗೊಟ್ಟರೇ ಹಗೆಗೆ ।
ವಾಯುಜನ ಕೈದೊಳಸಿನಲಿ ಕುರು
ರಾಯರಾಜ್ಯಶ್ರೀಯ ಮುಂದಲೆ
ಹೋಯಿತೋ ಹಾ ಎನುತ ಮಱುಗಿತು ಕೂಡೆ ಕುರುಸೇನೆ ॥ ೨೮

ಥಟ್ಟುಗೆಡಹಿದ ಕರ್ಣನನು ಕೈ
ಮುಟ್ಟದಿರು ಹೆಱಿಸಾರು ಪಾರ್ಥನು
ಕೊಟ್ಟ ಭಾಷೆಯ ಮಱೆದೆಲಾ ಕೈತಪ್ಪ ಮಾಡದಿರು ।
ಬಿಟ್ಟು ಹಿಂಗೆಲೆ ಭೀಮ ಭೀತಿಯ
ಬಿಟ್ಟು ಬೆರಸಿದೆ ಸಾಕು ಹರಿಬಕೆ
ಮುಟ್ಟಿಸಿದ ಗೆಲವಾಯ್ತು ಮರಳಿನ್ನೆಂದನಾ ಶಲ್ಯ ॥ ೨೯

ದುರು[2]ಳತನದಿಂದಣ್ಣ[2]ದೇವನ
ಹುರುಳುಗೆಡೆ ನುಡಿದನು ವಿರೋಧಿಯ
ಶರಹತಿಗೆ ಬೆಂಡಾಗನಿವನ ದುರುಕ್ತಿ ಶರಹತಿಗೆ ।
ಅರಸ ಬಳಲಿದನೇನ ಮಾಡುವೆ
ದುರುಳ ನುಡಿದನ ನಾಲಗೆಯ [3]ನಿಡು
ಸೆರೆಯ[3] ಬಿಡಿಸುವೆ ಮಾವ ಸೈರಿಸಿ[4]ಯೆಂದನಾ ಭೀಮ[4] ॥ ೩೦

---

[1] ನಿನ್ನ (ಚ.ಟ.ತ.ಪ.ಬ.ನ). [2] ಳನಿವನೆಮ್ಮಣ್ಣ (ಸ–ಕ). [3] ಮಂದಿರವ (ಚ.ಟ.ತ.ನ.ಪ). [4] ತಡೆಯಬೇಡೆಂದ (ಚ.ಟ.ತ.ಪ).

ಸಾಕು ಹೆಱತೆಗೆ ಘಾಯವಡೆದವಿ
ವೇಕಿ ಮೈ ಮಱೆದಿದ್ದ ಹೊತ್ತಿದು
ನೀ ಕುಠಾರನಲಾ ಕಿರೀಟಿಯ ಭಾ[1]ಷಿತದ್ರುಮಕೆ[1] ।
ಲೋಕಮಾನ್ಯನು ಕರ್ಣ ಕುರುಬಲ
ದಾಕೆವಾಳನು ಭಂಗವಡೆದುದೆ
ಸಾಕು ನೀ ಸಾರೆಂದು ಭೀಮನ ನೂಕಿದನು ಶಲ್ಯ ॥ ೩೧

ರಥಕೆ ಮರಳಿದನಾತನೀತನ
ವ್ಯಥೆಯನೇ[2]ನೆಂಬೆ[2]ನು ಸುಯೋಧನ
ರಥಿಗಳುಬ್ಬಟೆ ಗರ್ಭವಿಕ್ಕಿತು ನಿಮಿಷಮಾತ್ರದಲಿ ।
ರಥದೊಳಗೆ ಮಾದ್ರೇಶನೀ ಸಮು
ರಥನ ಸಂತೈಸಿದನು ಕವಳ
ಪ್ರ[3]ಥಿತ[3] ಮಂತ್ರೌಷಧಿಗಳಲಿ ಹದುಳಿಸಿದನಾ ಕರ್ಣ ॥ ೩೨

ಆರಿತದು ಬೊಬ್ಬೆಯಲಿ ದುಗುಡದ
ಭಾರದಲಿ ತಲೆಗುತ್ತಿತಿವರು
ಬ್ಬಾರದಲಿ ಘುಲ್ಲವಿಸಿತವರು ವಿಘಾತಿಯಿಂದಿವರು ।
[4]ಪೂ[4]ರವಿಸಿದುದು ಪುಳಕದಲಿ ದೃಗು
ವಾರಿ ಪೂರದಲಿವರಖಿಳ ಪರಿ
ವಾರವಿದ್ದುದು ಕೇಳು ಜನಮೇಜಯ ಮಹೀಪಾಲ ॥ ೩೩

ಹನ್ನೆರಡನೆಯ ಸಂಧಿ ಮುಗಿದುದು.

---

[1] ಷೆಯಧ್ರುವವೆ (ಗ), ಶಸ್ತ್ರಕಾಹಾರ (ದ). [2] ವೇಳುವೆ (ಚ.ಟ.ಪ.ಬ).
[3] ತತಿ (ಕ.ಗ.ದ). [4] ಹಾ (ಕ).

ಹದಿಮೂರನೆಯ ಸಂಧಿ

ಸೂಚನೆ ॥ ಮಡಿದರಾಹವದೊಳಗೆ ಕೌರವ
ನೊಡನೆ ಹುಟ್ಟಿದರನಿಲಸುತನಿಂ
ದಡಿಗಡಿಗೆ ಹಳಚಿದನು ಯಮನಂದನನನಾ ಕರ್ಣ ॥

ಕೇಳು ಧೃತರಾಷ್ಟ್ರಾವನಿಪ ನಿ
ನ್ನಾಳನಗ್ಗಳಿಕೆಯ ವಿಘಾತಿ[1]ಯು[1]
ಗಾಳಿ ತಾಗಿತು ತಿರುಗಿದುದು ಬಳಿಕೀ ಸಮಸ್ತಬಲ ।
ಕೋಲು ತಪ್ಪಿದ ಫಣಿಯವೊಲು ಲಯ
ಕಾಲಕೊದಱುವ ಸಿಡಿಲವೊಲು ಹೀ
ಹಾಳಿಸುತ ತಮತಮಗೆ ಬಯ್ದುದು ಕೂಡೆ ಪರಿವಾರ ॥ ೧

ರಣದೊ[2]ಳೊಪ್ಪಿಸಿಕೊಟ್ಟು[2] ಕರ್ಣನ
ಹಣವ ಹೊಳ್ಳಿಸಿ ಮಱೆದೆವೇ ಮ
ನ್ನಣೆಯ ಮೋಹವ ತೊಱೆದೆವೇ ಕರ್ಪುರದ ವೀಳೆಯವ ।
ಗುಣಪಸಾಯದ ಕಾಣಿಕೆಯ ಹರಿ
ಯಣದ ಹಂತಿಯ ದಾಯದೂಟಕೆ
ಋಣಿಗಳಾದೆವೆ ಶಿವಶಿವಾ [3]ಎಂ[ದೊ]ಳ[3]ಱಿತಖಿಳ ಬಲ ॥ ೨

ಮೀಸೆಯೇಕಿವ ಸುಡಲಿ ಸುಭಟರ
ವೇಷವೇಕಿವು [4]ತಮ್ಮ[4] ವಧುಗಳು
ಹೇಸಿ ನಮ್ಮನು ಬಿಸುಟು ಹೋಗಳೆ ಚಂಡಿಕಾದೇವಿ ।
ಭಾಷೆ ಬಾಯಲಿ ಕೈದು ಕೈಯಲಿ
ವಾಸಿಯನು ಬಿಸುಟಕಟ ಜೀವದ
ಲಾಸೆ ಮಾಡಿದೆವೆನುತ ಮಱುಗಿತು ಕೂಡೆ ಪರಿವಾರ ॥ ೩

ಬಯ್ವ ಹೆಂಡಿರ ಚಿಂತೆಯಿಲ್ಲದೆ
ಹೊಯ್ವ ಕೀರ್ತಿಯ ಹಂಬಲಿಲ್ಲದೆ
ಒಯ್ವ ನರಕದ ನೆನಹ[5]ದಿ[5]ಲ್ಲದೆ ಪತಿಯ ಸಮು[6]ಯ[6]ದಲಿ ।

[1] ಗೆ (ಪ.ನ). [2] ಳಿಂದೇನಾಯ್ತು (ಕ). [3] ದ (ಸ). [4] ಧರ್ಮ (ಕ.ಗ.ಚ.ಟ). [5] ವಿ (ಕ.ಗ.ಟ.ದ). [6] ರ (ತ.ದ.ನ).

[1]ಕಾ[1]ಯ್ವರಾವಲ್ಲೆಂದು ಕೆಲದಲಿ
ಬಯ್ವರಿಗೆ ಮೈಗೊಟ್ಟು ಬದುಕುವ
ದೈವದೂರರು ನಾವೆನುತ ಮಱುಗಿತ್ತು ಪರಿವಾರ ॥ ೪

ನುಡಿಯ ಭಂಡರು ಕೆಲರು ಸಿಂಧದ
ಗುಡಿಯ ಭಂಡರು ಕೆಲರು ಹಾಹೆಯ
ತೊಡರ ಭಂಡರು ಕೆಲರು [2]ಕೆಲರು ಕುಲಕ್ರಮಾಗತದ[2] ।
ಗಡಬಡೆಯ ಭಂಡರು ವಿಪತ್ತಿನೊ
ಳೊಡೆಯನಿರೆ ಕೈದುಗಳ ಹೊಱೆತಲೆ
ಯೊಡನೆ ಬಿಟ್ಟಿಯ ಭಂಡರಾವೆಂದುದು ಭಟವ್ರಾತ ॥ ೫

ಮಿಾಸೆ ಸೀದವು ಭಟರ ಸುಯ್ಲಿನ
ಲಾಸೆ ಬೀತುದು ದೇಹದಲಿ ಬಲು
ವಾಸಿಯಲಿ ಮನ ಮುಳುಗಿತನಿಬರಿಗೇಕಮುಖವಾಗಿ ।
ಬೀಸಿದರು ಚೌರಿಗಳ ಬಲವಾ
ರಾಶಿ ಮಸಗಿತು ರಿಪುಗಳಸುವಿನ
ಮಿಾಸಲನು ತುಡುಕಿದುದು [3]ಮನ ಕೌರವ ಮಹಾರಥರ[3] ॥ ೬

ಕುದುರೆ ಕುದುರೆಯ ಮುಂಚಿದವು ಕರಿ
ಮದಕರಿಯ ಹಿಂದಿಕ್ಕಿದವು ನೂ
ಕಿದವು ರಥ ರಥದಿಂದ ಮುನ್ನ ಮಹಾರಥಾದಿಗಳು ।
ಇದಿರೊಳೊಬ್ಬನನೊಬ್ಬನೊದಗುವ
ಕದನ ಭರದ ಪದಾತಿ ಪೂರಾ
ಯದಲಿ ಕವಿದುದು ಜಡಿವ ಬಹುವಿಧ ವಾದ್ಯ ರಭಸದಲಿ ॥ ೭

ಪೂತು ಮಝು ದಳಪತಿಯ ಹರಿಬ[4]ವ
ನಾ[4]ತುದೇ ಕುರುಸೇನೆ ಸುಭಟ
ವ್ರಾತವಳವಿಗೆ ಬರಲಿ ಬರಲಿ ವಿಶೋಕ ನೋಡೆನುತ ।
ಹೂತ ಸಂಪಗೆವನವನಳಿಸಂ
ಘಾತ ಮುತ್ತಿದಡೇನೆನುತ ನಿ
ರ್ಭೀತನಿದ್ದನು ಭೀಮ ಸುಮ್ಮಾನದ ಸಘಾಡದಲಿ ॥ ೮

---

[1] ಹೊ (ಕ.ಗ). [2] ಬಿರುದಿನ ದೂಱುಗಹಳೆಗಳ (ಕ). [3] ಕೌರವ ನೃಪನ ಪರಿವಾರ (ಟ.ಚ.ತ.ಪ.ನ.ಬ). [4] ದೊಳಾ (ಕ.ಗ.ದ).

ಕವಿದುದಿದು ಗಱಿಗಟ್ಟಿ ಕೌರವ
ನಿವಹ ಮೋಡಾಮೋಡಿಯಲಿ ರಣ
ದವಕಿ ಕರ್ಣದ್ರೋಹಿಯಾವೆಡೆ ತೋಱು ತೋಱೆನುತ ।
ತಿವಿವ ಬಲ್ಲೆಹ[1]ದಿ[1]ಡುವ ಚಕ್ರದ
ಕವಿವ ಬಾಣದ ಹೊಯ್ಲು ಖಡ್ಗದ
ವಿವಿಧಬಲ ಬಿಡದೌಕಿ ಮುತ್ತಿತು ಪವನನಂದನನ ॥ ೯

ಸಿಕ್ಕಿದನು ರಿಪು ಸ್ವಾಮಿದ್ರೋಹನು
ಚುಕ್ಕಿ[2]ಯೋ ತ[2]ಡೆ ಹೋಗಬಿಡದಿರಿ
ಹೊಕ್ಕುಳಲಿ ಮಗವುಂಟೆ ಹಣೆಯಲಿ ನೋಟವೇ ಹಗೆಗೆ ।
ಹೊಕ್ಕ ಹೊಯ್ ಹೊಯ್ ನೆತ್ತರೊಬ್ಬರಿ
ಗೊಕ್ಕುಡಿತೆಯೇ ಸಾಕೆನುತ ಬಲ
ಮುಕ್ಕುಱುಕಿತನಿಲಜನ ಕಾಣೆನು ನಿಮಿಷಮಾತ್ರದಲಿ ॥ ೧೦

ಹರಿಬದೋಲೆಯಕಾಱರೋ ಮು
ಕ್ಕುಱುಕಿದರೊ ಪವನಜನು ಸಿಕ್ಕಿದ
ದೊರೆಯ ಬಿಡಿಸೋ ನೂಕೆನುತ ಪಾಂಚಾಲ ಕೈಕೆಯರು ।
ವರ ನಕುಳ ಸಹದೇವ ಸಾತ್ಯಕಿ
ತುರುಕ [3]ಬರ್ಬರ ಭೋಟ ಮಾಗಧ
ವರು[3] ಪುಳಿಂದಾದಿಗಳು ಕವಿದುದು ನೃಪನ [4]ಸನ್ನೆಯಲಿ[4] ॥ ೧೧

ಸರಕಟಿಸಿ ರಿಪುರಾಯ ದಳ ಸಂ
ವರಿಸಿಕೊಂಡುದು ಸಿಕ್ಕಿದಹಿತನ
ಸೆಱೆಯ ಬಿಡದಿರಿ ಬಿಡದಿರಂಜದಿರಂಜದಿರಿ ಎನುತ ।
ಗುರುಜ ಕೃಪ ಕೃತವರ್ಮ ಯವನೇ
ಶ್ವರ ಕಳಿಂಗ ಕರೂಷ ಕೌರವ
ರರಸ ಮೊದಲಾದಖಿಳಬಲ ಜೋಡಿಸಿತು ಝಡಿತೆಯಲಿ ॥ ೧೨

ಏನ ಹೇಳುವೆನರಸ ಕರ್ಣನ
ಹಾನಿ ಹರಿಬದ ಬವರವನು ಪವ
ಮಾನನಂದನ ನಿಮಿಷದಲಿ ಮುಸುಕಿದನು ಬಾಣದಲಿ ।

---

[1] ವಿ (ಕ.ಗ.ಚ,ತ), ನಿ (ದ). [2] ಯಾವೆ (ಕ.ಗ.ನ). [3] ಖರ್ಪರ ಚೈದ್ಯ ಮಾಗಧ ವರ (ಕ.ಗ.ದ.ನ). [4] ನೇಮದಲಿ (ಗ.ಟ.ಚ.ತ.ದ.ಬ.ನ).

ದಾನವರ ಥಟ್ಟಣೆಯ ಕೀಲಣ
ದಾ ನಗರಿಯನು [1]ನೆಗ್ಗಿದಂ[1]ತಿರ
ಲೀ ನಿಘಾತದ ಸೇನೆ ಮುಱಿದುದು ಭಟನ ಭಾರಣೆಗೆ ‖ ೧೩

ಸಿಲುಕುವುವು ಮೃಗಪಕ್ಷಿ ಹೂಡಿದ
ಬಲೆಗಳಲಿ ಕಾಡಾನೆ ಬೀಸಿದ
ಬಲೆಯ ಕೊಂಬುದೆ ನಿನ್ನ ದಳ ಥಟ್ಟೈಸಿ ಮುತ್ತಿದರೆ ।
ಅಳುಕುವನೆ ಕಲಿ ಭೀಮನೆಡದಲಿ
ಕಲಕಿದನು ಬಲವಂಕದಲಿ [2]ಕೈ
ವಳಸಿ ಕೊಂದನು ವರ[2] ಪುರೋಭಾಗವ ವಿಘಾಡಿಸಿದ ‖ ೧೪

ಆಳ ಮೇಳೆಯ ಮುಱಿದುದೀ [3]ಸಾ[3]
ಯಾಳು ಸತ್ತುದು ಹಲವು ಪಡಿಬಲ
ದಾಳು ಕೂಡದ ಮುನ್ನ ಕೊಂದನು ಕೋಟಿ ಸಂಖ್ಯೆಗಳ ।
ಮೇಲೆ ಮೇಲೊಡಗವಿವ ಸಮರಥ
ಜಾಲವನು ಮುಱಿಯೆಚ್ಚು ನಿಮಿಷಕೆ
ಧೂಳಿಪಟ ಮಾಡಿದನು ಕರ್ಣನ ಮನ್ನಣೆಯ ಭಟರ ‖ ೧೫

ಮತ್ತೆ ಕವಿದುದು ಮೇಲೆ ಪಡಿಬಲ
ವೊತ್ತಿ ಹೊಕ್ಕುದು ಹೆಣದ ಬೆಟ್ಟವ
ಹತ್ತಿ [4]ಹುಡಿಹುಡಿಮಾಡಿ ಹಿಡಿದರು[4] ರಥದ ಕುದುರೆಗಳ ।
ಕುತ್ತಿದರು ಸಾರಥಿಯನಾತನ
ತೆತ್ತಿಸಿದರಿಟ್ಟಿಯಲಿ ಭೀಮನ
ಮುತ್ತಿ ಕೈಮಾಡಿದರು ರವಿಸುತ ಸಾಕಿದತಿಬಳರು ‖ ೧೬

ಇಳಿದು ರಥವನು ಗದೆಯ ಕೊಂಡ
ಪ್ಪಳಿಸಿದನು ಹೊಱಕೈಯಲರೆದಿ
ಟ್ಟಳಿಸಿದರನೆಡಗಾಲಲೊದೆದನು ಹೊಯ್ದು ಮುಡುಹಿನಲಿ ।
ಕಲಕಿದನು ಕೌರವಮಹಾಬಲ
ಜಲಧಿಯನು ಸರ್ವಾಂಗಶೋಣಿತ
ಜಲದಲೆಸೆದನು ನನೆದ ಜಾಜಿನ ಗಿರಿಯವೊಲು ಭೀಮ ‖ ೧೭

---

[1] ನುಂಗಿದಂ (ಕ.ಗ.ಚ.ಟ.ದ) [2] ಕುಪ್ಪಳಿಸಿದನು ಬವರದ (ಕ).
[3] ಸಂ (ಗ), [4] ಹುಡಿ ಮಾಡಿದರು ಹೂಡಿದ (ಕ).

ಸವಱಿದನು ರವಿಸುತನ ಪರಿವಾ
ರವನು ಮಗುಳುಬ್ಬೆದ್ದ ಕೌರವ
ನಿವಹದಲಿ ಕಾದಿದನು ದುರ್ಯೋಧನ ಸಹೋದರರ ।
ತಿವಿದು ನಾಲ್ವರ ಕೊಂದನುಬ್ಬರಿ
ಸುಪ್ಪರ ಗರ್ವವ ಮುಱಿದು ಪ್ರಳಯದ
ಭವನ ರೌದ್ರದವೋಲು ಭುಲ್ಲಯಿಸಿದನು ಕಲಿ ಭೀಮ ॥ * ೧೮

ಶಿವಶಿವಾ ಕೌರವನ ತಮ್ಮದಿ
ರವಗಡಿಸಿದರು [1]ನಂದೋಪನಂದರು[1]
ಜವಗೆ ಜೇವಣಿಯಾದರೇ ಕಲಿ ಭೀಮನಿದಿರಿನಲಿ ।
ತಿವಿವರಿನ್ನಾರೆನುತ ಗುರುಸಂ
ಭವ ಕೃಪಾದಿಗಳೊತ್ತಿ ನಡೆತಹ
ರವವ ಕೇ[2]ಳಿದು[2] ಕುದಿದನವಮಾನದಲಿ ಕಲಿ ಕರ್ಣ ॥ ೧೯

ಪೂತು ದೈವವೆ ಭೀಮಸೇನನ
ಘಾತಿಯಲಿ ಸೊಪ್ಪಾದೆನ್ಯೆ ಸುಡ
ಲೇತಕೀ ಧನುವೇತಕೀ ದಿವ್ಯಾಸ್ತ್ರ ನಿಕರಗಳು ।
ಜಾತಿ ನಾನೆಂದೆನ್ನನಗ್ಗಿಸಿ
ಭೂತಳಾಧಿಪ ಸಾಕಿದನು ತಾ
ನೇತಱಿಂದುಪಕಾರಿ ಎಂದನು ಸುಯ್ದು ಕಲಿ ಕರ್ಣ ॥ ೨೦

ಎಲೆ ಮರುಳೆ ರಾಧೇಯ ಘಡ ಮನ
ವಿಳುಹದಿರು ತಪ್ಪೇನು ಸೋಲವು
ಗೆಲವು ದೈವಾಧೀನ ನಿನ್ನಾಳ್ತನಕೆ ಕುಂದೇನು ।
ಹಲಬರಮರಾಸುರರೊಳಗೆ ಹೆ
ಬ್ಬಲವೆ ದುರ್ಬಲ[3]ವಾಯ್ತು[3] ನೀ ಮನ
ವಳುಕದಿರು ಹಿಡಿ ಧನುವನನುವಾಗೆಂದನಾ ಶಲ್ಯ ॥ ೨೧

ಖಾತಿ ಮೊಳೆತುದು ಮತ್ತೆ ಬಲಸಂ
ಘಾತಕಭಯುವನಿತ್ತು ಬಾಣ
ವ್ರಾತವನು ಹೊದೆಗೆದಱಿ ಹೊಸ ಹೊಗರೆದ್ದನಡಿಗಡಿಗೆ ।

---

* ಈ ಪದ್ಯ(ದ) ಪ್ರತಿಯಲ್ಲಿಲ್ಲ. [1] ಸಾತೋಪಸಾಂದರು (ಕ). [2] ಳುತ (ಸ-ತ). [3] ವಹುದು (ಚ.ತ.ಪ.ಬ).

ಭೂತನಾಥನ ಮಱೆಯ ಹೊಗಲಿ ಮ
ಹೀತಳೇಶನ ಹಿಡಿವೆನೆನುತ ವಿ
ಧೂತರಿಪುಬಲ ರಥವ ಬಿಟ್ಟನು ಧರ್ಮಜನ ಹೊರೆಗೆ ॥ ೨೨

ಕಾಲಯಮನೋ ಕರ್ಣನೋ ಭೂ
ಪಾಲಕನ ಬೆಂಬತ್ತಿದನು ಪಾಂ
ಚಾಲೆಯೋಲೆಯ ಕಾವರಿಲ್ಲಾ ಎನುತ ಬಲನೊದಱೆ ।
ಕೇಳಿದನು ಕಳವಳವನೀ ರಿಪು
ಜಾಲವನು ಜಱೆದಡ್ಡ[1]ಹಾಯ್ದನು
ಗಾಳಿಗುದಿಸಿದ ವೀರನದ್ಭುತ[1]ಸಿಂಹನಾದದಲಿ ॥ ೨೩

ಮತ್ತೆ ಕರ್ಣನ ಭೀಮನಾಹವ
ಹೊ[2]ತ್ತಿದುದು[2] ಹಿಂದಾದ ಹೆಕ್ಕಳ
ಹತ್ತು ಸಾವಿರ ಹಡೆಯದೇ ಘಡ ನೂಕು ನೂಕೆನುತ ।
ಮತ್ತೆ ಗಜಘಟೆಯಾಱು ಸಾವಿರ
ಮುತ್ತಿದವು ಸೌಬಲನ ಥಟ್ಟಿನೊ
ಳೊತ್ತಿಬಿಟ್ಟವು ನಾಲ್ಕು ಸಾವಿರ ಕುದುರೆ ರಥಸಹಿತ ॥ ೨೪

ಸಂದಣಿಸಿ ದಳ ನೂಕಿಕೊಂಡೈ
ತಂದುದಿದು ರವಿಸುತನ ತೊಲಗಿಸಿ
ಮುಂದೆ ಮೋಹರದೆಗೆದು ಮೂದಲಿಸಿತು ಮರುತ್ಸುತನ ।
ಬಂದುದೇ ಕರ್ಣಂಗೆ ಪಡಿಬಲ
ತಂದುದೇ ನಮಗೊಸಗೆಯನು ಲೇ
ಸೆಂದು ಸುಭಟರದೇವ ಸುಮ್ಮಾನದಲಿ [3]ಲಾಗಿಸಿದ[3] ॥ ೨೫

ದಳದೊಳಗೆ ದಳವುಳಿಸಿದನು
ಕೆಲಬಲನನೆಚ್ಚನು ಕೇಣವಿಲ್ಲವೆ
ನಿಲುಕಿದರಿಗಳು ಚಿಗಿದರಮರೀಜನದ ತೋಳಿನಲಿ ।
ತಲೆಗಳೊಟ್ಟಿಲ ತೋಳ ಕಡಿಗಳ
ತಳಿದ ಖಂಡದ ಕುಣಿವ ಮುಂಡದ
ಸುಳಿ[4]ಯು[4] ರಕುತದ ಕಡಲ ರೌಕುಳವಾಯ್ತು ನಿಮಿಷದಲಿ ॥ ೨೬

---

1 ಯುದ್ಧವುಡಾಳದಲಿ ವಾಯುಜನು ತಡೆದನು (ಟ.ತ.ನ.ಪ.ಬ).

2 ತ್ತು ತದೆ (ತ.ದ). 3 ಬೊಬ್ಬಿಱಿದ (ದ). 4 ವ (ಟ.ತ.ದ).

ಬಿಟ್ಟ ಸೂರಿಯೊಳೊಗ್ಗು ಮುಱಿಯ[1]ದೆ
ಬಿ[1]ಟ್ಟ ಕುದುರೆಯ ದಳವ ಕೊಂದನು
ಬೆಟ್ಟವನು ಬಲವೈರಿ ತಱಿವವೊಲಿಭದ ಮೋಹರವ ।
ಥಟ್ಟುಗೆಡಹಿದನುರವಣಿಸಿ ಸಾ
ಲಿಟ್ಟ ರಥವಾಜಿಗಳ ನೆಱೆ ಹುಡಿ
ಗುಟ್ಟಿದನು ಕಾಲಾಳ [2]ಘಾಸಿಯ[2]ನಱಿಯೆ ನಾನೆಂದ ॥ ೨೭

ಮುಱಿಯೆ ಪಡಿಬಲವಾ[3]ಕೆ[3]ಯಲಿ ಬಿಡೆ
ಜಱೆದು ಬಿಟ್ಟನು ರಥವ ಭೀಮನ
ಬಿಱುಬ ಕೊಳ್ಳದೆ ನೂಕಿದನು ಧರ್ಮಜನ ಸಮ್ಮುಖಕೆ ।
ಇಱಿತಕಂಜದಿರಂಜದಿರು [4]ಕೈ[4]
ಮಱೆಯದಿರು [5]ಕಲಿಯಾಗೆ[5]ನುತ ಬೊ
ಬ್ಬಿಱಿದು ಧಾಳಾಧೂಳಿಯಲಿ ತಾಗಿದನು ಕಲಿ ಕರ್ಣ ॥ ೨೮

ಎಚ್ಚನರಸನ ಭುಜವ ಕೆಲಸಾ
ರ್ದೆಚ್ಚನಾತನ ಸಾರಥಿಯ ರಥ
ದಚ್ಚನಾತನ ಹಯವನವನೀಶ್ತಿಯ ಟೆಕ್ಕೆಯವ ।
ಎಚ್ಚು ಮೂದಲಿಸಿದನು ಪುನರಪಿ
ಯೆಚ್ಚು ಭಂಗಿಸಿ ನೃಪನ ಮರ್ಮವ
ಚುಚ್ಚಿ ನುಡಿದನು ಘಾಸಿಮಾಡಿದನಾ ನೃಪಾಲಕನ ॥ ೨೯

ಚೆಲ್ಲಿತವನೀಪತಿಯ ಮೋಹರ
ವೆಲ್ಲ ನೆಱೆ ನುಗ್ಗಾಯ್ತು ರಾಯನ
ಘಲ್ಲಿಸಿದನೇಳೆಂಟು ಬಾಣದಲೀತನಡಿಗಡಿಗೆ ।
ಅಲ್ಲಿಯದುಭುತರಣವನಪ್ರತಿ
ಮಲ್ಲ ಮಾರುತಿ ಕೇಳಿದನು ಮಗು
ಳಲ್ಲಿಯೇ ಮೊಳಗಿದನು ನಿಮಿಷಕೆ ಕರ್ಣನಿದಿರಿನಲಿ ॥ ೩೦

ಅಳಲಿಸಿದನೇ ಧರ್ಮಪುತ್ರನ
[6]ಬಳಿಚಿ[6] ಬಿಟ್ಟನು ನಾಯ ಕೊಲ್ಲದೆ
ಕಳುಹಿದರೆ ಬೆಂಬಿಡನಲಾ ಮಱುಕೊಳಿಸಿ ಮಱುಕೊಳಿಸಿ ।

---

[1] ದದಿ (ದ). [2] ನಷ್ಟವ (ಚ.ತ.ದ.ಪ.ಬ). [3] ಚೆ (ತ.ನ.ಪ).
[4] ಕೈಮಾಡೆ (ಟ.ಚ.ತ.ನ.ಪ.ಬ). [5] ವ್ಯೊ (ಟ.ತ.ಪ). [6] ನುಳುಹಿ (ಕ.ಗ).

ತಲೆ ಕೊರಳ ಸಂಪ್ರತಿಗೆ ಭೇದವ
ಬಳಸಿದರೆ ಸಾಕ್ಕೈಸಲೇ ಎನು
ತುಲಿದು ಕಣೆಗಳ ಕೆದಱ ಕರ್ಣನ ತಱುಬಿದನು ಭೀಮ ॥ ೩೧

ಭೀಮಸೇನನ ದಳಪತಿಯು ಸಂ
ಗ್ರಾಮ ಮಸೆದುದು ಮತ್ತೆ ಕೈಕೊಳ
ಲೀ ಮಹಾರಥರೆನುತ ಕೈಬೀಸಿದನು ಕುರುರಾಯ ।
ಸೋಮದತ್ತನ ಸೂನು ಕೃಪನು
ದ್ದಾಮ ಶಕುನಿ ಸುಯೋಧನಾನುಜ
ನಾ ಮಹಾಹವಕೊದಗಿದರು ಕೃತವರ್ಮ ಗುರುಸುತರು ॥ ೩೨

ಅಖಿಳ ಬಲಭಾರಣೆಯಲೊಂದೇ
ಮುಖದಲೊಡ್ಡಿತು ಪವನಜನ ಸಂ
ಮುಖದೊಳನಿಬರು ಕೆಣಕಿದರು ಕಲ್ಪಾಂತಭೈರವನ ।
ಸುಖಿಗಳಕಟಾ ನೀವು ಸಮರೋ
ನ್ಮುಖರಹರೆ ಕರ್ಣಂಗೆ ಸಾವಿನ
ಸಖಿಗಳೇ ಲೇಸೆನುತ ಕೈಕೊಂಡೆಚ್ಚನಾ ಭೀಮ ॥ ೩೩

ಗುರುಸುತನನೈವತ್ತು ಬಾಣದ
ಲರಸನನುಜರ ಕೃಪನ ಕೃತ
ವರ್ಮಕನ ಮೂನೂಱಂಬಿನಲಿ ವೃಷಸೇನ ಸೌಬಲರ ।
ಸರಳು ಮೂವತ್ತಱಲಿ ಪುನರಪಿ
ಗುರುಸುತಾದಿ ಮಹಾರಥರನೆರ
ಡೆರಡಱಲಿ ಮುಱಿಯೆಚ್ಚು ವಿಮುಖರ ಮಾಡಿದನು ಭೀಮ ॥ ೩೪

ಮತ್ತೆ ಜೋಡಿಸಿ ಕೌರವೇಂದ್ರನ
ನೊತ್ತಲಿಕ್ಕಿ ಮಹಾರಥರು ರಿಪು
ಮತ್ತದಂತಿಯ ಕೆಣಕಿದರು ಕೆದಱಿದರು ಮಾರ್ಗಣವ ।
ಎತ್ತಲವನೀಪತಿಯ ಮೋಹರ
ವತ್ತ ಮೆಲ್ಲನೆ ರಥವ ಬಿಟ್ಟನು
ಮತ್ತೆ ಮೂದಲಿಸಿದನು ಯಮಸೂನುವನು ಕಲಿ ಕರ್ಣ ॥ ೩೫

ದ್ರೋಣ ಬರಸಿದ ಭಾಷೆಯೊಂದೇ
ಕ್ಷೋಣಿಪತಿ ಬಗೆಯದಿರು ತನ್ನನು
ವಾಣಿಯದ ವಿವರದಲಿ ಸಲಹನು ಕೌರವರಾಯ ॥

ಪ್ರಾಣದಾಸೆಯು ಮಱೆದು ತನ್ನೊಳು
ಕೇಣವಿಲ್ಲದೆ ಕಾದೆನುತ ನಿ
ತ್ರಾಣನನು ನಿಬ್ಬರದ ನುಡಿಗಳಲಿಱಿದನಾ ಕರ್ಣ ॥ ೩೬

ಬಿಡನು ರಾಯನ ಬೆನ್ನನೀತನ
ಕೆಡಹಿ ರಕುತವ ಕುಡಿಯೆನುತ ಬಲ
ನೆಡನೊಳಿಟ್ಟಣಿಸಿದರು ಸಾತ್ಯಕಿ ನಕುಳ ಸಹದೇವ ।
ತುಡುಕಿದರು ಪಾಂಚಾಲ ಮತ್ಸ್ಯರ
ಗಡಣ ಕೈಕೆಯ ಪಂಚಪಾಂಡವ
ರಡಸಿದರು ಹೊದಿಸಿದರು ಕಣೆಯಲಿ ರವಿಸುತನ ರಥವ ॥ ೩೭

ಇನಿಬರೊಂದೇ ಸೂಠಿಯಲಿ ಮುಂ
ಮೊನೆಯ [1]ಬೋೞೆಯು[1] ಸುರಿದರಡಿಗಡಿ
ಗಿನಿಬರಂಬನು ಮುಱಿದು ತಱಿದನು ಸೂತವಾಜಿಗಳ ।
ತನತನಗೆ ಹೊಸರಥದೊಳೊಂದೊ
ಗ್ಗಿನಲಿ ಕವಿದೆಚ್ಚರು ಮಹಾಹವ
ವೆನಗೆ ಬಣ್ಣಿಸಲರಿದು ಧರಣೀಪಾಲ ಕೇಳೆಂದ ॥ ೩೮

ಭಟರು ಮುತ್ತಿದರಿನಸುತನ ಲಟ
ಕಟಿಸಲೆಚ್ಚರು ಶಿವಶಿವಾ ನಿ
ಚ್ಚಟದ ನಿಬ್ಬರದಂಘವಣೆ ಮಝು ಪೂತು ಲೇಸೆನುತ ।
ನಿಟಿಲನೇತ್ರನ ನಯನಶಿಖಿಯು
ಬ್ಬಟೆಗೆ ಸಮ[2]ಜೋಡಿಸಿತು[2] ಕರ್ಣನ
ಚಟುಳವಿಕ್ರಮಪವನಪರಿಗತ ಬಾಣಶಿಖಿನಿಕರ ॥ ೩೯

ನಕುಳನನು ನೋಯಿಸಿದ ಸಹದೇ
ವಕನ ಘಾಯಂಬಡಿಸಿದನು ಸಾ
ತ್ಯಕಿಯು [3]ಮುಸೆ[3]ಗಾಣಿಸಿದನಾ ಪಾಂಚಾಲ ಕೈಕೆಯರ ।
ವಿಕಳಗೊಳಿಸಿದನಾ ಮಹಾರಥ
ನಿಕರ ಸ್ಥೈರಿಸಿ ಮತ್ತೆ ಮೇಳಾ
ಪಕದಲಂಘೈಸಿದರು ತಡೆದರು ಭಾನುನಂದನನ ॥ ೪೦

---

[1] ಕಣೆಗಳ (ಚ.ಟ.ತ.ಪ.ಬ). [2] ಗೊಳಿಸಿತ್ತು (ಚ.ಟ.ತ.ಪ.ಬ).
[3] ಮ್ಯೆ (ತ.ನ.ಬ).

ಹೇಳಲಱಿಯೆನು ನಿನ್ನವನ ಕ
ಟ್ಟಾಳುತನವನು ದೇವದೈತ್ಯರ
ಕಾಳೆಗದಲಿವನಂತೆ ಬಲ್ಲಿದರಿಲ್ಲ ಬಿಲ್ಲಿನಲಿ ।
ಆಳ ಮುಱಿದನು ಹೂಣೆ ಹೊಗುವ
ಬ್ಬಾಳುಗಳ ಬಲುದೇಹದಂಬಿನ
ಕೀಲಣದ ಕಾಳಾಸದಿಱಿತವ ಮೆಱೆದನಾ ಕರ್ಣ ॥ ೪೧

ಸರಳ ಹತಿಯಲಿ ನಕುಲ ಸಾತ್ಯಕಿ
ಬಿರುದ ಸಹದೇವಾದಿ ವೀರರು
ಪಿರಿದು ನೊಂದರು ಮತ್ತೆ ತಱುಬಿದನವನಿಪಾಲಕನ ।
ಅರಸ ಹಿಡಿಹಿಡಿ ಧನುವ[1]ನಿನ್ನೆರ
ಡರಸನಾನದು[1] ಧರಣಿಯೊಬ್ಬನ
ಶಿರದ ಬರಹವ ತೊಡೆವೆ[2]ನಿದೆಯೆಂದೆನುತ ತೆಗೆದೆಚ್ಚ[2] ॥ ೪೨

ಅಕಟಕಟ ರಾಧೇಯ ಕೇಳೀ
ನಕುಳನೀ ಸಹದೇವನೀ ಸಾ
ತ್ಯಕಿ ನರೇಶ್ವರರೆನಿಸುವೀ ಕುಂತೀಕುಮಾರಕರು ।
ಅಕುಟಿಲರು ನಯಕೋವಿದರು ಧಾ
ರ್ಮಿಕ[3]ರ[3] ಕೊಲಬೇಡಿವರನತಿಬಾ
ಧಕರು ಭೀಮಾರ್ಜುನರ ಸಂಹರಿಸೆಂದನಾ ಶಲ್ಯ ॥ ೪೩

ಮುಳಿದು ಕಬ್ಬಿನ ತೋಟದಲಿ ನರಿ
ಹುಲಿ[4]ಯುವೋಲ[4] ಗರ್ಜಿಸಿತು ಗಡ ಹೆ
ಕ್ಕಳದ ಹೇರಾಳದಲಿ ಹೆಣಗಿದೆ ಬಾಲವೃದ್ಧರಲಿ ।
ಬಲುಹು ನಿನಗುಂಟಾದಡಿತ್ತಲು
ಫಲುಗುಣನ ಕೂಡಾಡು ನಡೆ ಮಱು
ವಲಗೆಯನು ಭೀಮನಲಿ ಬೇ[5]ಡಿನ್ನೆಂ[5]ದನಾ ಶಲ್ಯ ॥ ೪೪

ಎನಲು ಕಿಡಿಕಿಡಿವೋಗಿ ಭೀಮಾ
ರ್ಜುನರ ತೋಱಾದರೆ ಎನುತ ನಿಜ
ಧನುವ ಮಿಡಿದಬ್ಬರಿಸಲಿತ್ತಲು ರಾಯದಳದೊಳಗೆ ।

---

[1] ನಿನ್ನೆರಡರಸರಾಗದು (ತ), ನಿನ್ನೆರಡರಸರಾದುದು (ದ). [2] ನಿಂದೆನು ತೆಚ್ಚನಾ ಕರ್ಣ (ಖ.ತ). [3] ರು (ಖ.ತ). [4] ಯೊಡನೆ (ಕ), ಯುವೊಲು (ತ). [5] ಡುವುದೆಂ (ಸ-ಕ.ಗ).

ಅನಿಲಜನ ಕಾಲಾಟ ಕದಳೀ
ವನದ ಕಾಡಾನೆಯ ಮೃಗಾಳಿಯ
ವನಚರರ ದೆಖ್ಖಾಳದಬ್ಬರ [1]ಕಾಣ[1]ಲಾಯ್ತೆಂದ ॥ ೪೫

[2]ಮಂಡಳಿಸಿ[2] ಬಲಜಲಧಿ ಸುಳಿಸುಳಿ
ಗೊಂಡು ಸಿಕ್ಕಿದ ಕೌರವೇಂದ್ರನ
ಕೊಂಡು ಹಿಂಗುವ ಜೋಕೆ ನೂಕದೆ [3]ಡಗೆಯ ಡಾವರದ[3] ।
ಗಂಡುಗುಂದಿನ [4]ಬೀತ ಬಿರುದಿನ[4]
[ತೊ]ಂಡುಗೇಡಿನ ಜಯದ ಜಾರಿನ
ಖಂಡಶೌರ್ಯದ ಧೀರರಿದ್ದುದು ನೃಪನ ಬಳಸಿನಲಿ ॥ ೪೬

[5]ವಾಯು[5]ದಲಿ ಕೌರವನ [6]ವಿಜಯ[6]
ಶ್ರೀಯು [7]ಸೆಱೆವೋಯಿತ್ತು[7] ಶಿವ
ಕಾಯಲಾಪವರಿಲ್ಲಲಾ ಗುರುಸೂನು ಮೊದಲಾದ ।
ನಾಯಕರು ದುಷ್ಕೀರ್ತಿನಾರಿಯ
ನಾಯಕರು ಸುಪಲಾಯನದ ನಿ
ರ್ಣಾಯಕರು ಮಝು ಪೂತುರೆಂದುದು ನಿಖಿಳ ಪರಿವಾರ ॥ ೪೭

ಕೇಳಿದನು ಕಳವಳವ ಕಿವಿಗೊ
ಟ್ಟಾಲಿಸಿದನೆಲೆ ಕರ್ಣ ಕರ್ಣಫ
ಡಾಳರವವೇನದು ಸುಯೋಧನ ಸೈನ್ಯಮಧ್ಯದಲಿ ।
ಖೂಳ ಬಿಡಿಸಾ ಭೀಮಸೇನನ
ತೋಳುವಲೆಯಲಿ ಸಿಕ್ಕಿದನು ಭೂ
ಪಾಲನಕಟಕಟೆನುತ ತೇಜಿಯ ತಿರುಹಿದನು ಶಲ್ಯ ॥ ೪೮

ಹದಿಮೂಱನೆಯ ಸಂಧಿ ಮುಗಿದುದು.

---

[1] ಕೇಳಿ (ಖ.ಚ.ಟ.ತ.ದ). [2] ಅಂಡಲೆದು (ಚ.ದ.ಪ.ಬ). [3] ಭೀತಿಗರ ಹೊಡೆದು (ದ). [4] ಭೀತಿ ಬಿರುದಿನ (ದ.ಪ.ಬ). [5] ಘಾಕ (ಕ), ದಾ (ನ). [6] ರಾಜ್ಯ (ತ.ನ.ಬ). [7] ಮುಂದಲೆಯೋಯ್ತು (ದ).

ಹದಿನಾಲ್ಕನೆಯ ಸಂಧಿ

ಸೂಚನೆ ॥ ಮರಳಿದನು ಪಾಳೆಯಕೆ ಪಾಂಡವ
ರರಸನಿತ್ತಲು ಪಾರ್ಥ ಕೇಳಿದು
ಬರುತ ಗೆಲಿದನು ಸಕಲ ಕೌರವರಾಯ ಮೋಹರವ ॥

ದೂಱುವರಲೇ ಕರ್ಣನೋಲೆಯ
ಕಾಱತನವನು ಹಿಂದೆ ಕೆಲಬರು
[1]ದೂಱಿದರೆ ಫಲವೇನು ಕದನದಲವಗೆ ಸರಿಯಹರೆ[1] ।
ಹಾಱಲೂದಿದನಹಿತರಾಯನ
ನೀಱತನವನು ತನ್ನ ರಾಯನ
ಸೂಱೆಗಡಹಾಯ್ದರಿಯ ತಡೆದನು ಭೂಪ ಕೇಳೆಂದ ॥ ೧

ಆರರೆ ಸಿಂಹದ ತೋಳ ತೆಕ್ಕೆಯ
ಕರಿಯ ಸೆಳೆವಂದದಲಿ ಗರುಡನ
ಕೊರಳ[2]ಬಿ[2]ಲದಲಿ ಬಿಳ್ದ ಸರ್ಪನ ಸೇದುವಂದದಲಿ ।
ಧರಣಿಪಾಲನ ತೆಗೆದು ಭೀಮನ
ಬರಿಯನೆಚ್ಚನು ಜೋಡ [3]ಜೋಕೆಯ[3]
ಜರುಹಿದನು ಜವಗೆಡಿಸಿದನು ನಿನ್ನಾತನನಿಲಜನ ॥ ೨

ಅರಸ ಕೇಳ್ಕೈ ಕರ್ಣಭೀಮರ
ಧರಧುರದ ದೆಖ್ಖಾಯ್ಲತನ ಗ
ಬ್ಬರಿಸಿತಾಹವಗರ್ವಿತರ ಗಾಢಾಯ್ಲಚೇತನವ ।
ಧರಣಿಪಾಲನನತ್ತಲವರಾ
ದರಿಸಿದರು ಸಹದೇವ ನಕುಳರು
ಸರಳ ಕಿತ್ತರು ಘಾಯವನು ತೊಳೆತೊಳೆದು ಮಂತ್ರಿಸುತ ॥ ೩

ದುಱುದುಱಿಪ ಬಿಸಿರಕ್ತವೇಱನೊ
ಳೊಱತೆ ಮಸಗಿತು ಬಹಳ ಧೈರ್ಯದ
ಹೊಱಗೆ ಮುಱಿದುದು ಮೂಗಿನುಸಿರುಬ್ಬೆದ್ದುದಡಿಗಡಿಗೆ ।

[1] ದೂಱಬಲ್ಲರೆ ದೊರೆಯ ದಕ್ಕಡತನಕೆ ಸರಿಯಾರು (ದ). [2] ಬ (ಕ).
[3] ಝಾಡಿಯ (ಟ.ತ.ದ.ನ.ಬ).

ಅಱುವು ಮಱವೆಗಳೊಂದನೊಂದನು
ಮುಱಿದು ನೂಕಿದವವನಿಪತಿ ಕಡು
ವೆಱಗ ಕೇಣಿಯ ಕೊಂಡವೋಲಿದ್ದನು ವಿಚೇಷ್ಟೆಯಲಿ ॥ ೪

ಜಯಸಮರ [1]ಜಾಱಾಯ್ತು[1] ತೆಗೆ ಪಾ
ಳೆಯಕೆ ಮರಳಿಚು ರಥವನಿನ್ನೆ
ಲ್ಲಿಯದು ನೆಲ ನೆಱೆ ಕುದಿವ ಕುರುಡನ ಮಕ್ಕಳೇ ಕೊಳಲಿ ।
ನಿಯತವೆಮ್ಮಿಬ್ಬರಿಗೆ ರಾಯನ
ಲಯವೆ ಲಯವಿನ್ನೆನುತಲಾ ಮಾ
ದ್ರಿಯ ಕುಮಾರರು ದೊರೆ ಸಹಿತ ತಿರುಗಿದರು ಪಾಳೆಯಕೆ ॥ ೫

ರಾಯರಥ ಮಡಮುಱಿಯೆ ಮುರಿದುದು
ನಾಯಕರು ಪಾಂಚಾಲಕರು ವಾ
ನಾಯುಜರು ಮತ್ಸ್ಯ ಪ್ರಬುದ್ಧಕ ಸೋಮಕಾದಿಗಳು ।
ವಾಯುಹತಿಯಲಿ ಮೇಘದೊಡ್ಡಿಂ
ಗಾಯಸವು ಕರ್ಣಾಸ್ತ್ರಹತಿಯಲಿ
ಪಾಯವರಿರಾಯರಿಗಪೂರ್ವವೆ ಭೂಪ ಕೇಳೆಂದ ॥ ೬

ಮುಱಿದುದೈ ರಿಪುರಾಯದಳ ಹಗೆ
ಹಱಿದುದೈ ಕುರುಪತಿಗೆ ಹರುಷವ
ಕಱೆದುದೈ ಕರ್ಣಪ್ರತಾಪಾಟೋಪಜೀಮೂತ ।
ಇಱಿತ ಮೆಱೆದುದು ನಿನ್ನವರ ಬೊ
ಬ್ಬಿಱಿತ ಜಱೆದುದು ವಿಜಯಲಕ್ಷ್ಮಿಯ
ಸೆಱಗು ಸೋಂಕಿತು ಕೌರ[2]ವೇಶ್ವರಗರಸ[2] ಕೇಳೆಂದ ॥ ೭

ಅರಿಬಲದ ಲಗ್ಗೆಯನು ನಿಜ ಮೋ
ಹರದ ಮುರಿವಿನ ಸುಗ್ಗಿಯನು
ಧರಧುರದ ಪರಬಲದೊಸಗೆಯನು ನಿಜಬಲದ ಹಸುಗೆಯನು ।
ಮುರಮಥನ ನೋಡಿದನು ಮೂಗಿನ
ಬೆರಳ ತೂಗುವ ಮಕುಟ[3]ದೊಲಹಿನ[3]
ಬೆರಳ ಕುಡಿಚಮ್ಮಟಿಗೆಯಲಿ ಸೂಚಿಸಿದನರ್ಜುನಗೆ ॥ ೮

[1] ಕಾಳಾಯ್ತು (ಚ.ಟ.ತ.ನ.ಪ.ಬ). [2] ವೇಂದ ನ ಭೂಪ (ಕ.ಗ.ಚ.ಟ).
[3] ವೆತ್ತಿದ (ಕ).

ಆರ ರಥವಾ ಹೋಹು[1]ದದು[1] ಹಿಂ
ದಾರವರು ಬಳಿವಳಿಯಲೊಗ್ಗಿನ
ಲೋರಣಿಸಿ ಮುಂಚುವರು ಟೆಕ್ಕೆಯವಾರ ತೇರಿನದು ।
ಆರ ದಳವದು ಧುರಪಲಾಯನ
ಚಾರುದೀಕ್ಷಿತರಾಯ್ತು ಫಲುಗುಣ
ಧಾರುಣೀಪತಿ[2]ಯಾಣೆ ಹೇಳೆಂ[2]ದಸುರರಿಪು ನುಡಿದ ॥ ೯

ನೋಡಿ ನೋಡಿ ಕಿರೀಟವನು ತೂ
ಗಾಡಿದನು ಕಂಬನಿಗಳಾಲಿಯೊ
ಳೀಡಿಱಿದು [3]ಸೋರಿ[3]ದವು ಸೊಂಪಡಗಿತು ಮುಖಾಂಬುಜದ ।
ಹೂಡಿದಂಬಿನ ತೋಳ ತೆಗಹಿನ
ಬಾಡಿದುತ್ಸಾಹದ ವಿಶಾಳದ
ಬೀಡಿಕೆಯ ಬೀಳುವೆಗೆ ಬೆಬ್ಬಳೆವೋದನಾ ಪಾರ್ಥ ॥ ೧೦

ಸೇನೆ ಮುಱಿಯಲಿ ಕೌರವನ ದು
ಮ್ಮಾನ ಹಱಿಯಲಿ ನನಗೆ ಚಿತ್ತ
ಗ್ಲಾನಿಯೆಳ್ಳನಿತಿಲ್ಲ ಕಟ್ಟಲಿ ಗುಡಿಯ ಗಜನಗರ ।
ಆ ನರೇಂದ್ರನ ಸಿರಿವೊಗಕೆ ದು
ಮ್ಮಾನವೋ ಮೇಣ್ ಸುರಪುರಕೆ ಸಂ
ಧಾನವೋ ನಾನಱಿಯೆನಳ್ಕಿದೆಯಾದುದೆನಗೆಂದ ॥ ೧೧

ಧರಣಿಪತಿ ಸಪ್ರಾಣನೇ ಗಜ
ಪುರದ ರಾಜ್ಯಕೆ ನಿಲಿಸುವೆನು ಮೇಣ್
ಸುರರೊಳಗೆ ಸಮ್ಮೇಳವೇ ಕುಂತೀ ಕುಮಾರಂಗೆ ।
ಅರೆಘಳಿಗೆ ಧರ್ಮಜನ ಬಿಟ್ಟ
ನಿರೆನು ಮುರಹರ ರಥವ ಮರಳಿಚು
ಮರಳಿಚೈ ರಥ ಮುಂಚುವುದೊ ವನ ಮುಂಚುವುದೊ ಎಂದ ॥ ೧೨

ತಿರುಹಿ ವಾಘೆಯ ಹಿಡಿದು ಹರಿ ಹೂಂ
ಕರಿಸಿಬಿಟ್ಟನು ರಥವನಾತನ
ಮುರಿವ ಕಂಡುದು ಲಳಿ ಮಸಗಿ ಸಮಸಪ್ತಕರ ಸೇನೆ ।

---

[1] ರಥ (ಚ.ಟ.ತ.ಪ.ಬ). [2] ಯಲ್ಲಿಲೇ ಎಂ (ಖ.ನ.ಪ.ಬ). [3] ನೂಸಿ (ಖ.ಟ.ತ.ನ.ಬ).

ಅರರೆ ನರ ಪೈಸರಿಸಿದನೊ ಪೈ
ಸರಿಸಿದನೊ ಫಡ ಹೋಗಬಿಡದಿರಿ
ಕುರುನೃಪಾಲನ ಪುಣ್ಯವೆನುತಟ್ಟಿದರು ಸೂಠಿಯಲಿ ॥ ೧೩

ಕವಿದುದದುಭುತ ಬಲ ಮುರಾರಿಯ
ತಿವಿದರಡಗಟ್ಟಿದರು ತೇಜಿಯ
ಜವಗೆಡಿಸಿ ತಲೆಯಾರ ತಡೆದರು ತುಡುಕಿದರು ನೊಗನ ।
ಅವರನೊಂದೇ ನಿಮಿಷದಲಿ ಪರಿ
ಭವಿಸಿ ನಡೆತರೆ ಮುಂದೆ ಗುರುಸಂ
ಭವನ ರಥವಡಹಾಯ್ದುದವನೀಪಾಲ ಕೇಳೆಂದ ॥ ೧೪

ಇತ್ತಲಿತ್ತಲು ಪಾರ್ಥ ಹೋಗದಿ
ರಿತ್ತಲಶ್ವತ್ಥಾಮನಾಣೆ ಮ
ಹೋತ್ತಮರು ಗುರು ಭೀಷ್ಮರಲಿ ಮೆಱೆ ನಿನ್ನ ಸಾಹಸವ ।
ಕಿತ್ತು ಬಿಸುಡುವೆನಸುವನಿದಿರಾ
ಗಿತ್ತಲೆಲವೋ ನಿನ್ನ ಜೋಕೆಯು
ಜೊತ್ತಿನಾಹವವಲ್ಲೆನುತ ತಱುಬಿದನು ಗುರುಸೂನು ॥ ೧೫

ಆವುದಿಲ್ಲಿಗುಪಾಯವೀತನ
ಭಾವ ಬೆಟ್ಟಿತು ತೆಱಹುಗೊಡ[1]ನಿಂ
ದೀ ವಿಸಂಧಿಯೊಳ[1]ಱಿಯೆನವನಿಪನಾಗುಹೋಗುಗಳ ।
ದೇವ ಹದನೇನೆನುತ ವರ ಗಾಂ
ಡೀವಿ ಮುಕ್ತಕಳಂಬಕಾಂಡ
ಪ್ರಾವರಣದಲಿ ಮುಸುಕಿದನು ಗುರುನಂದನನ ರಥವ ॥ ೧೬

ಖೂಳ ತೆಗೆ ಹೆಱಸಾರು ಠಕ್ಕಿನ
ಠೌಳಿಯಾಟವೆ ಕದನ ಕುಟಿಲದ
ಬೇಳುವೆಯ ಡೊಳ್ಳಾಸ ಮದ್ದಿನ ಮಾಯೆ ನಮ್ಮೊಡನೆ ।
ಆಳುತನವುಳ್ಳೊಡೆ ಮಹಾಸ್ತ್ರದ
ಜಾಳಿಗೆಯನುಗಿಯೆನುತ ಪಾರ್ಥನ
ಕೋಲುಗಳ ನೆಱೆ ತಱಿದು ತೀವಿದನಂಬಿನಲಿ ನಭವ ॥ ೧೭

---

[1] ಹಱುವಗೊಡನಿನ್ನಾವ ತೆಱನೆಂದ (ಕ), ಹಱುವುಗೊಡನಿಂದೀ ವಿಸಂಧಿಯೊಳ (ಖ).

ಸರಳ ಹರಿಮೇಖಳೆಗೆ ನೀವೇ
ಗುರುಗಳಲ್ಲಾ ನಿಮ್ಮ [1]ವಿದ್ಯೆಯ[1]
ಹುರುಳುಗೆಡಿಸುವಿರೆನುತ ಗುರುಸುತನಂಬ ಹರೆಗಡಿದು ।
ತುರಗದಲಿ ರಥಚಕ್ರದಲಿ ಕೂ
ಬರದೊ[2]ಳೀಸಿನಲಚ್ಚಿನಲಿ ದು
ರ್ಧರ[2] ಶಿಲೀಮುಖ ಜಾಳವನು ಜೋಡಿಸಿದನಾ ಪಾರ್ಥ ॥ ೧೮

ತಳಿವ ನಿನ್ನಂಬಿನ ಮಳೆಗೆ ಮನ
ನಲಿವ ಚಾತಕಿಯುಱಿಯೆಲಾ ಕಳ
ವಳಿಸದಿರು ಕೊಳ್ಳಾವಡೆನುತೆಚ್ಚನು ಧನಂಜಯನ ।
ಹೊಳೆವ ಕಣೆ ಹೊಕ್ಕುಱಿದ ದಾರಿಯೊ
ಳುಳಿದ ಕಣೆ ದಾಂಟಿದವು ಗುರುಸುತ
ತುಳುಕಿದನು ಫಲುಗುಣನ ಮೈಯಲಿ ರಕುತಱಾಟಳವ ॥ ೧೯

ಕಡುಗಿದರೆ ಕಾಲಾಗ್ನಿರುದ್ರನ
[3]ಕಡುಹ[3]ನಾನುವ[4]ರೀತನೇ[4] ಸೈ
ಗೆಡೆವ ರೋಮದ [5]ಧೂಮ್ರವಕ್ತ್ರದ ಸ್ವೇದಬಿಂದುಗಳ[5] ।
ಜಡಿವ ರೋಷದ ಭರದಲಡಿಗಡಿ
ಗೊಡಲನೊಲೆದು ಮಹಾಸ್ತ್ರದಲಿ ಕಡಿ
ಕಡಿದು ಬಿಸುಟನು ಗುರುಸುತನ ಸಾರಥಿಯ ರಥ ಹಯವ ॥ ೨೦

ಧನುವನುರು ಬತ್ತಳಿಕೆಗಳನಂ
[6]ಬಿನ ಹೊದೆಯನುರು ಟೆಕ್ಕೆಯವ ಜೋ
ಡಿನ ಬನವ ಕಡಿವಿಕ್ಕಿದನು ಸೆಕ್ಕಿದನು ಸರಳುಗಳ[6] ।
ಧನು ವರೂಥವ ಹಾನಿ ಗುರುನಂ
ದನನ ಗರ್ವವಿನಾಶಿಯೇ ಫಡ
ಎನುತ ಪಾರ್ಥನ [7]ತಱುಬಿ ನಿಂದನು[7] ಸೆಳೆದಡಾಯುಧದಿ ॥ ೨೧

ದಿಟ್ಟನೈ ಗುರುಸೂನು ಶಿವ ಜಗ
ಜಟ್ಟಿಯಲ್ಲಾ ಕೌರವೇಂದ್ರನ
ಥಟ್ಟಿನಲಿ ಭಟರಾರೆನುತ ತಲೆದೂಗಿದನು ಪಾರ್ಥ ।

---

[1] ನೀವೇ (ಕ). [2] ಳಚ್ಚಿನೊಳೀಸಿನೊಳೂರ್ಧ್ವರ (ಕ). [3] ಪಡೆಯ (ಕ.ಗ.ದ). [4] ನೀತನೆನೆ. [5] ಕದಱುಂಗಳೊಳುಗಿವ ಕೆಂಪುಗಳ (ಕ). [6] ಬಿನ ಹೊದೆಯ ರಥಟೆಕ್ಕೆಯವ ಜೋಡಿನಬನದ ಕಡಿತವನಿಕ್ಕಿದನು ಬಾಣದಲ ಕಲಿಪಾರ್ಥ (ಕ.ಗ). [7] ರಥವ ತಡೆದನು (ಕ.ಚ).

ಇಟ್ಟಣಿಸಿದನು ಹಿಂದೆ ಕೃಪನಡ
ಗಟ್ಟಿದನು ಸಮಸಪ್ತಕರು ಸಲೆ
ಮುಟ್ಟಿ ಬಂದರು ಕೌರವೇಶ್ವರ ಸಕಲ ಬಲಸಹಿತ ॥ ೨೨

ತಡೆಯಿ ಪಾರ್ಥನನಿವನ ರಾಯನ
ಕೆಡಹಿದನು ಕಲಿಕರ್ಣನೀಗಳೆ
ಮುಡುಹು[1]ವನು[1] ಪವನಜನನೊಂ[2]ದರೆ[2] ಘುಳಿಗೆ ಮಾತ್ರದಲಿ ।
ಬಿಡಿದಿರೀತನನೆನುತ ಕುರುಪತಿ
ಯೊಡನೆ ದುಶ್ಶಾಸನ [3]ಕೃಪಾದಿಗ[3]
ಳಡಸಿದರು ಕೆಂಗೋಲ ಮಳೆಯಲಿ ನಾದಿದರು ನರನ ॥ ೨೩

ಅವನಿಪನ ಕಾಣಿಕೆಗೆ ಬಹು ವಿ
ಘ್ನವನು [4]ಬಲಿದುದ[4] ದೈವಯಂತ್ರವ
ನವಗಡಿಸಿ ನೂಕುವರೆ ನಮ್ಮಳವೇ ಶಿವಾ ಎನುತ ।
ಕವಲುಗೋಲ್ಕೈದಱಲಿ [5]ಕೃಪ[5] ಕೌ
ರವನ [6]ತಮ್ಮಂದಿರ ಸು[6]ಸನ್ನಾ
ಹವ [7]ವಿ[7]ಸಂಚಿಸಿ ಬಗಿದು ಸಮಸಪ್ತಕರನೊಡೆಹಾಯ್ಸಿ ॥ ೨೪

ಹೋಗಹೋಗಲು ಮತ್ತೆ ಕುರುಬಲ
ಸಾಗರದ ಭಟಲಹರಿ ಲಳಿಯಲಿ
ತಾಗಿದರು ತುಡುಕಿದರು ಕಡೆದರು ನಾಲ್ಕು ದೆಸೆಗಳಲಿ ।
ನೀಗಿದರು ಶಸ್ತ್ರಾಸ್ತ್ರವನು ಕೈ
ಲಾಗಿನಲಿ ಮುರಳಿದರು ಪುನರಪಿ
ತಾಗಿದರು ಗುರುಸೂನು ಕೃತವರ್ಮಾದಿ ನಾಯಕರು ॥ ೨೫

ಮೇಲೆ ಬಿದ್ದುದು ಮತ್ತೆ ಬಲಮೇ
ಘಾಳಿ [8]ನೂಕಿತು[8] ನರನ ರಥ ಸುಳಿ
ಗಾಳಿಯಂತಿರೆ ತಿರು[9]ತಿರುಗಿ[9]ದುದು ವಿಶ್ವತೋಮುಖದಿ ।
ಹೇಳಲೇನವನೀಶ ಚಪಳಥ
ಡಾಳ ಪಾರ್ಥನ ವಿಕ್ರಮಾಗ್ನಿ
ಜ್ವಾಲೆಯಲಿ ನೆಱೆ ಸೀದು ಸೀಕರಿವೋಯ್ತು ಕುರುಸೇನೆ ॥ ೨೬

---

[1] ವೆ (ಕ). [2] ದುವಿ (ಕ.ಗ.ಚ), [3] ಭಟಾದಿಗ (ಕ). [4] ತಂದುದು (ಕ.ಗ.ನ). [5] ಮಿಗೆ (ಪ.ಬ.ನ). [6] ತಮ್ಮದಿರೆಸುವ (ಟ.ತ.ನ.ಪ). [7] ನು (ಕ.ಗ.ಚ). [8] ಯಂದದಿ (ಕ). [9] ಗಿಶಿವಿ (ತ.ನ.ಪ.ಬ).

ಗುರುಸುತನ ಮುಱಿಯೆಚ್ಚು ಶಕುನಿಯು
ಪರಿಭವಿಸಿ ಕೃತವರ್ಮಕನ ವಿ
ಸ್ತರಿಸಲೀಯದೆ ಕೇರಳ ದ್ರವಿಡಾಂಧ್ರ ಕೌಸಲರ ।
ಹುರುಳುಗೆಡಿಸಿ ಸುಯೋಧನನ ಮೊಗ
ಮುರಿಯಲೆಚ್ಚು ಸುಷೇಣ ಗೌತಮ
ರುರವಣಿಯ ನೆಗ್ಗೊತ್ತಿ ಹಾಯ್ದನು ಮತ್ತೆ [1]ಸೈವರಿದು[1] ॥ ೨೭

ಆವರಿಸಿದುದು ಮತ್ತೆ ಹೊಸ ಮೇ
ಳಾವದಲಿ ಕುರುಸೇನೆ ಘನ ಗಾಂ
ಡೀವವಿಗಳಿತ ವಿಶಿಖ ವಿಸರದ ವಹಿಗೆ ವಂಚಿಸದೆ ।
ರಾವಣಿಗೆಗೊಳಲಲಸಿ ಯಮನನು
ಜೀವಿಗಳು ಜಡರಾಯ್ತು ಫಲುಗುಣ
ನಾವ ವಹಿಲದಲೆಸುವನೆಂಬುದನಱಿಯೆ ನಾನೆಂದ ॥ ೨೮

ಜಾಳಿಸಿತು ರಥ ಜಡಿವ ಕೌರವ
ನಾಳ ಝೋಂಪಿಸಿ ಡೊಂಬು ಮಾಡುವ
ಜಾಳ ಝಾಡಿಸಿ ಬೈದು ಹೊಕ್ಕನು ಮತ್ತೆ ಗುರುಸೂನು
ಖೂಳ ಫಡಫಡ ಜಾಱದಿರು ತೋ
ಱಾಳ ತೂಱಿದ ಡೊಂಬು ಬೇಡ ವಿ
ಡಾಳವಿದ್ಯೆಗಳೆಮ್ಮೊಡನೆಯೆನುತೆಚ್ಚನರ್ಜುನನ ॥ ೨೯

ಗುರುಸುತನನೊಟ್ಟೈಸಿ ಫಲುಗುಣ
ತಿರುಗಿ ಹಾಯ್ದನು ಮುಂದೆ ಶರಪಂ
ಜರವ ಹೂಡಿದನೀತನಾತನ ಬಯ್ದು ಬೆಂಬತ್ತಿ ।
ಸರಳ ಹರಹಿನ ಹೂಟವನು ಕಾ
ಹುರದ [2]ಕಡುಹಿ[2]ನಲೊದೆದು ಬೊಬ್ಬಿಱಿ
ದುರವಣಿಸಿದನು ಪಾರ್ಥನೀತನ ಧನುವ ಖಂಡಿಸಿದ ॥ ೩೦

ಧನು ಮುಱಿಯೆ ದಿಟ್ಟಾಯ್ಲತನವೀ
ತನಲಿ ಸಾಕಿನ್ನೆನುತ ಗುರುನಂ
ದನನು ಮುರಿದನು [3]ಹೊಗರು[3]ಮೋಱೆಯ ಹೊತ್ತ ದುಗುಡದಲಿ ।

---

[1] ಹರಿಸಹಿತ (ಚ.ಟ). [2] ತಳವಿ (ಕ.ಗ.ಚ.ಟ.ತ.ದ.ಪ.ಬ). [3] ಬಿಗಿದ (ಚ.ಟ.ತ).

ಅನಿಲಸೂನುವ ಹಳಚಿದರು ಮು
ಮ್ಮೊನೆಯು ಬೋಳೆಯು ಮ್ಮೆಯು ಕೊಳುಕೊಡೆ
ಯೆನಗೆ ತನಗೆಂಬಗ್ಗಳಿಕೆಗಳ ಮೆಱೆದರಿಚ್ಛೆಯಲಿ[1] ॥ ೩೧

ತರಣಿತನಯನ ತೆಗೆದು ಭೀಮನೊ
ಳುರವಣಿಸಿ ಗುರುಸೂನು ಕಾದು
ತ್ತಿರೆ ಧನಂಜಯು ತೆರಳಿದನು ಪಾಳೆಯದ ಪಥವಿಡಿದು ।
ಅರರೆ ಫಲುಗುಣನೋಟವನು ಸಂ
ಗರಸಮರ್ಥರ ನೋಟವನು ನ
ಮ್ಮರಸ ಕಂಡನಲಾ ಎನುತ ನೂಕಿದನು ಕಲಿ ಕರ್ಣ ॥ ೩೨

ನೆರೆದುದಲ್ಲಿಯದಲ್ಲಿ ಕಹಳೆಯು
ಧರಧುರದ ನಿಸ್ಸಾಳ ಸೂಳಿನ
ಮೊರೆವ ಭೇರಿಯು ರಾಯಗಿಡಿಗನ ಜಡಿವ ಚಂಬಕನ ।
ತುರಗ ಕರಿ ರಥ ಪಾಯದಳ ಚಾ
ಮರದ ದವಳಚ್ಛತ್ರ ಪಟಪಳ
ಹರದ ಪಡಪಿನಲೌಕಿ ನಡೆದುದು ಮುಂದೆ ಪಾಯದಳ ॥ ೩೩

ಕವಿದು ಕೆಂಧೂಳಿಡುವ ಸೇನಾ
ಟವಿಯ ನೋಡುತ ಹಿಂದೆ ಕರ್ಣನ
ಲವಲವಿಕೆಯಾಯತವ ಕಂಡನು ಕದನಕೇಳಿಯಲಿ ।
ಅವನಿಪನ ದರುಶನವೆನಗೆ ಸಂ
ಭವಿಸಲಱಿಯದು ಭಾಪುರೇ ಕೌ
ರವಮಹಾರ್ಣವವೆನುತ ಮಕ.ಟವ ತೂಗಿದನು ಪಾರ್ಥ ॥ ೩೪

ಬಳಿಕ ಸೇನಾಸ್ತಂಭ ಶರದಲಿ
ನಿಲಿಸಿದನು ಮಾರ್ಬಲವನಿತ್ತಲು
ಚಳೆಯದಲಿ ಹಿಮ್ಮೆಟ್ಟುತಿರೆ ಕಂಡನು ಧನಂಜಯನ ।

[1] ದ.ದೀಚೆಯ (ಕ), ದನಿದಿರಿನ (ಟ).

ಹೊಳಹು ದೂವಾಳಿಯಲಿ ಪಾರ್ಥನ
ಕೆಲಕೆ ಬಿಟ್ಟನು ರಥವ ನಿಲು ನಿ
ಲ್ಲೆಲವೊ ಹೋಗದಿರೆನುತ ಬೆಂಬತ್ತಿದನು ಕಲಿ ಕರ್ಣ ॥ ೩೫*

ಕಂಡನರ್ಜುನನಿದಿರೊಳಿವನು
ದ್ದಂಡತನವನು ನೃಪತಿ ಚಿಂತಾ
ಖಂಡಧೈರ್ಯರು ನಾವಲಾ ಹೊತ್ತಲ್ಲ ಕಾದುವರೆ ।
ಕಂಡಿರೇ ಮುರವೈರಿ ದಳಪತಿ
ಚಂಡಬಳನಹ ನಡುಹಗಲ ಮಾ
ರ್ತಾಂಡನಂತಿರೆ ತೋಱುತೈದನೆ ರಥವ ತಿರುಹೆಂದ ॥ ೩೬

ಜೀವಿಸಿರಲಾವಾವ ಲೇಸಿನ
ಠಾವ ಕಾಣೆವು ಜೀಯ ಕರ್ಣನ
ನಾವು ತೊಡಚುವರಲ್ಲ ತೆರಳಿಚು ಪಾಳೆಯಕೆ ರಥವ ।
ಈ ವಿಗಡನಂತಿರಲೆನುತ ಗಾಂ
ಡೀವಿ ಚಾಪವನಿಳುಹೆ ರಥವನು
ದೇವಕೀಸುತ ನೂಕಿದನು ಪವಮಾನ ವೇಗದಲಿ ॥ ೩೭

ಬರುತ ಭೀಮನ ಕಂಡರಾತನ
ಹೊರೆಗೆ ಬಿಟ್ಟರು ರಥವನರ್ಜುನ
ಕರೆದು ಬೆಸಗೊಂಡನು ನೃಪಾಲನ ಕ್ಷೇಮಕೌಶಲವ ।
ಅರಸನಿಂದು ಸಜೀವಿಯೋ ಸುರ
ಪುರನಿವಾಸಿಯೊ ಹದನನೇನೆಂ
ದಱಿಯೆನೀ ಸಂಗ್ರಾಮ[1]ಧು[1]ರವೆನಗೆಂದನಾ ಭೀಮ ॥ ೩೮

ಆದಡೆಲೆ ಪವಮಾನಸುತ ನೀ
ನಾದರಿಸು ನಡೆ ನೃಪತಿಯನು ನಾ
ಕಾದುವೆನು ಕೌರವರ ಸಕಲ [2]ಬಲಪ್ರಘಾಟದಲಿ[2] ।

---

* ಈ ಪದ್ಯವಾದಮೇಲೆ (ತ.ದ.ನ.) ಪ್ರತಿಗಳಲ್ಲಿ ಮುಂದಿನಪದ್ಯ ಹೆಚ್ಚಾಗಿದೆ.—
ಉಂಟು ಖರೆಯನು ನೀನೆನುತ ಹದಿ
ನೆಂಟು ಶರದಲಿ ಭಟನ ಗರ್ವದ
ಗಂಟ ಮುಱಿದರೆ ಮುನಿದು ಖತಿಯಲಿ ಕೆದಱಿ ಕಂಪಿಸುತ ।
ಕಂಠಣಿಸೆ ಸುರನಿಕರವರಿಗಳ
ಗಂಟಲಿಱುತದಲರುಣಸಲಿಲವ
ನೀಂಟುವನು ಮಾಣೆನುತ ಕಿಡಿಕಿಡಿಯೋದನಾ ಕರ್ಣ ॥

[1] ಧ (ಚ.ನ.ಪ). [2] ಮಹಾರಥಾದಿಯಲಿ (ಚ.ಟ.ತ.ನ.ಪ.ಬ).

ಕೈದುಕಾಱರು ನಿಖಿಳ ದೆಸೆಗಳ
ಲೈದಿ ಬರುತಿದೆ ನೀ ಮರಳು ನಾ
ಛೇದಿಸುವೆನರೆಘಳಿಗೆಮಾತ್ರದಲೆಂದನಾ ಪಾರ್ಥ ॥ ೩೯

ಎಲೆ ಧನಂಜಯ ನೀನೆ ಬಲುಗೈ
ಯುಳಿದವರು ರಣಭೇದರೇ ಕುರು
ಬಲವನೊಬ್ಬನೆ ಕೇಣಿಗೊಂಡೆನು ಕರ್ಣ ಮೊದಲಾಗಿ ।
ಅ[1]ಳ[1]ಕಿಸುವೆನೀಕ್ಷಣಕೆ ತನ್ನ
ಗ್ಗಳಿಕೆಯನು ನೋಡವನಿಪಾಲನ
ಬಳಲಿಕೆಯ ಸಂತೈಸು ನಡೆ ನೀನೆಂದನಾ ಭೀಮ ॥ ೪೦

ಹದಿನಾಲ್ಕನೆಯ ಸಂಧಿ ಮುಗಿದುದು

---

[1] ಳು (ಟ).

ಹದಿನೈದನೆಯ ಸಂಧಿ.

ಸೂಚನೆ ॥ ರಾಯ ರಿಪುಬಲ ವಿಪಿನ ದಹನನ
ಜೇಯನೇಕಾಂಗದಲಿ ಕೌರವ
ರಾಯ ಬಲಬಹಳಾಂಬುಧಿಯ ಕಲಕಿದನು ಕಲಿ ಭೀಮ ॥

ಕೇಳು ಧೃತರಾಷ್ಟ್ರಾವನಿಪ ದು
ವ್ವಾಳಿಯಲಿ ಕೃಷ್ಣಾರ್ಜುನರು ನಿಜ
ಪಾಳೆಯಕೆ ತಿರುಗಿದರು ಬಳಿಕಿತ್ತಲು ವೃಕೋದರನ ।
ಆಳುತನದ ಸಘಾಡಿಕೆಯ ನಾ
ಹೇಳಲರಿಯೆನು ಸಕಲ ಕುರುಬಲ
ಜಾಲವೊಂದೆಸೆ ಭೀಮನೊಂದೆಸೆ ಕೇಳು ಕೌತುಕವ ॥ ೧

ಸೆಱಗ ಬೀಸಿತು ನಿನ್ನವರು ಬೊ
ಬ್ಬಿಱಿದರರ್ಜುನನಿತ್ತ ಬೆನ್ನಿನ
ತೆಱಿಗೆ[1]ಯುತ್ಸವ[1]ಧನವ ತೆಗೆ ಭಂಡಾರದೊಳಗೆನುತ ।
ತುಱುಗಿತಲ್ಲಿಯದಲ್ಲಿ ಲಗ್ಗೆಯ
ಬಿಱುದನಿಯ ನಿಸ್ಸಾಳ ಕಹಳೆಯ
ಜಱಹು ಜೋಡಿಸಿ ಜರುಹಿತಡಕಿಲು ಜಗದ ಜೋಡಿಗಳ ॥ ೨

ಆಱು ಸಾವಿರ ಕುದುರೆ ಕರಿಘಟೆ
ಮೂಱು ಸಾವಿರ ಸಾವಿರದ ನಾ
ನೂಱು ರಥ ಪರಿಗಣನೆಗೊಂದೇ ಲಕ್ಕ ಪಾಯದಳ ।
ನೂಱು ರಥದಲಿ ಸರಳ ಹೊದೆ ಮೂ
ನೂಱು ಪರಿಚಾರರು ಸಹಿತ ಮೈ
ದೋಱಿ ನಿಂದನು ಭೀಮನೊಬ್ಬನೆ ತಱುಬಿ ಕುರುಬಲವ ॥ ೩

ಅರಸ ಕೇಳೈ ನಿಮ್ಮ ದಳದೊಳು
ಗುರುತನುಜ ಕೃತವರ್ಮ ಕೃಪ ನಿ
ನ್ನರಸುಮಗ ರಾಧೇಯ ಶಕುನಿ ಸುಶರ್ಮ ವೃಷಸೇನ ।

---

[1] ಯುಚ್ಚಹ (ಕ).

ಮರು ಯವನ [1]ಹಮ್ಮೀರ[1] ಕೇರಳ
ತುರುಕ ಬಾಹ್ಲಿಕ ಮಗಧ ನೇಪಾ
[2]ಳ[ರು] ಕುರೂಷಾದಿಗ[ಳು] ಸಂಖ್ಯಾತೀತಬಲವೆಂದ[2] ॥ ೪

ಮಾಳವಾಂಧ್ರ ಪುಳಿಂದ ಬರ್ಬರ
ಗೌಳ ವಂಗ ದ್ರವಿಡ ಸಿಂಹಳ
ಲಾಳ ಗುರ್ಜರ ಚೀನ ಭೋಟ ಕರಾಳ ಖರ್ಪರರು ।
ಚೋಳ ಸಿಂಧು ಕಳಿಂಗ ಸಗರ ವ
ರಾಳ ಪಾರ್‍ಯಾತ್ರಪ್ರಮುಖ ಭೂ
ಪಾಲರಿವರೊಡ್ಡಿನಲಿ ಸಂಖ್ಯಾರಹಿತದಳವೆಂದ ॥ ೫

ಇದ್ದುದಾ ಸಮಸಪ್ತಕರು ಜಗ
ವದ್ದ ಜಲಧಿಯ ತೆರೆಯವೋಲು [3]ಮುಳಿ[3]
ದೆದ್ದ ಹರಿಬಲದಂತೆ ದುಶ್ಶಾಸನನ ಪಾಯದಳ ।
ದೊದ್ದೆಯಲ್ಲದೆ ದೊರೆಗಳೇ ಜಱೆ
ದೆದ್ದುದೆರಡಕ್ಷೋಣಿಯನಿಬರಿ
ಗಿದ್ದನೊಬ್ಬನೆ ಭೀಮನವನೀಪಾಲ ಕೇಳೆಂದ ॥ ೬

ಹೇಳು ಸಂಜಯ ವಿಸ್ತರಿಸಿ ಕಾ
ಲಾಳು ಮೇಲಾಳಿನಲಿ ಭೀಮನ
ಕಾಳೆಗದ ಕೌತುಕವನೀ ಹೆಬ್ಬಲದ ದುರ್ಬಲವ ।
ಆಳು ಹಿರಿದಿದ್ದೇನು ಫಲ ಹೀ
ಹಾಳಿ ದೈವಕೆ ಬೇಱೆ [4]ಪರಿಯ
ವಿತಾಳ[4]ವಿಲ್ಲ ವಿಪಕ್ಷಪಾತದೊಳೆಂದನಂಧನೃಪ ॥ ೭

ಅರಸ ಕೇಳಾದಡೆ ಮಹಾಸಾ
ಗರಕೆ ಮುನಿ ಮುಂಡಿಸಿದವೋಲು ಸಂ
ಹರಣ ದಿನದಲಿ ಜಗಕೆ ಮಲೆವ ಮಹೇಶನಂದದಲಿ ।
ಅರಿ ಹಿರಣ್ಯಾಕ್ಷನ ಬಲಕೆ ಕೋ
ಡೆಱಗಿ ನಿಂದ ವರಾಹನಂತಿರೆ
ಪರಬಲಾಂತಕ ಭೀಮ ನಿಂದನು ತಱುಬಿ ಪರಬಲವ ॥ ೮

---

1 ಸೌವೀರ (ತ.ದ.ನ.ಬ). 2 ಕರೂಸಾದಿಗಳ ಸಂಖ್ಯಾತೀತ ಬಲವೆಂದ (ಟ.ತ.ದ), ಕರುಗಳದರೊಳಗಿಹುದು ಸಂಖ್ಯಾರಹಿತಬಲವೆಂದ (ಬ.ದ). 3 ಮುರಿ (ಚ.ಟ.ದ.ನ). 4 ಪರಿಪರಿಕಾಲ (ಟ.ತ.ದ), ವಿವರವ ಕೇಳ್ವೆ (ಟ.ದ).

ಆತನಿಂದಂಘವಣೆಯನು ನಿ
ನ್ನಾತ ಕಂಡನು ಮೆಚ್ಚಿದನು ಮಝು
ಪೂತು ಭೀಮ ಸುಧೀರನೈ ಸದ್ಗುಣಕೆ ಮತ್ಸರವೆ ।
ಈತನೊಬ್ಬನೆ ಕೌರವರಸಂ
ಖ್ಯಾತವೆಂಬುದು ಲೋಕ ಸಾಕಿ
ನ್ನೀತ ಮರಳಲಿ ಎಂದು ಭಟ್ಟರನಟ್ಟಿದನು ಭೂಪ ॥ ೯

ಬಂದು ಭಟ್ಟರು ಭೀಮಸೇನಂ
ಗೆಂದರೆಲೆ ಕೌಂತೇಯ ನೀ ನಿ
ನ್ನಂದಿನಗ್ಗದ ದುಂದುಮಾರನ ಕಾರ್ತವೀರ್ಯಕನ ।
ಸಂದ ಭರತ ಭಗೀರಥಾದಿಗ
ಳಿಂದ ಮಿಗಿಲು ಮಹಾಪ್ರಚಂಡರೊ
ಳಿಂದು ನಿನಗೆಣೆಯಾರು ದನುಜಾಮರರ ಥಟ್ಟಿನಲಿ ॥ ೧೦

ರಾಯಜಗಜಟ್ಟಿಗಳು ರಿಪುಕುರು
ರಾಯಥಟ್ಟಿನೊಳನಿಬರಿಗೆ ನಿ
ನ್ನಾಯತದಿ ನಿಲುವಂಘವಣೆಗಾವೇನ ಹೇಳುವೆವು ।
ರಾಯನನು ಸಂತೈಸುವುದು ಮಾ
ದ್ರೇಯ ಫಲುಗುಣ ಸಹಿತ ನಿಲು ನಿ
ನ್ನಾಯತದಿ ನಮ್ಮರಸನೊಲ್ಲನು ನಿನ್ನೊಡನೆ ರಣವ ॥ ೧೧

ಆಗಲದು ತಪ್ಪೇನು ಧರ್ಮಜ
ನಾಗುಹೋಗರ್ಜುನನ ಮೇಲೆ ವಿ
ಭಾಗದಲಿ ಬಂದುದು ಸುಯೋಧನ ಸೈನ್ಯಧುರವೆಮಗೆ ।
ಈಗಳೊಬ್ಬನೆ ವಿಷಮವಿಗ್ರಹ
ಯಾಗದಲಿ ರಿಪು ಸುಭಟ ಪಶುಹಿಂ
ಸಾಗಮವ ತೋಱುವೆನು ಸೈರಿಸಿಯೆಂದನಾ ಭೀಮ ॥ ೧೨

ವಿವಿಧ ಮಣಿ ಕನಕಾದಿ ವಸ್ತುವ
ನವರಿಗಿತ್ತನು ತನ್ನ ಪಾಠಕ
ನಿವಹವನು ಕಳುಹಿದನು ಕೌರವಬಲದ ಸುಭಟರಿಗೆ ।
ಅವರು ಬಂದರು ಕರ್ಣ ಗುರುಸಂ
ಭವ ಸುಶರ್ಮಕ ಶಕುನಿ ಕೃಪ ಕೌ
ರವ ನೃಪಾದಿಗಳಿದಿರಲೊದಱಿದರನಿಲಜನ ಮತವ ॥ ೧೩

ಮುಱಿದು ಲೋಕವ ನುಂಗಿದರೆ ಕ
ಟ್ಟುಱುವೆಯೇ ಕಾಲಂಗೆ ಕತ್ತಲೆ
ಯಿಱಿತದಲಿ ಕೈದೀವಿಗೆಯ ಹಂಗೇಕೆ ದಿನಮಣಿಗೆ |
ಮಱೆದೆಲಾ ರಾಧೇಯ ಕೃಪ ನಿಲು
ಹೊಱಗೆ ಗುರುಸುತ ನಿನ್ನ ಗರ್ವವ
[1]ಹೆ[1]ಱಿಸುವವು ಭೀಮಾಸ್ತ್ರವೆಂದುದು ವಂದಿಸಂದೋಹ || ೧೪

ಆಸೆಯೇ ಜೀವದಲಿ ಕುರುಧರ
ಣೀಶ ಬಿಡು ರಾಜ್ಯವನು ಮಾತಿನ
ವಾಸಿಯೇ ಕೊಡು ಕದನವನು ಸಾಕುಳಿದ ಮಾತೇನು |
ಈ ಸುಶರ್ಮಕ ಶಕುನಿ ಸಲೆ ದು
ಶ್ಶಾಸನಾದಿ ಪಿಪೀಲಕರು ತಮ
ಗೇಸು ಬಲುಹುಂಟೈಸನೊದಗಲಿ ಎಂದರವರಂದು || ೧೫

ಇವರು ಕಳುಹಿದರುಚಿತದಲಿ ನಿ
ನ್ನವರು ಮುಸಗಿದ ಕಡಲವೊಲು ಬಲು
ದವಕಿಗರು ಕೋಲಳವಿಗೊಂಡರು ಕೋದಕೈಗಳಲಿ |
ತವತವಗೆ [2]ದೆಖ್ಬಾಯ ಮಿಗೆಯು
ತ್ಸವದಲುಱುಬಿದ[2]ರವನಿಪಾಲನ
ಗವಿಯ ಘಾಡಿಕೆ ಜೋಡಿಸಿತು ಗೀರ್ವಾಣರಾಲಿಗಳ || ೧೬

ಇನ್ನುಱಿಯಬಹುದೆನುತ ರಾಯನ
ಮನ್ನಣೆಯ ಮದಸೊಕ್ಕಿದಾನೆಗ
ಳೆನ್ನ ಬಿಡು ಬಿಡು ತನ್ನ ಬಿಡು ಬಿಡು ಎನುತ ಖಾತಿಯಲಿ |
ತಿನ್ನಡಗನೊಡೆಹೊಯ್ದು ಭೀಮನ
ಬೆನ್ನಲುಗಿ ತನಿಗರುಳನಕಟಾ
ಕುನ್ನಿಗಳಿರೆನುತೊದಗಿದರು ದುಶ್ಶಾಸನಾದಿಗಳು || ೧೭

ಈತನೇ ನಮಗರ್ಜುನನು ಕೊ
ಳ್ಳೀತನನು [3]ಹೊಯ್ ಹೊಯ್ಯೆನುತ[3]ಗತ
ಭೀತರಿಟ್ಟಣಿಸಿದರು ಸಮಸಪ್ತಕರು [4]ವಂಗಡಿಸಿ[4] |

---

[1] ಮು (ಚ), ಹ (ತ.ದ.ನ.ಬ). [2] ತಕ್ಕಾಯತದಲುರವಣಿಸಿ ತಾಗಿದ (ಕ.ಚ.ಟ). [3] ಪಾಯವನೆನುತ (ಕ.ಟ), ಪೂರಾಯವೆನುತ (ದ). [4] ಸೂಠಿಯಲ (ಟ.ದ.ಪ).

ಪೊತು ಮುಝುರೇ ಭೀಮ ಎನುತವೆ
ಸೂತಸುತನೌಕಿದನು ಕೃಪ ಗುರು
ಜಾತ ಕೃತವರ್ಮಾದಿ ರಥಿಕರು [1]ಹೊಕ್ಕರುರವಣಿಸಿ[1] ॥ ೧೮

ಒಂದು ದೆಸೆಯಲಿ ರಾಯನಿಪ್ಪ
ತ್ತೊಂದು ಸಾವಿರ ರಥ ಸಹಿ[2]ತುಘೋ[2]
ಯೆಂದು ಬಿಟ್ಟನು ಭೀಮಸೇನನ ರಥದ ಸಮ್ಮುಖಕೆ ।
ಅಂದು ಗೋಗ್ರಹಣದಲಿ ಫಲುಗುಣ
ನಿಂದನನಿಬರಿಗರಸ ಚಿತ್ತೈ
[ಸಿ]ಂದು [3]ಸ್ಥೈರಿಸಿ ನಿಂದನನಿಬರಿಗೊಬ್ಬನೇ ಭೀಮ[3] ॥ ೧೯

ಕೀಱಿ ಕಾಲಿಸೆ ದಿಕ್ಕರಿಗಳೆದೆ
ಡೋಱುಪೋಗಲು ಸರ್ವಲಗ್ಗೆಯ
ಲೇಱಿತೀ [4]ದಳ ದಳವುಳಿಸಿ ದಳಪತಿಯು ನೇಮದಲಿ[4] ।
ಏ[5]ಱು[5]ಸೂ[6]ಱೆಗೆ ಹಾರಿ[6] ಮಿಾಸಲಿ
ನೇಱು ನಮ್ಮದು ತಮ್ಮದೆನುತು
ಬ್ಬೇಱಿ ಭೀಮನ ಮುತ್ತಿದರು ಮೆತ್ತಿದರು ಸರಳಿನಲಿ ॥ ೨೦

ಅರಸ ಕೇಳೈ ನಿಮ್ಮ ಭೀಮನ
ಪರಿಯನೀ ಸರ್ವಾಸ್ತ್ರಘಾತ
ಸ್ಫುರಣ ಮದಕರಿ ಮಕ್ಷಿಕಾಸಂಘಾತದಂದದಲಿ ।
ಕೆರಳಿ ಕವಿದನು ಕೆದಱಿದುರಿ ಕ
ರ್ಪುರಕೆ ಕವಿವಂದದಲಿ ಕರ್ಣನ
ಗುರುಸುತನ ಕುರುಪತಿಯು ದುಶ್ಶಾಸನನ ರಥಕಾಗಿ ॥ ೨೧

ಎಚ್ಚನವರವರೆಚ್ಚ ಬಾಣವ
ಕೊಚ್ಚಿದನು ಕೋಲಳವಿಗೊಡ್ಡಿದ
ನಿಚ್ಚಟರ ನೀಗಿದನು ತಾಗಿದನರಸುಮೋಹರವ ।
ಹೆಚ್ಚಿ ವೀರಾವೇಶದಲಿ ಬಹ
ಬಿಚ್ಚುರಥಿಕರನಾಯ್ದು ಧೈರ್ಯದ
ಕೆಚ್ಚ ಮುಱಿದನು ಕದಡಿದನು ರಿಪುಸುಭಟ ಸಾಗರವ ॥ ೨೨

---

[1] ವೀರರು ಹೊಕ್ಕರವಗಡಿಸಿ (ಕ.ಗ). [2] ಶಘೋ (ಗ.ಚ.ಟ,ತ.ದ.ನ.ಪ ಬ). [3] ತಱುಬಿದ ಭೀಮನೀ ಕುರುರಾಯಮೋಹರವ (ಟ.ದ). [4] ಇದು ಅಚ್ಚಿನಪ್ರತಿಯ ಪಾಠ ; ದಳವುಳಿಸಿದುದು ದಳಪತಿಯು ನೇಮದಲಿ (ಕ.ಚ.ತ.ಬ), ದಳ ಬೊಬ್ಬೆಯಲಿ ದಳಪತಿಯು ಸನ್ನೆಯಲಿ (ಟ.ದ.ನ). [5] ಱ (ದ). [6] ಱೆಯ ಹೊಯ್ದು (ಟ.ದ ನ.ಬ).

ತುಡುಕುವಾನೆಯನೀಸಿನಲಿ ಖುರ
ವಿಡುವ ಕುದುರೆಯನೊತ್ತಿ ಹಾಯ್ಸುವ
ಬಿಡುರಥವ ತಲೆವರಿಗೆಯಲಿ ತವಕಿಸುವ ಕಾಲಾಳ ।
ಕಡಿದನಂಬಿನೊಳಾ ಗಜವನಾ
ಕಡುಹಯವನಾ ರಥವನಾ ವಂ
ಗಡದ ಕಾಲಾಳುಗಳನೊಂದು ವಿಘಳಿಗೆ ಮಾತ್ರದಲಿ ॥ ೨೩

ಮುಂದೆ ಸಬಳಿಗರೆಡಬಲದಲೋ
ರಂದದಲಿ ಬಿಲ್ಲಾಳು ದೊರೆಗಳ
ಮುಂದೆ ಹರಿಗೆಗಳೆರಡು ಬಾಹೆಯಲಾನೆ ಕುದುರೆಗಳು ।
ಸಂದಣಿಸಿದುದು ಮತ್ತೆ ಬೀಳುವ
ಮಂದಿಗದು ನೆರವಾಯ್ತು ನೆಗ್ಗಿದ
ನೊಂದು [1]ಹಲಗೆ[1]ಯಲೇಱಿದವರನು ಭೂಪ ಕೇಳೆಂದ ॥ ೨೪

ಮುಱಿದು ನೆಗ್ಗಿದ ರಥವ ಬರಿಕೈ
ಹಱಿದು ಬೀಳುವ ಗಜವ ಘಾಯದ
ನೆಱವಣಿಗೆಯಲಿ ನೆಗ್ಗಿ ಮುಗ್ಗಿದ ಕುದುರೆ ಕಾಲಾಳ ।
ಅಱಿಯೆನಭಿವರ್ಣಿಸಲು ಬಲ ಮು
ಕ್ಕುಱುಕಿ ಕೊಂಡುದು ಮೇಲೆ ಮೇಲ
ಳ್ಳಿಱಿವ ಕಹಳೆಯ ಬಹಳ ಬಹುವಿಧ ವಾದ್ಯರಭಸದಲಿ ॥ ೨೫

ಸಿಕ್ಕಿದನು ಹಗೆ ಸ್ವಾಮಿದ್ರೋಹಿಯು
ಸೆಕ್ಕಿ ಸುರಗಿಯೊಳಿವನ ಖಂಡವ
ನಿಕ್ಕುಳಿನೊಳೊಡೆಯುವಟ ಕೊಯ್' ಸುಂಟಿಗೆಯ ತಿನ್ನೆನುತ ।
ಹೊಕ್ಕು ಹೊಯ್ದರು ರಥವನಳವಿಗೆ
ಮಿಕ್ಕು ಕೈಮಾಡಿದರು ಕಾಲ್ದುಳಿ
ಯೊಕ್ಕಲಲಿ ಬೇಸಱಿಸಿದರು ಪವಮಾನನಂದನನ ॥ ೨೬

ನೆಲಕೆ ದೊಪ್ಪನೆ ಹಾಯ್ದು ಕೊಂಡನು
ಹಲಗೆ ಗದೆಯನು ಮೇಲುವಾಯ್ದ
ಪ್ಪಳಿಸಿದರೆ ಕುಪ್ಪಳಿಸಿತರಿಬಲ ಘಾಯಘಾಯದಲಿ ।

[1] ಲಗ್ಗೆ (ಗ.ಟ.ಪ).

ತಲೆಗಳೊಟ್ಟಿಲ ಕರಿಗಳಟ್ಟೆಯ
ನೆಳೆವ ರಕುತದ ಹೊನಲ ಮುಂಡದ
ಲಳಿಯ ನಾಟ್ಯದಲೆಸೆದುದೈ ಭೀಭತ್ಸರೌದ್ರದಲಿ ॥ ೨೭

ಕರಿ ಕೆಡೆಯೆ ಕಾಲನಲಿ ಜೋದರು
ತೆರಳದೆಚ್ಚಾಡಿದರು [1]ರಥಚಯ
ಮುಱಿಯೆ ಕಾಲಿನಲೊದ[1]ಗಿದರು ಸಮರಥ ಮಹಾರಥರು ।
ಹಱಿಯೆ ಹಯ ರೂಢಿಯಲಿ ನಿಂದ
ಬ್ಬರಿಸಿದರು ರಾವುತರು ಭೀಮನ
ಬಿಱುಗದೆಯ ಘಲ್ಲಣೆಗೆ ಚೆಲ್ಲಿತು ನಿಮ್ಮ ಪರಿವಾರ ॥ ೨೮

ರಾವುತರು ಕಡಿವಡೆಯೆ ಕಾಂಭೋ
ಜಾವಳಿಗಳೋಡಿದವು ಜೋದರ
ಜೀವ ಜಾಳಿಸೆ ಬೀದಿವರಿದವು ಗಜಘಟಾಳಿಗಳು ।
ತಾವು ನಿಬ್ಬರಗತಿಯ ರಥ ತುರ
ಗಾವಳಿಗಳೆಳೆದವು ರಥಂಗಳ
ನಾ ವಿಗಡವಿಗ್ರಹ ಮಹಾದ್ಭುತವರಸ ಕೇಳೆಂದ ॥ ೨೯

ಕೆಡೆದ ಝಲ್ಲರಿಗಳ ರಥಾಗ್ರದೊ
ಳುಡಿದ ಸಿಂಧದ ಮಕುಟ ಪದಕದ
ಖಡೆಯ ಸರಪಣಿ ತೋಳಬಂದಿಯ ವಜ್ರಮಾಣಿಕದ ।
ಕಡುಕು ಹೀರಾವಳಿಯ ಹಾರದ
ಕಡಿಯ ರಚನೆಯ ರಾಶಿ ಯಮುನಂ
ಗಡಿಯ ಪಸರವಿದೆನಲು ಮೆಱೆದುದು ಕೂಡೆ ರಣಭೂಮಿ ॥ ೩೦

ಕಡಿದ ಹಕ್ಕರಿಕೆಗಳ ಸೀಳದ
ದಡಿಯ ನೆಗ್ಗಿದ ಗುಳದ ಱೆಂಚೆಯ
ಸಿಡಿದ ಸೀಸಕ ಬಾಹುರಕ್ಷೆಯ ಜೋಡು ಮೊಚ್ಚೆಯದ ।
ಉಡಿದ ಮಿಣಿ ಮೊಗರಂಬ ಗದ್ದುಗೆ
[2]ಬಡಿಗೆಗಳ ಸೂತ್ರಿಕೆಯ[2] ಕಬ್ಬಿಯ
ಕಡಿಯಣದ ಕುಸುರಿಗಳಲೆಸೆದುದು ಕೂಡೆ ರಣಭೂಮಿ ॥ ೩೧

---

[1] ಸಮರದಿ ರಥಮುಱಿಯೆ ನಿಂದೋದ (ಕ). [2] ಜಡಿಯ ಗೆಜ್ಜೆಯ ಸೂಠಿ (ಟ.ದ).

ಮುಱಿದ ದೂಹತ್ತಿಗಳ ನೆಗ್ಗಿದ
ಸುರಗಿಗಳ ಚಿನಕಡಿಯ ತೋಮರ
ಪರಶು ಸೆಲ್ಲೆಹ ಚಕ್ರ ಸಬಳ ಮುಸುಂಡಿ ಲೌಡೆಗಳ ।
ಹಱಿದ ಹೊದೆಯಂಬುಡಿದ ಬಿಲ್ಲಿನ
ಬಿರಿದ ಬತ್ತಳಿಕೆಗಳ ಸೀಳಿದ
ಹರಿಗೆಗಳ ಹೇರಾಳದಲಿ ರಂಜಿಸಿತು ರಣಭೂಮಿ ॥ ೩೨

ಉರುಳ್ವ ತಲೆಗಳ ಕುಣಿವ ಮುಂಡದ
ಹೊರಳ್ವ ಕರಿಗಳ ಗದೆಯ ಹೊಯ್ಲಲಿ
ನರಳ್ವ ವೀರರ ಮಿದುಳ ಜೋಱಿನ [1]ಜೊಂಡೆ ಜೋಡಣೆ[1]ಯ ।
ಅರಳ್ವ ಕಡಿನಾಳಿಕೆಯ ರಕುತಕೆ
ಮರಳ್ವ ಭೂತವ್ರಜದ ಝೋಂಪಿಸಿ
ಕೆರಳ್ವ ಭಟರಟ್ಟೆಗಳಲೆಸೆದುದು ಕೂಡೆ ರಣಭೂಮಿ ॥ ೩೩

ಅಲ್ಲಿ ಕರ್ಣನ ರಥದ ತೇಜಿಯು
ಘಲ್ಲಿಸಿದನಾಕ್ಷಣದೊಳಿಚ್ಚೆಯು
ಕೆಲ್ಲೆಯಲಿ ಕಾದಿದನು ಚಗಿದನು ಕೌರವನ ಹೊರೆಗೆ ।
ಅಲ್ಲಿ ಹೊಯ್ದು ಸುಶರ್ಮನವದಿರ
ಚೆಲ್ಲಬಡಿದನು ದಳದ ನಾಯಕ
ರೆಲ್ಲರಿಗೆ ಸವಿದೋಱಿದನು ಬಲುಗದೆಯ ಹೊಯ್ಲುಗಳ ॥ ೩೪

ಇತ್ತಲತ್ತಲು ಭೀಮನೆಂದುಱೆ
ಮುತ್ತಿ ಮುಸುಕಿತು ಸೇನೆ ಚಿಮ್ಮಿದ
ನತ್ತಲಾಚೆಯಲಲ್ಲಿ ದಳ ಘಾಡಿಸಿತು ವೇಢೆಯಲಿ ।
ಇತ್ತ ಹಾಯ್ದನು ಕೌರವನ ರಥ
ದತ್ತ ಚಗಿದನು ಗುರುಸುತಾದಿಗ
ಳತ್ತಲಲ್ಲಿಗೆ ಮೊಳಗಿದನು [2]ಮೋದಿದನು ಪಟುಭಟರ[2] ॥ ೩೫

ಕರಿಘಟೆಯ ಮಱವೊಕ್ಕು ನಿಂದರು
ನರರು ತೇಜಿಗಳೋಡಿ ತೇರಿನ
ಮಱೆಯ ಸಾರ್ದವು ತೇರು ಹಾಯ್ದವು ದೊರೆಯ [3]ಹಿನ್ನೆಲೆಗೆ[3] ।

---

[1] ರಕುತದೊಂಡೆಗಳ (ಕ). [2] ಕಲಭೀಮನಿಮಿಷದಲಿ (ಟ.ದ). [3] ಹಿಂದಿಕ್ಕಿ (ಕ.ಗ.ಚ.ತ.ನ.ಪ).

[1]ಕರಿ ಮುರಿದು ಕಾಲಾಳು ಕಾಲಾ
ಳ್ತೆರಳಿ ದೊರೆಗಳ ಹಿಂದೆ ದೊರೆ ಪಯಿ
ಸರಿಸಿತಲ್ಲಯುದಲ್ಲಿ ಭೀಮನ ಹೊಯ್ಲ ಹೋರಟೆಗೆ[1] ॥* ೩೬

ಪೂತು ಮಝು ರಿಪುರಾಯಮನ್ಮಥ
ಭೂತನಾಥ ವಿರೋಧಿಬಲಪುರು
ಹೂತ ರಾಯಘರಟ್ಟ ವೈರಿನಿಕಾಯಗಿರಿವಜ್ರ ।
ಏತಕೀ ಸೂಳೆಯರು ಕ್ಷತ್ರಿಯ
ಜಾತಿಯಲಿ ಜನಿಸಿದರು ಶಿವಶಿವ
ಪೂತು ಗಂಡಿಗನೆಂದು ಗರ್ಜಿಸಿತಖಿಳ ವಂದಿಜನ ॥ ೩೭

ಹದಿನೈದನೆಯ ಸಂಧಿ ಮುಗಿದುದು.

---

[1] ತೆರಳಿದವು ತೇರುಗಳು ರಥಿಕರು
ಹೊರಳಿಯೊಡೆದುದು ಕುರುಚತುರ್ಬಲ
ಹುರುಳುಗೆಟ್ಟುದು ಪವನತನಯನ ಗದೆಯ ಗಾಢಣೆಗೆ ॥ (ಟ.ದ).

* ಈ ಪದ್ಯವಾದಮೇಲೆ (ಟ.ದ). ಪ್ರತಿಗಳಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ :—
ಮುರಿದು ದೊರೆಗಳನರಸಿ ಚಾಚಿದ
ಕುರುಬಲವು ದೆಸೆಗೆಟ್ಟು ಹೋಗುತ
ಕರಿ ಮುರಿಯ ಹಯರಥದ ಹಿಂದನು ಹೊಗುತ ದೆಸೆಗೆಡುತ ।
ಕರಿ ಮುಱಿಯೆ ಕಾಲಾಳು ತೇರಿನ
ದೊರೆಗಳೇ ಹಿಂದಾಯ್ತು ದೊರೆ ಪೈ
ಸರಿಸಲಲ್ಲಿಯದಲ್ಲಿ ಭೀಮನ ಗದೆಯ ಹೋರಟೆಗೆ ॥

ಹದಿನಾರನೆಯ ಸಂಧಿ

ಸೂಚನೆ॥ ರಾಯರಿಪುಭಟಗಿರಿನಿವಹವ
ಜ್ರಾಯುಧನು ಕಲಿ ಪಾರ್ಥನಂಭೋ
ಜಾಯತಾಂಬಕಸಹಿತ ಕಂಡನು ಧರ್ಮನಂದನನ ॥

ಕೇಳು ಧೃತರಾಷ್ಟ್ರಾವನಿಪ ಬಲು
ಗಾಳಿಗವ ಭೀಮಂಗೆ ಸೇರಿಸಿ
ಪಾಳೆಯಕೆ ತಿರುಗಿದರು ಕೃಷ್ಣಾರ್ಜುನರು ದುಗುಡದಲಿ।
ಹೇಳು ಮುರಹರ ಬುದ್ಧಿ ಕದಡಿ ಧ
ಡಾಳಿಸಿತು ಪರಿಭೇದವೊಸಗೆಯ
ಕೇಳಲಱಿಯೆನು ರಾಜವಾರ್ತೆಯನೆಂದನಾ ಪಾರ್ಥ ॥ ೧

ನೋಡುವೆವು ನಡೆ ಧರ್ಮಪುತ್ರನ
ಕೇಡು ಕಲಿಯುಗಬೀಜವೀ ಪರಿ
ಕೂಡದೀ ಹೊತ್ತಿನಲಿ ಧರ್ಮಸ್ಥಿತಿಗೆ ಲಯವಿಲ್ಲ।
ಖೇಡನಾಗದಿರಿದಕೆ ಚಿಂತಿಸ
ಬೇಡೆನುತ ಫಲುಗುಣನ ಚಿತ್ತದ
ಪಾಡಱಿದು ನುಡಿವುತ್ತ ತಂದನು ಪಾಳೆಯಕೆ ರಥವ ॥ ೨

ಬರಲು ಪಾರ್ಥನ ಕಂಡು ಪುರಜನ
ಹರೆದುದಲ್ಲಿಯದಲ್ಲಿ ದುಗುಡದ
ಭರದ ಗುಜಗುಜು ಗೋಷ್ಠಿಗಳ ಜನಜನದ ಮುಸುಕುಗಳ।
ಮುರಿದ ನೀಹಾರದ [1]ವಿ[1]ಹಾರದ
ಸರಸಿರುಹವನದಂತೆ ಪಾಳೆಯ
ಙಿರವು ಲೇಸಲ್ಲೆನುತ ಬಂದನು ರಾಜಮಂದಿರಕೆ ॥ ೩

ಕಳಚಿದನು ಸೀಸಕವ ಬೆಂಬ
ತ್ತಳಿಕೆಯನು ವಜ್ರಾಂಗಿ ಮೊಚ್ಚೆಯ
ಬಿಲುಸರಳನಿಳುಹಿದನು ರಥದಲಿ ದೈತ್ಯರಿಪು ಸಹಿತ।

[1] ನಿ (ಚ.ತ.ಪ.ಬ.), ಲಿ (ಕ).

ಇಳಿದು ರಥವನು ರಣದ ಭಾರಿಯ
ಬಳಲಿಕೆಯ ಕೈಕೊಳ್ಳದರಸನ
ನಿಳಯವನು ಹೊಕ್ಕನು ಧನಂಜಯ ಕಂಡನವನಿಪನ ॥ ೪

ಝೊಂಪಿಸುವ ಸಿರಿವೊಗದ ನೋಟದ
ಸೊಂಪಡಗಿದಾಲಿಗಳ ಧೈರ್ಯದ
ಗುಂಪಳಿದ ನಿಜರಾಜತೇಜದ ವಿಪುಳ ವೇದನೆಯ ।
ಬಿಂಪಗಿವ ಬೇಸಱಿನ ತುಱುಗಿದ
ತಂಪಿನಗ್ಗಳಿಕೆಯ ವಿಘಾತಿಯ
ಝೊಂಪಿನಲಿ ಹುದುಗಿದ ಮಹೀಶನ ಕಂಡನಾ ಪಾರ್ಥ ॥ ೫

ಬಿಗಿದು ಕಟ್ಟಿದ ಘಾಯ ಮದ್ದಿನ
ಜಿಗಿಯ ತೈಲದ ತಳಿತ ಲೇಪದ
ಉಗಿದ ಬಾಣವ್ಯಥೆಯ ಕರ್ಣಧ್ಯಾನಚೇತನದ ।
ಸೊಗಸು ಮಿಗೆ ದ್ರೌಪದಿಯ ತುದಿವೆರ
ಳುಗುರುವೆರಸಿದ ಸಿರಿಮುಡಿಯ ಬಲು
ದುಗುಡಭರದಲಿ ಕುಸಿದ ಭೂಪನ ಕಂಡನಾ ಪಾರ್ಥ ॥ ೬

ನಕುಳ ಧೃಷ್ಟದ್ಯುಮ್ನ ಸಹದೇ
ವಕ ಯುಧಾಮನ್ಯುಕನು ಸುತಸೋ
ಮಕ ಶತಾನೀಕ ಪ್ರಬುದ್ಧಕ ಚೇಕಿತಾನಕರು ।
ಸಕಲ ಕೈಕೆಯ ಮತ್ಸ್ಯಸುತ ಸಾ
ತ್ಯಕಿ ಯುಯುತ್ಸು ಶಿಖಂಡಿ ಪ್ರತಿವಿಂ
ಧ್ಯಕರು ಪಾರ್ಥನನುಪಚರಿಸಿ ಕುಳ್ಳಿರ್ದರಲ್ಲಲ್ಲಿ ॥ ೭

ಕರಗಿತಂತಃಕರಣವಾಲಿಗ
ಳೊಱತೆಯೆನೆ ಕಣ್ಣಾಲಿಯಲಿ ಕಾ
ತರಿಸಿದವು ಜಲಬಿಂದುಗಳು ಪುರುಹೂತನಂದನನ ।
ಅರಸನಿರ[1]ವಿವೆಯೊ[1]ನುತ ನೊಸಲನು
ಚರಣದಲಿ ಚಾಚಿದನು ಚೇಷ್ಟಾ
ಪರಿಗತಿಯನಾತ್ಮೈವೃತಭಿಮುಖನಾಗಿ ಕುಳ್ಳಿರ್ದ ॥ ೮

---

[1] ವಿಂತೆ (ಚ.ತ.ಪ.ಬ).

ನೊಂದೆಲಾ ನರನಾಥ ವಿಧಿಯೇ
ನೆಂದು ಮುನಿದುದೊ ನಿನಗೆನುತ್ತ ಮು
ಕುಂದನತಿಕಾರುಣ್ಯದೃಷ್ಟಿಯಲವನಿಪನ ನೋಡಿ ।
ಮಂದಮಂದದಿ ಪಾಣಿಪಲ್ಲವ
ದಿಂದ ತಡವಿದನೇಱನಾಗಳೆ
ಕಂದೆಱೆದು ನೋಡಿದನು ಭೂಪತಿ ಕೃಷ್ಣ ಫಲುಗುಣರ ॥ ೯

ಹರಿಕರಾಬ್ಜಸ್ಪರ್ಶಮಾತ್ರ
ಸ್ಫುರಣದಿಂದಾಪ್ಯಾಯಿತಾಂತಃ
ಕರಣನಾದನು[1] ನನೆದನುದ್ಗತಬಾಷ್ಪವಾರಿಯಲಿ[1] ।
ಮುರಿಯದೇಱುನ ಮೈವಳಿಗೆ ಲಘು
ತರದ ಲುಳಿಯಲಿ ಮೈಯ ಬಲಿದಾ
ದರಿಸಿ ಕುಳ್ಳಿರ್ದನು ಮಹೀಪತಿ ಮಾನಿನಿಯ ಮಲಗಿ ॥ ೧೦

ಹದುಳವೇ ಪಾರ್ಥಂಗೆ ಹೇರಾ
ಳದಲಿ ಕಾದಿದನಾ ಸುಶರ್ಮನ
ಕದನ ಬೆಟ್ಟಿತು ಶಪಥವಲ್ಲಾ ತಮ್ಮೊಳನಿಬರಿಗೆ ।
ಕೆದಱಿದನು ಕೊಲ್ಲಣಿಗೆಯಲಿ ಬಂ
ದೊದಗಿ ನೀವವದಿರಲಿ ಸುಯ್ಧೋ
ನದಲಿ ಬಂದುದೆ ಲಕ್ಷವೆಂದನು ನೃಪತಿ ಕೃಷ್ಣಂಗೆ ॥ ೧೧

ಆಯಿತಿದು ನೀ ಬಂದ ಪರಿ ರಿಪು
ರಾಯ ಥಟ್ಟಿನೊಳೊಕ್ಕಲಿಕ್ಕಿದ
ದಾಯವೊಳ್ಳಿತು ದಿಟ್ಟನಾವನು ನಿನ್ನ ಹೋಲಿಸಲು ।
ಕಾಯಿದರಿ ಕಳುಹಿದನೊ ಮೇಣಡ
ಹಾಯಿದನೊ ಕರ್ಣಂಗೆ ಮಾಡಿದು
ಪಾಯವಾವುದು ಪಾರ್ಥ ಹೇಳೆಂದವನಿಪತಿ ನುಡಿದ ॥ ೧೨

ಬೇಱೆ ಸಮಸಪ್ತಕರೊಳೆಕ್ಕಟಿ
ತೋಱಿಸಿದೆ ನೀ ತೊಂಡಿನೋಲೆಯ
ಕಾಱಿತನವನು ಸೂತಸುತನಿಲ್ಲವರ ಥಟ್ಟಿನಲಿ ।

---

[1] ನೃಪತಿ ದುಗುಡದ ಬಾಷ್ಪವಾರಿಗಳ (ಕ), ನಾದಿದನು ಘನಬಾಷ್ಪವಾರಿಯಲ (ಚ).

ಹಾಱಿಲೂದಿ ಸುಶರ್ಮನವದಿರ
ತೂಱಿ ತಿರುಗಿದ ಬಳಿಕ ಕೈ ಮೈ
ತೋಱಿದನೆ ಕಲಿ ಕರ್ಣ ನಿನ್ನೊಡನೆಂದನಾ ಭೂಪ ॥ ೧೩

ಎಲೆ ಧನಂಜಯ ಸೂತತನಯನ
ಗೆಲಿದು ಬಂದೆಯೊ ದಿವಿಜನಗರಿಗೆ
ಕಳುಹಿ ಬಂದೆಯೊ ಕಂಡು ಕೆಣಕದೆ ಬಂದೆಯೋ ಮೇಣು ।
ಉಳುಹಿ ಬಿಡುವನೆ ಸಮರಮುಖದಲಿ
ಮಲೆತನಾದರೆ ಕರ್ಣನೇನ
ಗ್ಗಳಿಕೆವಡೆದನೊ ಶಿವಶಿವಾ ಎಂದರಸ ಬಿಸುಸುಯ್ದ ॥ ೧೪

ಜೀಯ ಖಾತಿಯಿದೇಕೆ ಕರ್ಣನ
ಕಾಯಿದುಳುಹಿದೆನೊಂದು ಬಾರಿ ವಿ
ಘಾಯದಲಿ ಘಟ್ಟಿಸುವೆನೀಗಳೆ ಹಾಯ್ಕು ವೀಳೆಯವ ।
ರಾಯದಳಗಿಳವೆನ್ನ ಕೂಡೆ ನ
ವಾಯಿಯೋ ಕಲಿ ಕರ್ಣನಾಯುಷ
ಹೋಯಿತಿದೆಯೆಂದೊರಸಿದನು ವಾಮಾಂಘ್ರಿಯಲಿ ನೆಲನ ॥ ೧೫

ಈಸು ಪರಿಯಲಿ ನಿಮ್ಮ ಚಿತ್ತದೊ
ಳಾಸಱಾಯಿತೆ ನಮ್ಮ ದುಷ್ಕೃತ
ವಾಸನಾಫಲವೈಸಲೇ ತಾನಿದ್ದು ಫಲವೇನು ।
ಆ ಸುಯೋಧನವಿಗಡಭ[1]ಟ[1]ವಾ
ರಾಸಿಯನು ಮುಕ್ಕುಳಿಸುವೆನು ಧರ
ಣೀಶ ನಿಮ್ಮಡಿಯಾಣೆ ನೇಮವ ಕೊಂಡೆ ನಾನೆಂದ ॥ ೧೬

ನಾಲಗೆಯ ನೆಣಗೊಬ್ಬು ಮಿಕ್ಕು ಧ
ಢಾಳಿಸಿದರೇನಹುದು ಕರ್ಣನ
ಕೋಲ ಗಱಿ ಸೋಂಕಿದರೆ ಸೀಯದೆ ಸಿತಗತನ ನಿನಗೆ ।
ವೀಳೆಯವ ತಾ ಕರ್ಣನಾಯುಷ
ಕೋಳುವೋಯಿತ್ತೆಂಬ ಗರ್ವನ
ಗಾಳುತನವನು ನಂಬಲಱಿವೆನೆ ಪಾರ್ಥ ಹೇಳೆಂದ ॥ ೧೭

---

[1] ಲ (ತ.ದ.ನ).

ನಿನಗೆ ಮಣಿವವನಲ್ಲ ರಾಧಾ
ತನಯನವ ಹೆಚ್ಚಾಳು ಕಡ್ಡಿಯ
ಮೊನೆಗೆ ಕೊಂಬನೆ ನಿನ್ನ[1]ನೀ ಹೆಮ್ಮಕ್ಕಳಿದಿರಿನಲಿ[1] ।
ಕನಲಿ ಕಳವಳಿಸಿದರೆ ನೀನಾ
ತನ ವಿಭಾಡಿಸಲಾಪ ಸತ್ವದ
ಮನವ ಬಲ್ಲೆನು ಪಾರ್ಥ ನುಡಿಯದಿರೆಂದನಾ ಭೂಪ ॥ ೧೮

ಬಲನ ಜಂಭನ ಕೈಟಭನ ದಶ
ಗಳನ ನಮುಚಿಯ ಕಾಲನೇಮಿಯ
[2]ಬಲ ನಿಶುಂಭ[2] ಹಿರಣ್ಯಕಾದಿಯ ಖಳರ ಸಂದೋಹ ।
ಅಳವಿಗೊಡುವರೆ ಪಾಡಹುದು ನೀ
[3]ನಿಲುಕಲಳವೇ ಕರ್ಣ[3]ಜಯವತಿ
ಸುಲಭವೇ ನಿನ್ನಂದದವರಿಗೆ ಪಾರ್ಥ ಹೇಳೆಂದ ॥ ೧೯

ಜಾಣತನದಲಿ ಕಾದಿ ಹಿಂಗುವ
ದ್ರೋಣನಲ್ಲಳವಿಯಲಿ ಕಳವಿನ
ಕೇಣದಲಿ ಕೊಂಡಾಡುವರೆ ಗಾಂಗೇಯನಿವನಲ್ಲ ।
ಸಾಣೆಗಂಡಲಗಿವನು ಸಮರಕೆ
ಹೂಣಿಗನು ರಿಪುಬಲದ ಹಾಣಾ
ಹಾಣಿಕಾಱನು ಕರ್ಣನಳುಕುವನಲ್ಲ ನಿನಗೆಂದ ॥ ೨೦

[4]ಜಾಳ ಜಱೆದು[4] ಜಡಾತ್ಮರಿಗೆ ಜಂ
ಘಾಳತನವನು ಮೆಱೆದು ಜೋಡಿಯ
ಖೂಳರನು ಜೊಪ್ಪರಿಸಿ ಚೂಣಿಯ ಚರರ ಚಪ್ಪರಿಸಿ ।
ಆಳುತನದಲಿ ಬೆಱೆವ ನಿನಗವ
ಸೋಲಲಱಿಯನು ನಿನ್ನ ಗಂಟಲ
ಗಾಳ ನಿನಗಳುಕುವನೆ ಕರ್ಣನು ಪಾರ್ಥ ಹೇಳೆಂದ ॥ ೨೧

ಏನ ಹೇಳುವೆನೆನ್ನ ದಳ[5]ದಲಿ
ತಾನು ಭೀಮನ[5] ಘಟ್ಟಿನಲಿ ಬಳಿ
ಕೀ ನಕುಲ ಸಹದೇವ ಸಾತ್ಯಕಿ ದ್ರುಪದರೊಡ್ಡಿನಲಿ ।

---

1 ನಿನ್ನ ವೀರವ ಹೆಂಗಳಿದಿರಿನಲಿ (ಕ.ಗ). 2 ಬಲಿ ನಿಕುಂಭ (ಖ.ಘ). 3 ನಿಲುವಳವೆ ಕರ್ಣನ (ಕ.ಚ.ಟ.ನ). 4 ಜಾಳು ಜರಡು (ಖ.ಘ). 5 ಪವನ ತನಯನ (ಕ.ಗ).

ಮಾನನಿಧಿ ರಾಧೇಯನತ್ತಲು
ತಾನೆ ತನುಮಯವಾಯ್ತು ಪಾಂಡವ
ಸೇನೆ ಬಡಸಾಹಸಿಕ[1]ರೆಣೆಯೇ[1] ಸೂತತನಯಂಗೆ ॥ ೨೨

ಎಲ್ಲಿ ಕರ್ಣನು ತಿರುಗಿ ನೋಡಿದ
ಡಲ್ಲಿ [2]ತಾನೆಡವಂಕ ಬಲಮುಖ
ದಲ್ಲಿ[2] ಸೂತಜನೆಂಟುದೆಸೆಗಳ ನೋಡೆ ಕರ್ಣಮಯ ।
ಎಲ್ಲಿ ನೋಡಿದಡಲ್ಲಿ ಕರ್ಣನ
ಬಿಲ್ಲ ಬೊಬ್ಬೆ ರಥಾಶ್ವರವವೆದೆ
ದಲ್ಲಣದ ದೆಖ್ಖಾಳ ರಚನಾರಸಿಕನವನೆಂದ ॥ ೨೩

ಮುಱಿದು ಹಱಿಹಂಚಾದ ನಿಜಮೋ
ಹರವ ನೆಱೆ ಸಂತೈಸಿ ಜೋಡಿಸಿ
ಜಱೆದು ಗಱಿಗಟ್ಟಿದ ವಿರೋಧಿವ್ರಜದ ಥಟ್ಟಣೆಯ ।
ಮುಱಿದು ಕುಱಿದಱಿಮಾಡಿ ದೊರೆಗಳ
ನರಸಿ ಕಾದಿ ವಿಭಾಡಿಸುವ ರಣ
ದುಱುಬೆಕಾಱನನೆಂತು ಸೈರಿಸಿ ಗೆಲುವೆ ನೀನೆಂದ ॥ ೨೪

ಕಾದಿ ನೊಂದೆನು ತಾನು ಬಳಿಕ ವೃ
ಕೋದರನೆಯಡಹಾಯ್ದನಾತನ
ಕಾದಿ ನಿಲಿಸಿ ಮದೀಯ ರಥವನು ಮತ್ತೆ ಕೆಣಕಿದನು ।
ಮೂದಲಿಸಿ ಸಹದೇವ ನಕುಲರು
ಕಾದಲವದಿರ ಮುಱಿದನಗ್ಗದ
ಕೈದುಕಾಱರ ದೇವ [3]ಕರ್ಣನ[3] ಗೆಲುವರಾರೆಂದ ॥ ೨೫*

ಮಲೆತು ಧಾಳಾಧೂಳಿಯಲಿ ಬಲ
ಸುಳಿ ಮಸಗಿಯೆನ್ನೊಬ್ಬನ[4]ನು[4] ಮೈ
ಬಳಸಿ ಕಾದಿತು ವೀರ ಕರ್ಣನ ಕೂಡೆ ತಲೆಯೊತ್ತಿ ।
ಒಲವರವು ನಿನಗುಳ್ಳರಾಗಳೆ
ನಿಲಿಸಿದಾ ನೀ ಬಂದು ಬಯಲ
ಗ್ಗಳಿಕೆ[5]ಯನೆ ಬಿಡೆ ಕೆದಱುತಿಹೆ ಮಾಣೆಂದು ನೃಪ ನುಡಿ[5]ದ ॥ ೨೬

[1] ರಿದಿರೇ (ಕ.ಖ.ಗ). [2] ರವಿಸುತನೆಡಬಲಂಗಳೊಳೆಲ್ಲ (ಕ). [3] ನಾತನ (ಟ.ತ.ನ ಬ). * ಈ ಪದ್ಯವು (ಚ.ಪ). ಪ್ರತಿಗಳಲ್ಲಿಲ್ಲ. [4] ನೆ (ಕ.ದ.ನ).
[5] ಗಳ ಬಿಡು ಬೆರೆವುತಿಹೆ ನೀನೆಂದನಾ ಭೂಪ (ಟ.ದ).

ಉಕ್ಕಿದುದು ತನಿವೀರರಸ ಕುದಿ
ದುಕ್ಕಿ ಹರಿದುದು ರೌದ್ರರಸವವ
ಱಿಕ್ಕಜವ ನಭಕೊತ್ತಿ ಪರಿದುದು [1]ಶಾಂತಿ[1]ರಸ ಲಹರಿ |
ಮಿಕ್ಕು ಬಹಳಕ್ರೋಧವೊಡಲೊಳ
ಗುಕ್ಕಿತಮಳೋತ್ಸಾಹ ಚಾಪಳ
ಸುಕ್ಕಿತೊಂದೇ ನಿಮಿಷ ಮೋನದೊಳಿರ್ದನಾ ಪಾರ್ಥ || ೨೭

ಹೇಳಲಂಜುವೆನಾ ಸುಶರ್ಮಕ
ನಾಳು ತಾಯಿಗೆ ಮಕ್ಕಳಾಗದೆ
ಬೀಳಹೊಯ್ದು ನಿಹಾರದಲಿ ತಿರುಗಿದೆನು ಹರಿಸಹಿತ |
ಕೋಲ ಗುರುವಿನ ಮಗನಲೇ ಹರಿ
ಧಾಳಿಹರಿದಡಗಟ್ಟಿ ತಡೆದನು
ಹೇಳಿ ಫಲವಿನ್ನೇನೆನುತ ಬಿಸುಸುಯ್ದನಾ ಪಾರ್ಥ || ೨೮

ಇಟ್ಟಣಿಸಿಕೊಂಡೆನ್ನೊಡನೆ ಸರಿ
ಗಟ್ಟಿ ಕಾದಿದ ರವಿಸುತನ ಹುಡಿ
ಗುಟ್ಟಿದೆನು ರಥವಾಜಿ ಸೂತ ಶರಾಸನಾದಿಗಳ |
ಮುಟ್ಟೆ ಬಂದನು ಖಡುಗದಲಿ ಮೈ
ಮುಟ್ಟಿ ಹೆಣಗಿದೆನಾಕ್ಷಣಕೆ ಸಾ
ಲಿಟ್ಟು ಸರಿದುದು ಸಕಲ ಕೌರವಸೇನೆ ಸರಿಸದಲಿ || ೨೯*

---

[1] ಶೌರ್ಯ (ಟ.ದ). * ಈ ಪದ್ಯವಾದಮೇಲೆ (ಕ) ಪ್ರತಿಯಲ್ಲಿ ಮುಂದಿನೆರಡು ಪದ್ಯಗಳು ಹೆಚ್ಚಾಗಿವೆ :—

ಬಂದ ಕೌರವಬಲವ ನಿಮಿಷಕೆ
ಹಿಂದು ಮುಂದನೆ ಮಾಡಿದೆನು ಬಳಿ
ಸಂದು ಬರುತಿರೆ ಕೃಷ್ಣ ಕಂಡನು ಪವನನಂದನವ |
ನಿಂದು ನಿಮ್ಮಯ ಕ್ಷೇಮಕೌಶಲೆ
ದಂದವನು ಬೆಸಗೊಳಲು ಸೇನಾ
ವೃಂದ ಕವಿದುದು ಮತ್ತೆ ಕೌರವರಾಯ ಮೊದಲಾಗಿ || ೧

ಕಡುಹು ಮಿಗಲೀ ಕೌರವನ ಬಲ
ನಡೆದು ಬರುತಿರೆ ಧಾರಣಿಯು ಮಿಗೆ
ನುಡಿಗ ತೆರಪಿಲ್ಲೆನಲು ಪವನಜನೆಂದನೆನ್ನೊಡನೆ |
ತಡೆವೆನಿನಿತುವನೀಕ್ಷಣಕೆ ನೀ
ನೊಡೆಯನಿರವನು ನೋಡಿ ಬಾಯೆನೆ
ತಡವು ತೋಱುತು ನಿಮ್ಮ ಚಿತ್ತದೊಳೆನಲು ನೃಪ ನುಡಿದ || ೨

ತೊಡಕಿದನು ಗಡ ಗರುಡ ಹಾವಿನ
ತಡಿಕೆವಲೆಯಲಿ ನಿನ್ನ ಗಮನವ
ತಡೆದರೈ ತಪ್ಪೇನು ಕೌರವ ದಳದ ನಾಯಕರು ।
[1]ಕಡುಹಿನಲಿ ತಡವಾದುದುಳಿದಂ
ತೆಡೆಯಲುಳಿವರ್ಜುನನೆ ನಮ್ಮವ
ಗಡವ[1] ಕೇಳಿದು ನಿಲ್ಲನೆಂದನು ನಗುತ ಯಮಸೂನು ॥ ೩೦

ಏನನೆಂಬೆನು ನಮ್ಮ ಪುಣ್ಯದ
ಹಾನಿ ತಲೆದೋಱಿದರೆ ಭೀಮನ
ಸೂನುವಿರಲಭಿಮನ್ಯುವಿರಲೆಮಗೀ ವಿಪತ್ತಹುದೆ ।
ಆ ನದೀಜ ದ್ರೋಣರಲಿ[2] ತಾ
ಹಾನಿಯನು ಮಿಗೆ ಕಂಡೆನೇ ನೆಱೆ
ಹೀನನನು[2] ಕಂಡಾದಡೆಯು ಬದುಕುವುದು ಲೇಸೆಂದ ॥ ೩೧

ಅರಳಿಚದೆ ಮಧುಮಾಸ ಮಾಣಲಿ
ವರುಷಋತುವೇ ಸಾಕು ಜಾತಿಗೆ
ಜರಡರೆಮಗಿನ್ನೇನು ಪೂರ್ವಪ್ರಕೃತಿವನವಾಸ ।
ಸಿರಿಗೆ ಕಕ್ಕುಲಿತೆಯೆ ವಿಪಕ್ಷವ
ಬೆರಸಿ ಬದುಕುವೆವೈಸಲೇ ವರ
ಗುರುವಲಾ ಧೃತರಾಷ್ಟ್ರನೂಱೆಯವೇನು ಹೇಳೆಂದ ॥ ೩೨

ಒಱೆದೆ ಬಯಸಿದಡಹುದೆ ರಾಜ್ಯದ
ಹೊಱಿಗೆಯನು ನಿಶ್ಶಂಕೆಯಲಿ ಹೊ
ಕ್ಕಱಿದು [3]ಬಹ ಸತ್ವಾತಿಶಯ[3] ಬೇಹುದು ರಣಾಗ್ರದಲಿ ।
ಇಱಿದು ಮೇಣ್ ರಿಪುರಾಯರನು ಕು
ಕ್ಕುಱಿಸುವರೆ ರಾಧೇಯನಂತಿರ
ಲುಱುವನೊಬ್ಬನೆ ಬೇಹುದಲ್ಲದಡಿಲ್ಲ ಜಯವೆಂದ ॥ ೩೩

---

[1] ತಡವಿನಲಿ ತಡ ವಾಯ್ತು ಘಳಿದಂ। ತೆಡೆಯಲುಳಿದರ್ಜುನಗೆ ನಮ್ಮವ।ಗಡವ (ಕ.ದ). [2] ಪ್ರೇಣೀ ನಿರೋಧವ ಕಂಡೆವೇ ಕಾನೀನನು (ಟ.ತ.ಪ.ಬ). [3] ಮರಳುವ ಸತ್ವ (ಕ.ಗ).

ಎವಗೆ ವಿಕ್ರಮವೆಂಬಡೀ ರೌ
ರವವ ಕಂಡೆನು ಕರ್ಣನಂತಿರ
ಲೆವಗೆ ಧೀವಸಿಯಾಗಿ ಕಾದುವರೆಂಬರವರಿಲ್ಲ ।
ಬವರ ಗೆಲುವರೆ ಹರಿಗೆ ಕೊಡು ಗಾಂ
ಡಿವವ ಸಾರಥಿಯಾಗು ನೀನೆಂ
ದವಗಡಿಸಿದನು ವೀರನಾರಾಯಣನ ಮೈದುನನ ॥ ೩೪

ಹದಿನಾಜನೆಯ ಸಂಧಿ ಮುಗಿದುದು.

ಹದಿನೇಳನೆಯ ಸಂಧಿ

ಸೂಚನೆ॥ ರಾಯನನು ಕೆಡೆನುಡಿದನಾ ವ
ಜ್ರಾಯುಧನ ನಂದನನು ಬಳಿಕಬ್
ಜಾಯತಾಂಬಕ ಸಂತವಿಟ್ಟನು ಧರ್ಮಜಾರ್ಜುನರ ॥

ಕೇಳು ಧೃತರಾಷ್ಟ್ರಾವನಿಪ ಭೂ
ಪಾಲನಾಡಿದ [1]ನುಡಿಯನಾಲಿಸಿ
ಕೇಳಿದನು ಕೆದಱಿದನು ಜಡಿದವು ರೋಮರಾಜಿಗ[1]ಳು ।
ಮೇಲುಮೇಲುಬ್ಬೇಳ್ವ ರೋಷ
ಜ್ವಾಲೆ ಹೊದಸಿತು ವದನವನು ಕ
ಣ್ಣಾಲಿ ಕಾಹೇಱಿದವು ಪಾರ್ಥಂಗೊಂದು ನಿಮಿಷದಲಿ ॥ ೧

ಆಯುಧವ ಹಿಡಿದೊಱೆಯನುಗಿದನ
ಡಾಯುಧವ ಝಳಪಿಸುತ ರೌದ್ರ
ಸ್ಥಾಯಿಭಾವದ ಭಾರದಲಿ ಭುಲ್ಲಯಿಸಿ ಭಯವಡಗಿ ।
ರಾಯನಲ್ಲಿಗೆ ಮೆಲ್ಲಮೆಲ್ಲನು
ಪಾಯಗತಿ ಪಲ್ಲವಿಸಲುಪ್ಪರ
ಘಾಯದಲಿ ಲಾಗಿಸುವ ಪಾರ್ಥನ ಕಂಡುದಖಿಳಜನ ॥ ೨

ಅಹಹ ಕೃತಘ್ನಾಯ್ತು ಹಾ ಹಾ
ರಹವಿದೇನೇನೆನುತ ರಾಯನ
ಮಹಿಳೆ ಬಿದ್ದಳು ಮೇಲುಖಡ್ಗಕೆ ತನ್ನ[2]ನಡೆ[2]ಯೊಡ್ಡಿ ।
ಬಹಳ ಶೋಕದಲಖಿಳ ಜನವು
ಮ್ಮಹವ ಬಿಸುಟರು ದೈವಗತಿ ದು
ಸ್ಸಹವಲಾ ಎನುತಸುರರಿಪು ಹಿಡಿದನು ಧನಂಜಯನ ॥ ೩

ಹಿಡಿಯದಿರು ಮುರವೈರಿ ಪಾರ್ಥನ
ಬಿಡು ಬಿಡೀತನ ಖಡ್ಗಕಿದೆಯೆ
ನ್ನೊಡಲು ತನ್ನನೆ ಧಾರೆಯೆಱೆದೆನು ನಯನವಾರಿಯಲಿ ।

---

[1] ವಾಗ್ವಿಲಾಸವನಾಲಿಸಿಯು ಕಲಿಪಾರ್ಥ ಕುದಿದನು ಕೋಪ ತಾಪದಲಿ (ಟ.ದ). [2] ನೆದೆ (ಗ.ಟ.ದ), ವ್ಯೊ (ಪ.ಬ).

ತೊಡಗಿದೀತನ ರಾಜಕಾರ್ಯವ
ಕೆಡಿಸದಿರು ನಿರ್ವಾಹಿಸಲಿ ನೀ
ಬಿಡು ಬಿಡೆನೆ ಜಱೆದನು ಮುರಾಂತಕನಿಂದ್ರನಂದನನ ॥ ೪

ಅಕಟ ಗುರುಹತ್ಯಾಮಹಾಪಾ
ತಕಕೆ ತಂದ್ಯೆ ಮನವ ಭರತ
ಪ್ರಕಟಕುಲನಿರ್ಮೂಲಕನೆ ನೀನೊಬ್ಬನುದಿಸಿದಲ ।
ವಿಕಳ ಕುರುನೃಪರೊಳಗೆ ದುರಿತಾ
ತ್ಮಕರ ಕಾಣೆನು ನಿನ್ನ ಸರಿಹೋ
ಲಿಕೆಗೆ ಹರಹರದೇನ ನೆನೆದನೆನುತ್ತ ಗರ್ಜಿಸಿದ ॥ ೫

ಧರಣಿಪನ ಕೊಲಲೆಂದೊ ಮೇಣೀ
ತರುಣಿಯರಿಗೋ ನಕುಲ ಸಹದೇ
ವರಿಗೆಯೋ ಮೇಣೆನಗೆಯೋ ನೀನುಗಿದಡಾಯುಧದ ।
ಪರಿಯ ಹೇಳ್ಳೈ ಪಾರ್ಥ ಮೋನದೊ
ಳಿರದಿರೆನ್ನಾಣೆನಲು ಬೆಱಗಿನ
ಗರದ [1]ಗಾಹಿನಲದ್ದು[1] ಮೋನದೊಳಿದ್ದನಾ ಪಾರ್ಥ ॥ ೬

ಬೆದಱಿಸದಿರ್ರೈ ಕೃಷ್ಣ ದುಷ್ಕ
ರ್ಮದಲಿ ಸುಳಿಯೆನು ಭೂಪತಿಯು ಗ
ದ್ಗದವಚೋವಿನ್ಯಾಸವನ್ಯಾಯಪ್ರಪಂಚವಿದು ।
ಅದಱನೀತನ ಪೊಯ್ದು ಕೊಂದ
ಲ್ಲದೆ ಸುನಿಷ್ಕೃತಿಯಿಲ್ಲ ಸತ್ಯಾ
ಭ್ಯುದಯವೇ ತನ್ನುದಯವದಱಿಳಿವೆನ್ನ ಲಯವೆಂದ ॥ ೭

ದೇವ ಪೂರ್ವದಲೆನ್ನ ನುಡಿ ಗಾಂ
ಡೀವವೇತಕೆ ನಿನಗೆ ನಿನಗೀ
ದೇವಧನು ಸಾದೃಶ್ಯವೇ ತೆಗೆಯೆಂದು ರೋಷದಲಿ ।
ಆವನೊಬ್ಬನು ನುಡಿದನಾತನ
ಜೀವನವ ಜಕ್ಕುಲಿಸಿಯೆನ್ನ ವ
ಚೋವಿಳಾಸವ ಕಾಯ್ವೆನೆಂದೆನು ಕೃಷ್ಣ ಕೇಳೆಂದ ॥ ೮

---

[1] ಘಾಡದಲದ್ದು (ಕ).

ಸಾರು ತೆಗೆ ಗಾಂಡಿವವ ನಿನಗನು
ಸಾರಿಯೇ ಬಿಸುಡೆಂದು ನುಡಿಯುನೆ
ಧಾರುಣೀಪತಿ ಕೇಳಿರೇ ನೀವಿನಿಬರೀ ನುಡಿಯ ।
ಆರದನ್ಯಾಯ ವು ವಿಚಾರವಿ
ಶಾರದನು ನೀನೆಲೆ ಮುಕುಂದ ವಿ
ಕಾರಿಯೇ ತಾನೆಂದು ಬಿನ್ನಹಮಾಡಿದನು ಪಾರ್ಥ ॥ ೯

ಲೇಸು ಲೇಸಿದು ತಮ್ಮನಾಡಿದ
ಭಾಷೆ ಬಾಹಿರವಾಗಬೇಡ ವಿ
ನಾಶಕಾನಂಜನು ಮುರಾಂತಕ ಬಿಡು ಧನಂಜಯನ ।
ಆಸೆಯೆನಗೀ ರಾಜ್ಯದಲಿ ಮೇ
ಣೀ ಶರೀರದಲಿಲ್ಲ ಪಾರ್ಥನ
ಭಾಷೆ ಸಂದರೆ ಸಾಕು ನೀ ಸಾರೆಂದನಾ ಭೂಪ ॥ ೧೦

ಮರುಳೆ ಮೋನದೊಳಿರು ಯುಧಿಷ್ಠಿರ
ನರನ ನೀ ಮುಂದಿಟ್ಟು ಯಮುದೂ
ತರಿಗೆ ಕೈವರ್ತಿಸುವ ಪರಿಯೇ ಕೋಟಿನರಕದಲಿ ।
ಹುರುಳನಱಿಯದೆ ಧರ್ಮಶಾಸ್ತ್ರದ
ಪರಮತತ್ತ್ವವದಾವ ಮುಖವೆಂ
ದಱಿಯೆ ವಿಷಮಕ್ಷತ್ರತಾಮಸ ನಿನ್ನ ಬಿಡದೆಂದ ॥ ೧೧

ಎಲೆ ಧನಂಜಯ ಧರ್ಮಪುತ್ರನ
ಕೊಲುವೆನುಳುಹುವದಿಲ್ಲವೆಂಬ
ಗ್ಗಳಿಕೆಯಿದು ನಗೆಯಲ್ಲವೇ ನಿಶ್ಚಯವೆ ಹಿಂಸೆಯಲಿ ।
ಕಲು[1]ಮನವ[1]ಲಾ ನಿನಗಕಟ ನಿ
ರ್ಮಳದ ಧರ್ಮಸ್ಥಿತಿರಹಸ್ಯವ
ತಿಳುಪಿದವರಾರೆನುತ ತಲೆದೂಗಿದನು ಮುರವೈರಿ ॥ ೧೨

ನುಡಿ[2]ದ ಮಾತ್ರ[2]ದಲಿರದು ಧರ್ಮದ
ಬೆಡಗು ತಾನದು ಬೇಱೆ ಸತ್ಯವ
ನುಡಿದು ಕೆಟ್ಟವರುಂಟು ಹಿಂಸಾಧರ್ಮವೃತ್ತಿಯಲಿ ।

---

[1] ಮರನ (ಕ.ಗ).   [2] ಯಧರ್ಮ (ಟ.ಕ.ಬ), ಯಮಾರ್ಗ (ದ.ನ).

ನಡೆದು ಯಾವಜ್ಜೀವದಲಿ ಗತಿ
ಪಡೆದರುಂಟೆಲೆ ಪಾರ್ಥ ನಿನ್ನು
ಗ್ಗಡದ ವೀರಾವೇಶ ಮಾಣಲಿ ಮಾತ ಕೇಳೆಂದ ॥ ೧೩

ವನದೊಳೊಬ್ಬನು ಕೌಶಿಕಾ[1]ಹ್ವ[1]ಯ
ಮುನಿ ತಪಶ್ಚರಿಯದಲಿ ಸತ್ಯವೆ
ತನಗೆ ಸುವ್ರತವೆಂದು ಬಟ್ಟೆಯೊಳಿದ್ದನೊಂದು ದಿನ ।
ವನಚರರು ಬೇಹಿನಲಿ ಭೂಸುರ
ಜನವ ಬೆಂಬತ್ತಿದರು ಕೌಶಿಕ
ಮುನಿಯ ಬೆಸಗೊಂಡರು ಮಹೀಸುರಮಾರ್ಗಸಂಗತಿಯ ॥ ೧೪

ವಿತತ ಸತ್ಯದ ವಿಷಯಭೇದ
ಸ್ಥಿತಿಯನಱಿಯದೆ ಮುನಿಪ ವನಚರ
ತತಿಗೆ ಭೂಸುರ ಜನದ ಮಾರ್ಗವನಱುಹಿದನು ಬಳಿಕ ।
ಅತಿದುರಾತ್ಮಕರವದಿರನಿಬರು
ಕ್ಷಿತಿಸುರರ ಕೊಂದಮಳಭೂಷ
ಪ್ರತತಿಯನು ಕೊಂಡೊಯ್ದರೆಲೆ ಕೌಂತೇಯ ಕೇಳೆಂದ ॥ ೧೫

ಕಾಲವಶದಲಿ ಕೌಶಿಕನನಾ
ಕಾಲದೂತರು ತಂದರಾತನ
ಮೇಲುಪೋಗಿನ ಸುಕೃತದುಷ್ಕೃತವನು ವಿಚಾರಿಸಲು ।
ಮೇಲನಱಿಯದೆ ಸತ್ಯದಲಿ ವಿಪ್ರಾ
ವಳಿಯ ವಧೆಯಾತಂಗೆ ಬಂದುದು
ಹೇಳಲದು ಭೋಕ್ತವ್ಯವತಿಪಾತಕದ ಫಲವೆಂದ ॥ ೧೬

ನರಕಕಾತನ ನೂಕಿದರು ವಿ
ಸ್ತರಣವೆಂತೈ ಪಾರ್ಥ ಸತ್ಯದ
ಹುರುಳನಱಿಯದೆ ಕಾಳುಗೆಡೆದರೆ ಕಾರ್ಯವೆಂತಹುದು ।
ಮರುಳೆ ಕೇಳದ್ಭುತವ ಹಿಂಸಾ
ಪರನಹರ್ನಿಶವಾ ದುರಾತ್ಮನ
ವರಿಸಿದರು ದೇವಾಂಗನೆಯರೀ ಕಥೆಯ ಕೇಳೆಂದ ॥ ೧೭

---

[1] ನ್ವ (ಕ.ಚ.ನ).

ಬನದೊಳೊಬ್ಬ ಬಳಾಕನೆಂಬವ
ವನಚರನು ತನ್ನಯ ಕುಟುಂಬವ
ನನುದಿನವು ಮೃಗವಧೆಯಲೇ ಸಲಹಿದನು ಬೇಸಱದೆ ।
ತನಗೆ ಕಡೆಪರಿಯಂತ ಮತ್ತೊಂ
ದನುವನಱಿಯನು ರಾಗಲೋಭವ
ನೆನೆಯನದಱಿಂ ಹಿಂಸೆ ಸಂದುದು ವೃತ್ತಿರೂಪದಲಿ ॥ ೧೮

ವರವವಂಗೆ ಕುಟುಂಬರಕ್ಷಾ
ಕರಣಕಾರಣವಾದ ಹಿಂಸಾ
ಚರಣೆಯೆಂದೇ ಬರಹ ಧರ್ಮನ ಸೇನಬೋವನಲಿ ।
ಮರಣವಾತಂಗಾಗೆ ಕೊಂಡೊ
ಯ್ದರು ಸುರಾಂಗನೆಯರು ಧನಂಜಯ
ಪರಮಧರ್ಮರಹಸ್ಯವಾವಂಗಱಿಯಬಹುದೆಂದ ॥ ೧೯

ಪಿತೃಸಮೋಭ್ರಾತಾ ಎನಿಪ್ಪುದು
ಶ್ರುತಿವಚನವರಸಂಗೆ ನೀನುಪ
ಹತಿಯಮಾಡಲು ನೆನೆದೆ ಮಾತಿನವಾಸಿ ಬೇಕೆಂದು ।
ಕ್ಷಿತಿಯೊಳಬುಜಮೃಣಾಳಕೋಸುಗ
ಕೃತತಟಾಕವನೊಡೆದವೊಲು ಭೂ
ಪತಿವಧವ್ಯಾಪಾರ ನಿರ್ಮಳಧರ್ಮವಹುದೆಂದ ॥ ೨೦

ಗುರುಹತಿಯೆ ಕರ್ತವ್ಯ ತಾನಾ
[1]ದ[1]ರಿಸಿ ಮಾಡಿದ ಮಾತನೇ ಪತಿ
ಕರಿಸುವುದು ಶ್ರುತಿವಿಹಿತಧರ್ಮವಿದೆಂಬುದೀ ಲೋಕ ।
ಎರಡರಭ್ಯಂತರವ ನೀನೇ
ನಱಿಯದವನೇ ವೇದಶಾಸ್ತ್ರದ
ವರನಿಧಾನಜ್ಞಾತೃವಲ್ಲಾ ಪಾರ್ಥ ನೀನೆಂದ ॥ ೨೧

ಈಸು ನಿರ್ದಯನೆಂಬುದನು ನಾ
ವೀಸುದಿನವಱಿಯೆವು ಮಹಾದೇ
ವೇಸುಪರಿಯಂತಿದ್ದುದೋ ನಿನ್ನಂತರಂಗದಲಿ ।

---

[1] ಚ (ಗ.ತ).

ಏಸನೋದಿದಡೇನು ಪಾಪವಿ
ಳಾಸರಚನಾರೌರವಾತ್ಮರ
ವಾಸನೆಗಳ[1]ವು ಬೇಱು[1] ಹರಹರ ಎಂದನಸುರಾರಿ ॥ ೨೨

ನೆನೆದುದಂತಃಕರಣ ಮಧುಸೂ
ದನನ ಸೂಕ್ತಿಸುಧಾರಸದಿ ನೆಱೆ
ನೆನೆದುದಾತನ ಮೈ ವಿಲೋಚನ ವಾರಿಪೂರದಲಿ ।
[2]ಮ[2]ನದ ಪರಿತಾಪವ್ಯಥಾದು
ರ್ಮನನು ಖಡ್ಗವನೊಱೆಯೊಳೌಕುತ
ವಿನಯದಲಿ ಕೃಷ್ಣಂಗೆ ಬಿನ್ನಹ ಮಾಡಿದನು ಪಾರ್ಥ ॥ ೨೩

ನಾವು ನೆಱೆ ಸರ್ವಾಪರಾಧಿಗ
ಳಾವ ಗುಣದೋಷವನು ನಮ್ಮಲಿ
ಭಾವಿಸುವೆ ನಾವೆತ್ತ ಬಲ್ಲೆವು ಧರ್ಮನಿರ್ಣಯವ ।
ಆವ ಪರಿಯಲಿ ತನ್ನ ಸತ್ಯದ
ಠಾವು ನಿಲುವುದು ರಾಯನುಪಹತಿ
ಯಾವ ಪರಿ[3]ಯಿಂದಾಗದಿಹುದದನಱಿದು ಬೆಸಸೆಂದ[3] ॥ ೨೪

ಭರತವಂಶದೊಳುದಿಸಿದೆಮ್ಮ ಹಿ
ವರಿಗೆ[4] ಇಹಲೋಕದ[4] ನಿವಾಸಕೆ
ಪರದ ಸೌಖ್ಯಸ್ಥಿತಿಗೆ ಹೊಣೆ ನೀನಲ್ಲದೆಮಗಾರು ।
ದುರುಳರಾವನ್ವಯದಮದದ ದು
ರ್ಧರಪರಾಕ್ರಮದಮದದ ಘನ ಮು
ತ್ತರಿಗೆ ಕೃಪೆಮಾಡೆಂದು ಬಿನ್ನಹಮಾಡಿದನು ಪಾರ್ಥ ॥ ೨೫

ಕೊಲುವುದೇನೊಂದರಿದೆ ಟಿಕ್ಕರಿ
ಗಳೆವುದೇ ಪರಹಿಂಸೆ ಲೋಗರ
ಹಳಿವುದೇ ವಧೆ ಶಸ್ತ್ರವಧೆ ವಧೆಯಲ್ಲ ನೋಡುವರೆ ।
ಖಳರ ದುಸ್ಸಹ ದುಷ್ಟವಚನದ
ಹಿಳುಕು ಹೃದಯವ ಕೊಂಡು ಮಱುವೊನೆ
ವೊಳೆತ ಬಳಿಕವ ಬದುಕಿದವನೇ ಪಾರ್ಥ ಹೇಳೆಂದ ॥ ೨೬

---

[1] ಧ್ರುವವೆ (ಕ.ಗ.ಚ.ತ.ನ). [2] ಘ (ನ.ಬ). [3] ಯೆಂದೆನಿಸುವುದು ನೀ ಬೆಸಸಬೇಕೆಂದ (ಕ.ಗ.ಚ.ಟ.ನ). [4] ಲೋಕದ ನಿಜ (ಕ.ಗ.ಟ.ತ.ನ).

ಅರಸಗುಪಹತಿಯೆನಿಸದೇ ನಿ
ಷ್ಠುರದುರುಕ್ತಿಕೃಪಾಣದಲಿ ಸಂ
ಹರಿಸಿದರೆ ನಿರ್ವಾಹವಾಗದೆ ನಿನ್ನ ನುಡಿಗಳಿಗೆ।
ಪರಮಋಷಿಮತವೆನೆ ಮುರಾರಿಯ
ಸಿರಿವಚನಕೆ ಹಸಾದವೆಂದು
ಬ್ಬರದ ಗರ್ವೋಕ್ತಿಯಲಿ ಗರುವಿಕೆಗೆಡಿಸಿದನು ನೃಪನ ॥ ೨೭

ಎಲೆ ಯುಧಿಷ್ಠಿರ ಜನಿಸಿದೈ ಶಶಿ
ಕುಲದ ವೀರಕ್ಷತ್ರಪಂತಿಯೊ
ಳೆಳಮನದ ಕಾಳಿಕೆಯ ತೊಡಹದ ಗಂಡುರೂಪಿನಲಿ ।
[1]ನೆಲನ ಕೊಂಡರು ನಿನ್ನ ಮೋಟೆಯ
ಬಲುಹ ಕಂಡೇ ಕೌರವರು ನಿ
ನ್ನೊಳಗೆ ಬಲ್ಲಿದನೆನ್ನ ಭಂಗಿಸಲೇಕೆ ನೀನೆಂದ[1] ॥ ೨೮

ನಿನ್ನ ಜೂಜಿನ ವಿಲಗದಲಿ ಸಂ
ಪನ್ನರಾಜ್ಯವ ಬಿಸುಟು ನಿನ್ನಯ
ಬೆನ್ನಲಡವಿಯಲಾಡಿದೆವು [2]ಹನ್ನೆರಡು[2] ವರ್ಷದಲಿ।
ಮನ್ನಿಸಿದೆ ಲೇಸಾಗಿ ಕೌರವ
ರಿನ್ನು ಕೊಡುವರೆ ನಿನಗೆ ರಾಜ್ಯವ
ನಿನ್ನ ಹಿಡಿದೇ ಭೀಮ ಬದುಕಲಿ ಎಂದನಾ ಪಾರ್ಥ ॥ ೨೯

ರಣದ ಘಾರಾಘಾರಿಯಾರೋ
ಗಣೆಯ ಮನೆಯಲ್ಲರಸ ಶಿರದಲಿ
ಕುಣಿವಡಾಯ್ಧಕೆ ಸುಳಿವ ಸುರಗಿಗೆ ತಿವಿವ ಬಲ್ಲೆಹಕೆ ।
ಹಣಿವ ಲೌಡಿಗೆ ಪಾಯ್ದು ಬೀಳುವ
ಕಣೆಗೆ ಖಂಡದ ರುಧಿರರಣದೌ
ತಣವ ರಚಿಸದೆ [3]ಬಱಿದೆ ರಾಜ್ಯವ ಕೊಂಬೆ ನೀನೆಂದ[3] ॥ ೩೦

ಕರುಳ ಕಂಕಣದಾರ ಮಿದುಳಿನ
ಶಿರದ ಬಾಸಿಗ ಭುಜದ ವಕ್ಷದ
ಕರದ ಘಾಯದ ತೋಳ ಬಂದಿಯ ಪದಕ ಸರಪಣಿಯ ।

---

[1] ನೆಲನ ಕೊಡುವರು ನಿನ್ನ ಮೋಟೆಯ । ಬಲುಹ ಕಂಡರು ಕೌರವರು ನಿ। ನ್ನೊಳಗೆ ಬಲ್ಲದರೆಮ್ಮ ಭಂಗಿಸಲೆಂದನಾ ಪಾರ್ಥ (ಕ). [2] ಹದಿಮೂಱು (ಚ.ತ.ಪ.ಬ). [3] ರಾಜ್ಯಸಿರಿ ನಿನಗೊಲವಳಲ್ಲೆಂದ (ಟ.ದ).

ಅರುಣಜಲಲುಳಿತಾಂಬರದ ಸಂ
ಗರವಿವಾಹದ ಭೂಷಣದ ಸೌಂ
ದರ್ಯವಿಲ್ಲದೆ ರಾಜ್ಯಸಿರಿ [1]ನಿನಗೊಲಿವಳಲ್ಲೆಂದ[1] ‖ ೩೧

ಇಂದಿನಲಿ ಹದಿನೇಳು ದಿನವಿ
ಲ್ಲಿಂದ ಹಿಂದಣ ಬವರದಲಿ ನೀ
ನೊಂದುದುಂಟೇ ದ್ರೋಣಭೀಷ್ಮರ ಕೋಲ ತೋಹಿನಲಿ ।
ಒಂದು ತೂಱಂಬಿನಲಿ ಗಡ ನೀ
ನಿಂದು ಜೀವವ ಜಾಱಿಸುವೆ ಸುಡ
ಲಿಂದುಕುಲಕಂಟಕರನಿಱಿದರೆ ದೋಷವೇನೆಂದ ‖ ೩೨

ಎನುತ[2]ಡಾಯ್ದ[2]ವನೊಱೆಯೊಳುಗಿದ
ರ್ಜನನು ತನ್ನಯ ಕೊರಳ ಸಂದಿಗೆ
ಮನದೊಳಗೆ ಖಯಖೋಡಿಯಿಲ್ಲದೆ ಚಾಚಿದನು ಬಳಿಕ ।
ದನುಜರಿಪುವಡಹಾಯ್ದು ಪಿಡಿದೀ
ತನ ಕೃಪಾಣವ ಕೊಂಡು ನಿನ್ನಯ
ನೆನಹಿದೇನೈ ಪಾರ್ಥ ಹೇಳೆನ್ನಾಣೆ ಹೇಳೆಂದ ‖ ೩೩

ಏನ ಹೇಳುವೆನಡ್ಡಹಾಯಿದು
ನೀನೆ ಕೆಡಿಸಿದೆಯೆಮ್ಮನಲ್ಲದ
ಡೇನ ಮಾಡೆನು ಸತ್ಯಶೌರ್ಯದ ಹಾನಿಹರಿಬದಲಿ ।
ಈ ನರೇಂದ್ರನ ಕೊಂದ ನನಗಿ
ನ್ನೇನು ದೇಹಕೆ ತಲೆಯೊಡನೆ ಸಂ
ಧಾನವೇ ಸಾಕೆನ್ನ ಕೈದುವನೆನಗೆ ನೀಡೆಂದ ‖ ೩೪

ಎಲವೊ ಖೂಳ ಕಿರೀಟಿ ಮತ್ತೆಯು
ತಿಳಿಯೆಲಾ ನೀನಾವ ಪರಿಯಲಿ
ಮುಳಿದು ರಾಯನನಿಱಿದೆ ನಿನಗೆಯು ತದ್ವಿಧಾನದಲಿ ।
ಅಳಿವ ನೆನೆಯಾ ಸಾಕು ದೇಹ[3]ವ
ನಳಿವುದೇ ಕೊಲೆಯಲ್ಲ[3] ನಿನ್ನ
ಗ್ಗಳಿಕೆಗಳ ನೀನಾಡಿ ನಿನ್ನನೆ ಕೊಂದುಕೊಳ್ಳೆಂದ ‖ ೩೫

---

[1] ಬಱದೊಲವಳಲ್ಲೆಂದ (ಚ.ತ.ನ.ಪ). [2] ಖಡ್ಗ (ಚ.ಟ.ತ.ಪ.ಬ).
[3] ದಗಳನವೇ ಕೊಲೆಯಲ್ಲ (ಕ), ಮುಳುಹುವುದೆ ಕೊಲೆಯಲ್ಲ (ದ).

ಸಂದ ಪರಿಯಿದು ಜಗಕೆ ಲೋಗರ
ನಿಂದಿಸುವುದೇ ಹಿಂಕೆ ತನ್ನನೆ
ಕೊಂದವನು ತನ್ನಾಳುತನವನು ತಾನೆ ಹೊಗಳುವರೆ ।
ಎಂದಡರ್ಜುನನವನಿಪಾಲಂ
ಗೆಂದನೆನಗಿದಿರಾಗಿ ರಣದಲಿ
ನಿಂದು ಕಾದುವನಾರು ದನುಜಾಮರರ ಘಟ್ಟಿಯಲಿ ॥ ೩೬

ನಾನಲಾ ದ್ರೌಪದಿಯ ಮದುವೆಯೊ
ಳಾ ನರೇಂದ್ರರ ಗೆಲಿದವನು ಬಳಿ
ಕಾ ನಿಳಿಂಪವ್ರಜವ ಮುಱಿದುರುಪಿದೆನು ಖಾಂಡವವ ।
ಏನನೆಂಬೆನು ಸಕಲ ಕೌರವ
ಸೇನೆಯನು ಗೋಗ್ರಹಣದಲಿ [1]ಸತಿ
ನಾನಲೇ ರಥವೊಂದಱಿಂವನೆ ಗೆಲಿವೆ ದಿಟವೆಂದ[1] ॥ ೩೭

ಬಳಿಕ ಭೀಷ್ಮನನಾರು ರಣದಲಿ
ಗೆಲಿದವನು ದ್ರೋಣಪ್ರತಾಪಾ
ನಳನ ನಂದಿಸಿದಾತನಾರು ಮಹಾಹವಾಗ್ರದಲಿ ।
ಮಲೆತು ನಿಂದರೆ ಸೂತತನಯನ
ಕೊಲುವನಾವನು ಎನ್ನ ಟಿಕ್ಕರಿ
ಗಳೆವೆ ನೀನೆನ್ನೊಡನೆ ಸೆಣಸುವ ಭಟನ ತೋಱೆಂದ ॥ ೩೮

ಉಂಟು ಫಲುಗುಣ ನಿನ್ನ ಹೋಲಿಸ
ಲುಂಟೆ ಸುಭಟರು ದೇವದೈತ್ಯರೊ
ಳೆಂಟು ಮಡಿ ನಾವಱಿಯುವೇ ಕೈವಾರವೇನದಕೆ ।
[2]ಕಂ[2]ಟಣಿಸದಿರು ಕೃಷ್ಣನಿಕ್ಕಿದ
ಗಂಟಿನಲಿ ಸಿಲುಕದಿರು ತನ್ನಯ
ಗಂಟಲಿದೆ ಶಸ್ತ್ರೌಘವಿದೆ ನೀ ಬೇಗ ಮಾಡೆಂದ ॥ ೩೯

ಭರತಕುಲದಲಿ ಭಾಗಧೇಯ
ಸ್ಫುರಣಹೀನರನೆಮ್ಮನುಱೆ ಧಿ
ಕ್ಕರಿಸಿದಾದಡೆ ಮುನಿದು ಮಾಡುವದೇನು ವಿಧಿಯೊಡನೆ ।

---

[1] ನಿದ್ರಾನುಭಂಗದಲದ್ದಿ ಭಂಗಿಸಿದಾತನಾರೆಂದ (ದ).　[2] ಟೆಂ (ಪ.ಬ).

ಅರಿನೃಪಾಲರ [1]ಗೆಲಿದು[1] ವಿಶ್ವಂ
ಭರೆಯ ಕೊಂಡರೆ ಭೀಮಸೇನನ
ನರಸುತನದಲಿ ನಿಲಿಸು ಸುಖದಲಿ ಬದುಕಿ ನೀವೆಂದ ॥ ೪೦

ಇಱಿದು ಮೆಱೆವ ವಿನೋದವಿಗ್ರಹ
ದಿಱಿತವೇ ಹಿಂದಾಯ್ತು ಹರಹಿನೊ
ಳುಱುವ [2]ಫಲಿತದ ಬೀಡು ಬಿಟ್ಟುದು ನಮ್ಮ[2] ತನುವಿನಲಿ ।
ಇಱಿದ ಕರ್ಣನೆ ಸಾಲದೇ ಪೆಣ
ನಿಱಿದು ಪಗೆಯೇಕೆಂಬ ಮಾತನು
ಮಱೆದು ಕಳೆದೈ ತಮ್ಮ ಎಂದವನೀಶ ಬಿಸುಸುಯ್ದ ॥ ೪೧

ನಿನ್ನ ಜನನಿಯ ಜಠರದಲಿ ತಾ
ಮುನ್ನ ಜನಿಸಿದೆನೀ ಗುರುತ್ವಕೆ
ಮನ್ನಿಸಿದೆ ಸಾಕೈಸಲೇ ಸರ್ವಾಪರಾಧವನು ।
ಎನ್ನನೊಬ್ಬನನುಳಿಯಲುಳಿದರ
ಭಿನ್ನಸಾಹೋದರ್ಯಸಂಪ್ರತಿ
ಪನ್ನಗುಣರವರೊಡನೆ ಸುಖದಲಿ ರಾಜ್ಯ [3]ಮಾಡೆಂ[3]ದ ॥ ೪೨

ಸೇರುವುದು ಭೀಮನಲಿ ಸಾಹಂ
ಕಾರನಾತನ ಕೊಂಡು ನಡೆವುದು
ಕಾರಣಿಕ ನೀನಾದಡೀ ಸಹದೇವ ನಕುಲರನು ।
ಆರಯಿದು ಸಲಹುವುದು ದ್ರುಪದ ಕು
ಮಾರಿಯನು ಬೇಸಱಿಸದೀ ಪರಿ
ವಾರವನು ಮನ್ನಿಸುವುದರ್ಜುನದೇವ ಕೇಳೆಂದ ॥ ೪೩

ಎನುತ ನಯನೋದಕದ ಸರಿಯಲಿ
ನನೆದ[4]ವಲ್ಲಿಯ[4] ಬಾಹುಮೂಲದ
ಕನಕದೊಱೆಯ ಕಠಾರಿಯವನಿಪನೆದ್ದು ಸಂವರಿಸಿ ।
ಮನದ ದುಗುಡದ [5]ದಡಿಯ[5] ಮೋಱೆಯ
ತನಿಹೊಗರ [6]ಬಿಸುಸುಯ್ಲ[6] ತವಕದ
ಬನದ ಪಯಣದ ಧರ್ಮಸುತ ಹೊಱವಂಟನರಮನೆಯ ॥ ೪೪

---

[1] ನಿಱಿದು (ಕ.ಗ.ಪ). [2] ಹಳಿವಿನ ಬೀಡು ಬಿಟ್ಟಿದೆ ತಳಿರ (ಕ). [3] ವಾಳೆಂ (ಟ.ದ.ಪ.ಬ). [4] ವಸನದ (ಟ.ದ.ನ.ಬ). [5] ಧೈರ್ಯ (ಕ), ತಡಿಯ (ಪ). [6] ಚಾವಡಿಯ (ಕ.ಗ).

ರಾಯನಪರೋಕ್ಷದಲಿ ರಾಜ್ಯ
ಶ್ರೀಯ ಬೇಟವೆ ಶಿವಶಿವಾದಡೆ
ತಾಯ ನುಡಿ ತೊದಳಾಯ್ತು ತಮತಮ್ಮಂತರಂಗದಲಿ।
ಆಯಿತಿದು ಲೇಸೆನುತ [1]ತಮತ
ಮ್ಮಾ[1]ಯುಧಂಗಳ ಕೊಂಡು ವರ ಮಾ
ದ್ರೇಯರರಸನ ಕೂಡೆ ಹೊಱವಂಟರು ನೃಪಾಲಯವ ॥ ೪೫

ಕೊರಳನೊಲೆದಳು ಬಾಪು ದೈವದ
ಪರುಠವಣೆ ದುಶ್ಶಾಸನನ ನೆ
ತ್ತರಿನ ವೇಣೀಬಂಧಕಘಟಿತವಾಯ್ತು ಸಂಬಂಧ ।
ತರಣಿ ಬಿಜಯಂಗೈದರಬುಜದ
ಸಿರಿಗೆ ಸುಮ್ಮಾನವೆ ಎನುತ ಪಂ
ಕರುಹಮುಖಿ ಸಖಿಯರು ಸಹಿತ ಹೊಱವಂಟಳರಮನೆಯ ॥ ೪೬

ಸದನವನು ತಮತಮಗೆ ಹೊಱವಂ
ಟುದು ನೃಪಾಲಸ್ತೋಮ ದುಮ್ಮಾ
ನದಲಿ ಧೃಷ್ಟದ್ಯುಮ್ನ ಸಾತ್ಯಕಿ [2]ಚೇಕಿತಾನಕರು[2] ।
ಕದಡಿತಾ ಪರಿವಾರವಾರಿಧಿ
ಕೆದಱ ಹೊಱವಂಟುದು ಕಿರೀಟಿಯ
ಹೃದಯ ಹೊಗೆದುದು ಹೊತ್ತಿದನುಪಮ ಶೋಕವಹ್ನಿಯಲಿ ॥ ೪೭

ಮೂಗನಾದನು ಪಾರ್ಥ ನೃಪ ಚಿಂ
ತಾಗಮದೊಳಳ್ಳಿಱವ ಶೋಕದ
ಸಾಗರವನೀಸಾಡಿ ತೆರೆಗಳ ಹೊಯ್ಲು ಹೊದಱನಲಿ।
ಆ ಗರುವನಡಿಗದ್ದು ಮೂಡಿದ
ನಾಗಳೇ [3]ತಡಿಗಡರಿ[3] ಬಳಲಿದು
ತಾಗಿದನು ನೆಱೆ ತಳ್ವವಾಱುತ ಪಾರ್ಥ ಹೊಱವಂಟ ॥ ೪೮

ಹರಿದು ಬೀದಿಯೊಳವನಿಪಾಲನ
ಚರಣದಗ್ರದೊಳೊಡಲ ಹಾಯಿಕಿ
ಹೊರಳಿದನು ಹೊನಲಿಡುವ ಲೋಚನವಾರಿಪೂರದಲಿ ।

---

[1] ತಮ್ಮ ನಿಜಾ (ಗ.ಟ.ತ.ಪ.ಬ). [2] ಚೈದ್ಯ ಕೇಕೆಯರು. [3] ನಡುನಡುಗಿ (ಚ.ತ.ಬ).

ಧರಣಿಪತಿಯೆ ದುರಾತ್ಮಕನನು
ದ್ಧರಿಸಬೇಹುದು ಜೀಯ ಕರುಣಾ
ಕರನಲಾ ನೀನೆನುತ ಪಿಡಿದನು ಭೂಪನಂಘ್ರಿಗಳ ॥ ೪೯

ಮಾಡಿದೆನ್ನಪರಾಧ ಶತವನು
ನೋಡಲಾಗದು ಕರುಣದಲಿ ನೀ
ಖೋಡಿಯನು ಬಿಡು ಚಿತ್ತಗೊಡದಿರು ಖತಿಯ ಘಲ್ಲಣೆಗೆ ।
ನೋಡುವುದು ಕಾರುಣ್ಯದೃಷ್ಟಿಯೊ
ಳೀಡಿಱಿವ ಘನಶೋಕ[1]ವಹ್ನಿ[1]ಗೆ
ಖೇಡ[2]ನಾದೆನು ಜೀಯೆನುತ ಹಲುಬಿದನು[2] ಕಲಿ ಪಾರ್ಥ ॥ ೫೦

ಏಳು ತಂದೆ ಕಿರೀಟಿ ತನ್ನಾ
ಣೇಳು ಸಾಕೀ ಹವಣಿನಲಿ ಮು
ನ್ನಾಳಿಕೆಯ ಕಾಂತಾರ ರಾಜ್ಯದ ಸಿರಿಯೆ ಸಾಕೆಮಗೆ ।
ಬಾಲಕರು ನೀವ್ ಮೇಲಣದು ದು
ಷ್ಕಾಲವೀ ಸಾಮ್ರಾಜ್ಯ ಭೋಗ
ವ್ಯಾಳವಿಷಕಂಜುವೆನು ಪಾಂಡುವಿನಾಣೆ ಸಾರೆಂದ ॥ ೫೧

ಹಿಂಗದಿನ್ನೂ ದ್ವಾಪರದ ಸ
ರ್ವಾಂಗವೀ ದ್ವಾಪರದ ಸೀಮಾ
ಸಂಗದಲಿ ಸಿಗುರೆದ್ದ ಕಲಿಕೆಯ ಸೊಗಡ ಸೋಹಿನಲಿ ।
[3]ಸಂ[3]ಗಡಿಸಿತಧರೋತ್ತರದ ಸಮ
ರಂಗವೀ ಹದನಱಿದು ರಾಜ್ಯಾ
ಸಂಗಸುಗತಿವ್ಯರ್ಥನಹೆನೇ ಪಾರ್ಥ ಹೇಳೆಂದ ॥ ೫೨

ಸಾಕು ಪಾರ್ಥನ ಬಿನ್ನಹವ ಕೆಡೆ
ನೂಕದಿರು ನೆಳಲಿಂಗೆ ಬೇಱೆ ವಿ
ವೇಕಚೇಷ್ಟೆಗಳೇ ಸಹೋದರರೀ ಚತುಷ್ಟಯಕೆ ।
ಈ ಕಮಲಮುಖಿಯರಿಗೆ ನಿನ್ನಾ
ಲೋಕವಲ್ಲದೆ ಬೇಱೆ ಕಾರ್ಯ
ವ್ಯಾಕುಳತೆ ಬೇಡೆಂದು ಮುರರಿಪು ತಿರುಹಿದನು ನೃಪನ ॥ ೫೩

ಹದಿನೇಳನೆಯ ಸಂಧಿ ಮುಗಿದುದು.

---

[1] ಲಹರಿ (ಕ). [2] ತನವನು ಮಾಣಿಸಂದೊಱಲದನು (ಟ.ದ),
[3] ಲಂ (ಕ.ಗ.ಟ.ಚ).

ಹದಿನೆಂಟನೆಯ ಸಂಧಿ

ಸೂಚನೆ ॥ ಗಂಡುಗಲಿ ಯಮತನುಜನಲಿ ಮಾ
ರ್ತಾಂಡ ತನಯನ ವಧೆಗೆ ನೇಮವ
ಕೊಂಡು ಕದನೋ[1]ದ್ದಾಮ[1]ದಲಿ ಹೊಱವಂಟನಾ ಪಾರ್ಥ ॥

ಕೇಳು ಧೃತರಾಷ್ಟ್ರಾವನಿಪ ಭೂ
ಪಾಲನನು ಸಾಮದಲಿ ಮುರರಿಪು
ಬೋಳವಿಸಿ ಭಾವಜ್ಞನಂದಿಸಿದನು ಮನೋವ್ಯಥೆಯ ।
ಮೇಲುಸುರ ಬಿಕ್ಕುಳಿನ ಬಿಗುಹಿನ
ತಾಳಿಗೆಯ [2]ನೀರುಗಳ ಮುಕ್ಕುಳಿ
ನಾ[2]ಲಗಳ ನರನಾಥ ತೆಗೆದಪ್ಪಿದನು ಫಲುಗುಣನ ॥ ೧

ಒಱಲುತರಸನ ಮುರುಟಿಕೊಂಡಡಿ
ಗೆಱಗೆ ಕೈಯೊಡನವನಿಪತಿ ಮುರಿ
ದೆಱಗಿ ಪಾರ್ಥನ [3]ಸೇರಿ[3] ತಕ್ಕೈಸಿದನು ಗೋಳಿಡುತ ।
ಮಱುಗಿದಳು ದ್ರೌಪದಿ ದೃಗಂಬುಗ
ಳೊಱತೆಯಲಿ ಸಹದೇವ ನಕುಳರ
ಲಱಿಯೆನುಪಮಿಸಲವರ ಬಹುಳಾಕ್ರಂದನ ಧ್ವನಿಯ ॥ ೨

ಮುರಹರನ ಮಂತ್ರದಲಿ ಶೋಕ
ಜ್ವರಕೆ ಬಿಡುಗಡೆಯಾಯ್ತು ಬಳಿಕಿನೊ
ಳರಸ ಸಿರಿಮೊಗದೊಳೆದು ವಸನಾಂಚಲದೊಳಾನನವ ।
ಒರಸಿ ಪಾರ್ಥನ ಸಂತವಿಸಿ ಮುಂ
ದಿರಕೆ ಬಿಜಯಂಗೈದು ಮುದದಲಿ
ಕರಸಿ ಕಾಣಿಕೆಗೊಂಡು ಪರಿವಾರವನು ಮನ್ನಿಸಿದ ॥ ೩

ಇಟ್ಟಣಿಸುವರಿಸೈನ್ಯಜಲಧಿಗೆ
ಕಟ್ಟೆಯಾದನು ಭೀಮನೊಬ್ಬನ
ಬಿಟ್ಟು ನೋಡುವುದುಚಿತವೇ ಪರಿವಾರ ಪಂಥದಲಿ ।

---

[1] ತ್ಸಾಹ (ಟ.ನ). [2] ನಿದ್ರ್ರವದ ನೀರೊಗುವಾ (ಕ. ತ. ನ. ಪ. ಬ)
[3] ಸೆಳೆದು (ನ.ಪ.ಬ).

ಕೊಟ್ಟ ನೇಮವ ಯಮಳರಿಗೆ ಜಗ
ಜಟ್ಟಿ ಸಾತ್ಯಕಿ ಕಮಲಮುಖಿಯೊಡ
ಹುಟ್ಟಿದನು ಮೊದಲಾಗಿ ನೃಪಜನವೇಳಿ ನೀವೆಂದ ॥ ೪

ದೇವ ಪರಿವಾರಕ್ಕೆ ನೇಮವ
ನೀವ ಸಮಯದಲಿಂದು ನಿಮ್ಮ ಕೃ
ಪಾವಲೋಕನವಾದುದೆನ್ನ ಪರಾಕ್ರಮಾನಳಕೆ ।
ಜೀವಸಖನಲ್ಲಾ ಸುಯೋಧನ
ನಾವ ಪಾಡು ವಿರೋಧಿಕುಲವಿ
ದ್ರಾವಣಕೆ ಕೊಡು ತನಗೆ ನೇಮುವನೆಂದನಾ ಪಾರ್ಥ ॥ ೫

ಬರಸು ಭಾಷೆಯನಿಂದು ಕರ್ಣನ
ಶಿರವುಳಿದು ತಾವರೆಯ ನಗೆ ಪೈ
ಸರಿಸಿದರೆ ಮೈ ಬೆಸುಗೆಬಿಟ್ಟರೆ ಜಕ್ಕವಕ್ಕಿಗಳ ।
ಇರುಳ ಬೀಜವನಿಂದು ನಭದಲಿ
ಹರಹಿದರೆ ಕಲಿ ಭೀಮನಯ್ಯನ
ಹರಹು ನಿಂದರೆ ಬಳಿಕ ನಿಮ್ಮಯ ತಮ್ಮನಲ್ಲೆಂದ ॥ ೬

ಖಳನ ಹಿಂಸಾಪರನ ಡಂಬನ
ಚಳಮತಿಯ ನಾಸ್ತಿಕನ ನಿಂದಾ
ಕುಳನ ಪರಧನಬಾಧಕನ ದತ್ತಾಪಹಾರಕನ ।
ಜ್ವಲನದನ ಶಿಶುಘಾತಕನ ಪರಿ
ದಳಿತ ಧರ್ಮನ ಗತಿಗಳಲಿ ತಾ
ನಿಳಿವೆನಿಂದೇ ಕೊಲ್ಲದಿರ್ದರೆ ಸೂತನಂದನನ ॥ ೭

ನೀನಿನಿತ ನೆಱೆ ನುಡಿವರೇ ತ
ನ್ನಾಣೆ ಬಾರೈ ತಂದೆ ಬಾ ಎನು
ತಾ ನರೇಶ್ವರ ತೆಗೆದು ಬಿಗಿಯಪ್ಪಿದನು ಫಲುಗುಣನ।
ದಾನವಾಮರರೊಳಗೆ ನಿನಗೆ ಸ
ಮಾನಭಟರಿಲ್ಲೆಂಬುದೀ ಸ್ನೇ
ಹಾನುಗುಣವೇ ಲೋಕವಱಿಯದೆ ಪಾರ್ಥ ಹೇಳೆಂದ ॥ ೮

ತಾಯೆನುತ ಘನಸಾರದುರು ತವ
ಲಾಯಿಗಳ ನೂಕಿದನು ಮುದದಲಿ
ಬಾಯ ತಂಬುಲವಿತ್ತು ತಮ್ಮನ ಮತ್ತೆ ತಕ್ಕೈಸಿ।

ರಾಯ ಕೇಳೈ ಬಳಿಕಖಿಳ ದಳ
ನಾಯಕರ ಕರೆಕರೆದು ಕದನಪ
ಸಾಯತರಿಗಿತ್ತನು ನೃಪತಿ ಕರ್ಪುರದ ವೀಳೆಯವ ॥ ೯

ನೇಮವಾಯಿತು ಮತ್ತೆ ನೃಪತಿ
ಸ್ತೋಮವರ್ಜುನನೊಡನೆ ಕದನೋ
ದ್ದಾಮರುಬ್ಬರಿಸಿದರು ಪತಿಕರಣೆಗೆ ಮಹೀಪತಿಯು ।
ಸೋಮಕರು ನಕುಲಾದಿಗಳು ಸುತ
ಸೋಮಕಾದಿ ಕುಮಾರರಖಿಳ ಸ
ನಾಮರೆದ್ದುದು ತೊಡರ ಝುಣಝುಣರವದ [1]ಖಡೆಯ[1]ದಲಿ॥ ೧೦

ನುಡಿವ ವಾದ್ಯದ ಜಡಿವ ಕಹಳೆಯ
ಹೊಡೆವ ಭೇರಿಯ [2]ರವದ[2] ರಭಸದೊ
ಳೊಡೆದುದಾ ದಿಗುಭಿತ್ತಿಯೆನೆ ಚಲಿಸುವ ಚತುರ್ಬಲದ ।
ತುಡುಕು ಚಮರಿಯ ಝಾಡಿಗೆದಱಿನ
ಗಡಣಿಸುವ ಝಲ್ಲರಿಯ ದಳ ಬಱ
ಸಿಡಿಲ ಮೇಳವದಂತೆ ನೆರೆದುದು ನೃಪತಿಯಿದಿರಿನಲಿ ॥ ೧೧

ವೀರಸೇಸೆಯನಿಕ್ಕಿ ರಾಯನ
ನಾರಿ ಪರಸಿದಳಖಿಳ ವಿಪ್ರರ
ಚಾರು ಚಾತುರ್ವೇದಮಂಗಳಸೂಕ್ತ ಘೋಷದಲಿ ।
ತೇರನೇಱಿದನಸುರರಿಪು ಸಹಿ
ತಾರುಭಟೆಯಲಿ ನೂಕಿದವು ರತು
ನಾರತಿಯ ತಳಿಗೆಗಳು ವರ ಕಾಂತಾಕದಂಬದಲಿ ॥ ೧೨

ಕೊಡೆ [3]ಗಱಿ[3]ಗಟ್ಟಿದವು ರಥದಲಿ
ಹೂಡಿದಶ್ವವ್ರಾತವಾನೆಗ
ಳೀಡಿಱಿದು ಬರಿಕಯ್ಯನೆತ್ತಿದವೊಲೆದವಡಿಗಡಿಗೆ ।
ಜೋಡಿಸಿತು ಜಯಜಯಜಯಧ್ವನಿ
ಕೂಡೆ ಜಗದಗಲದಲಿ ಬಿರುದು ಪ
ವಾಡಗಳ ವೊಗನೆಗಹಿ ಹೊಗಳಿತು ವಂದಿಸಂದೋಹ ॥ ೧೩

---

[1] ರಥನ (ಚ.ಟ.ತ.ಪ.ಬ), [2] ಬಹಳ (ಚ.ತ.ನ.ಪ). [3] ಗುಡಿ (ಗ.ಚ.ತ.ದ.ಬ).

ನಿಳಯವನು ಹೊಱವಂಟು ಬೀದಿಗ
ಳೊಳಗೆ ಬರೆಬರೆ ಮುಂದೆ ಮೋಹಿದ
ತಳಿಗೆದಂಬುಲ ವೀರಸೇಸೆಯ ಮಂಗಳಾರತಿಯ |
ಫಲಸಮೂಹದ ಕಾಣಿಕೆಯ ಕೋ
ಮಲೆಯರುಪ್ಪಾರತಿಯ ಮನೆಮನೆ
ಗಳಲಿ ಮನ್ನಿಸಿಕೊಳುತ ಪಾಳೆಯದಿಂದ ಹೊಱವಂಟ || ೧೪

ಮೇಲೆ ಮೊಳಗುವ ದೇವದುಂದುಭಿ
ಜಾಲದೊಸಗೆಯ ಪಕ್ಷಿಮೃಗದನು
ಕೂಲಶಕುನದ ಸೌಮನಸ್ಯದ ಸಾಧುವಾದದಲಿ |
ಲಾಲನೆಯ ಮೈವಳಿಯ ಲಳಿಯ ವಿ
ಶಾಲ [1]ಮಂದಾ[1]ನಿಲನಖಿಳಭೂ
ತಾಳಿ ಸಂತೋಷದಲಿ ಪತಿಕರಿಸಿತು ಧನಂಜಯನ || ೧೫

ನಡೆದು ಬಂದುದು ರಾಯದಳ ಮುಂ
ಗುಡಿಯ ವಾದ್ಯಧ್ವನಿಯ ಥಟ್ಟಣೆ
ತುಡುಕಿತರಿಚತುರಂಗ ಚಪಳರ ಕರ್ಣಕೋಟರವ |
ನಡುಗಿದವು ಕೈದುಗಳು ಜೋಧರ
ಕೊಡಹಿದವು ಗಜರಾಜಿ ವಾಜಿಯು
ಗಡಣವೀಡಾಡಿದವು ರಾವ್ತರನಿವರ ಥಟ್ಟಿನಲಿ || ೧೬

ಅರಸ ಕೇಳ್ಳೈ ಸಮರಭೂಮಿಗೆ
ಪರಿದರರಸಾಳುಗಳು ರಾಯನ
ಸಿರಿಮುಡಿಗೆ ಸುಕ್ಷೇಮ ಮುಟ್ಟಿದವೇಱುಮದ್ದಿನಲಿ |
ಮರಳಿ ನೇಮವ ಕೊಂಡು ಫಲುಗುಣ
ಬರುತಲೈದನೆ ಜೀಯ ನಿಮ್ಮಯ
ಚರಣ ಸರಸಿಜದಾಣೆಯೆಂದರು ಭೀಮಸೇನಂಗೆ || ೧೭

ಜೋಡು ಬಿರಿದುದು ಹರುಷ[2]ಜಲ[2] ಕಡೆ
ಗೋಡಿವರಿದುದು ರೋಮಪುಳಕದ
ಬೀಡು ಬಿಟ್ಟುದು ಮೈಯನುಬ್ಬಿದನೊಲೆದನಡಿಗಡಿಗೆ |

---

[1] ಗಂಧಾ (ಗ.ಚ.ಟ.ನ.ಪ.ಬ). [2] ರಸ (ಗ.ಚ.ಟ.ತ.ದ.ನ.ಪ).

ನೀಡುವರೆ ತ[1]ಳು[1]ವೆನುತ ತೆಗೆದೀ
ಡಾಡಿದನು ದೂತರಿಗೆ ರತುನದ
ಜೋಡಣೆಯ ಭುಜಕಂಠ [2]ಕರ್ಣಾಂಘ್ರಿಗಳ ಭೂಷಣವ[2] ॥ ೧೮

ರಾಯ ಹದುಳಿಸಿದನೆ ಮಹಾದೇ
ವಾ ಯಿದೆತ್ತಣ ಪುಣ್ಯವೋ ರಣ
ದಾಯಸವ ಸ್ಥೈರಿಸಿದ ತನಗಿದು ಸಫಲವಾಯಿತಲ ।
ದಾಯ ಬಂದುದು ನಮಗೆ ಹೋ ಲೇ
ಸಾಯಿತೇಳು ವಿಶೋಕ ಸಾಕುಳಿ
ದಾಯುಧದ ಪರಿಗ[3]ಣಿತವ[3]ನು ಹೇಳೆಂದನಾ ಭೀಮ ॥ ೧೯

ಉಳಿದ ಕೈದುಗಳೇಸು ಬಂಡಿಯ
ಲುಳಿದ ಸರಳಿನ ಹೊದೆಯ ಲೆಕ್ಕವ
ತಿಳಿದು ಹೇಳ್ಳೈ ತಂದೆ ಸಾರಥಿ ನೋಡಲಹುದಿನ್ನು ।
ಅಳಲಿಸಿದ ಕೌರವನ ರಕ್ತದ
ಮಳೆಯೊಳಲ್ಲದೆ ತನ್ನ ಕೋಪಾ
ನಳನ ಝಳವಡಗದು ಯುಧಿಷ್ಠಿರರಾಯನಾಣೆಂದ ॥ ೨೦

ಅರಸ ಚಿತ್ತವಿಸುಳಿದ ಧನು ಹ
ನ್ನೆರಡು ಸಾವಿರ ಬಲುಸರಳು ಹ
ನ್ನೆರಡು ಸಾವಿರ ಬೋಳೆಯೈನೂಱರ್ಧ ಚಂದ್ರಶರ ।
ಪರಿಗಳಿತ ಲುಳಿಯಂಬು ಕಣಗಿಲ
ಸರಳುಗೂಡಿಪ್ಪತ್ತು ಸಾವಿರ
ವೆರಡು ಸಾವಿರವುಳಿದವೀ ನಾರಾಚನಿಕರದಲಿ ॥ ೨೧

ಆಲಿಸೈ ಮುಗುಳಂಬು ಸಾವಿರ
ವೇಳು [4]ಬಳಿಕೊಂ[4]ಬತ್ತು ಸಾವಿರ
ಕೋಲು ಮೀಂಟೆಯ ಕವಲುಗಣೆ ಹನ್ನೆರಡು ಸಾವಿರವು ।
ಮೇಲೆ ಸಾವಿರ ನಾಲ್ಕು ಮುಮ್ಮೊನೆ
ಬೋಳೆಯಂಬೀರೈದು ಸಾವಿರ
[5]ನಾಳಿಯಂಬುಗಳಾಱುಬಂಡಿಯ ಲೆಕ್ಕವಿದೆಯೆಂದ[5] ॥ ೨೨

---

1 ಡ (ಗ.ಚ.ತ.ದ ಬ). 2 ಕರ್ಣಾಭರಣ ಮುದ್ರಿಕೆಯ (ಕ.ಗ). 3 ಣನೆಯ (ಗ.ತ.ನ.ಪ ಬ). 4 ಮಗುಳೊಂ (ಕ.ಗ.ಚ.ದ). 5 ಕೋಲೆಣಿಕೆ ಗಾಱು ಹೂಡಿದ ಬಂಡಿಯಿವೆಯೆಂದ (ಕ).

ಪರಶು ಮುಸಲ ಮುಸುಂಡಿ ಸೆಲ್ಲೆಹ
ಪರಿಘು ತೋಮರ ಚಕ್ರವಸಿ ಮು
ದ್ಗರ ತ್ರಿಶೂಲ ಕಠಾರಿ ಖೇಟಕ ಪಿಂಡಿವಾಳ ಚಯ ।
ಸುರಗಿ ಮೊದಲಾದಖಿಳ ಶಸ್ತ್ರೋ
ತ್ಕರವನೊಂದೇ ಬಂಡಿಯಲಿ ಸಂ
ವರಿಸಿದೆನು ರಿಪುರಾಯರೊಡಲಲಿ ಬೀಯಮಾಡೆಂದ ॥ ೨೩

ಪೂತು ಸಾರಥಿ ಈಸು ಬಾಣ
ವ್ರಾತವುಳಿದುದೆ ತನ್ನ ಕರಕಂ
ಡೂತಿಯನು ಕಳಚುವೆನಲಾ ಕೌರವನ ನೆತ್ತಿಯಲಿ ।
ಆತನೇನಾದನು ಯುಧಿಷ್ಠಿರ
ಸೋತು ಪಿಂಗಿದನೆಂಬ ಹಂಬಲು
ಬೀತುದಿನ್ನೇನೆನ್ನ ನೋಡಾ ಎನುತ ಗರ್ಜಿಸಿದ ॥ ೨೪

ಚಳ[1]ಯು[1]ದಲಿ ಫಲುಗುಣನ ಮೋಹರ
ಕಳನ ಪೊಕ್ಕುದು ಹಲವು ಮೊನೆಯಲಿ
ತಳಿತು ನಿಂದುದು ಜಡಿವ ಬಹುವಿಧ ವಾದ್ಯರಭಸದಲಿ ।
ಅಳುಕಿತೀ ನಮ್ಮವರು ಭೀಮನ
ಸುಳಿವಿನಲಿ ಸೊಪ್ಪಾ[2]ದೆವ[2]ರ್ಜುನ
ನೆಳತಟಕೆ ನಿಲವೆಂತೆನುತ ನೆಗ್ಗಿದುದು ದುಗುಡದಲಿ ॥ ೨೫

ದಳದ ಮಧ್ಯದೊಳೊಂದು ರಥದಲಿ
ಹೊಳೆದು ದುವ್ವಾಳಿಸಿ ಧನಂಜಯ
ನಿಲಿಸಿದನು ನಿಜರಥವ ಭೀಮನ ರಥದ [3]ಮುಂಬಿನಲ[3] ।
ಬಳಿಕ ತನ್ನಿಂದಾದ ಕೋಳಾ
ಹಳವನಾ ತಱುವಾಯಲವ್ವಾ
ಕುಳ ಸಮಾಧಾನವನು ಬಿನ್ನಹಮಾಡಿದನು ಪಾರ್ಥ ॥ ೨೬

ಜನಪ ಕೇಳ್ಕೈ ಬಳಿಕ ಭೀಮಾ
ರ್ಜುನರ ಮೋಹರಕೈದು ಸಾವಿರ
ಕನಕಮಯ ರಥಸಹಿತ ಬಿಟ್ಟನು ಶಕುನಿ ಸೂಠಿಯಲಿ ।

---

[1] ಕ (ಟ.ದ). [2] ದುದ (ಕ.ಗ.ಚ). [3] ಬಳಸಿನಲಿ (ಕ), ಸಮುಖದಿ (ಡ.ಟ.ತ.ಪ), ಮುಮ್ಮಿನಲಿ (ಬ).

ಅನಿಲಸುತನರ್ಜುನನ ನೀ ಸಾ
ರೆನುತ [1]ಕೆದಱಿ[1]ದನಹಿತನಂಬಿನ
ಮೊನೆಯೊಳಳ್ಳಿಱಿದೌಕ್ಕಿತುಡುಕುವ ತೇರ ತೆಕ್ಕೆಯಲಿ ‖ ೨೭

ಒಂದು ಶರಸಂಧಾನದಲಿ ಕವಿ
ತಂದವೈಸಾವಿರ ರಥಾವಳಿ
ಯೊಂದು ಧನುವಿನೊಳೀತ ಮೊಗೆದನು ಸರಳಸಾಗರವ ।
ಸಂದಣಿಸಿತಾ ರಥಿಕರಾ ಹಯ
ವೃಂದವಾ ಸಾರಥಿಗಳಾ ರಥ
ಕೊಂದುಹತ್ತಱ ಲೆಕ್ಕದಲಿ ಮಿಕ್ಕವು ಶರವ್ರಾತ ‖ ೨೮

ಒಗ್ಗಿನೈಸಾವಿರ ರಥಾವಳಿ
ಮುಗ್ಗಿದವು ಕಣೆ ತಾಗಿ ರಥಿಕರು
ನೆಗ್ಗಿದರು [2]ಮೇಲಂಬು ಸುಳಿದೊಯ್ದವು ಸಜೀವಿಗಳ[2] ।
ಒಗ್ಗೊಡೆದು ಕಲಿ ಶಕುನಿ ಘಾಯದ
ಸುಗ್ಗಿಯಲಿ ಲಘುವಾಗಿ ಹರುಷದ
ಮುಗ್ಗಲೊಣಗಿಲ ಮೋಱೆಯಲಿ ತಿರುಗಿದನು ಮೋಹರಕೆ ‖ ೨೯

ಶಕುನಿ ಮುರಿದನು ಬೇಹ ದಳನಾ
ಯಕರು ತಿರುಗಿತು ಭೀಮಸೇನನ
ವಿಕಟಸಿಂಹಧ್ವನಿಗೆ [3]ಜರಿದುದು[3] ಭಟರ ಬಲುಹೃದಯ ।
ಅಕಟಕಟ ಕುರುಸೇನೆ ನಿನ್ನಾ
ಯಕವಲಾ ಹಾ ಎನುತ ಮಂತ್ರಿ
ಪ್ರಕರ ಮಱುಗಿತು [4]ತುಱು[4]ಗಿತಲ್ಲಿಯದಲ್ಲಿ ಕಳವಳಿಸಿ ‖ ೩೦

ಹದಿನೆಂಟನೆಯ ಸಂಧಿ ಮುಗಿದುದು.

---

[1] ಕೆಣಕಿ (ಟ), ತಱುಬಿ (ನ.ಪ.ಬ). [2] ಹಯರಾಜಿ ಬಿದ್ದವು ಮಿದುಳ ಜೊಂಡೆಯಲಿ (ಟ.ದ). [3] ಬಿರಿದುವು (ಚ.ಟ.ತ.ನ). [4] ತಿರು (ನ.ಪ.ಬ).

ಹತ್ತೊಂಬತ್ತನೆಯ ಸಂಧಿ

ಸೂಚನೆ ॥ ರಾಯ ಚೌಪಟಮಲ್ಲ ಮಲೆವರಿ
ರಾಯ ಧೂಳೀಪಟ್ಟ ಗರ್ವಿತ
ರಾಯ ಭೀಕರ ಭೀಮ ಕೊಂದನು ಕೌರವಾನುಜನ ॥

ಕೇಳು ಧೃತರಾಷ್ಟ್ರಾವನಿಪ ನಿ
ನ್ನಾಳು ತಲೆಕೆಳಗಾಯ್ತು ಭೀಮನ
ಧಾಳಿ ಹೆಚ್ಚಿತು ಹೊಸತು ದಶಕದ ಮಸಕ ಮಿಗಿಲಾಯ್ತು ।
ಮೇಲೆಮೇಲುಬ್ಬೇಳ್ವ ರಿಪುಶರ
ಜಾಲಧಾರಾಧೂಮವಹ್ನಿ
ಜ್ವಾಲೆಗುಱೆ ತೇಱೈಸಿ ಕೋಱೈಸಿತು ಕುರುಸ್ತೋಮ ॥ ೧

ಉಲುಕಲಮ್ಮುವರಿಲ್ಲಲಾ ಭಟ
ರಳುಕಿದರೆ ಭಾರಂಕದವರ
ಗ್ಗಳೆಯ ಬಿರುದರು ಬೀತರೇ ಸೋತರೆ ಪಲಾಯನಕೆ ।
ಹಲವು ಮಾತೇನೆಮ್ಮ ಮಾವನ
ಕಳನ ಹರಿಬಕೆ ನಾವೆ ಇನ್ನೈ
ಸಲೆ ಎನುತ ನೆರಹಿದನು ನಿನ್ನ ಕುಮಾರಕನು ದಳವ ॥ ೨

ಆ ವಿಗಡ ಪರಿವಾರದಲಿ ರಥ
ಸಾವಿರವ ಮೇಳೈಸಿದರು ದಂ
ತ್ಯಾವಳಿಯ ಬೇರೆಣಿಸಿ ನಿಲಿಸಿದರೈದು ಸಾವಿರವ ।
ರಾವುತರೊಳಗ್ಗಳೆಯರನು ದಶ
ಸಾವಿರವ ಜೋಡಿಸಿದರಿನಿಬರು
ಸಾವನೇ ನಿಶ್ಚೈಸಿ ಬಿಗಿದರು ವೀರಕಂಕಣವ ॥ ೩

ಕುಡಿತೆಯಲಿ ಕರ್ಪೂರವ ಸುರಿಸುರಿ
ದೊಡನೆ ಸಾಧು ಜವಾಜಿ ಲೇಪವ
ಮುಡಿವ ಹೊಸ ಹೂಗಳನು ವರ ಗಂಧಾನುಲೇಪನದ ।

ಉಡುಗೊಱೆಯ ವೀಳೆಯದ ರತ್ನದ
ತೊಡಿಗೆಗಳಲಾ ಪಟುಭಟರ ವಂ
ಗಡವ ಮನ್ನಿಸಿ ನಿನ್ನ ಮಗನನುವಾದನಾಹವಕೆ ॥ ೪

ಬಲದೊಳಗೆ ಹೆಸರುಳ್ಳವರು ನೃಪ
ತಿಲಕ ನೀ ಸಾಕಿದ ಕುಮಾರರು
ಹಳೆ[1]ಯರ[1]ಲಿ ಮಿಕ್ಕವರು ಮಕ್ಕಳ ತಂಡದಲಿ ಕೆಲರು ।
ಅಳಲಿಗರು ದುಶ್ಶಾಸನನ ಬಲ
ದೊಳಗೆ ನಿಂದುದು ಸಾಲಸಿಡಿಲಿನ
ಬಳಗವೋ ನಿನ್ನವರ ಬಣ್ಣಿಸಲಱಿಯೆ ನಾನೆಂದ ॥ ೫

ಸಾಲ ಸಿಂಧದ ಮಣಿವ ಗೋವಳಿ
ಗೋಲ ತೂಕದ ತಳಿತ ಚೌರಿಯ
[2]ಜಾಲ ಮೋಹಿದ[2] ಮೇಘಘಟೆಯೆನೆ ಜಡಿವ ಝಲ್ಲರಿಯ ।
ಜಾಳಿಗೆಯ ಹೊಗರೊಗುವ ಪಕ್ಷಿ
ಜ್ವಾಲೆಯೆನೆ ಝಳಪಿಸುವ ಕೈದುಗ
ಳೋಳಿ ಹೊಳೆದುದು ಸೆಳೆದುದೀತನ ಗರ್ವವಿಭ್ರಮವ ॥ ೬

ಹರೆದ ಬಲ ಹುರಿಗಟ್ಟಿ ಖತಿಯಲಿ
ದೊರೆಯ ಕೂಡೊದಗಿದುದು ಬೀಱುವ
[3]ಬಿರುದು[3]ಗಹಳೆಯ ದನಿಯ ಘಾಯದ ಧೂರಿ ಭೇರಿಗಳ ।
ಮೊರೆವ ಬಹುವಿಧ ವಾದ್ಯರಭಸದ
ಧರಧುರದ ಕೆಂಧೂಳಿಯಲಿ ಮೋ
ಹರಿಸಿ [4]ಮುಸುಕಿತು[4] ಭೀಮಸೇನನ ರಥದ [5]ಬಳಸಿನಲಿ[5] ॥ ೭

ಸಾರಹೇಳೋ ರಾಯಕುವರಮು
ರಾರಿ ದುಶ್ಶಾಸನ ಕಣಾ ಘಡ
ವೈರಿಭೀಮದ್ವಿರದ ಕುಂಭಸ್ಥಳಕೆ ಪಂಚಮುಖ ।
ವೀರಮನ್ಮಥತ್ರಿಪುರಹರ ಜು
ಜ್ಝಾರ ಭಟ ಜಗಜಟ್ಟಿಗಿದಿರೆ ವಿ
ಕಾರಿಯೋ ಘಡ ಭೀಮನೆನುತೈದಿತು ಭಟಸ್ತೋಮ ॥ ೮

---

[1] ಪೆಯು (ಚ.ತ.ಪ). [2] ಸಾಲಸತ್ತಿಗೆ (ಪ). [3] ಬಿರುಬು(ಕ.ಗ.ಚ.ನ).
[4] ನಡೆದುದು (ತ). [5] ಸಮ್ಮುಖಕೆ (ಚ.ತ.ನ.ಪ.ಬ).

ದಾಯವಿದು ಮಝು ಘಾತು ರಣದ ವಿ
ಡಾಯಿಯಹುದೋ ಕಲಿ ಯುಧಿಷ್ಠಿರ
ರಾಯನಾಣೆ ಸುಯೋಧನಾನುಜನೋಜೆ ಲೇಸೆನುತ।
ವಾಯುಸುತನಾಕರ್ಣಕರುಷಿತ
ಸಾಯಕನು ರಿಪುಸುಭಟಕುಲ
ಲಯದಾಯಕನು ದಳದುಳವ ಹಾಯ್ದನು ವೈರಿಮೋಹರವ ॥ ೯

ನುಸಿಗಳೆನ್ನೆವು ನೀವು ಜಗಸಾ
ಹಸಿಕರೈ ಕಾಲಾಳು ಜೋಧಪ್ರಸರ
ದೆಸುಗೆಗೆ ಹೆದಱುವೆವು ಹೇರಾಳದಂಬುಗಳ।
[1]ದಶಕ[1]ವುಳ್ಳವರಹಿರಿ ಸಮರಥ
ವಿಷಮರಾವ್ತರು ನೋಡುತಿರಿ [2]ಸರ
ಳಿಸಲಿ[2] ನಿಮ್ಮಯ ದೊರೆಗಳೆನುತುರವಣಿಸಿದನು ಭೀಮ ॥ ೧೦

ಸಾರಿರೈ ಕಾಲಾಳು ರಥಿಕರು
ಸಾರಿರೈ ರಾವುತರು ಜೋದರು
ಭಾರಣೆಯಲಿರಿ ದೊರೆಯನಱಸುವ ಬಯಲ ಬೊಬ್ಬೆಗಳ।
ಆರುಭಟೆಗಾರಳುಕುವರು ಪರಿ
ವಾರ ಕೈಮಾಡದಿರೆನುತ ಕುರು
ವೀರನನುಜ[3]ರು[3] ತಱುಬಿದ[4]ರು[4] ಪವಮಾನನಂದನನ ॥ ೧೧

ಸಡಿಘಡೇನಿದು ತಮ್ಮ ತಲೆಗಳಿ
ಗೊಡೆಯ[5]ರ[5]ಲ್ಲದೆ ಕೌರವಾನುಜ
[6]ರೊ[6]ಡೆಯ[7]ರೇ[7] ಪರಿವಾರದಭಿಮಾನಾವಮಾನದಲಿ।
ಬಿಡುವವರು ನಾವಲ್ಲ ಭೀಮನ
ಕಡಿಯೊಳಗೆ ಕಡಿವೆರಸಿ [8]ನೆತ್ತರು
ಗುಡಿಯೆವೇ ತಾವೆನುತ[8] ದಳ ಮುಕ್ಕುಱಿಕಿತನಿಲಜನ ॥ ೧೨

ಏನ ಹೇಳುವೆನರಸ ತೂಳಿದ
ವಾನೆಗಳು ನಾರಾಚನಿಚಯದ
ಸೋನೆ ಸುರಿದುದು ಭೀಮಸೇನನ ರಥದ ಶಿಖರದಲಿ।

---

[1] ಎಸಕ (ಗ), ಎಸುಗೆ (ಚ), ಮಸಕ (ಟ.ದ). [2] ಜೋಡಿಸಿರಿ (ಕ). [3] ನು (ತ.ನ). [4] ನು (ತ.ನ). [5] ನ (ತ.ತ). [6] ನೊ (ತ.ನ). [7] ನೇ (ತ.ನ). [8] ನೆತ್ತರಕುಡಿವೆವೈ ನಾವೆನುತ (ಚ.ತ.ನ.ಪ), ರಕುತವ ಕುಡಿಸುವೆವು ಕೂರಸಿಗೆ (ಟ).

ಭಾನುಬಿಂಬವ ಮೊಗೆವ [1]ಲೌಡೆಯ
ಮಾನಸದ ಧಕ್ಕಡರು[1] ಕಲಿ ಪವ
ಮಾನ ತನಯನ ಮುತ್ತಿಕೊಂಡರು ರಾಯರಾವುತರು ‖ ೧೩

ಬಳಸಿನಲಿ ಚಾಚಿದವು ರಥಸಂ
ಕುಳ ಪದಾತಿಯು ಕೈದು ಮಾಱಿದ
ವಳವಿಯಲಿ ಮೊನೆಗಾಣಿಸಿದ[2]ರ[2]ರಿಸೂತವಾಜಿಗಳ ।
ಸಿಲುಕಿದನು ಫಡ ಸ್ವಾಮಿದ್ರೋಹಿಗೆ
ಬಲೆಯ ಹಾಯಿಕೊ ಗಂಡುಮೀನ
ಗ್ಗಳೆಯ ಗಾಣವ ಕೊಳ್ಳದೆನುತೌಕಿದರು ಬಳಸಿನಲಿ ‖ ೧೪

ಧೂಳು ಮುಸುಕಿತು ಸುತ್ತುವಳಯದ
ಲಾಳು ಹೊಕ್ಕುದು ಹೊಯ್ಲು ಹೊಡಱಿನ
ಬಾಳುಗಿಡಿಗಳ ಖಣಿಖಟಿಲ ಘಲ್ಲಣೆಯ [3]ಗರ್ಗರದ[3] ।
ಮೇಲುಮೇಲುಪ್ಪೇಳ್ವ ಜೊಪ್ಪೆಯ
ತೂಳುವಱೆ ಕಹಳೆಗಳ ಘೋಳಾ
ಘೋಳಿ ಮಸಗಿತು ಭೀಮಸೇನನ ರಥದ ಬಳಸಿನಲಿ ‖ ೧೫

ಅಳಲಿಗರಲೇ ಕೌರವಾನುಜ
ರಳುಕ[1]ದಿಱಿದರಲ್ಲೈ[1] ವಿಘಾತಿಗೆ
ಸಿಲುಕದಿರನೋ ಭೀಮನೆನು[5]ತುಬ್ಬಿದರು ನಿನ್ನವರು[5] ।
ಜಲನಿಧಿಯೊಳುಬ್ಬೆದ್ದ ತೆರೆಯಲಿ
ಮುಳುಗುವುದೆ ಮಂದರವೆನುತ ಕಳ
ವಳಿ[6]ಸಿದ[6]ವರೇನಱಿಯರೇ ತಮ್ಮವನ ಕೈಗುಣವ ‖ ೧೬

ತೆಗಸಬೇಹು[7]ದು[7] ಪವನಜನ ಮು
ತ್ತಿಗೆಯನೆನುತುರವಣಿಪ ನಕುಲಾ
ದಿಗಳ ಕಂಡನು ಕರೆದು ಮರುಳಾಡಿದನು ಕಲಿ ಪಾರ್ಥ ।
ತೆಗಸಬೇಹುದು ತರಣಿಬಿಂಬವ
ತಗುಳ್ವ ತಿಮಿರವ ನಿಮ್ಮ ಹಂಗಿನ
ನುಗುಳುಗಂಡಿಯ ನುಸುಳುದಲೆಗನೆ ಮರಳಿ ನೀವೆಂದ‖ ೧೭

[1] ತಿಮಿರವನೇನ ಹೇಳುವೆನಧಟರನು (ಟ.ದ). [2] ವ (ತ.ದ ನ). [3] ಗರ್ಜನೆಯ (ಕ.ಗ.ಟ.ನ). [4] ದೇಱಿದರ್ಕ್ಕೆ (ಕ). [5] ತಬ್ಬರಿಸಿ ನಿಂದವರು (ಕ.ಗ ಪ). [6] ಸಲ (ಫ). [7] ದೆ (ಚ.ನ).

ಮಾತು ಹಿಂಚಿತ್ತಿದು ವಿಲಂಬಿಸ
ದಾತ ಮುಱಿದನು ಮುತ್ತಿದಿಭಸಂ
ಘಾತವನು ಪಲ್ಲಟಿಸಿ ಕಡಿ[1]ಕೊಟ್ಟಿ[1]ದನು ತೇರುಗಳ ।
ಆತು ತಾಗಿದ ರಾವುತರ ಸುರ
ಜಾತಿಯಲಿ ಕಂಡೆನು ಪದಾತಿ
ವ್ರಾತ ಪಾಣಿಗ್ರಹಣವನು ಗೀರ್ವಾಣವಧುಗಳಲಿ ॥ ೧೮

ಬಲನೆಡನ ಗದೆ ಖಡುಗದಲಿ ರಿಪು
ಜಲನಿಧಿಯನೀಸಾಡಿದನು [2]ಹೆ
ಟ್ಟಲದ[2] ಹೆಬ್ಬೆಳೆ ಸಾಲಕೊಯ್ಲಿನ ಮೆದೆಗಳೊಟ್ಟಿಲಲಿ ।
[3]ತಳಕುಗಳ ವರ[3] ರಥ ಹಯದ ಹೊಸ
ಮೆಳೆಯ ಕಡಿತದ ಕರಿಘಟಾಳಿಯ
ಬಲುವೊರಡಿಗಳ ಸವಱಿ ತಳಪಟಮಾಡಿದನು ಭೀಮ ॥ ೧೯

ಅಸಿಯಲಿಟ್ಟರೆದಂತೆ ಬಲ ನಿ
ಪ್ಪಸರದಲಿ ನುಗ್ಗಾಯ್ತು ನೀಗಿದ
ರಸುವನೀ ದುಶ್ಶಾಸನನ ನಂಬುಗೆಯ ಪರಿವಾರ ।
ಬಸಿವ ನೆತ್ತರ ಮೆಯ್ಯ ಕರುಳಿನ
ಕುಸುರಿಗಳ ತಲೆಮಿದುಳ ಮೆತ್ತಿಗೆ
ವಸೆಯ ತೊರಳೆಯ ತೊಂಗಲಲಿ ರಂಜಿಸಿತು ರಣಭೂಮಿ ॥ * ೨೦

ಹೋರಿ ಹಂಗಿಗರಾದೆವೇ ಪರಿ
ವಾರ ನೆರೆದುದು ನಾಕದಲಿ ತೆಗೆ
ವೀರಕಂಕಣವೇಕೆನುತ ದುರಿಯೋಧನಾನುಜರು ।
ತೇರ ಸೂತನ ಸೂಚನೆಯ ಚೀ
ತ್ಕಾರ ಪರಿಧಾವನೆಯ ಧೂಳಿಯ
ಲೋರಣದ ಭಾರಣೆಯಲೈದಿದರನಿಲನಂದನನ ॥ ೨೧

ಇಂದಲೇ ನೀವ್ ಗದೆಯ ಹಬ್ಬಕೆ
ಬಂದಿರೈ ಲೇಸಾಯ್ತು ನೀವೇ
ನೆಂದಿರೈ ನಿಮ್ಮಣ್ಣದೇವನ ಮುಂದೆ ಭಾಷೆಗಳ ।

---

[1] ದೊಟ್ಟಿ (ತ.ನ ಪ.ಬ). [2] ಹೊಲಬೆಳೆಯ (ಕ). [3] ತುಳುಕಿತೂಳುವ (ಚ).
* ಈ ಪದ್ಯ (ಚ.) ಪ್ರತಿಯಲ್ಲಿಲ್ಲ.

ತಂದಿರೈ ತಳ್ಳಂಕವನು ನಮ
ಗೆಂದು ಕೊಡುವಿರಿ ಕೌರವನ ತ
ಮ್ಮಂದಿರೈ ನೀವೆನುತ ಸುಳಿದನು ಸಿಂಹನಾದದಲಿ ॥ ೨೨

ಗಿಡಿಗನೆತ್ತಲು ಗಿಣಿಯ ಮಱಿಗಳ
ಗಡಣವೆತ್ತಲು ತೋಳನೆತ್ತಲು
ತೊಡಕುವರೆ ತಗರೆತ್ತಲಿವರಿಗೆ ಗೆಲವು ಸೋಲವನು ।
ನುಡಿಯ[1]ಲಮ್ಮೆನು[1] ನಿನ್ನ ಮಕ್ಕಳ
ಮಿಡುಕಿನಂತರವೇನು ಪ್ರಳಯದ
ಸಿಡಿಲ ಬಲುಹೋ ಭೀಮನೋ ನಾವಱಿಯೆವಿದನೆಂದ ॥ ೨೩

ಥಟ್ಟುಗೆಡಹಿ ಕುಮಾರಕರನಱೆ
ಯಟ್ಟಿ ಹೊಯ್ದನು ಕೆಲಬಲದಲಡ
ಗಟ್ಟಿದರನಪ್ಪಳಿಸಿದನು ಚಗಿದಾನೆವರಿವರಿದು ।
ಇಟ್ಟಣಿಸಿ ಹೊಕ್ಕೆಸುವವರ ಹುಡಿ
ಗುಟ್ಟಿದನು [2]ಹೆಣಸಾಲಿನಲಿ[2] ಮಡು
ಗಟ್ಟಿ ನಿಂದುದು ರಕ್ತಜಲ ನರನಾಥ ಕೇಳೆಂದ ॥ ೨೪

ಒಂದು [3]ಹಲಗೆ[3]ಯಲೈದು ಹರಿಬಕೆ
ಬಂದು ಹೊಕ್ಕವರೈದು ಖತಿಯಲಿ
ಹಿಂದ ಕೆಣಕಿದರೆಂಟು ಮಗುಳಿಬ್ಬರನು ಕದನದಲಿ ।
ಕೊಂದನಿಂತಿಪ್ಪತ್ತು ನಿನ್ನಯ
ನಂದನರು ನೀಗಿದರು ನೆಲನನು
ನಿಂದು ಕರೆದನು ಬಳಿಕ ದುಶ್ಶಾಸನನ ಕಲಿ ಭೀಮ ॥ ೨೫

ಧಾರುಣೀಪತಿ ಕೇಳು ನಿನ್ನ ಕು
ಮಾರರಲಿ ತೊಂಬತ್ತಯೆಂಟಱ
ಪಾರುಖಾಣೆಯ ಲೆಕ್ಕ ಸಂದುದು ನಿ[4]ಮ್ಮ ಚಿತ್ತದಲಿ[4] ।
ಸಾರಭೂತರಲೇ ಸಮಸ್ತ ವಿ
ಕಾರಿಗಳೊಳೀ ವಿಶ್ವನೃಪ ಸಂ
ಹಾರರಿಬ್ಬರ ಬೀಯವನು ಮೇಲಿನ್ನು ಕೇಳೆಂದ ॥ ೨೬

---

[1] ಲಱಿಯೆನು (ಚ.ಟ.ತ.ಪ.ಬ). [2] ತಲೆವರಿಗೆಯಲಿ (ಟ). [3] ಲಗ್ಗೆ (ಗ.ಟ.ಚ.ತ.ಪ). [4]ನ್ನ ಮಕ್ಕಳಿಗೆ (ಟ.ದ).

ಮುಱಿದುದಚ್ಚಾಳಚ್ಚುಕುದುರೆಗ
ಳುಱುಕುಗೊಂಡುದು ನಿನ್ನವರು ಹೊ
ಕ್ಕಱಿದು ಹೋಗಾಡಿದರು ತನ್ನ ಸಹೋದರ ವ್ರಜವ ।
ಹೊಱಗೆ ಕರ್ಣಕೃಪಾದಿಗಳು [1]ವ್ಯೆ[1]
ಮಱೆವ ಹೊತ್ತಾಯಿತ್ತವನ ನೆತ್ತರ
ಸುಱಿಯದೆಡೆಯಲಿ ಬಿಡೆನೆನುತ ಪವನಜನು ಗರ್ಜಿಸಿದ ॥ ೨೭

ದೊರೆಯು ತಮ್ಮನ ತವಕತೋಟಿಗೆ
ತಿರುಗುತದೆ ತಡವೇನು ನೂಕೆನು
ತರಸ ಕೇಳ್ಕೈ ತನತನಗೆ ದುಶ್ಶಾಸನನ ರಥವ ।
[2]ಪರಿಹರಿಸಿ[2]ಕೊಂಡೇಱಿತೀ ದಳ
[3]ದುರವಣೆಯ[3] ಸ್ವೈರಿಸಿದಡವನೀ
ಶ್ವರನಲೇ ಕಲಿ ಭೀಮನಲ್ಲದೆ ಧೀರನಾರೆಂದ ॥ ೨೮

ನೂಕದಿರಿ ಸಂಘಟಿಸಿ ಹೋಹೋ
ಸಾಕು ಸಾಕಾ ಮೆಚ್ಚಿದೆನು ತಳು
ವೇಕೆ ದುಶ್ಶಾಸನ ವೃಥಾ ನೀ ಹೊತ್ತುಗಳೆವೆಯಲಾ ।
ನೀ ಕಳೆದುಕೊಳು ಧನುವ ನಮ್ಮ ವಿ
ವೇಕವನು ದಳ ನೋಡುತಿರಲಿ ನಿ
ರಾಕುಳದಲೆಚ್ಚಾಡುವೆವು ನಿಲ್ಲೆಂದನಾ ಭೀಮ ॥ ೨೯

[4]ರೂ[4]ಡಿಸಿದ ಭಟ ನೀನು ಹರಿಬವ
ಬೇಡಿ ತೊಡಕಿದೆ ನಾನು ಖಾಡಾ
ಖಾಡಿಯಲಿ ಸಿಗುಱಿಲ್ಲ ತೆಗೆ ಹಂಗೇಕೆ ತೆತ್ತಿಗರ ।
ನೋಡುತಿರಲೀ ಬಲವೆರಡು ಹೋ
ಗಾಡು ನಮ್ಮನು ಮೇಣು ನಿನ್ನನು
[5]ಸೂ[ಡು]ದಱಿವೆನು[5] ಸತ್ವದಳತೆಯ ಕಾಣಲಹುದೆಂದ ॥ ೩೦

ತೊಲಗಿರೈ ಪರಿವಾರ ಬಾಳೆಯು
ತಳಿಯ ಮುಱಿವತಿ ಸಹಸಿ ಗಡ ಮಱಿ
ಮೊಲನ ಬೇಟೆಯ ವೀರ ಗಡ ಬಾಣಪ್ರಯೋಗದಲಿ ।

[1] ಕೈ (ಗ.ಟ.ತ.ಪ). [2] ಪರುಠವಿಸಿ (ಕ.ಗ) [3] ಕುರುಬಲಕೆ (ಟ).
[4] ಝಾ (ಟ.ಪ). [5] ಸೂಡಿಗಿಱಿವೆನು (ಘ.ತ.ಪ.ಬ).

ಸಲೆ ಮೃಗದ ಸಾಹಸಿಕ ಗಡ ಕು
ಟ್ಮಳಿತ ಕೇತಕಿ [1]ತೀಕ್ಷ್ಣ[1] ಗಡ ನೀ
ವಳವಿಗೊಡದಿರಿ ಎನುತ ನಿನ್ನ ಕುಮಾರನನುವಾದ ॥ ೩೧

ಪೂತು ಸುಭಟ ಸುಯೋಧನನ ಸಹ
ಜಾತನಲ್ಲಾ ಮತ್ತೆ ಕೆಲಬರಿ
ಗೀ ತವಕವೀ ಶೌರ್ಯವೀ ಬಲುಹೀಸು ದಿಟ್ಟತನ ।
ಸೋತುದುಂಟೇ ಹೊಳ್ಳುವಾತಿನ
ಹೂ ತೊಡಬೆ ನಿನಗಿಲ್ಲ [2]ಧೈ[2]ರ್ಯದ
ಧಾತುವೊಳ್ಳಿತು ಕೊಳ್ಳೆನುತ ತೆಗೆದೆಚ್ಚನಾ ಭೀಮ ॥ ೩೨

ಫಡ ಎನುತ ಪವನಜನ ಬಾಣವ
ಕಡಿದು ಕೂರಂಬಿನಲಿ ಭೀಮನ
ಕೆಡೆಯೆಸುತ ಮುಱಿಯೆಚ್ಚು ಮಗುಳೆಚ್ಚಂಬ ಹರೆಗಡಿದು ।
ಎಡೆಯಲೆಚ್ಚಂಬುಗಳನಿಬ್ಬರು
ಕಡಿದರಂಬಂಬುಗಳ ಹೋರಟೆ
ಕಿಡಿಗೆದಱೆ ನಿಬ್ಬರದ ಕದನವ ಕಂಡೆನಿಬ್ಬರಲಿ ॥* ೩೩

ಸವೆಯೆ ಸರಳೆಚ್ಚಾಡಿದರು ಕಲಿ
ಪವನಸುತ ದುಶ್ಶಾಸನರು ರಣ
ದವಕಿಗರ ಕೋಪಾಗ್ನಿ ಭುಗಿಭುಗಿಲೆಂದುದಡಿಗಡಿಗೆ ।
ಅವನಿಗಿಳಿಬಿಡು ಧನುವ ತೆಗೆ ಖಡು
ಗವನೆನುತ ರಥದಿಂದ ಹಾಯ್ದರು
[3]ಬವರಿಗರು ಬಿನ್ನಣದಿ[3] ಹೊಯ್ದಾಡಿದರಡಾಯುಧದಿ ॥ ೩೪

---

[1] ತಿಕ್ಷ (ಕ), ತೀಕ್ಷ (ಘ), ರಿಕ್ಷ (ತ), ವೃಕ್ಷ (ದ). [2] ಕಾ (ಕ.ಗ.ಚ)

* ಈ ಪದ್ಯವಾದ ಮೇಲೆ (ಗ.ಟ.ದ.ನ.ಬ.) ಪ್ರತಿಗಳಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ :–

ಅಂಬಿಗಂಬುಧಿ ಜರೆದುದೋ ಮೇ
ಣಂಬುಗಳನಂಬರವೆ ಕಾರಿ
ತ್ತಂಬುರುಹ ಭವನಂಬುಗಳ ಸೃಜಿಸಿದನೊ ಬಳಿಕ ।
ಅಂಬುಗಳಿಗಂಬರದೊಳಿಂಬಿ
ಲ್ಲೆಂಬವೋಲಂಬಂಬ ನೀಡಿಱೆ
ದಂಬು ಹಾಯ್ದುರುಣಾಂಬುಗಳ ಚುಂಬಿಸಿತು ವಹಿಲದಲಿ ॥

[3] ಬ್ಬಣವ ಕೊಂಡನು ಭೀಮ (ಕ).

[1]ಚಾ[1]ರಣವ ಚಮ್ಮಟದ ಖಡುಗದ
[2]ಪಾರಗದಲುಚ್ಚಟದ[2] ಲುಳಿಯು
ಖ್ವಾರದೊಡ್ಡಿನ ಹೊಯ್ಲ ಹೋರಟೆಗಳ ಸುರೇಖೆಗಳ ।
ಸಾರತರಶ್ರಮ[3]ರೊದಗಿದರು[3] ಜ
ಜ್ಝಾರರುಬ್ಬಣ ಮುಱಿಯೆ ಕಾದಿ ಕ
ಠಾರಿಗಳಲೇ ತಱುಬಿ ನಿಂದರು ದಂಡೆ[4]ಮಂಡಿ[4]ಯಲಿ ॥ ೩೫

ಲುಳಿಯ ಪಯಪಾಡುಗಳ ದಂಡೆಯ
[5]ಬಳಿ[5]ಯ ಲೋಹದ [6]ಲವಣಿಗಳ ಮನ
ಲಳಿಯ[6] ಲಾಗಿನ ದೃಷ್ಟಿಯೋರೆಯ ಕೊಂಕಿದವಯವದ ।
ಬಲಿದ ದಂಡೆಯ ಮಱೆಯ ದೇಹದ
ತಳಿತ ಠಾಣದ ಹಜ್ಜೆಹಜ್ಜೆಯ
ನೆಲನ ಪಲ್ಲಟದರಿಭಟರು ಕಾದಿದರು ಖಾತಿಯಲಿ ॥ ೩೬

ಬಿಡಿಸಿದರೆ ಕುತ್ತುವ ವಿಘಾತಿಯ
ಮಡಮುರಿಯಲೇ ಕಳೆವ ದಂಡೆಯ
ತುಡುಕಿದಡೆ ನೋಡುವ ನಿವಾರಿಸಿ ಜಡಿದು ಝಳಪಿಸುವ ।
ಪಡಿಮುಖದೊಳಂಘೈಸಿ ಬವರಿಯ
ಲೊಡಲನೊಲೆವ ಕಠಾರಿಕಾಱರ
ಬಿಡುಶ್ರಮದ ಬಿನ್ನಣಕೆ ಮಝು ಭಾಪೆಂದುದುಭಯಬಲ ॥ ೩೭

ಕಣೆಯ ಕಾಲಾಟದಲಿ ಹಿರಿಯು
ಬ್ಬಣದ ಹೋರಟೆಯಲಿ ಕಠಾರಿಯ
ಕುಣಿಹದಲಿ ಮಸೆಗಾಣದಿದ್ದುದು ನಿನ್ನ ದೇಹದಲಿ ।
ರಣಮುಖದೊಳಿದು ನಮ್ಮ ಪುಣ್ಯದ
ರಿಣವಿಶೇಷ ಕಣಾ ಎನುತ ರಿಪು
ಗಣ[7]ಭಯಂಕರ[7] ಭೀಮ ನುಡಿದನು ಕೌರವಾನುಜನ ॥ ೩೮

ಸಾಕಿದೇತಕೆ ಮಲ್ಲಶ್ರಮದಲಿ
ನೂಕಿನೋಡುವೆವಿನ್ನು ಕೈದುಗ
ಳೇಕೆ ದೃಢಮುಷ್ಟಿಪ್ರಹಾರಪ್ರಕಟಸತ್ವರಿಗೆ ।

---

[1] ಛಾ (ಕ.ಗ.ಚ.ತ.ನ). [2] ಘೋರಣದಲುಬ್ಬಟೆಯ (ಕ). [3] ದೊದಗಿನಲ (ಕ). [4] ದಂಡೆ (ಕ.ಗ.ಚ.ಟ). [5] ಲಳಿ (ಕ.ಗ.ಟ). [6] ಲಹರಿಗಳ ವ್ಯಾವಳಿಯ (ಗ.ಟ), ಲವಣಿಗಳ ಮನಮುರಿಯ (ಕ). [7] ದಿಶಾಪಟ (ಚ.ತ.ನ.ಟ).

ಈ ಕುಮಾರಕರೊಳಗೆ ನೀನೇ
ಜೋಕೆಯುಳ್ಳವನಹೆ ನಿಯುದ್ಧ
ವ್ಯಾಕರಣಪಾಂಡಿತ್ಯವೆಮಗುಂಟೆಂದನಾ ಭೀಮ ॥ ೩೯

ಏಸನಗ್ಗಿಸಿಕೊಂಬೆ ನಿನಗಿ
ನ್ನೈಸು ಕೈದುಗಳಲ್ಲಿ ಕೃತವ
ಭ್ಯಾಸವಾ ಕೈದುಗಳ ಬಾಯಿಗೆ ನಿನ್ನ ಬೀಱುವೆನು ।
ಏಸು ಬೇಹುದು ಮಲ್ಲತನ ನಿನ
ಗೈಸು ಬಿನ್ನಾಣದಲಿ ನಿನ್ನಯ
ಸೀಸವಾ[1]ಳವ[1] ಹೊಯ್ವೆನೆಂದನು ನಿನ್ನ ಮಗ ನಗುತ ॥ ೪೦

ತರಿಸಿ ಬಿಗಿದರು ಚಲ್ಲಣವ ಠ
ಪ್ಪರವನಳವಡೆಗಟ್ಟಿದರು ಕ
ಸ್ತುರಿಯ ತಿಲಕವನೊಟ್ಟಿದರು ನೊಸಲಿನಲಿ ಮುಡುಹಿನಲಿ ।
ಕರತಳವ ಮಾಱುದ್ದಿ ಭುಜದಲಿ
ಶಿರದಲಂದಕ್ಕಡದ ಮಣ್ಣನು
ಬೆರಳಲುದುರಿಚಿ ಬಾಳುಗೆಂದರು ನೆನೆದು ನಿಂಬಜೆಯ ॥ ೪೧

ಸೂಳವಿಸಿದರು ಭುಜಶಿಖರ ನಿ
ಸ್ಸಾಳವನು ನೆಲಕು[2]ಣ[2]ಯೆ ದಿಕ್ಕಿನ
ಮೂಲೆ ಬಿರಿಯೆ ಪಯೋಧಿ[3]ಗಳಲಿ ಪಯೋಧಿ ಪಲ್ಲಟಿಸೆ[3] ।
ಘೀಳಿಡಲು ಕಿವಿಗಳಲಿ ಸೇನಾ
ಜಾಳವೆರಡಱೊಳುಭಯದಿಗುತುಂ
ಡಾಲ ಕೈಯಿಕ್ಕುವವೊಲಿವರೊತ್ತಿದರು ತೋಳ್ಗಳಲಿ ॥ ೪೨

ತೆಗೆದು ಗಳಹತ್ತದಲಿ ಕೊರಳನು
ಬಿಗಿಯೆ ಬಿಡಿಸುವ ತೋರಹತ್ತದ
ಹೊ[4]ಗು[4]ತೆಯನು ವಂಚಿಸುವ ತಳಹತ್ತದಲಿ ತವಕಿಸುವ ।
ಲಗಡಿಯಲಿ ಲಟಕಟಿಸುವಂತರ
ಲಗಡಿಯಲಿ ಲಾಗಿಸುವ ಡೊಕ್ಕರ
ಣೆಗಳ ಬಿಗುಹಿನ ಬಿಡೆಯ ಬಿನ್ನಾಣದಲಿ ಹೆಣಗಿದರು ॥ ೪೩

---

[1] ಳಿಗೆ (ನ). [2] ಸಿ (ಕ.ಗ). [3] ಕದಡಲು ದಿಗಿಭ ತಲ್ಲಣಿಸೆ (ಟ.ದ).
[4] ಗಿ (ಕ).

ಘಾಯವೇ ಜಗಜಟ್ಟಿ ಮಲ್ಲರಿ
ಗಾಯ[1]ಸವು ಜೊಕ್ಕೆಯು*ವ* ಬಿಡುವಡು[1]
ಪಾಯ ಕೇಳಿಂದೊದೆದು ದಂಡೆಯನೊಡ್ಡಿದನು ಭೀಮ ।
ರಾಯ ಕೇಳ್ಕೈ ಸಿಡಿಲ ತಿವಿಗುಳ
ತಾಯಿಮನೆಯೋ ಪವನಜನ ಬಲು
ಘಾಯವೋ ಘನ ತೋರಹತ್ತರು ತಿವಿದರುರವಣಿಸಿ ॥ ೪೪

ಮೈಗೆ ಮೇಣದ ಹಾಹೆ ಸರಿ ಮುಂ
ಗೈಗೆ ಮೇರುವಿನಿರವು ದೊರೆ ಹೊಱ
ಕೈಗೆ ವಜ್ರದ ಹೊಯ್ಲು ಪಡಿಘಟ್ಟಣೆ ಮಹಾದೇವ ॥
ಕೈಗಡಿಯ ಪಟುಭಟರೊಳಗೆ ಬಲು
ಗೈಗಳೆಂದಮರಾಳಿ ಹೊಗಳಲು
ಹೊಯ್ಲುಳಿನ ಹೊಸನಾಟಕವನಭಿನಯಿಸಿ ಕಾದಿದರು ॥ ೪೫

ಒಂದು ಭೀಮನ ಮೇಲೆ ನಿನ್ನಯ
ನಂದನನ ಮೇಲೆರಡು ಕೊಂತೀ
ನಂದನಗೆ ನಾಲ್ಕೆಂಟು ನಿನ್ನ ಕುಮಾರನಂಗದಲಿ ।
ಸಂದಣಿಸಿದವು ಘಾಯ ಘಾಯದ
ಮುಂದೆ ಹೊದಱೆದ್ದವು [2]ಸುಘಾಯದ[2]
ಬಂದಿಯಲಿ ಸಿಲುಕಿತ್ತು ನಿನ್ನ ಕುಮಾರನಂಘವಣೆ ॥ ೪೬

ತ್ರಾಣವೆಳದಾಯ್ತಖಿಳ ಶೌರ್ಯದ
ಚೂಣಿ ಮುಱಿದುದು ಘರ್ಮಜಲವು
ಗ್ರಾಣಿಸಿತು ಭುಜಬಲವನಂಕುರಿಸಿತ್ತು ರಣಭೀತಿ ।
ಪ್ರಾಣಪವನನ ಬೀಡು ಬಿಟ್ಟುದು
ಗೋಣಿನಲಿ ಗರುವಾಯಿಗೆಡೆ ರಣ
ಹೂಣಿಗನು ಜವಗುಂದಿದನು ದುಶ್ಶಾಸನನು ಬಳಿಕ ॥ ೪೭

ಹೊಯ್ದು ತುರುಬನು ಹಿಡಿದು ತಡೆಗಾ
ಲ್ವೊಯ್ದು ಕೆಡಹಿದನಸಬಡಿದು ಹೊಯ್'
ಹೊಯ್ದು ಬಿಡೆ ಖೊಪ್ಪರಿಸಿ ಡೊಕ್ಕರವಿಕ್ಕಿ ರಾಘೆಯಲಿ ।

---

[1] ವನು ಜೋಕೆಯಲಿದೆ ಕಡು (ಕ). * ವು (ಚ.ತ.ನ). [2] ವಿಘಾತಿಯ (ಕ.ಗ.ಟ

ಹಾಯ್ದವಾಲಿಗಳುಸುರಪಾಳಿಯು
ವೆಯ್ದಿ ಬಿಟ್ಟುದು ಮೂಗಿನಲಿ ಕೈ
ಗೆಯ್ದು ತುಡುಕಿದ ಶೋಣಿತಕೆ ಲಟಕಟಿಸಿದನು ಭೀಮ ॥ ೪೮

ಹರಿ ಮದೋತ್ಕಟದಂತಿಯನು ಡೊ
ಕ್ಕರಿಸಿ ಡಾವರಿಸುವವೊಲಾ ನರ
ಹರಿ ಹಿರಣ್ಯಕಶಿಪುವನಂಕದ ಮೇಲೆ ತೆಗೆವಂತೆ ।
ಅರಸ ನಿನ್ನ ಕುಮಾರಕನ ನಡು
ತರದೊಳಗೆ ಕೆಡಹಿದನು ಕೊಬ್ಬಿದ
ಮರುಷ ಹರುಷ ನಿಯುದ್ಧದಕ್ಕಡನಾದನಾ ಭೀಮ ॥ ೪೯

ಸಿಕ್ಕಿದೆಯಲಾ ಸ್ವಾಮಿ ದ್ರೋಹಿಯೆ
ಸೊಕ್ಕಿದೆಯಲಾ ಹಿಂದೆ ಜೂಜಿನ
ಲಕ್ಕಜವ ಮಾಡಿದೆಯಲಾ ಮಾನಿನಿಯ ಮುಡಿವಿಡಿದು ।
ಚುಕ್ಕಿಗಳಲಾ ನಿನ್ನವರು ಕೈ
ಯಿಕ್ಕ ಹೇಳಾ ನಿನ್ನನೊಬ್ಬನ
ನಿಕ್ಕಿ ನೋಡಿದರಕಟನುತ ಮೂದಲಿಸಿದನು ಭೀಮ ॥ ೫೦

ಉಕ್ಕಿದುದು ತನಿಹರುಷ ಮೈಯೊಳ
ಗೊಕ್ಕವಾ ಪುಳಕಾಂಬು ಕಂಗಳು
ಮುಕ್ಕುಳಿಸಿದುವು ಮುನ್ನ ದುಶ್ಶಾಸನನ ಶೋಣಿತವ ।
ಬಿಕ್ಕುವಹಿತನನಡಿಗಡಿಗೆ ಎವೆ
ಯಿಕ್ಕದೀಕ್ಷಿಸಿ ತಣಿಯದಿನ್ನಕ
ಸಿಕ್ಕಿ ಸಿಡಿಮಿಡಿಗೊಂಬ ರೋಷವೆ ರಾಜ್ಯಮಾಡೆಂದ ॥ ೫೧

ಎತ್ತಿ ಕಳೆದಿರಿ ವನಕೆ ನಾವ್ ನಿ
ಮ್ಮೆತ್ತುಗಳಲಾ ಬೀದಿಯಲಿ ಬೆಂ
ಬತ್ತಿ ಕೊಂಕಿನ ಬೆರಳಲೇಡಿಸಿ ಬಯ್ದು ಭಂಗಿಸಿದೈ ।
ತೊತ್ತಲಾ ಪಾಂಚಾಲೆ ನಾವ್ ನಿ
ಮ್ಮೆತ್ತುಗಳಲಾ ಹಿಂದೆ ಕಿಚ್ಚಿನ
ತುತ್ತು ವಿಷದುಬ್ಬಟೆಗಳನು ನೆನೆಯೆಂದನಾ ಭೀಮ ॥ ೫೨

ಎಱಗಿದನು ಕಟವಾಯ ಹಲುಗಳ
ಮುಱಿಯಲುಗುರಲಿ ಹೊಯ್ದು ಹೃದಯವ
ನುಱೆ ಬಗಿದು ವೊಗೆವೊಗೆದು ರಕ್ತವ ಕುಡಿತೆ[1]ಕುಡಿತೆಯಲಿ[1] ।

[1] ಯಲಿಕುಡಿದು (ಕ.ಚ.ಟ).

ಸುಱಿಸುಱಿದು ಸುಱಿದಡಿಗಡಿಗೆ ಚ
ಪ್ಪಿಱಿದು ಚಪ್ಪಿಱಿದಿದಱ ಮಧುರಕೆ
ನೆಱೆವವೇ ಸುಧೆಯಿಕ್ಷುರಸಗಿಸವೆಂದನಾ ಭೀಮ ॥ ೫೩

ಆಡಿದುದು ಹುಸಿಯಲ್ಲ ನೀ ನವಿ
ನೋಡು ಕರ್ಣನರೇಂದ್ರ ಕೌರವ
ನೋಡು ನವಿಯನು ಶಕುನಿ ಕೃಪ ಕೃತವರ್ಮ ಗುರುಸುತರು ।
ನೋಡಿರೈ ಹೇವರಿಸುವರೆ ಕೈ
ಮಾಡಿರೈ ನಿಮ್ಮಾತನಳಿವನು
ನೋಡುತಿಹು[1]ದೇ[1] ನಿಮಗೆ ನೀತಿಯೆ ಎಂದನಾ ಭೀಮ ॥ ೫೪

ಬಿಡಿಸಲಾಗದೆ ಕೈದುಕಾತಿಯ
ರಡಬಳವನೀ ಹುಲಿಯ ಬಾಯಲಿ
ಕೆಡವಿ ಕಳೆದಿರಲಾ ಸುಯೋಧನ ಕರ್ಣ ಗುರುಸುತರು ।
ಸುಡಲಿ ನಿಮ್ಮನು ಮೊಲೆಗಳಿಲ್ಲದ
ಕಡುಮುಹುಳಿ ನಿಮಗೇಕೆ ನಿಮ್ಮನು
ನುಡಿಸುವವರಾವಲ್ಲೆನುತ ಮದವೇಱಿದನು ಭೀಮ ॥ * ೫೫

ಎಲೆಲೆ ಕೌರವಮೋಹರದ ಮಂ
ಡಳಿಕರಿರ ದುಶ್ಶಾಸನನ ತೊ
ಟ್ಟುಳಿಕೆಗಾಂತಿದೆ ಹರಣವಕಟಾ ಕಾಯಲೆಳಸಿರಲಾ ।
ಸಲಹಿದವನೊಡಹುಟ್ಟಿದೀತನ
ಕೊಲುವೆಡೆಗೆ ಮತವೇ ಮಹೀಶರ
ಕುಲಕೆ ಪಂಥವಿದೇ ಎನುತ ಮೂದಲಿಸಿದನು ಭೀಮ ॥ ೫೬

ಏನ ಹೇಳುವೆನರಸ ಕೌರವ
ಸೇನೆ ಗರಹೊಡೆದಂತೆ ಬಹಳಾಂ
ಭೋನಿಧಿಯಲದ್ದಂತೆ ಬೆಗಡಿನ ಸೊಗಡ ಸೆಱೆವಿಡಿದು ।
ಮೋನದಲಿ ಮನವಳುಕಿ ಯೋಗ
ಧ್ಯಾನಪರರಾದಂತೆ ಚಿತ್ತ
ಗ್ಲಾನಿಯೊಳಗೆಲೆಮಿಡುಕದಿದ್ದುದು ನಿನ್ನ ಪರಿವಾರ ॥ † ೫೭

---

[1] ದಿದು (ತ). * ಈ ಪದ್ಯ (ಕ.ಪ.) ಪ್ರತಿಗಳಲ್ಲಿಲ್ಲ. ಇಲ್ಲಿಂದ ಮುಂದಕ್ಕೆ ( ) ಪ್ರತಿಗಳಲ್ಲಿ ಓಲೆಗಳಿಲ್ಲ. † ೫೭-೫೮ನೆಯ ಪದ್ಯಗಳು (ಕ) ಪ್ರತಿಯಲ್ಲಿಲ್ಲ.

ಅಡಿಗಡಿಗೆ ಕದುಕಿಱಿದು ರಕುತವ
ಕುಡಿತೆಯಲಿ ಕುಡಿಕುಡಿದು ಬೆರಳಲಿ
ಮಿಡಿದು ಕದನಸ್ಥಾನದೇವತೆಯರಿಗೆ ಕೈಕೊಳಿಸಿ ।
ಕುಡಿದು ಮಿಕ್ಕದನಖಿಳ ಭೂತಕೆ
ಬಡಿಸಿ ಚಪ್ಪಿಱಿದಾರಿ ಬೊಬ್ಬಿಱಿ
ದೊಡನೊಡನೆ ನೊರೆನೆತ್ತರೋಕುಳಿಯಾಡಿದನು ಭೀಮ ॥ ೫೮

ಎಲವೆಲವೋ ಗುರುಸೂನು ಭೂಮಂ
ಡಲದೊಳಗೆ ನಿಮ್ಮಯ್ಯನೂ ನೀ
ನುಳಿಯೆ ಭಟರಿಲ್ಲೆಂಬ ಗರ್ವದಗಿರಿಯನೇಱಿಹಿರಿ ।
ನಿಲುಕಲಾಗದೆ ಕೌರವಾನುಜ
ನುಳಿವು ಸೊಗಸದೆ ನಿನಗೆ ಬಿಲುವಿಡಿ
[1]ದುಳುಹಿರೈ ಲೇಸಹುದೆನುತ[1] ಮೂದಲಿಸಿದನು ಭೀಮ ॥ ೫೯

ಎಲೆ ಕೃಪಾಚಾರಿಯ ಸುಯೋಧನ
ನೊಳಗೆ ಸೇರುವೆ ಹಿರಿದು ನಿಮಗೀ
ಖಳನ ಕೊಲೆಯನು ನೀವು ಮನಗೊಟ್ಟೊಲಿದು ನೋಡುವರೆ ।
ಎಲೆ ಶಕುನಿಯೆಲೆ ಶಲ್ಯ ಎಲೆ ಬಾ
ಹಿಲಿಕ ಕೃತವರ್ಮಾದಿ ವೀರರು
ಸೆಳೆದುಕೊಳಿ ದುಶ್ಶಾಸನನನೆನುತೊಱಲಿದನು ಭೀಮ ॥ ೬೦

ಪತಿಗೆ ಮಲೆವರಗಂಡನಾಳ್ದಗೆ
ಹಿತವ ಕೌರವಕುಲಕೆ ಕಣು ಗತಿ
ಮತಿಯೆನಿಸಿ ನೀ ಕರ್ಣನೆಂಬುದು ಸಕಲಜನಜನಿತ ।
ಪತಿಯ ಸಹಸಂಭವನ ಮರಣ
ವ್ಯತಿಕರವ [2]ನೋಡಿದಡೆ ದುಷ್ಕೀ
ರಿತಿಯ ವೊಳೆ ಹೊಮ್ಮುವವಲೇ ರವಿಸುತನೆ ಕೇಳೆಂದ[2] ॥ ೬೧

ಕರೆದು ಮೂದಲಿಸಿದರೆ ರಣಭೀ
ಕರರು ಮರಳುವರವರಿಗೆತ್ತಿದ
ಬಿರುದಿನಗ್ಗದವೀರ ನೋಡುತ್ತಿಹರೆ ಕಲಿ ಕರ್ಣ ।

---

[1] ದಳುಕಿದಿರಲಾ ನೀವೆನುತ (ದ.ಪ.ಬ). [2] ಬಿಡಿನದಿರೆ ಯಪಕೀರಿತಿಯು ನಿನಗಹುದೆಂದು ಮೂದಲಿಸಿದನು ರವಿಸುತನ (ಫ.ತ.ದ).

[1]ಹರಣವಿದೆ ದುಶ್ಶಾಸನನ *ತೆಗೆ
ಬರ*ಸೆಳೆವ ಬಲುಹುಳ್ಳಡೆನುತು
ಬ್ಬರಿಸಿ ಗಜಱಿನ ಗರುವನೊಱಲಿದನಹಿತವೀರರಿಗೆ[1] ॥ ೬೨

[2]ಆಕೆವಾಳರು ಕರ್ಣಗುರುಸುತ
ರೀ ಕೃಪಾಚಾರಿಯರು[2] ತಾವೇ
ಕೈಕವೀರರು ನಿನ್ನನೊಬ್ಬನನೊಪ್ಪುಗೊಟ್ಟರಲಾ ।
ಏಕೆ ತಱುಬಿದಿರಿವರನಾಹವ
ಭೀಕರರ[3]ನವಿವೇಕಿ[3]ಗಳು ಇವ
ರೇಕೆ ನೀವೇಕೆಂದು ದುಶ್ಶಾಸನನ ನೋಡಿದನು ॥ ೬೩

ಮರಣ ಹೊರೆಹೊರೆಯಾಯ್ತು ನಿನ್ನಯ
ಹರಣವೆನ್ನಂಗಯ್ಯಲಿದೆ ನಿ
ಮ್ಮರಸನನ ಕರಸೆಲವೊ ಕಾದಿಸು ನಿನ್ನ ರಕ್ಷಿಸಲಿ ।
ಅರಿಬಲದೊಳಿದಿರಿಲ್ಲ ನಿಜವೋ
ಹರದೊಳಗೆ ಮಿಡುಕುಳ್ಳ ವೀರರು
ಮರಳಿಚಲಿ ನಿನ್ನುವನೆನುತ ನೋಡಿದನು ತನ್ನವರ ॥ † ೬೪

ಎಲವೊ ಧೃಷ್ಟದ್ಯುಮ್ನ ಸಾತ್ಯಕಿ
ಎಲೆ ಶಿಖಂಡಿ[4]ಪ್ರಮುಖನಾಯಕ
ರಳು[4]ಕದಿಹ ಮನವುಳ್ಳಡಿದಿರಾಗಿವನ ಸಲಹುವುದು ।

---

[1] ಧುರದೊಳಪ್ರತಿವೀರನೀ ಸಂ
ಗರಕೆ ಸಾಹಸಮಲ್ಲ ಈ ವ್ಯತಿ
ಕರವ ನೀ ಬಿಡಿಸೆಂದು ಮೂದಲಿಸಿದನು ಕಲಿ ಭೀಮ ॥ (ದ).

* ನನಿಬರು (ತ). [2] ಈ ಕೃಪನನೀಕರ್ಣನೀ ಮತ್ತೀಕುಮತಿಗಳು ಗುರುಸುತನು (ಕ.ಗ.ನ). [3] ಸೇವಕರು (ತ.ನ.ಪ). † ಈ ಪದ್ಯವಾದಮೇಲೆ (ಗ.) ಪ್ರತಿಯಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ :—

ಇವರ ಬಲದಲಿ ನಿಂದುದೀ ನ
ಮ್ಮವರಲೇ ಮುರಹರ ಧನಂಜಯು
ನಿಮಗೆ ಬಲುಹುಯಾದರಿವನನು ಬಿಡಿಸಿ ಬಲ್ಲಿದರು ।
ಹವಣಱುದೆವಾವೆಂಬ ಲಯಭೈ
ರವಭಯಂಕರ ಭೀಮನಾಟೋ
ಪವನು ಕಂಡೆವೆಯಿಕ್ಕದಿರ್ದುದು ಭಟರು ಭೀತಿಯಲ ॥

[4] ಯುಧಿಷ್ಠಿರಾದಿಗಳಳು (ಪ.ನ).

ಹಲಬರಲಿ ಫಲವೇನು ದಾನವ
ಕುಲದಿಶಾಪಟಕೃಷ್ಣ ಮುನಿದಡೆ
ಕಳೆದುಕೊಳು ಕೌಮೋದಕಿಯನೆಂದೊದಱದನು ಭೀಮ ॥ ೬೫

ಕೇಳು ಫಲುಗುಣ ಲೋಕಮೂಱಱೊ
ಳಾಳು ನೀನೆಂದೆಂಬ ಗರ್ವವ
ಪಾಲಿಸುವೊಡಿದಿರಾಗು ತೊಡು ಗಾಂಡಿವದಲಂಬುಗಳ ।
[1]ಆಳುತನ ನಿನಗುಳ್ಳೊಡಹಿತನ
ಪಾಲಿಸುವೊಡೇಳೆಂದೆನಲು[1] ಜಯು
ಲೋಲ ಸುಗತಿಯೊಳಿಳಿದನರ್ಜುನನಮಳ ಮಣಿರಥವ ॥ ೬೬

ಅಹುದಹುದು ತಪ್ಪೇನು ತಪ್ಪೇ
ನಹಿತದುಶ್ಶಾಸನನ ಸಲಹುವೆ
ನಹಿತ[2]ಬಲವೆನಗ[2]ನಿಲಸುತನೆನುತ್ತೈದೆ ಬರೆ ಕಂಡು ।
ಬಹಳ ಭೀತಿಯೊಳಸುರರಿಪು ಸ
ನ್ನಿಹಿತ ಚಾಪವ ಹಿಡಿದು ಮನದು
ಮ್ಮಹವ ಕೆಡಿಸಿ ಕಿರೀಟಿಯನು ನಿಲಿಸಿದನು ರಥದೊಳಗೆ ॥ ೬೭

ಅಹುದು ಭೀಮನ ಗೆಲುವ ಭಟನೀ
ನಹೆಯಲೇ ನಾವಂಜುವೆವು ನಿ
ರ್ವಹಿಸಬಹುದೇ ಕಾಲರುದ್ರನ ಕೆಣಕಿ ಕದನದಲಿ ।
ಸಹಜವಿದು ಸಾಕ್ಷಾದುಮಾಪತಿ
ಯಹ ಕಣಾ ಪವನಜನ ನೋಡಲು
ಬಹಡೆ ನೋಡೆಂದಸುರರಿಪು ನುಡಿದನು ಧನಂಜಯಗೆ ॥ ೬೮

ಕಂಡನರ್ಜುನ ತ್ರಿಪುರದಹನದ
ಖಂಡಪರಶುವೊಲಿರ್ದ ಭೀಮನ
ದಂಡಿಯನು ಥಟ್ಟೈಸಿ ಭೂತಗಳೆಡಬಲದೊಳಿರಲು ।
ಚಂಡಬಲನಹನ್ಕೈ ವೃಕೋದರ
ಗಂಡುಗಲಿಗಿದಿರಾವನೆನುತಾ
ಖಂಡಲಾತ್ಮಜನೆಱಗಿದನು ಮುರವೈರಿಯಂಘ್ರಿಯಲಿ ॥* ೬೯

---

[1] ಆಳುತನಕಿಳೆ ಮೆಚ್ಚಿ ಭೀತರ ಪಾಲಿಸೀತನ ಕಾವುದೆನೆ (ಕ). [2] ನೆನಗಿನ್ನ (ತ.ನ). * ಈ ಪದ್ಯ (ಕ.ಗ.ನ.) ಪ್ರತಿಗಳಲ್ಲಿಲ್ಲ.

ಉಭಯ ವೀರರ ನೋಡಿ ಸಂಗರ
ರಭಸದಲಿ ಮೂದಲಿಸಿ ಚಾಪ
ಪ್ರಭವಚಪಲರ ಚದುರುಗೆಡಿಸಿದ [1]ಭುಜಬಲೋನ್ನತಿಯ ।
ಸಭೆಯೊಳಾದವಮಾನದಹನ
ಪ್ರಭೆಯ ನಂದಿಸಲಾಯ್ತಲಾ ರಿಪು
ಸುಭಟ[2]ನುರವೆಂಬಭ್ರಸಂಭವರುಧಿರಜಲವೆಂದ[2] ॥ ೭೦

ಕೆಡೆದ ಹಗೆಯೊ[3][ರ][3]ಲಿನಲಿ ಕಿವಿ ಎಡೆ
ಯುಡುಗದೀಕ್ಷಿಸಿ ಕಂಗಳಾ ಖಳ
ನೊಡಲ ಕಡಿಗೆಡಹಿನಲಿ ಮೈ ರಿಪುಮಾಂಸಗಂಧದಲಿ ।
ಬಿಡದೆ ನಾಸಿಕ ಖಳನ ರಕುತವ
ಕುಡಿದು ನಾಲಗೆ ಸೊಗಸೆ ಸೊಕ್ಕಿದ
ನೊಡನೊಡನೆ ಪಂಚೇಂದ್ರಿಯ ಪ್ರೀತಿಯಲಿ ಕಲಿ ಭೀಮ ॥ ೭೧

ಘನ ಪರಾಕ್ರಮಿ ಭೀಮಸೇನಗೆ
ವಿನುತ ಭುಜಗೇಂದ್ರಂಗೆ ದುಶ್ಶಾ
ಸನನ ಜೀವಾನಿಳನ ಪಾರಣೆ ಸಮರಭೂಮಿಯಲಿ ।
ಮುನಿವನಾರಿವನೊಳಗೆ ಕರುಳಿನ
ಘನ ನಿಶಾಕರಬಿಂಬದುದಯದೊ
ಳನಿಲಜನ ಮುಖಕುಮುದನಸುನಗೆಯೆಸಳು ಪಸರಿಸಿತು ॥ ೭೨

[4]ಉಕ್ಕಿ[4]ದುದು ಕಡುಗೋಪ ರಕುತದ
[5]ಸೊಕ್ಕಿ[5]ನಲಿ ಸೊಗಡೇಱು ಕಂ[6]ಗಳ
ಲುಕ್ಕಿ[6]ದುದು ಕಡುಗೆಂಪು ತೊದಳಿನ ಗಜಱು ಘೂಡಿಸಿತು ।
[7]ಮಿಕ್ಕ[7] ರಕುತವ ಮೊಗೆದು [8]ಬದಿಗಳೊ
ಳೊಕ್ಕ ಕರುಳ್ಗಳನಾಯ್ದು ಮೂಲೆಗ
ಳೊಕ್ಕಿನಲಿ ಕೈಯಿಕ್ಕಿ ಱುಂಗಣಗುಣಿದನಾ[8] ಭೀಮ ॥ ೭೩

ಬಳಿಕ ಪರಿತೋಷದಲಿ ಮಾರುತಿ
ಲಲನೆಯಲ್ಲಿಗೆ ಕಳುಹಿದನು ತ
ನ್ನೊಲವಿನಾಹವವಾದುದ್ವೈತಹುದೆನಲು ಬೇಗದಲಿ ।

[1] ನಂದು ಕಲಿ ಭೀಮ (ಕ). [2] ಸಂಭವರಕುತಜಲವೆನಗೆಂದನಾ ಭೀಮ (ಕ.ನ.ಪ). [3] ಡ (ಸ). [4] ಔಕಿ (ಕ). [5] ಸೋಕಿ (ಕ). [6] ಗಳೊಳೌಕಿ (ಕ). [7] ನೂಕಿ (ಕ). [8] ಕರುಳನು ತೋಕಿ ಮೂಳೆಗಳೊಕ್ಕಿಲಲಿ ಕೈನೂಕಿ ಱುಂಗಣ ಗುಣಿದು ಭೀಕರನಾದನಾ (ಕ).

ನಳಿನಮುಖಿ ನಲವೇಱಿ ಮೇಳದ
ಕೆಳದಿಯರು ಕೈಗೊಡಲು ನೇವುರ
ದೆಳಮೊಳಗು ಮೋಹಿಸಲು ಮಾನಿನಿ ಬಂದಳಾಯೆಡೆಗೆ ॥ ೭೪

ಮನಸಿಜನ ಮದದಾನೆ [1]ವೊಗಸಿ[1]ದ
ಳನುವರಕೆ ಮಝು ಮಾಯೆ ಮೆಚ್ಚನ
ಮನದ ಕಡುಹಿನ ಖಾತಿಯೆಂತುಟೊ ಕೌರವನ ಮೇಲೆ ।
ಎನಲು ದಿವಿಜರು ಝುಣಝುಣಾಯಿತ
ನಿನದದುರವಣೆ [2]ಮಿಗಲು ಘನಸಂ
ಜನಿತ ಪದತಳ ಚಲನಕೃತಿಯಿಂದೈ[2]ದಿದಳು ರಣವ ॥ ೭೫

ಅರರೆ ಭೀಮನ ವಿಜಯಲಕ್ಷ್ಮಿಯು
ಬರವೊ ಕೌರವನೃಪನ ಮರಣಾಂ
[3]ಕುರವ ಸೂಚಿಸುವಾತುರಶ್ರೀಸತಿಯು[3] ಸಂಭ್ರಮವೋ ।
ಅರಿಭಟರಿಗದ್ಭುತವೆನಲು ಭೀ
ಕರರು ದುರ್ಧರವೆಂದೆನಲು ಪಂ
ಕರುಹಮುಖಿ ನಡೆತಂದಳಾ [4]ಪವಮಾನಜನಹೊರೆಗೆ[4] ॥ ೭೬

ಬರುತ ಕಂಡಳು ಭೀಮಸೇನನ
ಧುರಪರಾಕ್ರಮವಪ್ಪಿ ಭುಗಿಲೆಂ
ದರಿಭಯಂಕರರೌದ್ರರೂಪಿನೊಳಿರಲು ಬರಲಂಜಿ ।
ತಿರುಗೆ ಕಂಡನು ಪವನಸುತ ಪಂ
ಕರುಹಮುಖಿಯನು ಕರೆದು ನಿನ್ನಯ
ಭರದ ಬಯಕೆಯಿದಾಯ್ತು ದಿಟ ನೋಡೆಂದು ತೋಱಿಸಿದ ॥ ೭೭

ಆರಿವನು ನೀ ಕೊಟ್ಟ ಭಾಷೆಯ
ಕಾರಣಿಕ ಖಳರೊಳಗಿದಾವನು
ವೀರ ದುಶ್ಶಾಸನ ಕಣಾ [5]ಅಂತಾದಡಾಯ್ತೆನುತ[5] ।
ಸಾರಿದಳು ಸರಸಿಜವದನೆ ಭ
ರ್ತಾರನನು ನಸುನಗುತ ಚರಣದ
ಚಾರು ನೇವುರವುಲಿಯಲೊದೆದಳು ಖಳನ ಮಸ್ತಕವ ॥ ೭೮

---

[1] ವೋಹಿ (ಕ). [2] ವೇಲೆ ಕರಸಂಜನಿತಕರಕಮಳದ ಚಮತ್ಕೃತಿಯ್ಕೆ (ಕ). [3] ಕುರವಿವರ್ಧನವಾತುರ ಶ್ರೀಸತಿಯು (ಕ.), ತರವ ಸೂಚಿಸುವಾದಿಶಕ್ತಿಯು ಗತಿಯು (ಪ.), ಕುರವ ಸೂಚಿಸುವಪಜಯಸ್ತ್ರೀಸತಿಯು (ಬ.ನ). [4] ಪವನಜನಸಮ್ಮುಖಕೆ (ಟ.ದ). [5] ಅಂತಾದಡಹುದೆನುತ (ಕ.), ನೋಡೆನಲು ಹರುಷದಲಿ (ಗ.ಟ.ದ.ನ.ಬ).

ನುಡಿವುದರಿದೇ ನುಡಿದ ಭಾಷೆಯ
ಕಡೆತನಕ ಪೂರೈಸಿ ಮಾಡುವ
ಕಡುಗಲಿಗಳಾರುಂಟು ಜಗದೊಳು ನಿನ್ನ ಹೋಲುವರು ।
*ಮೃಡಪರಾಕ್ರಮಿ ನನ್ನಹೋಲುವ
ಮಡದಿಯರು ನಿನ್ನಂದದೊಡೆಯರ
ಪಡೆವುದೇ ಪರಮೈಕಸೌಖ್ಯವಿವೆಂದಳಿಂದುಮುಖಿ* ॥ † ೭೯

ತರುಣಿ ಕುಳ್ಳಿರು ಸ್ವಾಮಿದ್ರೋಹಿಯ
ಕರುಳ ಮುಡಿ [1]ಬಾ ನಿನ್ನ ಖಾತಿಯ
ಪರಿಹರಿಸುವೆನು ಖಳನ ರುಧಿರ[1]ಸ್ನಾನಕೆಳಸುವಗೆ ।
ಸರಸಿಜಾನನೆ ಕೊಳ್ಳೆನುತ ಖಳ
ನುರವನಿಬ್ಬಗಿಮಾಡಿ ಕುಡಿತೆಯ
ಲರುಣಜಲವನು ಮೊಗೆದು ಮಾನಿನಿಗಿತ್ತನಾ ಭೀಮ ॥ ೮೦

ಶೋಣಿತಾಂಬುವಿನಿಂದ ತರುಣಿಯ
ವೇಣಿಯನು ನಾದಿದನು ದಂತ
ಶ್ರೇಣಿಯಲಿ ಬಾಚಿದನು ಬೈತಲೆದೆಗೆದು ಚೆಲುವಿನಲಿ ।
ರಾಣಿ ಹುಸಿಯದೆ ಹೇಳು ಹೇಳೆ
ನ್ನಾಣೆ ಸೊಗಸೇ ಖಳನ ದಂತ
ಶ್ರೇಣಿ [2]ತವೆ ಪಾವನವೆ[2]ಯೆಂದನು ಪವನಸುತ ನಗುತ ॥ ೮೧

ಮುಡಿಗೆ ಹಾಯ್ದವನುದರ ರಕ್ತವ
[3]ತೊಡೆದು[3] ಕಬರಿಯ ಕ[4]ಟ್ಟೆ[4] ಕಟ್ಟುವೆ
ನುಡಿಗೆಯಳಿದನ ಚರ್ಮವನು ನೀನುಡಿಸಲುಟ್ಟಪೆನು ॥
ಎಡೆಯಲೊಯ್ಯಾರದಲಿ ಕಟ್ಟೆನು
ಮುಡಿಯ ಮುಡಿಯುಡೆನೆಂಬ [5]ತೇಜದ[5]
ನುಡಿದ ನುಡಿ ಸಲೆ ಸಂದುದೇ ತನ್ನಾಣೆ ಹೇಳೆಂದ ॥ ೮೨

---

* ಕಡುಬಳಲಿದೆನ್ನಾಸರಡಗಿತು
ಪೊಡವಿ ಕೈಸಾರಿತು ವೃಕೋದರ
ಪಡೆದೆನತಿಸಂತೋಷವನು ಕೇಳೆಂದಳಿಂದುಮುಖಿ ॥ (ಪ).

† ಈ ಪದ್ಯ (ಕ.) ಪ್ರತಿಯಲ್ಲಿ ಮಾತ್ರ ಇಲ್ಲ. [1] ವರೆ ಧುರದ ಖಾತಿಯ ಧರದುರದ ವಿರಕ್ತವಾರಿಯ (ಕ). [2] ಯಿಹೆ ಬಾಚಣಿಗೆ (ಕ.ದ), ಮಯಬಾಚಣಿಗೆ (ಘ.ಪ). [3] ಕುಡಿದು (ಕ). [4] ಟ್ಟ (ಕ.ನ.ಪ.ಬ). [5] ಭಾಷೆಯಿ (ಟ.ದ.ನ).

ಖಳನ ತೆಳುದೊಗಲುಗಿದು ವಾಸ
ಚ್ಛಲವ ಸಲಿಸಿದನವನ ಜಠರದೊ
ಳೊಳಗರುಳನುಗಿದಬುಜವದನೆಯ ಮುಡಿಗೆ ಮುಡಿಸಿದನು।
*ತಳುಕಿದನು ಖಳನುರದ ರಕ್ತದ
ತಿಳಕವನು ರಚಿಸಿದನು ಹರುಷದೊ
ಳುಲಿದು ಕೀಚಕವೈರಿ ನೋಡಿದನೊಲಿದು ನಿಜಸತಿಯ ॥* ೮೩

ಪಸರಿಸಿದ ಪರಿವಾರಶರಧಿಯ
ಮುಸಕ ಮುಸುಳಿತು ತೊಡೆಯಲಡಗೆಡೆ
ದಸುಹೃದನ ದರುಶನದೊಳಗೆ ಮುಸಗಿದವು ಮುಡುಹುಗಳು।
ಶಶಿವದನೆಯುತ್ಸಾಹವತಿ [1]ಧಾ
ಳಿಸಿತು[1] ಭೀಮನ ಹರುಷಜಲನಿಧಿ
ವಿಸಟವರಿದುದು ಕೇಳು ಜನಮೇಜಯ ಮಹೀಪಾಲ ॥ ೮೪

ಎಡದ ತೊಡೆಯಲಿ ಮಡದಿ ಬಲುವಗೆ
ಯೊಡಲು ಬಲವಂಕದಲಿ ನೆಗಹಿದ
ಕುಡಿವೆರಳ ನಿಡುಗರುಳ ಮಾಲೆಯ ರೌದ್ರ ರಚನೆಯಲಿ।
ಕಡುಮನದ ಖತಿಗಾಟ ಭೀಮನ
ಕಡುಹು ಹೋಲುವೆಯಾಯ್ತು ಕಂಭದೊ
ಳೊಡೆದು ಮೂಡಿದ ಮೃಗದ ಮೊಗದ ಮಹಾಸುರಾಂತಕನ ॥ ೮೫

ಕೆಲದ ತಲೆ[2]ಯದ್ರಿಗಳ[2] ಮೂಳೆಯ
ಹೊಳೆವ ಸಾಲಿನ ಸುಂಟಗೆಯ [3]ತೊಂ
ಗಲಿನ ತೋರಣವೊ[3]ಟ್ಟಿಲಟ್ಟೆಯ ಕರುಳ ಮಾಲೆಗಳ।
[4]ತಿಳಿದ ರಕುತದ ಕೊಳನ ಘನ ಕೊಳು
ಗುಳದ ತೋಪಿನ ನಡುವೆ ಮಾರುತಿ
ಲಲನೆಸಹಿತಾಡಿದನು ಶೋಣಿತವಾರಿಯೋಕುಳಿಯ[4] ॥ ೮೬

---

* ತಳುಕು ರಕುತವ ಕಳೆದು ರುಧಿರಾ । ವಳಿಯುಲಿಟ್ಟನು ಬೊಟ್ಟನಂಗನೆ । ಯಳಕವನು ತುದಿವೆರಳಲೊರಸುತ ನುಡಿದನಾಭೀಮ (ಕ).

[1] ರಾಣಿಸಿದ (ಕ). [2] ಯಂಬುಜದ (ಪ.ದ.ನ.), ಯಟ್ಟೆಗಳ (ಗ). [3] ತೋರಣದೊಳೊಡಗುಗಳೊ (ಕ). [4] ತಿಳಿದ ರಕುತದ ಕೊಳನ ಘನ । ತೋಳುಗಳ ತೋಪಿನ ನಡುವೆ ಮಾರುತಿ । ಲಲನೆ ಸಹಿತಾಡಿದನು ಶೋಣಿತ ವಾರಿ ಕೇಳಿಗಳ (ಕ), ತಳಿತ ರಕುತದ ತೋಳ ಘನ ಕೊಳು । ಗುಳದ ತೋಪಿನ ನಡುವೆ . . . . . (ಪ.ಬ.)

ಕೊಳುಗುಳದ ಜಯಲಕ್ಷ್ಮಿಗಾಯಿತು
ಚಲನಸುತನಲಿ ಮದುವೆಯೆನೆ ಮಂ
ಗಳಮುಹೂರ್ತ[1]ಕದೊಳಗೆ[1] ಮುಳುಗಿದ ಘಳಿಗೆವಟ್ಟಲೆನೆ |
ತಲೆಕಪಾಲದ ಸಾಲಶೋಣಿತ
ಜಲದಲಂದೊಪ್ಪಿದವು [2]ರಣದೊಳು
ಕಳದೊಳದ್ಭುತ ರಚನೆ ಮಿಗೆ[2] ಸೌರಂಭ ರಂಜಿಸಿತು ‖ ೮೭

ಉಡಿದು ಕೆಡೆದ ಸಿತಾತಪತ್ರದ
ನಡುವೆ ಹರಿಸಾಲಿನ ಕಪಾಲದ
ಗಡಣವಿರೆ ಚೆಲುವಾಯ್ತು ಜನಮೇಜಯ ಮಹೀಪಾಲ |
ಅಡಗನಂತಕ[3]ಗಗಲ ತಂ[3]ದುಣ
ಬಡಿಸಲಿಕ್ಕಿದ ತಳಿಗೆಯೊಳು ಸಂ
ಗಡಿಸಿದವು ಕೆಲವಟ್ಟಲೆನೆ ರಂಜಿಸಿತು ರಣಭೂಮಿ ‖ ೮೮

ಸರಳ ತುದಿಹಿಳುಕಿನಲಿ ಸಬಳದ
ಸುರಗಿಗಳ ಸೂಸಗಿಯ ಬಂಡಿಯು
ಶರಗಳಲಿ ಸಿಲುಕಿರ್ದ ಸುಭಟರ ಕಡಿಕು ಮೆಱೆದಿರಲು |
ಅರರೆ ಜವನಂಗಡಿಯೊಳಿಕ್ಕಿದ
ತರತರದೊಳಿಹ ಪಸರವೆನೆ ಸಿಂ
ಗರಿಸಿತ್ತೈ ರಣಭೂಮಿ ಜನಮೇಜಯ ಮಹೀಪಾಲ ‖ ೮೯

ಸಿಡಿದ ಕಣ್ಣಾಲಿಗಳು ಜವನಂ
ಗಡಿಯ ನೀಲದ ಹಸರದಂತಿರ
ಲಡಗು ಮೆಱೆದುದು ಸೂನೆಗಾಱರ ಹಸರದಂದದಲಿ |
ಹೊಡೆಗೆಡೆದ ಗಜದಟ್ಟೆ ರಕುತದ
ಕಡಲೊ[4]ಳದ್ದವು ಬೀತರಸುಗಳ
ಪಡಗು ಜವಲೋಕಕ್ಕೆ ಜಂಗುಳಿಸಿರ್ದ[1]ವೆಂಬಂತೆ ‖ ೯೦

ಏನ ಹೇಳುವೆನರಸ ಕೌರವ
ಸೇನೆ ಗರಹೊಡೆದಂತೆ ಬಹಳಾಂ
ಭೋನಿಧಿಯೊಳದ್ದಂತೆ ಬೆಗಡಿನ ಸೊಗಡ ಸಱಿಹಿಡಿದು |

---

[1] ದೊಳಂದು (ಕ). [2] ಬಾಣದ ತಲೆ ಶಯನದಲಿ ಮೆಱೆವ ರಣಸಂ (ಘ.ಟ.ತ.ದ.ನ.ಪ.ಬ). [3] ನಗಲನಂ (ಗ.ಟ.ತ.ದ.ಪ.ಬ). [4] ಳೆಸೆದವು ದನುಜ ಲೋಕದ ಹಡಗು ಧೂಲೋಕಕ್ಕೆ ಬಂದಳವಿಳಿದ (ಕ).

ಮೋನದಲಿ ಮನಮುಳುಗಿ ಯೋಗ
ಧ್ಯಾನಪರರಾದಂತೆ ಚಿತ್ತ
ಗ್ಲಾನಿಗಳಲೆಲೆಮಿಡುಕದಿರ್ದುದು ನಿನ್ನ ಪರಿವಾರ ॥* ೯೧

ಅಡಿಗಡಿಗೆ ಕದುಕಿಱಿದು ರಕ್ತವ
ಕುಡಿತೆಯಲಿ ಮೊಗೆಮೊಗೆದು ಬೆರಳಲಿ
ಮಿಡಿದು ಕದನಸ್ಥಾನದೇವತೆಯರಿಗೆ ಕೈಗೊಳಿಸಿ ।
ಕುಡಿದು ಮಿಕ್ಕುದನಖಿಳ ಭೂತಕೆ
ಒಡಿಸಿ ಬೊಬ್ಬಿಱಿದಾಱಿ ಚಪ್ಪಿಱಿ
ದೊಡನೊಡನೆ ನೊರೆನೆತ್ತರೋಕುಳಿಯಾಡಿದನು ಭೀಮ ॥* ೯೨

†ಬಂದ ತೋಱೆಗಳ ಕುಡಿದೆನತಿ ಢಗೆ
ಯಿಂದ ಸಕಲ ಸರೋರುಹಾಂಬುವ
ನೊಂದೆ ಶ್ವಾಸದಲೀಂಟಿದೆನು [1]ಶಂಕಿಸದು[1] ಕೋಪಾಗ್ನಿ ।
ಇಂದು ದುಶ್ಯಾಸನನ ಶೋಣಿತ
ದೊಂದು ಕುಡಿತೆಯಲಾ ಮಹಾಶಿಖಿ
ನಂದಿತೇನಿದು ಚಿತ್ರವಲ್ಲಾ ಸೂತ ಹೇಳೆಂದ ॥ ೯೩

ಇವನ ನೆತ್ತರ ಕುಡಿವ ರಿಪುಕೌ
ರವರ ನೂರ್ವರ ಕಡಿವ ಭಾಷೆಗ
ಳೆವಗೆ ಪೂರಾಯವು ಸುಯೋಧನ ಹರಣವೊಂದುಳಿಯೆ ।
ಅವನಿ ಜಳ ಶಿಖಿ ಪವನ ಪುಷ್ಕರ
ದಿವಿಜ ದನುಜೋರಗ ಮುಖಾಖಿಳ
ಭುವನಜನ ನೀವ್ ಕೇಳಿಯೆಂದನು ಭೀಮ ಮೊಗನೆಗಹಿ ॥ ೯೪

ಮಡದಿಯನು ಕಳುಹಿದನು ಕೆಳದಿಯ
ರೊಡನೆ ನಡೆತರೆ ನಾಕು ಕಡೆಯಲಿ
ಹಿಡಿದ ಜವನಿಕೆಗಳಲಿ ಜಲರುಹವದನೆ ಗಮಿಸಿದಳು ।

---

* ಈ ಪದ್ಯಗಳು (ಘ.ಟ.ತ.ದ.ನ.) ಪ್ರತಿಗಳಲ್ಲಿಲ್ಲ. † ಇಲ್ಲಿಂದ ಮುಂದಿನ ನಾಲ್ಕು ಪದ್ಯಗಳ ಕ್ರಮವು (ತ) ಪ್ರತಿಯಲ್ಲಿ ವ್ಯತ್ಯಾಸವಾಗಿದೆ. [1] ನಂದಿಸದು (ಟ.ದ.ಪ).

ತುಡುಕಿ [1]ವಾಮಾಂಘ್ರಿಯಲಿ ಹಗೆಯನು
ಮಡದಲೊದೆದನು ಬಳಿಕ ಕೌರವ
ಪಡೆಯ ಪವನಜ ಕೊಟ್ಟನಂತಕಪುರವನಾಂತರಕೆ[1] ॥ ೯೫

ಅರಿಯ ಹೆಣನನು ಹಾಯ್ಕಿ ನೊರೆ ನೆ
ತ್ತರಲಿ ಬೊಟ್ಟಿಟ್ಟನು ವರೂಥದ
ಹೊರಗೆ ಬಂದನು ಕಳಶಜಲದಲಿ [2]ತೊಳೆದು ಕರಪದವ[2] ।
[3]ಪರಿಹೃತಶ್ರಮನಾಗಿ[3] ವರ ಕ
ರ್ಪುರದ ಕಸ್ತುರಿಗಂಧಲೇಪವ
ನೊರಸಿ ಹೊಸಮುಡಿವರ್ಗದಲಿ ರಂಜಿಸಿದನಾ ಭೀಮ ॥ ೯೬

ವೀಳೆಯವ ಕೊಂಡನು ವರೂಥದ
ಮೇಲು[4]ವಲಗೆಯ[4] ಗದ್ದುಗೆಗೆ ರಿಪು
ಕಾಲಭೈರವನಡಱಿದನು ತುಡುಕಿದನು ನಿಜಧನುವ ।
ಕಾಳೆಗಕೆ ಕಡೆಹಾರವೇ ತೆಗೆ
ಯಾಳನಾಗಲಿ ಬಂದು ಕುರುಭೂ
ಪಾಲ ಬೀಳಲಿ ಧರ್ಮರಾಯನ ಚರಣಕಮಲದಲಿ ॥ ೯೭

ಎನುತ ಬಿಟ್ಟನು ರಥವ ದುರಿಯೋ
ಧನನ ಮೋಹರಕಾಗಿ ಬಂಡಿಯ
ಬಿನುಗುಗಳು ಕೈದೋಱಿರೈ ಪುನ್ನಾಮನಾರಿಯರು ।
ಅನುಜರಾವೆಡೆ ಕರಸು ಕೌರವ
ಜನಪ ಕರ್ಣಾದಿಗಳ ಬಿಂಕವ
ನೆನಗೆ ತೋಱಾಯೆನುತ ಮೊಳಗಿದನರಸನಿದಿರಿನಲಿ ॥ ೯೮

ನಿಯತ ಜಯಲುಬ್ಧಕನು ರಣಭೂ
ಮಿಯಲಿ ಹರಿಸಲು ಜಯದ ಸಿರಿಯನು
ಭಯವಿಹೀನರು ಬೆಱಗುಗೊಂಡರು ಭೀಮನುರವಣೆಗೆ ।
ಹಯದ ವಾಘೆಯನಿಳುಹಿದರು ಮ
ನ್ನೆಯರು ಮನಗುಂದಿದರು ಕುರುಸೇ
ನೆಯಲಿ ಕಾಣಿಸಲಾದುದಪಜಯಸಿರಿಯ ಸಂಭ್ರಮವು ॥ ೯೯

---

1 ದನು ಕೋದಂಡವನು ಕೈಗಡಿಯ ಮಾರುತಿ ಕೌರವೇಂದ್ರನ ಪಡೆಗೆ ನಡೆದನು ಸಕಲದಳ ಕುರುತಂತ್ರ ತಲ್ಲಣಿಸೆ (ಕ). 2 ಪದಯುಗವ ತೊಳೆದು (ಟ.ತ.ದ.ಪ). 3 ಕರವದನ ಶುದ್ಧಿಯಲಿ (ಟ.ತ.ದ ನ.ಪ). 4 ಮಲಗಿನ (ತ.ನ).

ಬೆಟ್ಟವಾದವು ಬಿಸುಟ ಕೈದುಗ
ಳೊಟ್ಟಿಲಾದುವು [1]ಸಿಂಧ ಸೆಳೆರಥ
ವಿಟ್ಟೆಡೆಗಳಲಿ ಮಿಸುಕಲಸದಳವಾದುದನಲಂಗೆ[1] ।
ಘಟ್ಟು ಮುಱಿದುದು ಪಟುಭಟರು ಧೃತಿ
ಗೆಟ್ಟು ದೆಸೆದೆಸೆಗಳಲಿ ಮಿಗೆ ಸಾ
ಲಿಟ್ಟು [2]ಸರಿದುದು ಕೇಳು ಜನಮೇಜಯ ಮಹೀಪಾಲ[2] ॥ ೧೦೦

ಬಿಸುಟರಮಲಚ್ಛತ್ರವನು ಕೂ
ರಸಿಯನೀಡಾಡಿದರು ರಾಯರು
ಮುಸುಡ ತಿರುಹುತ ಮಕುಟವರ್ಧನಕೋಟಿ [3]ಸಮರದಲಿ[3] ।
ಜಸವ ಮಾಱಿದರಾಯುಧಂಗಳ
ಹೆಸರ ವೀರರು ಬಾಹುಬಲಸಾ
ಹಸರು ಕಂಗೆಟ್ಟೋಡಿದರು ಪವನಜನ ಸಮರದಲಿ ॥ ೧೦೧

ಬಲ ಮುರಿದು ಬರುತಿರ್ದುದೈ ಕಡೆ
ಜಲಧಿಯಲಿ ತೆರೆ ತಿರುಗಿದಂತಿರೆ
[1]ತಲೆಮುಸುಕಿನಲಿ ನೋಟದುರವಣಿಕಾಱ ನಾಯಕರು[1] ।
ನೆಲೆಪಗೆದು ನಮ್ಮವರು ನೃಪನರ
ನೆಲೆಗೆ ಸೇರದೆ ಸರಿಯೆ ಕಂಡನು
ನಳಿನಮಿತ್ರನ ಮೊಮ್ಮ ತಡೆದನು [5]ಭೀಮನುರವಣೆಯ[5] ॥ ೧೦೨

ಹತ್ತೊಂಬತ್ತನೆಯ ಸಂಧಿ ಮುಗಿದುದು.

---

[1] ಸಿಂಧುರದ ಸೇದಿಟ್ಟೆಡೆಯ ಚಾಮಿಕವು ಅಸದಳವಾದುದನಿಬರಿಗೆ (ಕ).
[2] ಮುಱಿದುದು ಕೇಳು ಧೃತರಾಷ್ಟ್ರಾವನೀಪಾಲ (ಕ). [3] ಜನ ಜರಿದು (ಖ.ತ.ನ).
[4] ತಲೆಯ ತಡಹುತಲೋಡಿದರು ಕುರುನೃಪನ ಪರಿವಾರ (ಕ). [5] ವೀರ ವೃಷಸೇನ (ತ.ಪ.ಬ).

ಇಪ್ಪತ್ತನೆಯ ಸಂಧಿ

ಸೂಚನೆ ॥ ಚಂಡಬಲ ಪವಮಾನಜನ ಮುಂ
ಕೊಂಡು ವಿರಥನಮಾಡಿ ಕದನೋ
ದ್ದಂಡ ನರನೊಳು ಕಾದಿ ಮಡಿದನು ವೀರ ವೃಷಸೇನ ॥

ಅವಧರಿಸು ಧೃತರಾಷ್ಟ್ರನೃಪ ನಿ
ನ್ನವಗೆ ತಿಳಿದುದು ಸೊಕ್ಕು ಚಿತ್ತದ
ಬವಣಿ ಬೀತುದು ಮನದ [1]ಜೊಂಪಿ[1]ಳಿದುದು ಧಡಾಳಿಸಿದ ।
ಡವರಿಸಿದ ಡೊಳ್ಳಾಸ ರಣದೇ
ಳುವೆಯ ಬಿಗುಹಡಗಿದವೊಲನಿಬರು
ತವತವಗೆ ನಾಚಿದರು ಕೋಳಾಹಳಕೆ ಪವನಜನ ॥ ೧

ಮುಟ್ಟಿ ಬಂದುದು ಕೇಡು ನೃಪನೊಡ
ಹುಟ್ಟಿದನ ಹೊಯ್ದುರುಣಜಲದಲಿ
ಚಟ್ಟಿಱಿದು ರಿಪು ಚಾರಿವರಿದನು ಕಳನ ಚೌಕದಲಿ ।
ಇಟ್ಟಣಿಸುವೀ ರಣಮದಾಂಧನ
ತೊಟ್ಟುಳಿಕೆಯನು ಕೀಳ್ವ ರಾಯಘ
ರಟ್ಟನಿಲ್ಲಾ ಎನುತ ತನಿಮಸಗಿತು ಭಟಸ್ತೋಮ ॥ ೨

ದೊರೆಯೊಡನೆ ತಲೆಯೊತ್ತಿ ಮುರಿದ
ಬ್ಬರಿಗನುಬ್ಬಿದ ಸಮರದಲಿ ನಿ
ಬ್ಬರದ ಬೆಱಗಿನೊಳಿದ್ದರೈ ಬಳಿಕೀ[2]ಗಲಱುತಿರಲಾ[2] ।
ಅರಸನನುಜನ ಕುಡಿದನೆತ್ತರ
ಬರಿಸುವೆನು ಮೂಗಿನಲಿ [3]ಮಾಣಿ[3]ನು
ತರಿಯ ರಥದುರವಣಿಗೆ ಕರ್ಣನಸೂನುವಿದಿರಾದ ॥ ೩

---

[1] ಜೊಮ್ಮಿ (ತ.ಫ.ಬ). [2] ಮಹಾರಥರು (ಚ.ತ.ದ.ನ.ಬ). [3] ನೋಡೆ (ಟ.ತ.ದ.ಬ).

ಘಡ ವಿಕಾರವೆ ನೋಡು ನೆತ್ತರು
ಗುಡುಹಿತನವೇ ನಮ್ಮೊಡನೆ ಮೊಲೆ
ಮುಡಿಯ ಮೂದಲೆಗರುಹರೇ ಕರ್ಣಾದಿನಾಯಕರು ।
ಕುಡಿದ ರಕುತದ ಜಿಗುಳೆ ನೀ ನಿ
ನ್ನೊಡಲ ನಿಗುಚುವೆ ನಿಲ್ಲೆನುತ ಬಲ
ನೆಡನ ಬಿರುದರ ಮೇಳದಲಿ ತೂಗಿದನು ವೃಷಸೇನ ॥ ೪

ವೀರ ಮಝು ಸೇನಾಧಿಪತಿಯು ಕು
ಮಾರ ನೂಕಿದನೆನುತಖಿಳ ಪರಿ
ವಾರ ಕವಿದುದು ಕರಿ ರಥಾಶ್ವಪದಾತಿಯೊಡ್ಡಿನಲಿ ।
ಆರು ಪೊಗಳುವರನಿಲಸುತನ ಸ
ಧಾರತನವನು ಮೇಲೆ ಬೀಳ್ವ ಕ
ಠೋರ ಶಸ್ತ್ರವ್ರಜವ ನೂಕಿದನಡ್ಡವರಿಗೆಯಲಿ ॥ ೫

ಅಕಟ ಮಗುವಿನ ಕೂಡೆ ಬಲುನಾ
ಯಕರು ಬಯಸಿದರಳಿವನಿದು ಸೇ
ವಕರ ಪಂಥವಲಾ ವಿರೋಧವೆ ಎನುತ ಮುರಿವೆದ್ದು ।
ಲಕುಟಹತನಿರ್ಭಿನ್ನಭಾಂಡ
ಪ್ರಕರವ್ರೋ ನಿನ್ನಾಳುಕುದುರೆಯೊ
ಸಕಲಸುಭಟರನೊಕ್ಕಲಿಕ್ಕಿದನೊಂದು ನಿಮಿಷದಲಿ ॥ ೬

ನುಗ್ಗು ಬಡಿದಂಜಿಸಿದ ಗೆಲವಿನ
ಸುಗ್ಗಿಗಿವೆ ಮಳೆಗಾಲವೆನುತ ನಿ
ರಗ್ಗಳಿತ ಭುಜಶೌರ್ಯ ಸುರಿದನು ಸರಳ ಸರಿವಳೆಯ ।
ಬಗ್ಗಿ ಕವಿವಂಬುಗಳ ಗಱಿಗಳ
ಲಗ್ಗಗರಿನಾಯಕರ ಕಿವಿಗಳು
ನೆಗ್ಗಿದವು ಮುಗ್ಗಿದವು ಮನ ಮಾರಂಕದತಿರಥರ ॥ ೭

ಬಲುಹು ಮಗುವಿನ ಶೌರ್ಯವೀಸ
ಗ್ಗಳೆಯನೈ ಶಿವಯೆನುತ ಚಿತ್ತದೊ
ಳಳುಕಿ ಹೂಡಿದನಂಬನವಧಾನದಲಿ ಬಿಡೆಯುಱಿದು ।
ಹಿಳುಕುಹಿಳುಕುಗಳೊರಸೊರಸು ಮುಂ
ಕೊಳಿಸೆ ಹಿಂದಣಿನಂಬನಂಬು
ಛಳಿಸಲೆಚ್ಚನು ಭೀಮ ರವಿನಂದನನ ನಂದನನ ॥ ೮

ಕೆಣಕಿದುರಿಯಂದದಲಿ ದಂಡೆಯೊ
ಳಣೆದ ಕಾಳೋರಗನವೊಲು ಚ
ಡ್ಡಣೆಯ ಚಪಳಕ್ರೋಧಶಿಖಿ ಮೋಹಿದುದು ಮೋಱೆಯಲಿ ।
ಕಣೆಗಳೋ ಕಲ್ಪಾಂತವಹ್ನಿಯ
[1]ಡೊ[1]ಣೆಗಳೋ ಹಾಳಾಹಳದ ಡಾ
ವಣೆಗಳೋ ನಾವಱಿಯೆವೆಚ್ಚನು ವೀರ ವೃಷಸೇನ ॥ ೯

ಫಲಿತ ಶಾಲೀವನವ ಮುತ್ತಿದ
ಗಿಳಿಗಳೋ ತಾವರೆಯ ತೆಕ್ಕೆಯೊ
ಳಿಳಿದ ಮಱಿದುಂಬಿಗಳೊ ವೃಷಸೇನನ ಶರಾವಳಿಯೊ ।
ಹಿಳುಕು [2]ಹೇ[2]ಱಿದವಾತನಶ್ವಾ
ವಳಿಯಲಾತನ ಸೂತನೊಡಲಲಿ
ಹಲವು ಮಾತೇನಾತನಂಗೋಪಾಂಗ ನಿಕರದಲಿ ॥ ೧೦

ಕೂಡೆ ಹಾಹಾಧ್ವನಿಯ ರವವ
ಲ್ಲಾಡಿಸಿತು ಪರಬಲವನೀತನ
ತೋಡು ಬೀಡಿನ ಸಂಚ ಸೆಳೆದುದು ಹಗೆಯ ಸಾಹಸವ ।
ಓಡಲಱಿಯದೆ ಭೀಮನಂಬಿನ
ರೂಢಿ ನಿಗುಚದೆ ಕಾದುವರೆ ಜಯ
ಜೋಡಿಸದೆ [3]ಜೋ[3]ವಳಿಸಿ ಜವಗುಂಧಿದನು ಕಲಿ ಭೀಮ ॥ ೧೧

ಅರಸ ಕೇಳೈ ಬಳಿಕ ಭೀಮನ
ತರಹರವನಱಿದಾಚೆಯಲಿ ಸಂ
ವರಿಸಿಕೊಂಡನು ನಕುಳ ಬಿಟ್ಟನು ಸೂಠಿಯಲಿ ರಥವ ।
ತರುವಲಿಯೆ ನೀನಿದಿರಹುದೆ ಫಡ
ಸರಿಸವೇ ಭೀಮಂಗೆ ನೀನೆನು
ತರಿಭಟನ ಕೆಣಕಿದನು ಕೆದಱಿದನಸ್ತ್ರಸಂತತಿಯ ॥ ೧೨

ಅರಿವರು ನಕುಲಾಂಕರೇ ಜು
ಜ್ಝಾರರೇ ನಿಮ್ಮಣ್ಣನಾಡಿ ದು
ಹಾರದಲಿ ಸೆಱೆಯೋದನಾತನ ಹರಿಬವೇ ನಿಮಗೆ ।

---

[1] ಹೊ (ಕ). [2] ಧೋ (ಗ.ಟ.ತ.ಧ.ನ.ಬ). [3] ಜಾ (ಖ.ಫ.ಟ).

ತೀರದೇ ನಿಮ್ಮಲಿ ವೃಥಾಹಂ
ಕಾರವೇಕಿದು ಪಾರ್ಥನೆಂಬನ
ತೋಱಿರೇ ನೀ ಸಾರೆನುತ ತೆಗೆದೆಚ್ಚು ಬೊಬ್ಬಿಱಿದ ॥ ೧೩

ಮಗವು ನಿನ್ನೊಡನೇನು ಸರಿಯೋ
ಮಿಗಿಲೊ ಶರವಿವ ಹೇಳೆನುತ ಕೈ
ಮಗುಚಿದನು ಹೊದೆಯಂಬನೀತನಮೇಲೆ ನಿಮಿಷದಲಿ ।
ಮುಗಿಲ ಹರಿಗೆಗೆ ಮಾರುತನ ಬಂ
ದಿಗೆಯು ಹೊಯ್ಲೆನೆ ನಕುಳನೆಚ್ಚಂ
ಬುಗಳು ಕಿಡಿಸೂಸಿದವು ಕಂಡನು ರಥದ ಬಳಸಿನಲಿ ॥ ೧೪

ಮರಳಿ ನಕುಲನನೆಚ್ಚನಾತನ
ತುರಗವನು ಮುಱಿಯೆಚ್ಚನಾತನ
ವರ ರಥವ ಸಾರಥಿಯನಾತನ ಟೆಕ್ಕೆಯವ ಧನುವ ।
ಉರುಳಿಗಡಿದನು ಮತ್ತೆ ಜೋಡಿಸಿ
ಪರಿತರಲು ಮುಱಿಯೆಚ್ಚು ಪುನರಪಿ
ಹುರುಳುಗೆಡಿಸಿದನಱಿಸಿ [1]ಹರಿ[1]ದನು ಮತ್ತೆ ಪವನಜನ ॥ ೧೫

ನಕುಲ ಮುಱಿದನು ಭೀಮ ನಿಲು ಕಾ
ರ್ಮುಕವ ಹಿಡಿ ಬಿಡು ಸರಳನಳುಕುವ
ದಕಟ ಕೊಲ್ಲೆನು ನಿನ್ನ ತಮ್ಮನ ಕರಸು ಫಲುಗುಣನ ।
ವಿಕಳರುಳಿದಿರಲಾಗದೀ ಸಾ
ಯಕದ ಸೃಷ್ಟಿವಿರಿಂಚ ಸುಭಟ
ಪ್ರಕರದೊಳು ತಾ[2]ನೆನುತ ತೆಗೆದೆ[2]ಚ್ಚನು ವೃಕೋದರನ ॥ ೧೬

ಮುಱಿದು ನಕುಲನ ಭೀಮಸೇನನ
ನಱಿಸಿ ಹಿಡಿದನು ಬವರವನು ಭಟ
ನುಱುಬೆ ಬಲುಹೋ ದಿಟ್ಟನಿವ ಕೌರವರ ಥಟ್ಟಿನಲಿ ।
ತೆಱಹುಗೊಡದಿರಿ ನೂಕುನೂಕೆನು
ತುಱುಬಿದನು ಸಹದೇವನೀತನ
ತಱುಬಿ ಮೂದಲಿಸಿದನು ಮುಸುಕಿದನಂಬಿನಲಿ ರಥವ ॥ ೧೭

---

[1] ಥಿಡಿ (ಟ.ತ.ದ.ನ.ಬ). [2] ನಱಿಯೆನೆನುತೆ (ಟ.ತ್ರ.ದ).

ಮೊದಲ ಬಲುಹನು ಕಂಡೆನಿನ್ನೀ
ತುದಿವರನ ತನಿಗೆಚ್ಚು ನಮ್ಮನು
ಬೆದಱಿಸುವುದೋ ಶಿವಶಿವಾ ತಪ್ಪೇನು ತಪ್ಪೇನು ।
ಸದೆಗರಿವದಿರ ಗೆಲುವುದಾವಂ
ಗದಲಿ ಬಹುದೋ ಎನುತ ಪರಿಹಾ
ಸದಲಿ ರಿಪುಭಟನಂಬುಗಳ ಕೆದಱಿದನು ಕಣೆಗಳಲಿ ॥ ೧೮

ಆತನೊಡನೆಯೆ ತೇರು ತುರಗ
ವ್ರಾತವನು ಹುಡಿಮಾಡಿ ರಥಹಯ
ಸೂತ ಧನು ಶಸ್ತ್ರೌಘ ಕವಚ ಧ್ವಜ ಪತಾಕೆಗಳ ।
ಘಾತಿಸಿದನೈದಂಬಿನಲಿ ಮಗು
ಳಾತನುರವನು ತೋಡಿ ತೊಲಗಿಸಿ
ವಾತಜನನಱಿಸಿದನು ಮೂದಲಿಸಿದನು ಸರಳಿನಲಿ ॥ ೧೯

ಶಿವಶಿವಾ ಸಹದೇವ ನಕುಲರ
ಬವರ ಮುಱಿದುದು ಬಿಡದೆ ಬಳಿಯಲಿ
ಪವನಜನ ತುಡುಕಿದನು ನೂಕಲಿ ಸರ್ವದಳವೆನುತ ।
ತವತವಗೆ ಸುತಸೋಮಕಾದಿಗ
ಳವಗಡಿಸಿದರು ಮತ್ಸ್ಯಕೈಕೆಯ
ನಿವಹ ಸಾತ್ಯಕಿ ಚೇಕಿತಾನರು ಕವಿದರುರವಣಿಸಿ ॥ ೨೦

ಎಲೆಲೆ ಪಾಂಡವಸರ್ವದಳವಿ
ಟ್ಟಳಿಸಿತೋ ಸುಕುಮಾರನೊಬ್ಬನೆ
ನಿಲುವುದರಿದೋ ನೂಕೆನುತ ಕುರುಸೇನೆ ಸಂವರಿಸೆ ।
ಉಲುಕದಿರಿ ಭಾರಣೆಯ ಭಟರ
ಗ್ಗಳೆಯರೆನ್ನೀ ಮಕ್ಕಳಾಟಿಕೆ
ಯಳವನೀಕ್ಷಿಸಿ ಸಾಕೆನುತ ತಱುಬಿದನು ಪರಬಲವ ॥ ೨೧

ತೇರನೆಚ್ಚನು ಕುದುರೆಕಾಱರ
ದೂರದಲಿ ಖಂಡಿಸಿದನೊಗ್ಗಿನ
ವಾರಣೌಘವ ಸೀಳಿದನು ಹೂಳಿದನು ರಕುತದಲಿ ।
ಆರು ಬಲ್ಲರು ಪಯದಳವನಾ
ವೀರ ಸುತಸೋಮಾದಿ ನಿಖಿಳ ಕು
ಮಾರರಂಘವಣೆಗಳ ಸೆಳೆದುದು ಭೀತಿರಸಜಲಧಿ ॥ ೨೨

ಉಗುಳುಗುಳು ದುಶ್ಶಾಸನನ ನೀ
ನುಗುಳು ಮಗುಳಿನ್ನಾರ ಬಸುಱನು
ಹೊಗುವೆ ಮೊಲೆಮುಡಿಯಾರಿಗಿವು ಫಡ ನಿಲ್ಲು ನಿಲ್ಲೆನುತ ।
ಹೊಗರೊಗುವ ಹೊಸಮಸೆಯ ಬಾಯ್ದಾ
ರೆಗಳ ಬಂಬಲುಗಿಡಿಯ ಬಾಣಾ
ಳಿಗಳಲೀತನ ಹೂಳಿದನು ಕಾಣೆನು ವೃಕೋದರನ ॥* ೨೩

ಕಳವಳಿಸಿತರಿಸೇನೆ ಬೊಬ್ಬೆಯೊ
ಳುಲಿದುದೀ ನಮ್ಮವರು ಕಂಡನು
ಬಳಿಕ ಮುರರಿಪು ತೋಱಿದನು ಪಾರ್ಥಂಗೆ ಪವನಜನ ।
ಎಲೆ ಧನಂಜಯ ಭೀಮಲಯ ನಿ
ಮ್ಮಳಿವು ನಿಮ್ಮ ಪರೋಕ್ಷದಲಿ ನಾ
ವುಳಿವರಲ್ಲೀ ಹವಣ ಕಂಡೆವು ಕರ್ಣತನಯನಲಿ ॥ ೨೪

ಈಸು ಘನವೇ ಕೃಷ್ಣ ಮಗವಿವ
ನ್ಯಸಱವನೆಂದಿದ್ದನಾದರೆ
ಹಾಯ್ಸು ರಥವನು ಭೀಮಸೇನನ ರಥದ ಮುಂಗುಡಿಗೆ ।
ವಾಸಿಯೇಕಿವನಲಿ ವಚೋವಿ
ನ್ಯಾಸದಿಂ ರಥ ಮುಂಚಿತಹಿತನ
ಘಾಸಿಯಿಂದನಿಲಜನನುಗಿದನು ಬಗಿದು ರಿಪುಶರವ ॥ ೨೫

ಎಸುಗೆ[1]ಚೆ[1]ಲುವನು ಹಾಲುಗಲ್ಲದ
ಹಸುಳೆಯಂಗವಿದಲ್ಲ ತುಂಬಿಯ
ದೆಸೆಗೆ ಕೆಂದಾವರೆಯ ಬನವೇ ವನದವಾನಳನು ।

---

* ಈ ಪದ್ಯವಾದಮೇಲೆ (ಗ.ತ.ಪ.) ಪ್ರತಿಗಳಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ :—

ಅಂಬಿನಂಬುಧಿ ಜರಿದುದೋ ಮೇ
ಣಂಬುಗಳನಂಬರವೆ ಕಾರಿತೊ
ಅಂಬುರುಹಭವನಂಬುಗಳನೇ ಸೃಜಿಸಿದನೊ ಮೇಣು ।
ಅಂಬುಗಳಿಗಂಬರದೊಳಿಂಬಿ
ಲ್ಲೆಂಬವೊಲಂಬಂಬನೀಡಿಱಿ
ದಂಬುಹಾಯ್ದು ರಣಾಂಬುಗಳ ಚುಂಬಿನಲು ಝೊಂಪಿಸಿದ ॥

[1] ಗೆ (ಕ).

ಉಸುರದೀ ಜಯದೊಪ್ಪದಲಿ ಜಾ
ಳಿಸುವರೊಳ್ಳಿತು ತೊಲಗೆನುತ ನಿ
ಪ್ಪಸರದಲಿ ತೆಗೆದೆಚ್ಚನರ್ಜುನನಿನಸುತನಸುತನ ॥ ೨೬

ಚಾರುಪೌರುಷ ಸಮರವಿಹ್ವಳ
ತಾರಕರು ನೀವ್ ನಮ್ಮದಿದು ಕೌ
ಮಾರದೆಸೆ ತಾಮಸವಲೇ ನಿಮಗಾನು ಸಮಬಳನೆ ।
ಕೂರಲಗು ತೊಲೆಗೋಲಿನಲಿ ನಿ
ಮ್ಮಾರುಭಟೆಯನು ನಮ್ಮ ಬಾಹುವಿ
ಕಾರಬಲವನು ತೂಗಿಯೆನುತೆಚ್ಚನು ಧನಂಜಯನ ॥ ೨೭

ಮುರಮಥನ ಚಿತ್ತೈಸಿದೈ[1]ತರು
ವರಿಯ[1] ಸಾಭಿಪ್ರಾಯವಾಕ್ಯ
ಸ್ಫುರಣವನು ಸಭ್ಯಾಂಗಭಾಷಿತಭಾವನಿಷ್ಠುರವ ।
ಪರಿಹೃತಿಯೆ ಕರ್ತವ್ಯವೆನುತು
ಚ್ಚರಿಸಿದನು ಮೌರ್ವೀನಿನಾದ
ಸ್ಫುರಿತವಿಮಳಪ್ರಣವಮುಖಶರ ಸೂಕ್ತಸಂತತಿಯ ॥ ೨೮

ಅದು ಬಳಿಕ ಲೋಕಾಯತಾಂಗ
ಚ್ಛೇದನ ಪರನಾರಾಚ[2]ನಿರ್ಮೂ
ಣ[2]ದಲಿ ಭಂಗಿತವಾಯ್ತು ಪಾರ್ಥನ ಬಾಣದೊಡ್ಡವಣೆ ।
ಬದಿರ ಮೊಳೆಯಲಿ ಹರಿವುದೇ ಬೆ
ಟ್ಟದಲಿ ಹರಿಯದ ವಸ್ತು ಹರನಿಂ
ದೊದಗಿದಂಬಿನ ಹವಣ ತೋಱೆಂದೆಚ್ಚನರ್ಜುನನ ॥ ೨೯

ದನುಜರಿಪು ಹುಸಿ[3]ಯಲ್ಲ ನಮ್ಮೊ
ಡ್ಡಿನಲಿ[3] ಭಟನಭಿಮನ್ಯು ಪರರೊ
ಡ್ಡಿನಲಿ ಭಟನಿವನಲ್ಲದಿಲ್ಲ ಕುಮಾರವರ್ಗದಲಿ ।
ತನಗೆ ದೇವತ್ರಿತಯವಲ್ಲದೆ
ದನುಜ ದಿವಿಜಾದಿ ತ್ರಿಲೋ[4]ಕದ[4]
ಜನವಿದಿರೆ ಮೆಚ್ಚಿಸಿತು ಮಗವಿನ ದಿಟ್ಟತನವೆಂದ ॥ ೩೦

---

[1] ತರುವಲಯ (ಕ), ಶಿಶುವರನ (ಖ.ತ.ನ.ಪ.ಬ). [2] ನಿರ್ಮೂಲ (ಕ). [3] ಯಾವುದೀಥಟ್ಟಿನಲ (ಕ). [4] ಕೀ (ಖ.ಟ.ದ.ನ.ಪ).

ಪೂತುರೇ ವೃಷಸೇನ ಶರಸಂ
ಘಾತವಿದೆಕೋ ಸೈರಿಸಾದಡೆ
ಪಾತಕಕ್ಕೋಸರಿಸಿದೆವಲೇ ಭ್ರೂಣಹತಿಯೆಂಬ ।
ಮಾತು ಹಲವಱಲೇನು ಪಾರ್ಥಿವ
ಜಾತಿಗೆನುತ ಮಹಾಸ್ತ್ರ ನಿಕರದೊ
ಳೀತನನು ಮುಸುಕಿದನು ಶರಮಯವಾಯ್ತು ರಣಭೂಮಿ ॥ ೩೧

ಆವ ವಹಿಲದೊಳರ್ಜುನನ ಬಾ
ಣಾವಳಿಯು ತಱಿದೊಟ್ಟಿ ಮಗುಳೆ ಶ
ರಾವಳಿಯ ಕೊನೆಗಳಲಿ ಮುದ್ರಿಸಿದನು ಧನಂಜಯನ ।
ನಾವಱಿಯೆವೀಸದುಭುತವನಿವ
ಕಾವನೇ ಮಿಕ್ಕವರನರ್ಜುನ
ದೇವನಲಿ ಸರಿಮಿಗಿಲ ಕಾದಿದನರಸ ಕೇಳೆಂದ ॥ ೩೨

ನರನ ಮಾಱಂಕದ ಮಹೇಂದ್ರಗೆ
ಚರಣಯುಗ ಬೆನ್ನಿನಲಿ ಬವರದೊ
[1]ಳರಿ[1]ದಲ್ಲೈ ಭೀಷ್ಮಾದಿಗಳಿ[2]ಗೀ ರಣದ ಮೇಳಾಪ[2] ।
ಜರಡನ್ಯೈ ಭಾರಂಕದಾಳಿವ
ತರಳನೇ ಸುರಗಿರಿಯನಾನುವ
ಕೊರಳ ಸತ್ವ[3]ವ[3] ಶಿವಶಿವೆಂದುದು [4]ಮೇಲೆ ಸುರಕಟಕ[4] ॥ ೩೩

ಎಸಲು ಕಡಿದನು ಝಾಡಿಯಲಿ ಝೊಂ
ಪಿಸಲು ಜಡಿದನು ಚಳಕದಲಿ ಜಾ
ಳಿಸಿದರೊಂದಕ್ಕೆರಡು ನಾಲ್ಕಕ್ಕೆಂಟು ತೋಱಿಸಿದ ।
ಮುಸುಕಿದರೆ ಮಂತ್ರಾಸ್ತ್ರದಲಿ ಮೋ
ಹಿಸಿದ ಸರಿಸಕೆ ಸರಿಸ ವಿಷಮಕೆ
ವಿಷಮಗತಿ ಶರಸಾರ ಸಾಳಂಗದಲಿ ರಂಜಿಸಿದ ॥ ೩೪

ಆಯಿತಿದು ಸಮರದಲಿ ಗುರು ಗಾಂ
ಗೇಯ ಕರ್ಣ[5]ದ್ರೋಣ[5]ಗಳ ತಱು
ವಾಯ ಲೆಕ್ಕಕೆ ಸಂದನ್ಯೈ ಮಝು ಪೂತು ಪಾಯ್ಕೆನುತ ।

---

[1] ಳಿರ (ಖ.ಟ.ತ). [2] ಗವಸಾನದಾಳಾಪ (ಗ.ಟ.ದ.ಪ), ಗವಧಾನದಾಳಾಪ (ತ.ನ.ಬ). [3] ಕೆ (ತ.ದ.ನ). [4] ಕೂಡೆಕುರುಸೇನೆ (ಕ). [5] ಕೃಪಾದಿ (ಕ).

ಸಾಯಕವನಭಿಮಂತ್ರಿಸುತ ವೈ
ನಾಯ[1]ಕಾಸ್ತ್ರವ ಹೂಡಿದನು[1] ಬಲ
ಬಾಯಬಿಡೆ ಚಿಗಿದಂಬು ಕಡಿದುದು ಕರ್ಣನಂದನನ ॥ ೩೫

ಚಿಗಿದ ತಲೆ ಬೊಬ್ಬಿಱಿಯೆ ಬಳಿಕಾ
ಳುಗಳ ದೇವನು [2]ಮುಷ್ಟಿ[2]ಬಳಿಗೋ
ಲುಗಳನೈದಾರೇಳ ಹಳುಹಳುವಾಯಿಯೆಸುಗೆಯಲಿ ।
ತೆಗೆದು ನಿಂದುದು ಭಯರಸದ ಹ
ಬ್ಬುಗೆಯಲುಬ್ಬಿದ ಶೋಕದೊಡ್ಡಿನ
ಮುಗಿಲು ಕಱೆದುದು ಕುರುಬಲದ ಕಂಬನಿಯ ಬಿಱುವಳೆಯ ॥ ೩೬

ಕದಡಿತೀ ಬಲಜಲಧಿ ಕಲ್ಪಾಂ
ತದ ಸಮುದ್ರದವೊಲು ಮಹಾಧ್ವನಿ
ಗದಗದಿಸೆ ಹಾ ಕರ್ಣಸುತ ಹಾ ಕರ್ಣಸುತ ಎನುತ ।
ಕೆದಱಿತೀಶನ ಭಾಳದುರಿನೇ
ತ್ರದವೊಲುರಿದುದು ಸೂತಸುತ ಸಾ
ಕಿದ ಕುಮಾರ[3]ನ[3] ಮೇಳವದ ಮನ್ನಣೆಯ ಪರಿವಾರ ॥ ೩೭

ನೂಕಿತೀ ಬಲದಳದ ಪದಹತಿ
ಗೇಕೆ ಬಿರಿಯದು ಧರಣಿ ದಿಕ್ಕರಿ
ಯೋಕರಿಸದೇ ಮದವನಾದರೆ ಪುಣ್ಯನಬುಜಭವ ।
ಈ ಕದಹಿನಾತಗಳನಾನುವ
ಡೀ ಕಪರ್ದಿಯೆ ಸಾಕು ಕೆಲನವ
ರಾಕೆವಾಳರೆ ಎನುತಲಿರ್ದುದು ಮೇಲೆ ಸುರಕಟಕ ॥ ೩೮

ಉರಿಯ [4]ಸರಿಗೇಱಿದ[4] ಪತಂಗಕೆ
ಮರಳುದಲೆಯೇ ಮತ್ತೆ ರಣದಲಿ
ನರನೊಡನೆ ಕಳನೇಱಿದಾತನ ಸತಿ ಸುವಾಸಿನಿಯೆ ।
ಅರಳ ಹೊಸ ಸಂಪಗೆಯ ಮಧುವನು
ಮಱಿಗೆ ತಹವೇ ತುಂಬಿಗಳು ಕೇ
ಳರಸ ಹರಿಬಕೆ ಹೊಕ್ಕ ಸುಭಟರ ಕಾಣೆ ನಾನೆಂದ ॥ ೩೯

---

[1] ಕವಹೂಡಿದನು ಕುರು (ತ). [2] ಮುಂಡ (ತ.ದ.ನ.ಬ). [3] ರು (ಕ).
[4] ಸಿರಿಗೆಱಿಗಿದ (ನ.ಬ).

ಕೇಣವಿಲ್ಲದೆ ಹೊಕ್ಕ ಕುದುರೆಗ
ಳಾಣತಿಯ ತುಂಬಿಯ ಕಪೋಲ
[1]ದ್ರೋ[1]ಣಿಯೊಜಿತೆಯ ಮದದ ಕರಿಗಳ ಕಡು[2]ಹ ನಿಜ[2]ರಥದ ।
ಸಾಣೆಯಲಗಿನ ಸರಿಯ ಸೋನೆಯ
ಜಾಣತನವೋ ಜಯದ ಸುಭಟರ
ಕಾಣೆನ್ನೈ ಕಣೆಯೆರಡರಲಿ ಸಂವರಿಸಿದನು ಪಾರ್ಥ ॥ ೪೦

ವೀರ ದುಶ್ಶಾಸನನು ಕರ್ಣಕು
ಮಾರ[1]ಕರು ನೀ[3] ಸಾಕಿದಗ್ಗಳ
ವೀರದಳ ಕೌರವಸಹೋದರ[1]ಸೇನೆ ಮೊದಲಾಗಿ[4] ।
ತ್ರೀರಿತಾಹವದಲಿ ಕುರು[5]ವ್ರಜ[5]
ವಾರುಧಿಗೆ ಸರಿಯಾಯ್ತು ನಿನ್ನ ಕು
ಮಾರನಿಂಗಿತವಱಿದು ಸಮರಕೆ ಕರ್ಣನನುವಾದ ॥ ೪೧

ಇಪ್ಪತ್ತನೆಯ ಸಂಧಿ ಮುಗಿದುದು.

---

[1] ಶ್ರೀ (ಕ.ಗ.ಟ.ದ). [2] ಹಿಕೆಯ (ತ.ಬ). [3] ನಾತನು (ಟ.ತ.ದ.ನ.ಬ). [4] ಶೇಷಮೊದಲಾದ (ಕ). [5] ಬಲಜ (ಕ).

ಇಪ್ಪತ್ತೊಂದನೆಯ ಸಂಧಿ

ಸೂಚನೆ ॥ ವೈರಿಗಜಪಂಚಾನನನು ರಣ
ಧೀರನಪ್ರತಿಮಲ್ಲ ಕರ್ಣನು
ದಾರದಲಿ ಹಳಚಿದನು ಹನುಮನ ಹಳವಿಗೆಯ ರಥವ ॥

ಕೇಳು ಧೃತರಾಷ್ಟ್ರಾವನಿಪ ನಿ
ನ್ನಾಳ ಸುಮ್ಮಾನವನು ತನುರೋ
ಮಾಳಿ ಪಲ್ಲವಿಸಿದುದು ಪರಿತೋಷಪ್ರವಾಹದಲಿ ।
ಕಾಳೆಗಕೆ ಕೈವೊಯ್ದು ಹಗೆವನ
ಮೇಳ[1]ಯದ[1] ಕಳನೇಱಿದನು ತ
ನ್ನಾಳುತನವನು ತೋಱಿಲಾಯ್ತೆನುತುಬ್ಬಿದನು ಕರ್ಣ ॥ ೧

ಆಳ ಹೊಯ್‘ಹೊಯ್’ ನಾಯಕರ ನಿಲ
ಹೇಳು ಕೃಪ ಗುರುನಂದನಾದಿಗ
ಳಾಲಿಗಳಿಗೌತಣವ ರಚಿಸುವೆ ನಿಮಿಷ ಸೈರಿಸಲಿ ।
ಕಾಳೆಗದಲಿಂದಹಿತರಾಯರ
ಭಾಳಲಿಪಿಗಳನೊರಸುವೆನು ಭೂ
ಪಾಲಕನ ಮೊಗವಡದ ಮುಗುಡವನುಗಿ[2]ವೆನಾನೆಂದ[2] ॥ ೨

ತರಿಸಿ ಸಾದು ಜವಾಜಿಗಳ ಹೊಂ
ಭರಣಿಯಲಿ ಮೊಗೆಮೊಗೆದು ಶಲ್ಯಗೆ
ಸುರಿದು ಹಡಪಿಗ ಚಮರ ಚಾಹೆಯ ಬಾಣ[3]ದಾಯಕರ[3] ।
ಕರೆದು ಮನ್ನಿಸಿ ತನ್ನನತಿ ವಿ
ಸ್ತರಿಸಿ ಹೊಸಮುಡಿವರ್ಗದಲಿ ಮಿಗೆ
ಮೆಱೆದು ರಣಸುಮ್ಮಾನದಲಿ ಹೊಗರೇಱಿದನು ಕರ್ಣ ॥ ೩

ತೊಳಗಿ ಬೆಳಗುವ ಶಿರದ ಪಚ್ಚೆಯ
ಹಳುಕು ಬೆರಸಿದ ವೀಳೆಯವನಿ
ಕ್ಕೆಲದ ಶಲ್ಯಾದಿಗಳಿಗಿತ್ತನು ವರ ರಥಾಗ್ರದಲಿ ।

---

[1] ದಲಿ (ಟ.ದ). [2] ಯಹೇಳೆಂದ (ತ.ದ.ನ.ಪ.ಬ). [3] ಧಾರಿಗಳ (ಕ).

ಕೆಳಚಿ ತೆಗೆದನು ಜೋಡ ಮೈವೆ
ಗ್ಗಳಿಸಿ ದಳವೇಱಿದುದು ಮನ ಮೊಗ
ಥಳಥಳಿಸೆ [1]ಬಹಳಪ್ರತಾಪದಲರ್ದನಾ ಕರ್ಣ[1] ॥ ೪

ತಳಿತು ಮುತ್ತುವ ಮುಗಿಲ ಝಾಡಿಸಿ
ಝಳಪಿಸುವ ರವಿಯಂತೆ ಭುವನವ
ಬೆಳಗಲುದ್ರೇಕಿಸುವ ಭಾರ್ಗವಭಾಳಶಿಖಿಯಂತೆ ।
ಹೊಳೆಹೊಳೆವ ಕರ್ಣಪ್ರತಾಪಾ
ನಳನ ನಾಟ್ಯವ ಕಂಡು ಕೌರವ
ಬಲದೊಳೊಸಗೆಯ ಲಗ್ಗೆ ಮಸಗಿತು ಭೂಪ ಕೇಳೆಂದ ॥ ೫

ರಾಯನನುಜ[2]ನ[2] ರುಧಿರ ಜೀವದ
ಬೀಯದಲಿ ಕರ್ಣಾತ್ಮಜನ ಕುಲಿ
ಶಾಯುಧನ ಸಾಲೋಕ್ಯದಲಿ ಕಣ್ದೆಱೆದ ವೇದನೆಯ ।
ಆಯಸವ ನೆಱೆ ಮಱೆದು ಕೌರವ
ರಾಯ ಪಲ್ಲವಿಸಿದನು [3]ಲಹರಿಯ[3]
ಘಾಯದಲಿ [4]ಸೂಳೈಸಿ[4]ದವು ನಿಸ್ಸಾಳಕೋಟಿಗಳು ॥ ೬

ಸಾಱಿ ಸುಭಟರ ಬಱೆವ ಕಹಳೆಯ
ಗೌಱುಗಳ ತಿತ್ತಿರಿಯ ಚಿನ್ನದ
ಚೀಱುಗಳ ನಿಡುಗೊಂಬುಗಳ [5]ಚೆಂಬಕನ[5] ನಿರ್ಘೋಷ ।
ಮೋಱುಗಳೆದುವು ನೆಲನನುದಧಿಯ
ಕಾಱುಸಿದವಡಿಮುಗಿಲನೆನೆ ಹುರಿ
ಯೇಱಿತಬ್ಬರವಿವರ ಬಲದಲಿ ಭೂಪ ಕೇಳೆಂದ ॥ ೭

ರಥವಿಳಿದು ಬಲವಂದು ನಿಜ ಸಾ
ರಥಿಗೆ ಕೈಮುಗಿದಶ್ವಚಯಕತಿ
ರಥಭಯಂಕರನೆಱಗಿ ಕಂದವ ತಟ್ಟಿ ಬೋಳೈಸಿ ।
ರಥವನಡಱಿದು ನೋಡಿ ಗಗನದ
ರಥಿಗೆ ತಲೆವಾಗಿದನು ಲೋಕ
ಪ್ರಥಿತಸಾಹಸಮಲ್ಲ ಮುದದಲಿ ತುಡುಕಿದನು ಧನುವ ॥ ೮

---

[1] ಬಿಗುಹೇಱಿದನು ಬಹಳಪ್ರತಾಪದಲಿ (ತ). [2] ನು (ಟ.ದ.ನ). [3] ಲಗ್ಗೆಯ (ಟ ತ.ದ ಪ). [4] ಗಜಬಜಿಸಿ (ಕ). [5] ನಾರಾಚ (ಕ).

ಸರಳ ಹೊದೆಗಳ ತುಂಬಿ ಬಂಡಿಯ
ನರನ ಕಳುಹಿದನೆಂಟುನೂಱನು
ಚರರು ಪರಿವೇಷ್ಟಿಸಿತು ಪರಿಚಾರಕರ ವಿಗ್ರಹದ ।
ಸರಿಸ ಸಿಂಧವನೆತ್ತಿ ಸುತ ಬೊ
ಬ್ಬಿಱಿದು ಜವನಿಕೆವಿಡಿದು ಭೀಮನೊ
ನರನೊ ನಿಲುವವರಾರು ಬರಹೇಳೆಂದನಾ ಕರ್ಣ ॥ ೯

ಮಾತು ತಪ್ಪಿತು ರಿಪುಗಳೈವರಿ
ಗೌತಣಿಸಿದೆವು ನೆರವಿನಲಿ ಪುರು
ಹೂತ ಶಿಖಿ ಯಮ ನಿರುತಿ ವರುಣ ಸಮೀರ ಹರಸಖರು ।
ಆತುಕೊಳಲಿಂದೀ ಸುಯೋಧನ
ಜಾತಪುಣ್ಯನೊ ಧರ್ಮಪುತ್ರನೆ
ಭೂತಭಾಗ್ಯನೊ ಕಾಣಲಹುದೈ ಶಲ್ಯ ಕೇಳೆಂದ ॥ ೧೦

ಸರಳೊಳಾಯ್ದು ಮಹಾಸ್ತ್ರವನು ಸಂ
ವರಿಸಿದನು ಬತ್ತಳಿಕೆಯಲಿ ಮಾ
ರ್ತಿರುವ ಬೆರಳಲಿ ತೀಡಿ ರೊಪ್ಪಿನ ಬಲುಹನಾರೈದು ।
ತಿರುವನೇಱಿಸಿ ಮಿಡಿಮಿಡಿದು ಪೊಂ
ಬರಹದವನಿನ್ನೂಱು ಚಾಪವ
ನಿರಿಸಿದನು ಕೆಲದವರ ತೊಲಗಿಸಿ ವಾಮಭಾಗದಲಿ ॥ ೧೧

ತಿರುವ ಬೆರಳಲಿ ಮಿಡಿದು ಕೆನ್ನೆಗೆ
ಬರಸೆಳೆದು ಲುಳಿವಡೆದು ಹೂಡಿದ
ಸರಳ ಕಿವಿವರೆಗುಗಿದು ಬೈಸಿಗೆದೆಗೆದು ಠಾಣದಲಿ ।
ಪರಿವಿಡಿಯನಾರೈದು ಗರುಡಿಯ
ಗುರುವ ನೆನೆದನು ವೈರಿಸೇನೆಯ
ತಱುಬಿ ನಿಂದನು ಕಾದುವಣ್ಣನ ಬೇಗ ಕರೆಯೆನುತ ॥ ೧೨

ಭೀತಿಗೊಳುತದೆ ಮಾಱುಬಲ ಮಝು
ಪೂತು ದಕ್ಕಡ ದಿಟ್ಟ ರಿಪು ಸಂ
ಘಾತವಾರಿಧಿ[1]ಬಾಡಬಾನಲ[1] ಕೀರ್ತಿಜಗಝಂಪ ।

---

[1] ಮೋರೆವಾಯ್ದುತಿ (ಕ). ಕುಂಥಸಂಧವ (ನ.ಬ).

ಜಾತರಿಪುನಿರ್ಮಥನವೈರಿ
ವ್ರಾತ[1]ಕಾನನ[1]ಧೂಮಕೇತುವ
ರಾತಿಹರ ಜಯ ಜೀಯ ಎಂದುದು ವಂದಿಸಂದೋಹ ॥ ೧೩

ಒಳಗೆ ಸುಳಿಸುಳಿಗೊಂಡು ಪಾಂಡವ
ಬಲಪಯೋಧಿ ಪರಿಭ್ರಮಿಸೆ ಕ
ಕ್ಕುಳಿಸಿದಗ್ಗಳಿಕೆಗಳ ಸುಕ್ಕಿದ ಸಾಹಸೋನ್ನತಿಯ ।
ಕಳಕಳವ ಕಣ್ದಿವೆಗಳ ಮನ
ಗಲಿತನದ ಮುಳುಮೆಟ್ಟುಗಳ ವೆ
ಗ್ಗಳೆಯರಿದ್ದುದು ಭೀಮಸಾತ್ಯಕಿ ಸೃಂಜಯಾದಿಗಳು ॥ ೧೪

ಮುಸುಕಿತೋ ಕರ್ಣಪ್ರತಾಪದ
ಬಿಸಿಲು ಪಾಂಡವಕುಮುದಕಾನನ
ವಿಸರವನು ವಿಗ್ರಹದ ಮುಖ ಲೇಸೆನುತ ಕುರುಸೇನೆ ।
ಮುಸಗಿದಂಬುಧಿಯಂತೆ ಮಿಗೆ ಗ
ರ್ಜಿಸಲು ಗರುವರ ಗಾಢ ಶೌರ್ಯದ
ಬೆಸುಗೆ ಬಿಡೆ ಗಾಂಡಿವವ ದನಿಮಾಡಿದನು ಕಲಿ ಪಾರ್ಥ ॥ ೧೫

ಅರಸ ಕೇಳೈ ಧೂರ್ಜಟಿಯ ಡಾ
ವರದ ಡಮರುಧ್ವನಿಯೊ ವಿಲಯದ
ಬಳಸಿಡಿಲ ಬೊಬ್ಬಾಟವೋ ಕಲ್ಪಾಂತಸಾಗರದ ।
ತೆರೆಗಳಬ್ಬರವೋ ಧನಂಜಯ
ಕರನಿಹಿತಗಾಂಡಿವದ ಮೌರ್ವೀ
ಸ್ಫುರಿತ ಕಳಕಳವೊವೆಮುದಬುಜಭವಾಂಡಮಂಡಲವ ॥ ೧೬

ಘೀಳಿಡಲು ಕಪಿಗಳಲಿ ಕುರುಬಲ
ಜಾಲ ಜರಿದುದು ಜಾತಭುವನಾ
ಸ್ಫಾಳಪುನರಾಗತಮಹಾಧ್ವನಿ ಕದಡಿತಂಬುಧಿಯ ।
ಮೇಲುವೊಳಗಿನ ದನಿಯನಾಲಿಸಿ
[2]ಹೀಲಿಗೆ[2]ದಣಿವ ನವಿಲವೋಲು ನಿ
ನ್ನಾಳು ಬಾಹುಪ್ಪಳಿಸಿ ಹಿಗ್ಗಿದನರಸ ಕೇಳೆಂದ ॥ ೧೭

---

[1] ದಾನವ (ಕ). [2] ಕೇಳಿಕೆ (ಕ).

ಸಂತವಿಸಿತಾ ಸೇನೆ ಕುರುಬಲ
ಕಂತುಹರನುದ್ಯೋಗವಾಗೆ ನಿ
ರಂತರದ ನಿಸ್ಸಾಳಸೂಳಿನ ಲಗ್ಗೆ ದಂಬಟದ ।
ಅಂತರಿಕ್ಷ[1]ದೊಳುಲಿವ[1] ಸುಮನಸ
ಸಂತತಿಯ ಘನಸಾಧುವಾದಶ
ಕುಂತಸೂಚಿತ ಭದ್ರಭಾಷಣವೆಸೆದುದಾಚೆಯಲಿ ॥ ೧೮

ಹರಿಗೆ ಕೈಮುಗಿದೆಱಗಿ ತೇರಿನ
ಹರಿಗಳಿಗೆ ವಂದಿಸಿ ಪತಾಕೆಯ
ಹರಿಗೆ ನಮಿಸಿ ನಿಜಾಯುಧಕೆ ಕೈಮುಗಿದು ಜೇವೊಡೆದು ।
ಹರಿ ಧನಂಜಯ ಧರ್ಮ ನೈರುತಿ
ವರುಣ ಮಾರುತ ವೈಶ್ರವಣ ಶಂ
ಕರ ವಿರಿಂಚಾದಿಗಳಿಗಭಿವಂದಿಸಿದನಾ ಪಾರ್ಥ ॥ ೧೯

ಭರತಕುಲಸಂಭಾ[2]ಳು[2] ಜಯ ಹಿಮ
ಕರ ಪುರೂರವ ನಹುಷ ನಳ ನೃಗ
ವರ ಯಯಾತಿಪ್ರಕಟ ವಿಮಳಾನ್ವಯದೊಳವತರಿಸಿ ।
ಧುರಕೆ ಮನವಳುಕಿದರೆ ಹಜ್ಜೆಯ
ತಿರುಪಿದಡೆ ಕುಲಕೋಟಿಕೋಟಿಗೆ
ನರಕವೆಂದೆಚ್ಚರಿಸಿದರು ಭಟ್ಟರು ನಿಜಾನ್ವಯವ ॥ ೨೦

ಹಿಡಿಯೆ ಜವನಿಕೆ ಸಕಲಬಲ ಸಂ
ಗಡಿಸಿತೊಂದೇ ಮುಖದಲೀ ದಳ
ಗಡಣಿಸಿತು ಮುಂದಿಕ್ಕಿ ಕರ್ಣನನೇಕಮುಖವಾಗಿ ।
ಪಡಿಬಲಕೆ ಭೀಮಾದಿಭಟರಾ
ಕಡೆಯಲನುವಾಯ್ತೀಚೆಯಲಿ ನೆಲ
ನೊಡೆಯ ಕೃಪ ಗುರುಜಾದಿಗಳು ಕೈಗೈದಹಿಗ್ಗಿನಲಿ ॥ ೨೧

ದಳವೆರಡ ಹಿಂದಿಕ್ಕಿ ರಥರಥ
ಹೊಳೆದು ಸುಳಿದೌಕಿದವು ಕುಲಗಿರಿ
ಕುಲಗಿರಿಗೆ ದಿಕ್ಕರಿಗೆ ದಿಕ್ಕರಿ ಜೋಳದೆಗೆದಂತೆ ।

---

[1] ದೆಲಗಿವ (ಟ.ದ.ನ). [2] ಳ (ಕ).

ಬಲನ ವಜ್ರನ ಕಾಲನೇಮಿಯ
ಜಲರುಹಾಕ್ಷನ ರಾವಣನ ರಘು
ಕುಲನ ದೆಖ್ಖಾದೆಖ್ಖಿ ಜೋಡಿಸಿತಾತನೀತನಲಿ ॥ ೨೨

ನೆಲನ ರಾಜ್ಯಶ್ರೀಯ ತುರುಬಿಂ
ಗಳುಕದಂಘೈಸಿದ ವಿರೋಧಿಯ
ಲಲನೆಯರ ಶ್ರುತಿಪತ್ರ ಸೀಳಲಿ ಸಾಲ ಹಿಂಗಿತಲ ।
ಅಳಿದ ವೃಷಸೇನಕನ ತಾಯ್ಗಳು
ಮೆಲಲಿ ವೀಳೆಯವನು ಕಿರೀಟಿಯ
ತಲೆಯ ತೆಱಗೆಗೆ ತಾವೆ ಹೊಣೆಯೆಂದುದು ಭಟಸ್ತೋಮ ॥ ೨೩

ಇಟ್ಟಣಿಸುತದೆ ಧುರಕೆ ರಾಯುಘ
ರಟ್ಟ ಪಾರ್ಥನ ತೇರು ತೇಜವ
ದಿಟ್ಟಿಸುವಡೆವೆ ಸೀಯ್ಯವೇ ಘಡ ಸೂತಸುತನಳವೆ ।
ಕೆಟ್ಟುದಿನ್ನೇನಹಿತಬಲ ಜಗ
ಜಟ್ಟಿ ಗೆಲಿದನು ಧರ್ಮಪುತ್ರನ
ಪಟ್ಟದಾನೆಯೆನುತ್ತಲಿರ್ದುದು ಪಾಂಡುಸುತಸೇನೆ ॥ ೨೪

ಉಲಿದುದೀ ಬಲ ಸೂತಸುತನ
ಗ್ಗಳಿಕೆಯನು ಕೊಂಡಾಡಿ ಪಾರ್ಥನ
ಬಲುಹ ಬಹುವಿಧದಿಂದ ಬಣ್ಣಿಸುತಿದ್ದುದಾ ಸೇನೆ ।
ಲಳಿಯ ಲಗ್ಗೆಯ ನಿಖಿಳ ವಾದ್ಯದ
ಕಳಕಳವನಡಿಗಿಕ್ಕಿ ಮೆರೆದುದು
ಬಲದೊಳಬ್ಬರ ಬಿರುದ ಪಾಡುಪವಾಡುಗಳ ರಭಸ ॥ ೨೫

ಭಾರಿಯಂಕದ ಭಟರಿವರು ಜು
ಜ್ಝಾರರತ್ಯೈ ತವ್ಮಾಯತವ ತ
ವ್ಮಾರುಭಟೆಯನು ಲಕ್ಷ್ಯ ಲಕ್ಷಣ ಭೇದ ಭಂಗಿಗಳ ।
ಸಾರತರ ಕೋದಂಡಪಂಡಿತ
ರಾರಯಿಕೆಯಲಿ ತಟಬಿ ನಿಂದರು
ಭಾರತದೊಳಿಂದೊಂದು ಚಿತ್ರವ ಕಂಡೆ ನಾನೆಂದ ॥ ೨೬

ಇಪ್ಪತ್ತೊಂದನೆಯ ಸಂಧಿ ಮುಗಿದುದು..

ಇಪ್ಪತ್ತೆರಡನೆಯ ಸಂಧಿ

ಸೂಚನೆ ॥ ಸಕಲ ದನುಜ ಭುಜಂಗ ವೃಂದಾ
ರಕಮಹಾಭೂತಾದಿಲೋಕ
ಪ್ರಕರವೆರಡೊಡ್ಡಾಯ್ತು ಕರ್ಣಾರ್ಜುನರ ಕದನದಲಿ ॥

ಹೇಳು ಸಂಜಯ ಕರ್ಣಪಾರ್ಥರ
ಕಾಳೆಗದೊಳೇನಾಯ್ತು ಚಿತ್ರವ
ಕೇಳುವೆನು ಕರ್ಣಾಮೃತವೊ ಕರ್ಣವ್ಯಥಾಹವವೊ।
ಹೇಳು ನೀನಂಜದಿರು ಕುರುಕುಲ
ಕಾಲಸರ್ಪನ ತಾಯುದರ ಸೀ
ತಾಳಮಳಿಗೆಯಲೇ ಮಹಾದ್ಭುತವೇನು ಹೇಳೆಂದ ॥ ೧

ಅರಸ ಕೇಳಾದರೆ ಮಹಾವಿ
ಸ್ತರವನಾ ಕರ್ಣಾರ್ಜುನರ ರಥ
ಸರಿಸದಲಿ ಚಾಚಿದುವು ನೋಟಕರಾದುದುಭಯಬಲ।
ಹರಿ ವಿರಿಂಚ ಸುರೇಂದ್ರ ದಿಗುಪಾ
ಲರು ಚತುರ್ದಶ ಮನುಗಳಾದಿ
ತ್ಯರು ಭುಜಂಗಮ ವಿಶ್ವವಸುಗಳು ನೆರೆದುದಭ್ರದಲಿ ॥ ೨

ಏನ ಹೇಳುವೆನವನಿಪತಿ ವೈ
ಮಾನಿಕರ ಹಂತಿಗಳ ಹರ ಚತು
ರಾನನರವೊಡ್ಡೋಲಗದ 'ವಾಗ್ಜನಿತ ವಿಗ್ರಹವ'[1] ।
ಭಾನುಜನ ಭಾರಣೆಯನರ್ಜುನ
ನಾನಲಳವೇ ಫಲುಗುಣಗೆ ರವಿ
ಸೂನುವೇ ಘಡಪಾಡೆ ಎಂದುದು ಮೇಲೆ ಸುರಕಟಕ ॥ ೩

---

[1] ಗಜಬಜದ ವಿಸ್ತರವ (ಕ.ಟ.ನ.ಛ),

ರಾಸಿ ತಾರಾಗಣಸಹಿತವಾ
ಕಾಶ ಕರ್ಣನ ಕಡೆ ಸಮೀರ ಹು
ತಾಶನಾಂಬುಧಿ ಗಿರಿಸಹಿತಲೀ ಧರಣಿ ಪಾರ್ಥನಲಿ ।
ಆ ಸುರಾರಿಪ್ರಮುಖ ಯಕ್ಷರಿ
ಗಾಸೆ ಕರ್ಣನ ಮೇಲೆ ನಾಕನಿ
ವಾಸಿ ನಿರ್ಜರನಿಕರವಾದುದು ನರನ ಕೈವಾರ ॥ ೪

ವಿತತ ಮಂತ್ರಾಖ್ಯಾನ ವೇದ
ಸ್ಮೃತಿ ಪುರಾಣ ಷಡಂಗವಿಂದ್ರನ
ಸುತನ ದೆಸೆಯುಚ್ಚಾಟನಸ್ತಂಭಾದಿ ವಿದ್ಯೆಗಳು ।
ಕ್ಷಿತಿಪ ಕೇಳೈ ಕರ್ಣನತ್ತಲು
ಕ್ರತುಗಳಾ ದೆಸೆಯಾ[1]ಭಿಚಾರ[1]
ಕ್ರತುಗಳೀ ದೆಸೆಯಾಗಿ ನಿಂದವು ನೃಪತಿ ಕೇಳೆಂದ ॥ ೫

ವಿವಿಧ ರತ್ನಾವಳಿ ಮಹಾನಿಧಿ
ಯವರ ದೆಸೆ ರಜತಾದಿ ಲೋಹ
ಪ್ರವರ ಧಾತುಗಳತ್ತಲತ್ತಲು ನಿಮ್ಮ ಘಟ್ಟಿನಲಿ ।
ರವಿ ಶನೈಶ್ಚರ ರಾಹು ಬುಧ ಭಾ
ರ್ಗವರು ಕರ್ಣನ ದೆಸೆಯಲಾ ವಿ
ಕ್ಕವರು ಪಾರ್ಥನ ದೆಸೆಯಲಾಯಿತು ರಾಯ ಕೇಳೆಂದ ॥ ೬

ಶೇಷ ಕಾರ್ಕೋಟಕನು ತಕ್ಷಕ
ವಾಸುಕಿ ಪ್ರಮುಖರಿಗೆ ವಿಜಯದ
ವಾಸಿ ಪಾರ್ಥನ ಮೇಲೆಯುಳಿದೀ ಕ್ರೂರಫಣಿಗಳಿಗೆ ।
ಆಸೆ ಕರ್ಣನ ಮೇಲೆ ಖಗಮೃಗ
ಕೇಸರಿಗಳಾಚೆಯಲಿ ಜಂಬುಕ
ಕಾಸರ ವ್ಯಾಳಾದಿ ಖಗಮೃಗವಿತ್ತಲಾಯ್ತೆಂದ ॥ ೭

ಯಾತುಧಾನ ಕುಬೇರ ಕಿನ್ನರ
ಮಾತೃಗಣ ಕರ್ಣನಲಿ ಸುಮನೋ
ಜಾತ ಚಿತ್ರರಥಾದಿ ಗಂಧರ್ವರು ವಿಪಕ್ಷದಲಿ ।

---

[1] ಗೆ ಪಾಠ (ಕ.ಟ.ನ).

ಭೂತಗಣವೀಚೆಯಲಿ ದೆಸೆ ದಿಗು
ಜಾತ ಮನು ವಸು ನಾರದಾದಿ ಮ
ಹಾತಪಸ್ವಿಗಳತ್ತಲಾಯಿತು ರಾಯ ಕೇಳೆಂದ ॥ ೮

ಭರತ ನಳ ನಹುಷಾದಿ ಭೂಮೀ
ಶ್ವರರು ಪಾರ್ಥನ ದೆಸೆಗೆ ಮಹಿಷಾ
ಸುರ ದಶಾನನ ತಾರಕಾದಿಗಳಾದುದೀಚೆಯಲಿ ।
ಸುರಮುನಿಗಳಿಂದ್ರಾನಲಾಂತಕ
ವರುಣ ವಾಯು ಮಹೇಶ ವಿದ್ಯಾ
ಧರರು ಪಾರ್ಥನ ದೆಸೆಯಲೈದಿತು ಭೂಪ ಕೇಳೆಂದ ॥ ೯

ಖ್ಯಾತಿ ತೇಜಸ್ತೋಮ ವೀರ
ಪ್ರೀತಿ ವಿಕ್ರಮ ಸತ್ಯ ಸಿದ್ಧಿ ವಿ
ಭೂತಿ ಶೌರ್ಯ ತಪಃಕ್ಷಮಾದಿಗಳಾದುದಾಚೆಯಲಿ ।
ಭೀತಿ ಕಾಮ ಕ್ರೋಧ ಕಲಿ ದು
ರ್ನೀತಿ ಮದವಖ್ಯಾತಿ [1]ಮಾನವಿ
ಘಾತಿ[1] ವಿಭ್ರಮ ಕೈತವಾದಿಗಳಾದುದೀಚೆಯಲಿ ॥ ೧೦

ಭೃಗು ವಸಿಷ್ಠಾಂಗಿರಸ ದಕ್ಷಾ
ದಿಗಳು ಪಾರ್ಥನ ಪಕ್ಷವಾಯ್ತೀ
ಚೆಗೆ ಪುಲಸ್ತ್ಯ[2]ಮರೀಚಿ[2] ವಿಶ್ವಾಮಿತ್ರ ಗೌತಮರು ।
ಜಗದ ಜೀವ[3]ರು[3] ಧಾತುಮೂಲಾ
ದಿಗಳೊಳಿಕ್ಕಟ್ಟಾದುದೀ ಕಾ
ಳೆಗ ಚತುರ್ದಶಭುವನಜನಸಂಕ್ಷೋಭವಾಯ್ತೆಂದ ॥ ೧೧

ಲೋಕವಿವರಲಿ ಪಕ್ಷಪಾತವಿ
ದೇಕೆ ನೋಡೈ ನಿಮ್ಮ ಕರ್ಣನು
ಲೋಕವಿಖ್ಯಾತಪ್ರತಾಪನಲಾ ಮಹಾದೇವ ।
ಆ ಕೃತ ತ್ರೇತೆಯಲಿ ಕಾದಿದ
ನೇಕ ದಿವಿಜಕ್ಷತ್ರದನುಜಾ
ನೀಕವೀ ಪರಿ ಚಿತ್ರವಿಲ್ಲವನೀಶ ಕೇಳೆಂದ ॥ ೧೨

---

[1] ಮನ್ಮಥ ಭೂತ (ಕ). [2] ದಧೀಚಿ (ಕ). [3] ರ (ಖ.ಫ).

ಅರಸ ಕೇಳೈ ಶಕ್ರ ಸೂರ್ಯರ
ಮರುಳುತನವೋ ಮೇಣು ಮರ್ತ್ಯರ
ಚರಣೆಗಳ ನಾಟಕವೊ ಮೇಣ್ ಸಾಂಸಾರಿಕ ಭ್ರಮೆಯೋ ।
ನರನಲೇ ಲೋಕೈಕವೀರನು
ಧಿರುರೆ ಮಝು ಭಾಪೆಂಬ ಸಡಿಫಡ
ಸರಿಯೆ ಕರ್ಣಂಗೆಂಬ ಕಳಕಳ ಕೇಳಲಾಯ್ತೆಂದ ॥ ೧೩

ಈ ಪರಿಯಲೆರಡಿಟ್ಟ ಜಗದಾ
ಳಾಪವನು ಕರ್ಣಾರ್ಜುನರ ಪ
ಕ್ಷೋಪಚಾರಪ್ರಕಟಕಲಹಕಠೋರಕಳಕಳ[1]ವ[1] ।
ಆ ಪುರಂದರ ಕಮಲಸಖರಾ
ಟೋಪವನು ಭುವನಾಪಘಾತವ
ನಾ ಪಿತಾಮಹನಱಿದು ಸಂತೈಸಿದನು ಸಾಮದಲಿ ॥ ೧೪

ಅರಸ ಚತ್ತ್ರಸುಭಯಬಲದು
ಬ್ಬರದ ಬಹುವಿಧವಾದ್ಯರವದು
ಬ್ಬರವ ಮುಕ್ಕುಳಿಸಿತ್ತು ಪಾಠಕನಿಕರನಿರ್ಘೋಷ ।
ಸುರರ ಕಳಕಳವೀ ಧ್ವನಿಯನು
ತ್ತರಿಸಿತೀ ಬಲುಗಜಬಜವ ನಡ
ತರಪೊಳಿಕ್ಕಿತು ಕರ್ಣಪಾರ್ಥರ ಚಾಪಟಂಕಾರ ॥ ೧೫

ಅಳವಿಯಂಕೆಯ ಮೀಱಿ ರಥರಥ
ಘಟಿಸಿದವು [2]ಬಹು[2]ಮಾನದಲಿ ವೆ
ಗ್ಗಳಿಸಿದವು ವೇಗಾಯ್ಲವಾಜಿಯ ಲಳಿಯ ಲಹರಿಯಲಿ ।
ಹೊಳೆದವೆಡಬಲವಾಘೆ ಸನ್ನೆಯ
[3]ಸುಳಿವ[3] ಸುಭಟರ ಬವರಿ ಭಂಗಿಯ
ಲುಳಿಯ ಸೂತರ ರೇಖೆ ಸೆಳೆದುದು [4]ಜನದ[4] ಕಣ್ಮನವ ॥ ೧೬

ಉಪ್ಪರಿಸಿ ಲಳಿಯೆದ್ದು ಸೂತರ
ಚಪ್ಪರಣೆಗಳ ಮೀಱಿ ಖುರದಲಿ
ಜೊಪ್ಪರಿಸಿ ಹೊಯ್ದಾಡಿದವು ಹೇಷಿತದ ಹಲ್ಲಣೆಯ ।

---

[1] ದ (ಚ.ದ.ನ). [2] ಧ್ರು (ಖ), ಧು (ಚ.ತ.ಪ). [3] ತಳಿಯ (ಕ).
[4] ಜವನ (ಫ.ತ), ಳಯ (ಚ.ತ).

ದರ್ಪದಲಿ ತೇಜಿಗಳು ತೇಜಿಯು
ತಪ್ಪಡಿ[1]ಗೆಲಟಕಟಿಸಿ[1]ದವು ರಣ
ವೊಪ್ಪಿತ್ತೈ ಕರ್ಣಾರ್ಜುನರ ರಥವಾಜಿ ವಾಜಿಗಳ ॥ ೧೭

ಅರಸ ಕೇಳೇನೆಂಬೆನೈ ಕಪಿ
ವರನ ಕೋಲಾಹಳದ ಕದನವ
[2]ಕರೆದು[2] ನಖದಲಿ ಹೊಯ್ದು ಕರದಲಿ ಕಾದುವಂದದಲಿ ।
ಮುರಿದು ಬಾಲದಲಡಿಗಡಿಗೆ ಬೊ
ಬ್ಬಿಱಿದು ಹೆಣಗಿದನಿನಸುತನ
ವರರಥದ ಹೇಮಧ್ವಜದ ಹಲಗೆಯ ಹಸ್ತಿಕಕ್ಷದಲಿ ॥ ೧೮

ಏನ ಹೇಳುವೆ ಸೂತತನದಭಿ
ಮಾನವೇಱಿದ ಪರಿಯನಾ ವೇ
ಷಾನುರೂಪವಿಚೇಷ್ಟೆಯನು ಲೋಕೈಕ ಚೇಷ್ಟಕನ ।
ನೀನೆನಗೆ ಸಾರಥಿತನದಲಿ ಸ
ಮಾನನೇ ಘಡ ತುರಗಹೃದಯ
ಜ್ಞಾನ ನಿನಗೇಕೆನುತ ಶಲ್ಯನ ಜಱಿದನಸುರಾರಿ ॥ ೧೯

ಅಕಟ ಗೋರಕ್ಷಕನೆ ಪಶುಪಾ
ಲಕರ ಮಕ್ಕಳೊಳಶ್ವಹೃದಯ
ಪ್ರಕಟವಿಜ್ಞಾನಂಗಳುದಿಸಿದವೇ ವಿಶೇಷವಲಾ ।
ವಿಕಳರಾವಿದನೆತ್ತ ಬಲ್ಲೆವು
ಸಕಲಗುಣಸರ್ವಜ್ಞ ನಿನಗೀ
ಬಕವಿಡಂಬನವೇಕೆನುತ ಮೂದಲಿಸಿದನು ಶಲ್ಯ ॥ ೨೦

ಧಾರಿಣೀಪತಿ ಕೇಳು ಬಿಲುಟಂ
ಕಾರ ಕದನೋಪಕ್ರಮದೊಳೋಂ
ಕಾರವಾಯಿತು ಕಾರ್ಮುಕಸ್ವಾಧ್ಯಾಯವಿಸ್ತರಕೆ ।
ಭೂರಿ ಬಹುವಿಧ ಬಾಣವರ್ಗವಿ
ಹಾರವೆಸೆದುದು ಕರ್ಣಪಾರ್ಥರು
ದಾರ ಸಮರಾರಂಭವ[3]ಳ್ಳಿಱಿದುದು ಜಗತ್ರಯವ[3] ॥ ೨೧

---

[1] ಗಳಲಿ ನುಸುಳಿ (ಕ). [2] ನೆರಡು (ಕ), ಕೆರೆದು (ತ.ಪ). [3] ಳ್ಳಾಡಿಸಿತು ಮೂಜಗವ (ಗ.ಟ.ತ.ದ.ನ.ಪ.ಬ).

ಸೂತಜಾತಿಯೊಳೀ ಧನುರ್ವೇ
ದಾತಿಶಯವೆಂತಾಯ್ತು ಪಾರ್ಥಿವ
ಜಾತಿಯಧ್ಯಾಪನವಿಧಾನನಿಯೋಗವಾವನದು ।
ಪೂತು ಮಝುರೇ ಸ್ವೈರಿಸಾದಡೆ
ಸೂತನಂದನ ಎನುತ ಬಾಣ
ವ್ರಾತದಲಿ ಹೊದಿಸಿದನು ಕರ್ಣನ ರಥವನಾ ಪಾರ್ಥ ॥ ೧೨

ಹರೆಗಡಿದನಾ ಕ್ಷಣದೊಳಾತನ
ಶರವನೆಲವೋ ಪಾರ್ಥ ನಿಮ್ಮೈ
ವರಿಗೆ ಜನಕ[1]ನು[1] ಪಾಂಡು ನೀವಧ್ಯಯನಯೋಗ್ಯರಲಾ ।
ಧರೆಯೊಳಗ್ಗದ ರಾಜಸೂಯಾ
ಧ್ವರಕೆ [2]ಪತ್ನಿಯೊ ಯೋಗ್ಯೆ ಯಜಮಾ
ನರುಗಳೈ ನೀ[2]ವೇನಹೇಳುವೆವೆನುತ ತೆಗೆದೆಚ್ಚ ॥ ೧೩

ಸೂಳೆಯರು ಗಡ ಸಾಮುಗಾನವ
ನಾಳಿಗೊಂಬರು ಗಡ ದಿನೇಶನ
ಮೇಳವನು ಮುದುಗೂಗೆ ಮೆಚ್ಚದು ಹಾನಿಯೇನದಕೆ ।
ಆಳುತನದಂಘವಣೆಯುಂಟೇ
ಬೋಳೆಯಂಬಿನಲಾಡಿಕೊಳು ಬಿಡು
ಜಾಳುನುಡಿಗಳ ಜವಳಿವಾತನೆನುತ್ತ ನರನೆಚ್ಚ ॥ ೧೪

ಆತನೆಚ್ಚ ಶರೌಘವನು ಕಡಿ
ದೀತ ನುಡಿದನು ಹೊಳ್ಳುವಾತಿನ
ಹೋತುದಚುಹಿಗಳಿವರುಪಾಧ್ಯರು ನಾವು ಸೂಳೆಯರು ।
ಏತಕೀ ಬಳೆಗೈಗೆ ಬಿಲು ಹಿಣ
ಲೇತಕೀ [3]ಚೊಲ್ಲೆಹ[3]ಕೆಚಲ್ಲಣ
ವೇತಕೀ ಹೆಣ್ಣುಡಿಗೆಗೆನುತೆಚ್ಚನು ಧನಂಜಯನ ॥ ೧೫

ಕಾಣಿಸಿದನೈ ಕೌರವನ ಹರಿ
ವಾಣದಾಯುದ ಹಂತಿಕಾಱನು
[4]ಕಾಣಿಕೊಂಕನು[4] ನಮ್ಮ ಚರಿತಕೆ ಹಾ ಮಹಾದೇವ ।

---

[1] ನೆ (ತ.ನ.ಬ). [2] ಪತಿಯೋ ಯಾಗಯಜಮಾನರುಗಳೈ ನಾ (ಕ). [3] **ಚೊಲ್ಲೆಯ** (ಕ). [4] ಕೇಣಿಗೊಂಡನು (ಖ.ಗ.ದ.ಬ).

ಜಾಣ[1]ತನ[1]ವ್ರೋಳ್ಗೆಯದು ಧರ್ಮಜ
ನಾಣ್ ಬಲ್ಲೆನು ದಿಟವೆನುತ ಬಲು
ಸಾಣೆಯಲಗಿನ ಸರಿಯ ಸುರಿದನು ಸವಱ ರಿಪುಶರವ ॥ ೨೬

ರಾಯತನದಲಿ ಬೆಱೆತು ರಾಜ್ಯ
ಶ್ರೀಯ ನೆಱೆ ಹೋಗಾಡಿ ಪರರಿಗೆ
ಜೀಯ ಬೆಸಸುವುದೆಂದು ಜೀವಿಸುವವರು ನಾವಲ್ಲ ।
ರಾಯತನವೆಮಗಿಲ್ಲ ಕೌರವ
ರಾಯನೋಲೆಯಕಾಱರಹೆವೆ
ವ್ಯಾಯತವು ತಾ ಬೇಱೆನುತ ಕವಿದೆಚ್ಚನಾ ಕರ್ಣ ॥ ೨೭

ಆವ ಹಂಜರಕೂಳಿ ಮೊಗವಲೆ
ಯಾವಗಾಣವು ಬೀಸುವಲೆಯುಱೆ
ತೀವಿದುದಕದ ಮಡುವೆಯಿದು ಸಂಗ್ರಾಮಭೂಮಿ ಕಣಾ ।
*ಹೇವವಿಲ್ಲದೆ ಕಾದಬೇಹುದು
ಧೀವರರಪ್ಪೋಲ್ ತಡಿಕೆವಲೆಯಲಿ
ಲಾವುಗೆಯ ಹೊಯ್ದುಂದವಲ್ಲೆನುತೆಚ್ಚನಾ ಪಾರ್ಥ ॥ ೨೮

ನೀವು ನುಡಿದುದು ಹುಸಿಯೆ ಕೂಳಿಯ
ತೀವಿ ತೀವೆವು ಕೊಳಚೆಗಳ ಬಾ
ಣಾವಳಿಯ ತಡಿಕೆಯಲಿ ಹೊಯ್ವೆವು ನಕುಲ ಜಾತಿಯನು ।†
ನಾವು ನಿಮ್ಮಯ ಹೃದಯಸರಸಿಯ
ಜೀವಮತ್ಸ್ಯಕೆ ಗಾಣವಿಕ್ಕುವ
ಧೀವರರು ನೋಡೆನುತ [2]ಪಾರ್ಥನನೆಚ್ಚನಾ ಕರ್ಣ[2] ॥; ೨೯

ಜೇಱೆ ಕೆಲವಂಬುಗಳು ಗಡ [3]ಪ್ರೈ
ದೋ[3]ಱಿದವು ನಿನಗೆಂಬರವ ನೀ
ತೋಱುಸಾ ನಿನಗಾಯ್ತು ಗಡ ಶಶಿಮೌಳಿಯುಪದೇಶ ।

---

[1] ಪಣ (ಷ.ತ).

* (ಕ.ಗ ಟ.ತ.ದ) ಪ್ರತಿಗಳಲ್ಲಿ ನಕ್ಷತ್ರ ಚಿಹ್ನವಿರುವ ಭಾಗವು ಬಿಟ್ಟುಹೋಗಿ ೨೮ ನೆಯ ಪದ್ಯದ ಪೂರ್ವಾರ್ಧವೂ ೨೯ ನೆಯ ಪದ್ಯದ ಉತ್ತರಾರ್ಧವೂ ಸೇರಿ ಒಂದು ಪದ್ಯವಾಗಿದೆ.

[2] ಕರ್ಣನನೆಚ್ಚನಾಪಾರ್ಥ (ತ.ದ.ಬ), ಪಾರ್ಥನನೆಚ್ಚು ಬೊಬ್ಬಿಱಿದ (ಟ).

† ಈ ಪದ್ಯವಾದಮೇಲೆ ಅರ್ಜುನನು ಮೂದಲಿಸಿದ ಇನ್ನೊಂದು ಪದ್ಯವಿದ್ದು ಬಿಟ್ಟುಹೋಗಿರಬಹುದೆಂಬ ಸಂದೇಹ ಬರುತ್ತದೆ.

[3] ಕ್ರೈಸಾ (ಟ.ದ).

ಹಾಱುಗಣೆಗಳ ಹರಹಿ ಹೆಮ್ಮೆಯ
ಬೀಱು ಚದುರಿಗತನವ ಮೆಱೆದರೆ
[1]ನೀ[1]ರನೆಂಬರೆ ನಿನ್ನನೆನುತೆಚ್ಚನು ಧನಂಜಯನ ॥ ೨೦

ವೊಲನ ಬೇಂಟೆಗೆ ತಿವಿದು ಹಾಸವ
ಕಳಚುವರೆ ಕೇಸರಿಯನಕಟಾ
ಕೊಳಚೆಯುದಕಕೆ ಕೊಂಬುದೇ ಹರುಗೋಲ ಬಾಡಗೆಯ ।
ಗಳಹತನವೇ ಹರನ ಬಾಣಾ
ವಳಿಗೆ ಗುಱಿಯೇ ನೀನೆನುತ ಕೈ
ಚಳಕದಲಿ ರಿಪುಶರವ ಖಂಡಿಸಿ ತುಳುಕಿದನು [2]ಪಾರ್ಥ[2] ॥ ೨೧

ಡೊಂಬಿಯೇಕೈ ಪಾರ್ಥ ಬಯಲಾ
ಡಂಬರವ ನಾವಱಿಯೆವೇ ತ್ರಿ
ಯಂಬಕಾಸ್ತ್ರದ ತೊಡಕವಲ್ಲಾ ನಿನ್ನ ವಿಕ್ರಮಕೆ ।
ಶಂಬರಾರಿಯ ಕಣೆಯವೊಲು ನಿ
ನ್ನಂಬು ಬಲ್ಲಿದವೆಂದು ಕೆಲದವ
ರೆಂಬರೈ ಹುಸಿಯಲ್ಲೆನುತ ರಿಪುಶರವ ಖಂಡಿಸಿದ ॥ ೨೨

ಲೇಸನಾಡುವೆ ಕರ್ಣ ನೀನೇ
ನೈಸುಖೂಳನೆ ನಿನ್ನವಂದಿಗ
ವೇಷವಧುಗಳ [3]ಗೆಲು[3]ವಡಿವು ಮದನಾಸ್ತ್ರವೇಕಲ್ಲ ।
ಈ ಶರಾವಳಿ ಕುಸುಮಮಯ ನೀ
[4]ನೈಕೆ[4] ವನಿತಾಮಯನು ಪುಷ್ಪಶ
ರಾಸನನು ತಾನೆನುತ ಕಣೆಗೆದಱಿದನು ಕಲಿ ಪಾರ್ಥ ॥ ೨೩

ಗಂಡುಗಲಿ ನೀ ಕಾಮನೈ ಕೈ
ಕೊಂಡೆವೈ ತಪ್ಪೇನು ನಾವೇ
ಖಂಡಪರಶುಗಳಾಗೆವೇ ಭವದೀಯ ವಿಗ್ರಹಕೆ ।
ಕಂಡೆ ನಿನ್ನನು ಸುಭಟವೇಷದ
ಭಂಡನೋ ಫಡ ಹೋಗೆನುತ ಪರಿ
ಮಂಡಳಿತಕೋದಂಡನೆಚ್ಚನು ಕರ್ಣನರ್ಜುನನ ॥ ೨೪

[1] ವೀ (ಗ), ಧೀ (ಟ). [2] ಕಣೆಯ (ಟ.ತ.ದ.ನ.ಬ). [3] ನುಗಿ (ಕ).
[4] ವೇಷ (ಟ.ತ.ನ.ಬ).

ನಿಮಿಷನಿಮಿಷಕೆ ಹೆಚ್ಚಿತಿಬ್ಬರ
ತಿಮಿರಮಯಘನರೋಷವಿಬ್ಬರ
ಸಮರಸಾಹಸಶೌರ್ಯವಿಬ್ಬರ ಕಣೆಯ ಕೈಚಳಕ ।
ಕ್ರಮವಿಧಾನವ್ಯಾಪ್ತಿಯಿಬ್ಬರ
ಗಮಕವಿಬ್ಬರ ಗಾಢವಿಬ್ಬರ
ಸಮತೆಯಿಬ್ಬರ ಗರ್ವವಿಬ್ಬರ ತೀವ್ರತರತೇಜ ॥ ೩೫

ಜನಪ ಕೇಳೈ ಬಳಿಕ ಕರ್ಣಾ
ರ್ಜುನರ ಸಮಸಂಗ್ರಾಮವನು ಗುರು
ತನುಜ ಕಂಡನು ಕೌರವೇಂದ್ರನ ಬಳಿಗೆ ನಡೆ[1]ತಂದು[1] ।
ತನತನಗೆ ತೊಲಗಿತು ಮಹೀಶರ
ಮೊನೆಯು ಸಮರಥರಾಜಿ ಗುರು ನಂ
ದನನಲಾ ಎನುತಿದಿರುವಂದನು ನಿನ್ನ ಮಗ ನಗುತ ॥ ೩೬

ಏನು ಬಂದಿರಿ ಕಾಳೆಗದ ಹದ
ನೇನು ಪಾಂಡವರಾಜತಿಮಿರಕೆ
ಭಾನುವಿನ ಭಾರಣೆಯ ಬಲುಹೇ [2]ನಿ[2]ಮ್ಮ ದಳಪತಿಯ ।
ಆನಲಳವೇ ಪಾರ್ಥನೀತನ
ನೇನು ಹದನೈ ರಾಜಕಾರ್ಯಸಿ
ಧಾನವೇನೆಂದರಸ ನುಡಿದನು ದ್ರೋಣನಂದನನ ॥ ೩೭

ಏನನೆಂಬೆನು ಜೀಯ ಕರ್ಣನ
ನಾನುವಡೆ ಫಲುಗುಣನ ಪಾಡೆ ಕೃ
ಶಾನುನೇತ್ರನೊ ಕೈಟಭಾರಿಯೊ ಕಮಲಸಂಭವನೊ ।
ಆ ನಿರೂಢಿಯ ದೊರೆಗಳಿವನ ಸ
ಮಾನರೇ ಗುಣದಲಿ ಸಮತ್ಸರ
ಮಾನಿಸನೆ ನಿನ್ನಾಣೆ ಭಾರದ್ವಾಜನಾಣೆಂದ ॥ ೩೮

ಹರಿ ಮಹೇಶ್ವರರಾಳುತನಕಿ
ಬ್ಬರಳು ಮಿಗಿಲರ್ಜುನನ ಬಲುಹೀ
ಧರೆಯಜಯಲೀ ಹೊತ್ತಿನಲಿ ನಿನ್ನಾತನಗ್ಗಳಿಕೆ ।

[1] ತರಲು (ತ.ದ.ನ). [2] ನ (ತ).

ಸರಿಗೆ [1]ಸಂದುದೆ[1] ಸಾಕು ತೂಗಿದ
ಡರಸ ರವೆ ಕುಂದದು ಪರಸ್ಪರ
ವರಸುಕಾರ್ಯದ ವಾಸಿ ಬಂದುದು ರಾಯ ಕೇಳೆಂದ ॥ ೩೯

ಒಮ್ಮೆ ಮುಱಿವುದು ವೈರಿದಳ ಮ
ತ್ತೊಮ್ಮೆ ಮುಱಿವುದು ನಮ್ಮದಳ ಬಳಿ
ಕೊಮ್ಮೆ ಮಕ್ಕಳತಂಡವವರಲಿ ನಮ್ಮ ಥಟ್ಟಿನಲಿ ।
ನಮ್ಮ ದೆಸೆ ಬಲುದೊರೆಗಳಳಿವಿನೊ
ಳೊಮ್ಮೆ ಹೋಯಿತು ಹೊತ್ತು ರಣದಲಿ
ನಮ್ಮ ವಿಳಸಕೆ ಮೇಲುವಾಸಿ ನೃಪಾಲ ಕೇಳೆಂದ ॥ ೪೦

ಸರಿಗಳೆವೆನೆರಡಂಕವನು ನಾ
ಕರಸಿ ಕೊಡುವೆನು ಧರ್ಮಜನನೆರ
ಡರಸುಗಳು ಸರಿಯಾಗಿ ಭೋಗಿಸುವುದು ಮಹೀತಳವ ।
ಅರಸ ಕರ್ಣನ ಕೆಡಿಸದಿರು ನಿ
ಷ್ಠುರದ ನುಡಿಯಿದು ಕೆಂಡದಲಿ ಕ
ರ್ಪುರವ ಹಾಯ್ಕದಿರೆಂದು ರಾಯನ ಗಲ್ಲವನು ಪಿಡಿದ ॥ ೪೧

ಆಗಲಿದು ತಪ್ಪೇನು ಸಂಪ್ರತಿ
ಯಾಗಬೇಡೆಂದೆನೆ ಮಹಾಹವ
ವೀಗ ಸರಿಬರಿಯಾಯ್ತು ಬಂದುದು ವಾಸಿಯೆಂದಿರಲೆ ।
ಈಗಲಭಿಮನ್ಯುವಿಗೆ ಲಕ್ಷಣ
ಹೋಗಲಾ ಸೈಂಧವಗೆ ದ್ರುಪದನ
ನೀಗಲದು ಸರಿಯಾಗಲೆಂದನು ಕೌರವರರಾಯ ॥ ೪೨

ಗುರುನದೀಸುತರಳಿವುಭಯರಾ
ಯರಿಗೆ ಸರಿ ದುಶ್ಶಾಸನನ ನೆ
ತ್ತ[2]ರದಿ[2] ಪಾನಕ್ರೀಡನಾ ಸೌಭಾಗ್ಯಸಂಪದಕೆ ।
ಸರಿಯದಾವದು ಕರ್ಣತನಯನ
ಮರಣಕಾವುದು ಸರಿಸ ಭೀಮನ
ಕರುಳ[3]ಲೆನ್ನಯ ಕರುಳು ತೊಡಕಲು[3] ಮೇಲೆ ಸಂಧಾನ ॥ ೪೩

---

[1] ಬಂದುದು (ಟ.ದ.ಬ). [2] ರಿನ (ದ). [3] ತನ್ನಯ ಕುರುಳು ಮುಡಿದಡೆ (ಕ.ಖ.ಟ.ಧ).

ಈ ದಿವಿಜರೀ ಸೇನೆಯೀ ಕ
ರ್ಣಾದಿಸುಭಟರು ನಾವು ನೀವೀ
ಮೇದಿನೀಶ್ವರರಖಿಳನಾಯಕರವರ ಘಟ್ಟಿನಲಿ ।
ಈ ದುರಾಗ್ರಹವುಚಿತವಲ್ಲೆನೆ
ಸೋದರನ ತನುಗೆಡಹಿ ರಕುತವ
ಸೇದಿ ಸೊಕ್ಕಿದ ಭೀಮನೊಡನೆಮಗೆಂತು ಸಂಧಾನ ॥ ೪೪

ನಿಱುಗರುಳ[1]ನುಗಿದುಗಿ[1]ದು ನೆತ್ತರಿ
ನೊಱವಿನಲಿ ಮೊಗೆಮೊಗೆದು ಬಾಯೊಳ
ಗೆಱೆದು ಸವಿನೋಡೆಂದು ನಿಮಗೆಲ್ಲರಿಗೆ ಕೈನೀಡಿ ।
ಇಱಿದಿಱಿದು ಮೂದಲಿಸಿ ಮಿಗೆ ಚ
ಪ್ಪಱಿದು ಚಪ್ಪಱಿದಾಡಿ ರಕುತವ
ಸುಱಿದು ಸೊಕ್ಕಿದ ಭೀಮನೊಡನೆಮಗೆಂತು ಸಂಧಾನ ॥ ೪೫

ಆದಲೇಕಿವನಿನ್ನು ಹಿಂದಣ
ಕೇಡನೆಣಿಸಿದಡೇನು ಫಲ ತಾ
ಗೂಡಿ ಹಲಬರು ಜೀವಪುರುಷರು ಹೆಂಗಳಾದೆವಲೆ ।
ನೋಡದಿರು ಹಿಂದಾದ ಭಂಗವ
ನಾಡದಿರು ಬಹುಬಂಧುವರ್ಗದ
ಕೇಡದೆಲ್ಲವನೊಬ್ಬ ಕರ್ಣನ ನೋಡಿ ಮಱೆಯೆಂದ ॥ ೪೬

ಅನುಜರಳಿದುದು ನೂಱು ಬವರದಿ
ತನುಜರಳಿದುದು ನೂಱು ಬಾಂಧವ
[2]ಜನರು ಸಂಖ್ಯಾರಹಿತ ಬಿದ್ದೇನವದಿರಿದ್ದೇನು[2] ।
ಎನಗೆ ಕರ್ಣನ ಜೀವವೇ ಜೀ
ವನವಿದೆಂಬೆಯಲಾ ಸಹೋದರ
ತನುಜರೆಲ್ಲರನೊಬ್ಬ ಕರ್ಣನ ನೋಡಿ ಮಱೆಯೆಂದ ॥ ೪೭

ರಣದೊಳಳಿದೀ ಸಕಲ ಬಾಂಧವ
ಗಣವಿದೆಲ್ಲವನೊಬ್ಬ ಕರ್ಣನ
ಗುಣವ ಕಂಡೇ ಮಱೆದೆಯಕಟೀ ಕರ್ಣನಳಿವಿನಲಿ ।

---

[1] ಬಿಗಿಬಿಗಿ (ಟ.ಪ.ಬ). ಬಗಿಬಗಿ (ಘ.ತ). [2] ಜನವಸಂಖ್ಯಾತ ಕ್ಷಿತೀಶ್ವರರಳಿದರಿನ್ನೇನು (ಕ), ಜನವಸಂಖ್ಯಾತೀತಕಳಿದುದು ಹೇಳಲೇನದನು (ಘ), ಜನವಸಂಖ್ಯಾರಹಿತವಿದ್ದೇನೀಗಫಲವಿನ್ನು (ಬ), ಜನವಸಂಖ್ಯಾರಹಿತ ಬಿದ್ದುದು ಬೀದಿವರಿವರಿದು (ಟ.ದ.ಬ).

ಎಣೆ[1]ಯಗಲಿ[1] ನೀ ಬದುಕುವ್ಯೆ ಧಾ
ರುಣಿಯು ಪತಿಯೇ ಪಾರ್ಥವಹ್ನಿಯು
ನಣೆದು ಕರ್ಣನನುಳುಹಿಕೊಳು ಸಂಪ್ರತಿಯ ಮಾಡೆಂದ ॥ ೪೮

ಗುರುತನುಜ ನೀವಾಡಿದುದ ಧಿ
ಕ್ಕರಿಸುವವರಾವಲ್ಲ ಕರ್ಣನ
ಹಿರಿಯ ಮಗನನು ಪಾರ್ಥನುದರದೊಳಾ ಸಹೋದರನ ।
ದುರುಳ ಭೀಮನ [2]ಬಸಿರ ಬಗಿದು[2]
ತ್ತರಿಸುವೆನು ಭಾಷೆಯನು ನೀವ್ ಹಿರಿ
ಯರಸರಲಿ ಯಮಳರಲಿ ಸಂಧಿಯ ಮಾಡಿಕೊಡಿಯೆಂದ ॥ ೪೯

ಇಪ್ಪತ್ತೆರಡನೆಯ ಸಂಧಿ ಮುಗಿದುದು.

---

[1] ಯುಗಟಿ (ಕ). [2] ರುಳನುಗಿ೧ (ಕ).

ಇಪ್ಪತ್ತ್ಮೂರನೆಯ ಸಂಧಿ

ಸೂಚನೆ ॥ ಶಿವಶಿವಿದು ತಾರಕನ ಗುಹನಾ
ಹವವೊ ಮೇಣ್ ರಾವಣನ ರಾಮನ
ಬವರವೋ ಹೊಸತಾಯ್ತು ಕರ್ಣಾರ್ಜುನರ ಸಂಗ್ರಾಮ ॥

ಕೇಳು ಧೃತರಾಷ್ಟ್ರಾವನಿಪ ಭೂ
ಪಾಲ ಮೊಗದಿರುಹಿದೊಡೆ ಬಳಿಕೀ
ಕೋಲಗುರುವಿನ ಸೂನು ಮುರಿದನು ಬಿಗಿದ ದುಗುಡದಲಿ ।
ಕೋಲ ಹೊದೆಯೆಂಬತ್ತು ಬಂಡಿಯ
ಹೇಳಿದನು ಕರ್ಣಂಗೆ ಕುರುಭೂ
ಪಾಲ ತಾನೊತ್ತಾಗಿ ನಿಂದನು ಸಕಲದಳಸಹಿತ ॥ ೧

ಅರಸ ಹೇಳುವುದೇನು ಬಳಿಕಿ
ಬ್ಬರ ಮಹಾಕೋದಂಡಚಂಡ
ಸ್ಫುರಿತವೌರ್ವೀನಾದ ಮುಸುಕಿತು ಸಕಲ ದಿಗುತಟವ ।
ಸ್ಫುರದಮಂದೋದ್ಭಿನ್ನ ಭಾಸ್ವ
ತ್ಕಿರಣಗರ್ಭಕಳಾಪಭದ್ರಾ
ಕರಣಕಳಿತಧ್ವಾಂತಬಿಂಬಕಳಂಬಸಂತತಿಯ ॥ ೨

ಗಬ್ಬರಿಸಿದುದು ಗಗನವನು ಬಲು
ಬೊಬ್ಬೆ ಬಹುವಿಧವಾದ್ಯರಭಸದ
ನಿಬ್ಬರದ ನಿಡುಸೂಳು ಸೂಳೈಸಿದುದು ದಿಕ್ತಟವ ।
ಉಬ್ಬುಗೆಡದಿರಿ ಕರ್ಣಪಾರ್ಥ [1]ಸ[1]
ಗರ್ಭರಹಿರೋ ಪೂತು ಮಝು ಎಂ
ಬಬ್ಬರಣೆ ಸುರರೂಢಿಯಲಿ ಝೊಂಪಿಸಿತು ಮೂಜಗವ ॥ ೩

ಅಡಿಗಡಿಗೆ ಹೊರೆ ಹೆಚ್ಚುತಿಬ್ಬರು
ಹಿಡಿದ ಖಾತಿ ದಿಗಂತ[2]ಕೋಶದ[2]
ತಡಿಯ ಬಿಲುಟಂಕಾರ ಮುಸುಕಿತು ಲೋಕ ಪದಿನಾಲ್ಕ ।

---

[1] ರು (ಕ). [2] ಘೋಷದ (ಕ). ಶೋಕದ (ತ,ಪ).

ಜಡಿದ ಶೌರ್ಯದ ಮೈಗಳುಬ್ಬಿನ
ಗುಡಿಯಿಡಿದ ರೋಮಾಳಿ ರಿಪುಗಳ
ಕುಡಿದ ಕಂಗಳ ಸುಭಟರೆಚ್ಚಾಡಿದರು ಚಳಕದಲಿ ॥ ೪

ಬಿರಿದುವಿಬ್ಬರ ಜೋಡು ಮೈಯು
ಬ್ಬರಿಸೆ ಹಳಹಳಿಕೆಯ ಸುತೇಜವ
ಸುರಿದುವಿಬ್ಬರ ಮೋಱೆ ಗಂಟಿಕ್ಕಿದುವು ಹುಬ್ಬುಗಳು ।
ಅರಳ್ವ ನಿಡುಗಂಗಳ ನಿಹಾರದ
ಕರದ ಚಳಕದ ಕಾದ ನಾಸಿಕ
ದೆರಲ ಕೆತ್ತುವ ಮೀಸೆಗಳ ಭಟರೆಚ್ಚರುರವಣಿಸಿ ॥ * ೫

ವಹಿಲವನು [1]ವೇಢೈಸು[1]ವಡೆ ನರ
ರಹಿಪತಿಗಳೇ ಭಟರ ಪಡಿಯಿಡ
ಬಹುದೆ ಪಲ್ಲವ ಪಂಡಿತರ ಸತ್ಯಾಣಾಸಿಗಳ ಗತಿಯ ।
[2]ಅ[2]ಹಿಯ [3]ಶ[3]ರಮಾನದ ಸುತಾಳ
ಗ್ರಹಮುಖದ [4]ಸರ[4]ವಾದಿಗ[5]ಳು[5] ಸರ
ವಹಿಯ ನಾಯಕವಾಡಿಗಳೆ ನರನಾಥ ಕೇಳೆಂದ ॥ ೬

ಕಣೆ ಕಣೆಯನಿಟ್ಟೊರಸಿದುವು [6]ಕೂ[6]
ರ್ಗಣೆಗೆ ಮಾರ್ಗಣೆ ಚಾಚಿದುವು ಕಣೆ
ಕಣೆಗೆ ಮಲೆತುವು ತಱುಬಿದವು ಕಣೆ ಕಣೆಯ ಪಡಿಮುಖವ ।
ಕಣೆ ಕಣೆಗೆ ತೆರಳಿದವು ಕಣೆ ಮಾ
ರ್ಗಣೆಯನಣೆದವು ಹಿಂದುಗಣೆ ಸಂ
ದಣಿಗಣೆಯಲಕ್ಕಾಡಿದವು ರಣಧೀರರೆಸುಗೆಗಳು ॥ ೭

ಎಸುವ ಗತಿಗೊಮ್ಮೊಮ್ಮೆ ಜಗ ಗ
ರ್ಜಿಸಿದುದಾಯೆಂದೆರಡು ಥಟ್ಟಿನೊ
ಳೊಸಗೆಯಲಿ ಮೊಳಗಿದವು [7]ಕೋ[7]ಟಿನ ಕೋಟಿ ನಿಸ್ಸಾಳ ।

* ಇಲ್ಲಿಂದ ಮುಂದಕ್ಕೆ ಪದ್ಯಗಳ ಅನುಕ್ರಮವು ಬೇರೆಬೇರೆ ಪ್ರತಿಗಳಲ್ಲಿ ಬೇರೆ ಬೇರೆ ರೀತಿಯಲ್ಲಿದೆ.

[1] ವಾಡಾಯಿಸು (ಕ), ಪ್ರೋಢೈಸು (ಕ), ಪಾಡೆನಿಸು (ದ) ಪೊಡ್ಡೈಸು (ನ.ಬ). [2] ರ (ಕ.ತ). [3] ಸ (ತ.ಫ). [4] ಶರ (ತ). [5] ಳ (ತ). [6] ಮಾ (ಗ.ತ). [7] ತೋ (ತ.ನ.ಬ).

ನಿಶಿತ ಶರವೋ ಪ್ರಳಯ ಸೂರ್ಯರ
ಮಸಕವೋ ಹರನೇತ್ರವಹ್ನಿಯ
ಹಸರವೋ ಹೆಸರಿಡುವನಾವನು ಭೂಪ ಕೇಳೆಂದ ॥ ೮

ಇವರ ಬಿಲುದನಿ ತುರಗ ಹೇಷಾ
ರವದ ಘಲ್ಲಣಿ ಸೂತರಬ್ಬರ
ವಿವಿಧವಾದ್ಯನಿನಾದ ದಳವೆರಡರ ಮಹಾರಭಸ ।
ಅವಿರಳಾಸ್ತ್ರಧ್ವಾನವಭ್ರದ
ದಿವಿಜನಿಕರದ ಸಾಧುವಾದದಿ
ಭುವನ ಶಬ್ದಬ್ರಹ್ಮಮಯವಾಯ್ತೊಂದು ನಿಮಿಷದಲಿ ॥ ೯

ಮುಂಚುವುದು ಕೈ ಮನವ ಕೈಮೆಯ
ಸಂಚವನು ಮನ ಮುಂಚುವುದು ಮಿಗೆ
ವಂಚಿಸುವುದಂಬುಗಳ ಗತಿ ಕೈಮನದ ಕಲುಹೆಗಳ ।
[1]ಮುಂ[1]ಚಿದಂಬುಗಳಾಱನೇಳನು
[2]ಹಿಂ[2]ಚಿದವು ಹೊಂಬರಹದಂಬಿನ
ಮಿಂಚುಗಳಲೆವೆ ಹಳಚಿದವು ಹರಿಹರ ಪುರಂದರರ ॥ ೧೦

ಮನದೊಳಗೆ ಮೊಗೆದೀಂಟಿದರು ಕ
ಣ್ಣಿನಲಿ ಕಾಱಿದರಡಿಗಡಿಗೆ ಕಿವಿ
[3]ಗೊನೆಗಳಲಿ[3] ಕುಡಿಕುಡಿದುಗುಳಿದರು ಮೂದಲೆಯ ಮಾತುಗಳ ।
ಮನದಲಂಕುರವಾಗಿ ಕಡೆಗ
ಣ್ಣಿನಲಿ ಪಲ್ಲವವಾಗಿ ರಣವಾ
ತಿನಲಿ ಹೂತುದು ಕರ್ಣಪಾರ್ಥರ ರೋಷಮಯ[4]ಚೂತ[4] ॥ ೧೧

ಅರಸ ಕೇಳೈ ಬೊಬ್ಬಿಱಿದು ಚ
ಪ್ಪರಿಸಿ ತೇಜಿಯ ನೂಕಿದನು ಮುರ
ಹರನು ಸೂಠಾಸೂಠಿಯಲಿ ಕೈದೋಱಿದನು ಪಾರ್ಥ ।
ಖುರಪುಟದಲಾಕಾಶವನು ಕ
ತ್ತರಿಸುವವೊಲು[5]ಬ್ಬರದಲತಿ[5]ನಿ
ಬ್ಬರದ ಗತಿಯಲಿ ನಿಗುರಿದವು ರಥವಾಜಿಗಳು ನರನ ॥ ೧೨

---

[1] ಹಿಂ (ಗ.ಟ.ತ.ದ.ನ.ಪ). [2] ಮುಂ (ಗ.ಟ.ತ,ದ.ನ.ಪ). [3] ಕರ್ಣದಲಿ (ಕ). [4] ಬೀಜ (ಟ.ದ), ಧೂಜ (ಬ). [5] ಪ್ಪಾರದಲಿ (ಘ.ಟ.ಬ).

ಕುಬುಬೆನುತ ಬೊಬ್ಬಿಱಿದನುಗ್ರ
ಪ್ರಬಲವಾನರರಾಜನಿದಿರಲಿ
ಕಬಳಿಸಿದವರ್ಜುನನ ಶರ [1]ಕರ್ಣನ[1] ಪತಾಕಿನಿಯ ।
ಶಬರರೂಪ ವರಾಹದೈತ್ಯನ
ನಿಬಿಡದರ್ಪವ [2]ಮುಱಿವ[2]ವೊಲು ವರ
ವಿಬುಧತತಿ ಕೊಂಡಾಡೆ ಕಳೆಯೇಱಿದನು ಕಲಿಪಾರ್ಥ ॥ ೧೩

ಏನ ಹೇಳುವೆನರಸ ಕೇಳ್ ನಿ
ನ್ನಾನೆಯಗ್ಗಳಿಕೆಯನು ಮುಂದಣ
ದಾನವಾಂತಕನುರವನೆಚ್ಚನು ಜೋಡನೊಡೆಬಗಿದು ।
ಆ ನಿರೂಢಿಯ ಹಯದ ಘಾಯವ
ನೇನನೆಂಬೆನು ಜೀಯ [3]ಸಿಂಧದ[3]
ವಾನರನ ವೇದನೆಯ ಗಣನೆಯನಱಿಯೆ ನಾನೆಂದ ॥ ೧೪

ಬರಸೆಳೆದ ಬಿಲುಗೋಲಿನಲಿ ನಿ
ಷ್ಠುರದ ಶರಸಂಧಾನದಲಿ ರಥ
ತುರಗವನು ಕೆಡೆಯೆಚ್ಚನರ್ಜುನನಸಮ[4]ಬಾಣದಲಿ[4] ।
ಸುರಪನಾಯುಧಹತಿಗೆ ಕುಲಗಿರಿ
ಯುಳುಕುವಂದದಿನೊಂದು ಯೋಜನ
ವರೆಗೆ ತಿಱ್ರನೆ ತಿರುಗಿ ತೊಲಗಿತು ಕರ್ಣರಥವಂದು ॥ ೧೫

ಔಕಿ ವಾಘೆಯ ಕೊಂಡು ಶಲ್ಯನು
ನೂಕಿದನು ತೇಜಿಯನು ಸಮರ
ವ್ಯಾಕುಳದಿನಾ ಕರ್ಣ ಸೆಳೆದನು ದಿವ್ಯಮಾರ್ಗಣವ ।
ನಾಕನಿಳಯರು ನಡು[5]ಗೆ ಶರಕ
ಱ್ಕರುಷಣಪ್ರೌಢಿಯಲಿ ನಿಂ
ದಾ[5] ಕಿರೀಟಿಯ ರಥವನೆಚ್ಚನು ಭಾನುಸುತ ಮುಳಿದು ॥ ೧೬

ಅರಿಯ ಶರಹತಿ[6]ಗಳುಕಿ ತಿಱ್ರನೆ
ತಿರುಗಿ ಪಾರ್ಥನ ತೇರು ಬಿಲ್ಲಂ
ತರಕೆ ಹಿಂಲಕೆ ತೊಲಗೆ ಕಂಡು ಮುರಾರಿ[6] ಬೆಱಗಾದ ।

[1] ಕೌರವ (ಕ.ಚ.ಟ). [2] ಜಡಿವ (ಟ), ಜಱೆವ (ತ.ನ.ಪ.ಬ). [3] ಬಿಂಕದ (ಟ.ತ.ದ.ನ.ಬ). [4] ಸಮರದಲಿ (ತ.ದ.ನ.ಪ.ಬ). [5] ಗಿದರು ಭೂಲೋಕ ಕರ್ಣ ಪ್ರೌಢಿ ಮಿಗುತಿರಲಾ (ಕ), ಗಲಸುರಾನೀಕ ನಲಿಯಲು ತರಹರಿಸಿ ನಿಂದಾ (ಟ.ದ). [6] ಗರ್ಜುನನ ರಥ ತಿರುಗಿ ಹಿಂದಕ್ಕೊಂದು ಬಿಲ್ಲಂತರಕೆ ತೊಲಗಲು ನೋಡಿ ಕಂಡ ಸುರಾರಿ (ಕ).

ಅರರೆ ಧಣುಧಣು ಪೂತು ಪಾಯಿಕು
ಸರಿಯು ಕಾಣೆನು ಭಾಷೆನುತ ವಿ
ಸ್ತರಿಸಿ ದಾನವವೈರಿ ಕರ್ಣನ ಹಿರಿದು ಹೊಗಳಿದನು ॥ ೧೭

ನಲವು ನಿಲೆ ಫಲುಗುಣನು ಹೊಡಿದ
ಹಿಳುಕನೀಡಾಡಿದನು [1]ಲೋಕ[1]ದ
ಬಳಿಕೆ ಕೌತುಕವೆನುತ ತೂಗಿದನಮಳ [2]ಮಕುಟವನು[2] ।
[3]ಒಲವರವಲಾ ಮುರಹರಂಗೀ
ಬಲದೊಳಗೆ ಸಾಹಸವ ಸುಡಸು
ಡಲೆನುತ ದುಗುಡವ ಹಿಡಿದು [3]ಫಲುಗುಣನಿಳುಹಿದನು ಧನುವ॥ ೧೮

ಏನು ಫಲುಗುಣ ಧರ್ಮಜನ ಮದ
ದಾನೆ ದುಗುಡವಿದೇನು ಹೇಳೈ
ನೀನು ಧನುವನು ತೊಱೆದ ಕಾರಣವೇನು ಪೊಸತೀಗ ।
ಏನು ಹದ ಹೇಳೆನಲು ಕೇಳೆಲೆ
ದಾನವಾಂತಕ ನುಡಿಯಲಾವುದು
ಹಾನಿಯೆಮಗಿಲ್ಲೆನುತ ಮೇಗರೆನುಡಿದನಾ ಪಾರ್ಥ ॥ ೧೯

ಹೇಳು ಹೇಳೆನ್ನಾಣೆ [4]ಚಿತ್ತದೊ
ಳಾಳುವುದ[4] ಮಱೆಮಾಡದಿರು [5]ನಿಜ[5]
ಲೋಲ ಧರ್ಮಜನಾಣೆ ನಿನಗೆನೆ ಪಾರ್ಥ ನಸುನಗುತ ।
ಕಾಲಗುಣವೆಂದಱಿಯೆ ಮೇಣ್ ತ
ನ್ನಾಳುತನ ಪುಸಿಯಾಯ್ತು ರಿಪುಭಟ
ನಾಳುತನ ದಿಟವಾಯ್ತು ಕೌತುಕವೆಂದನಾ ಪಾರ್ಥ ॥ ೨೦

ಒಂದು ಯೋಜನವರೆಗೆ ತಿರುಗಿತು
ಹಿಂದಕಹಿತನ ತೇರು ತಾನೆಸ
ಲೊಂದು ಬಿಲ್ಲಂತರಕೆ ತೊಲಗಿತು ನಮ್ಮ ರಥವಿಂದು ।
ಇಂದು ಕರ್ಣನ ಸಾಹಸಕೆ ಮನ
ಸಂದು ಪತಿಕರಿಸಿದಿರಿ ಕೌತುಕ
ವೆಂದು ಕಾಲವ ಬೈದೆನೆಂದನು ಪಾರ್ಥನಾ ಹರಿಗೆ ॥ ೨೧

---

[1] ಕಾಲ (ಗ.ಟ.ದ.ನ). [2] ಮಣಿಶಿರವ (ಕ.ಚ.ಟ). [3] ಒಲವರವೊ ಮೋಹರವೊ ವಾಹಿಗಳೊಳಗೆ ಸಾಹಸವಿಲ್ಲೆನುತ ಮನದೊಳಗೆ ದುಗುಡವ ಹಿಡಿದು (ಟ.ದ), ಒಲವರವು ಮೋಹನವಲಾ ಜಗದೊಳಗೆ ಸಾಹಸವಹುದೆನುತ ಮನದೊಳಗೆ ದುಗುಡವ ಹಿಡಿದು (ಚ.ತ). [4] ಚಿತ್ತಕೆ ತಾಳಿದುದ (ಕ). [5] ಜಯ (ಕ.ಗ.ದ.ನ).

ಆಳುತನದಲಿ ವೀರ ಕರ್ಣನ
ಹೋಲುವರ ನಾ ಕಾಣೆನೈ ಸುರ
ಪಾಲಕರು ತಾವಾನಬಹುದೇ ಕರ್ಣನುರವಣೆಯ |
[1]ಕೋಲು[1] ಯೋಜನವರೆಗೆ ತೊಲಗಿಸಿ
ಜಾಳಿಸಿತ ನೀ ನುಡಿವೆ ನಿಜ ಬಿ
ಲ್ಲಾಳತನವನು ನಿನ್ನ ಮನದಲಿ ತಿಳಿದು ನೋಡೆಂದ ॥ ೨೨

ಬಸುಱೊಳಗೆ ಬ್ರಹ್ಮಾಂಡಕೋಟಿಯ
ಮುಸುಕಿಕೊಂಡಿಹ ನಾ ಸಹಿತ ಮೇ
ಲೆಸೆವ ಸಿಂಧದ ಹನುಮಸಹಿತೀ ದಿವ್ಯಹಯಸಹಿತ |
ಎಸುಗೆಯಲಿ ತೊಲಗಿ[2]ಸುವ ಕರ್ಣನ
ಅಸಮ ಸಾಹಸ ಪಿರಿದೊ ಹುಲುರಥ
ದೆಸುಗೆ ನಿನ್ನಗ್ಗಳಿಕೆ[2] ಪಿರಿದೋ ಪಾರ್ಥ ಹೇಳೆಂದ ॥ ೨೩

ಎನಲು ತಳವೆಳಗಾಗಿ ಫಲುಗುಣ
ಧನುವ ಕೊಂಡನು ದನುಜವೈರಿಗೆ
ಮನದ ಗರ್ವವನುಸುರಲಱಿಯದೆ ಬಾಗಿದನು ಶಿರವ |
ಮೊನೆಯಲಗಿನಂಬಿನಲಿ ಕರ್ಣನ
ಧನುವನಿಕ್ಕಡಿಗಳೆದು ಫಲುಗುಣ
ನನವರತ ಬಹುಸತ್ವದಲಿ ಮತ್ಸರಿಸಿ ಕಾದಿದನು ॥ ೨೪

ಎಚ್ಚನೀತನ ಸಾರಥಿಯ ಮಗು
ಳೆಚ್ಚನೀತನ ರಥವ ವಾಜಿಯ
ನೆಚ್ಚನೀತನ ಧನುವನೀತನ ಸಿಂಧ ಸೀಗುರಿಯ |
ಎಚ್ಚನೀತನ ನಿಶಿತಶಸ್ತ್ರವ
ಕೊಚ್ಚಿದನು ಮಗುಳೆಚ್ಚು ಪುನರಪಿ
ಯೆಚ್ಚು ಕರ್ಣನ ಹೊಳ್ಳುಗಳೆದನು ಪಾರ್ಥ ನಿಮಿಷದಲಿ ॥ ೨೫

ಬೊಬ್ಬಿಱಿದುದಾ ಸೇನೆ [3]ಸೋಲದ[3]
ಮಬ್ಬು ಮುಸುಕಿದುದೀ ಬಲವ[4]ನೀ
ಯು[4]ಬ್ಬೆಯನು [5]ಸೈರಿಸುತ[5] ಸಾಹಸಮಲ್ಲ ತನಿಗೆದಱಿ |

---

[1] ಪೇಳು (ಕ). [2] ಸಿದವನ ಸಾಹಸ ಪಿರಿದೊ ಹುಲುರಥವ ತೊಲಗಿಸಿದವನ ಸಾಹಸ (ತ.ದ.ಪ). [3] ಫಳಿಗೆಗೆ (ಕ). [4] ಬಲದು (ಕ.ಗ.ಚ.ಟ.ದ). [5] ನಿಲಿಸುತ್ತ (ಕ.ಚ.ಟ.ದ).

ಇಬ್ಬರಿಗೆ ಘಡ ಹುಬ್ಬನಿಕ್ಕುವ
ಳೊಬ್ಬಳೇ ಜಯಲಕ್ಷ್ಮಿ ಬೊಡ್ಡಿಯು
ಕೊಬ್ಬ ನಿಲಿಸುವೆನೆನುತ ಖತಿಯಲಿ ಮಸಗಿದನು ಕರ್ಣ ॥ ೨೬

ಹನುಮನನು ಮತ್ತೊಮ್ಮೆ ಪುನರಪಿ
ದನುಜರಿಪುವನು ಮತ್ತೆ ಹಯವನು
ಧನುವನರ್ಜುನನಂಬುಗಳನಾ ಛತ್ರ ಚಾಮರವ ।
ಮೊನೆಗಣೆಯಲೇ ಮುಸುಕಿದನು ಮು
ಮ್ಮೊನೆಯ ಬೋಳೆಯ ತೊಡಚಿ ಕೌರವ
ಜನಪನಾವೆಡೆ ನೋಡಹೇಳೆನುತುಬ್ಬಿದನು ಕರ್ಣ ॥ ೨೭

ಮೊದಲಲಾ ಭೀಷ್ಮನ ಶರಾಘಾ
ತದಲಿ ನೊಂದೆನು ಬಳಿಕ ಕರ್ಣನ
ಕದನದಲಿ ತಪ್ಪಲ್ಲತಪ್ಪಲ್ಲೆನುತ ಮುರವೈರಿ ।
ಗದಗದಿಸುತಶ್ವವನು ಬೋಳೈ
ಸಿದನು ಹನುಮನ ನೋಡಿ ತಲೆದೂ
ಗಿದನು ಮಂದಸ್ಮಿತಮಧುರಮುಖಕಮಳನೊಲವಿನಲಿ ॥ ೨೮

ಶರಹತಿಯಲುಱೆ ನೊಂದು ಧೂಪಿಸಿ
ತರಹರಿಸುವಶ್ವಾಳಿ ಕೃಷ್ಣನ
ಕರುಣವಚನಾಮೃತರಸದಿನಾಪ್ಯಾಯನಂಬಡೆದು ।
ಖುರದಲವನಿಯ ಪೊಯ್ದು ಲಳಿ ಮಿಗ
ಲುರವಣಿಸಿದವು ಹನುಮನಂತಃ
ಕರಣ ಹದುಳಿಸಿ ಹಿಗ್ಗಿದನು ನರನಾಥ ಕೇಳೆಂದ ॥ ೨೯

ಬಳಿಕ ಹೇಳುವುದೇನು ಪಾರ್ಥನ
ಮುಳಿಸಿನಲಿ ಕಾಲಾಗ್ನಿ ಜಿಹ್ವಾ
ವಳಿಯ ಲಳಿಯಲಿ ಕುಪಿತ ಕಾಳೋರಗನ ವದನದಲಿ ।
ಸುಳಿವವನ ಸಾಹಸವನಾತನ
ಬಲುಹನಾತನ ಜಯವನಾತನ
ನಿಲವ ಕಂಡವರಾರು ಸುರ ನರ ನಾಗಲೋಕದಲಿ ॥ ೩೦

ರಾಯ ಕೇಳಭಿಮಂತ್ರಿಸಿದನಾ
ಗ್ನೇಯವನು ಹೂಡಿದನು ಸುರಕುಲ
ಬಾಯಬಿಡಲಂಬುಗಿದು ಹಾಯ್ದುದು ಬಿಲುದಿರುವನೊದೆದು ।

ವಾಯು ಪಡಿಬಲವಾಗೆ ಕಿಡಿಗಳ
ಬಾಯಿಧಾರೆಯ ಹೊದಱ ಕಬ್ಬೊಗೆ
[1]ಲಾಯದಲಿ ಲವಣಿಸುವ ದಳ್ಳುರಿದಿರುಳ[1] ಚೂಣಿಯಲಿ ॥ ೩೧

ಅಹಹ ಬೆಂದುದು ಲೋಕವಿನ್ನಾ
ರಹಿಮುಖವ ಚುಂಬಿಸುವರೋ ವಿ
ಗ್ರಹದ ಫಲನಿಗ್ರಹವಲಾ ಶಿವ ಎನುತ ಸುರರುಲಿಯೆ ।
ವಹಿಲ ಮಿಗೆ ವರುಣಾಸ್ತ್ರದಲಿ ಹುತ
ವಹನ ಬಿಂಕವ ಬಿಡಿಸಿದನು ಜಯ
ವಹುದೆ ಪರರಿಗೆ ಪಾರ್ಥನಿರೆ ಜನನಾಥ ಕೇಳೆಂದ ॥ ೩೨

ಸರಳ ಝಳ ಝಾಡಿಸಿತು ಕಬ್ಬೊಗೆ
ಪರೆದುದಲ್ಲಿಯದಲ್ಲಿ ತಂಪಿನ
ಸರಳ ಮೊನೆಯಲಿ [2]ಸಿಂ[2]ಪಿಸುವ ತುಂತುಱ ತುಷಾರದಲಿ ।
ಅರಿಬಲದ ಬೊಬ್ಬಾಟದಲಿ ಧರೆ
ಬಿರಿಯಲರ್ಜುನ ಹೂಡಿದನು ಹೂಂ
ಕರಣಮಾನಿತಮಂತ್ರಮಂಡಿತಮೇಘಮಾರ್ಗಣವ ॥ ೩೩

ಹೊಗೆಯ ಹೊರಳಿಯು ವಿವಿಧ ವರ್ಣದ
ಮುಗಿಲ ಪಾಳೆಯವೆತ್ತಿ ಬಿಟ್ಟುದು
ಗಗನದಗಲದಲೌಕಿದವು ದೆಸೆದೆಸೆಯ ಮೂಲೆಗಳ ।
ಹಗಲುಗತ್ತಲೆಕಟ್ಟಿತೇನಿದು
ಯುಗದ ಕಡೆಯೋ ಶಿವಶಿವಾ ಎನೆ
ಜಗಜಗತ್ಪ್ರಾಣಾಸ್ತ್ರವನು ಹೂಡಿದನು ಕಲಿ ಕರ್ಣ ॥ ೩೪

[3]ಅಟ್ಟಿ[3] ಹೊಯ್ದುದು ನಿಱಿಮುಗಿಲನಱೆ
ಯಟ್ಟಿ ಕೊಡಹಿತು ತಳಿತ ಮೇಘದ
ಘಟ್ಟು ಮುಱಿದುದು ಬೀಸಿದವು ಬಿಱುಗಾಳಿ ಬಲ ಬೆದಱೆ ।
ಇಟ್ಟಣಿಸಿ ಕೈಯೊಡನೆ ಕೊಂಡನು
ಬೆಟ್ಟವುರುಳುವ ಬಾಣವನು ಜಗ
ಜಟ್ಟಿ ಕೌರವರಾಯ ಬಾಳೆನುತೆಚ್ಚ[4]ನಾ ಕರ್ಣ[4] ॥ ೩೫

---

[1] ರಾಯದಳದಲಿ ಮೋಹಿಸಿತು ದಳ್ಳುರಿಯು (ಟ.ದ). [2] ತಂ (ಕ).
[3] ಬಿಟ್ಟು (ಕ). [4] ನರ್ಜುನನ (ಕ).

ಗಿರಿಯ ಡೆಂಕಣಿಜಂತ್ರವನು ತರ
ಹರಿಸುವವರಾರರಸ [1]ಧಾವಣಿ[1]
ಗಿರಿಯ ಧಾಳಿಗೆ ಧಾತುಗೆಟ್ಟುದು ಪಾಂಡುಸುತಸೇನೆ ।
ಅರರೆ ಕೆಡೆಕೆಡೆಯೆನುತ ವಜ್ರದ
ಸರಳನುಗಿದನದಾವ ವಹಿಲದೊ
ಳುರುಳೆಗಡಿದನು ಪರ್ವತಾಸ್ತ್ರವನಿಂದ್ರಸುತ ನಗುತ ॥ ೩೬

ಆವ ಚಳಕದೊಳರ್ಜುನನು ತಿಮಿ
ರಾವಲಂಬದ ಸರಳಲೆಚ್ಚನು
ನಾವಱಿಯೆ[2]ವಿರುಳಂ[2]ಧತಮ ಮುದ್ರಿಸಿತು ದೃಷ್ಟಿಗಳ ।
ಆವನಾವನನಱಿವನೋ ತಾ
ನಾವನಿದಿರಾರೆಂಬ [3]ಭೇದವ
ಠಾವು[3] ತೋಱದು ತಮದೊಳದ್ದುದು ಕೂಡೆ ಕುರುಸೇನೆ ॥ ೩೭

ವೈರಿಶರಕೇನಱಿಯನೇ ಪ್ರತಿ
ಕಾರವನು ನಿನ್ನಾತನಗ್ಗದ
ಸೌರಮಯಮಂತ್ರಾಭಿಮಂತ್ರಿತ ಭಾನುಮಾರ್ಗಣವ ।
ಆರು ಕಂಡರು ತಿಮಿರಜನಿತವಿ
ಕಾರವನು ಹೇಳಿಗೆಯ ಮುಚ್ಚುಳ
ಜಾಱಿಸಿದ ಫಣಿಯಂತೆ ಘುಲ್ಲವಿಸಿತ್ತು ಕುರುಸೇನೆ ॥ ೩೮

ಆಗಳೇ ತೆಗೆದುರಗಬಾಣವ
ತೂಗಿ ಬಿಟ್ಟನು ನಿನ್ನ ಕರ್ಣನ
ಲಾಗುವೇಗವನೇನನೆಂಬೆನು ಚಾಪತಂತ್ರದಲಿ ।
ಸೀಗುರಿಸುವುರಿವಿಷದ ಲೋಳೆಯ
ಲಾಗಿಸುವ ನಾಲಗೆಯ ಸುಯ್ಲಿನ
ಬೇಗುದಿಯ ತೊಡಬೆಗಳ ಹಾವ್ ತುಡುಕಿದವು ಥಟ್ಟಿನಲಿ ॥ ೩೯

ಎಲೆಲೆ ಹಾವ್ಹೋ ಹಾವು ಕೆಂಡದ
ಮಳೆಯ [4]ತಡೆ[4]ವವೆ ಕೊಡೆಯೆನುತ ಕಳ
ವಳಿಸಿತಲ್ಲಿಯದಲ್ಲಿ ಹರೆದುದು [5]ಹುದುಗಿ ಹೊದರೊಡೆದು[5] ।

[1] ಧಾರುಣಿ (ಕ). [2] ವುಮಹಾಂ (ಪ.ಬ.ನ). [3] ರೂಪಿನಭಾವ (ಗ.ಟ.ತ.ಪ). [4] ಕಾ (ಟ.ತ.ದ.ನ.ಪ.ಬ). [5] ಕೂಡಿ ಹುರಿಯೊಡೆದು (ಟ.ತ.ಧ.ನ.ಪ).

[1]ಬಲು[1]ವಿಷದ ಕಿಱುವನಿಯ ಹಾವಿನ
ಮಳೆಗೆ ಗರುಡಾಸ್ತ್ರದಲಿ ತನ್ನಯ
ದಳಕೆ ಹಿಡಿದನು ಕೊಡೆಯನರೆಘಳಿಗೆಯಲಿ ಕಲಿ ಪಾರ್ಥ ‖ ೪೦

ಏಸು ಹಾವುದುರಿದವು ರಣದೊಳ
ಗ್ಗೈಸು ಹದ್ದೆಱಗಿದವು ತುಂಡಿಸಿ
ಬೀಸಿ ಬಿಸುಟವು ಕಡಿಗಳನು ಕೌರವನ ಥಟ್ಟಿನಲಿ ।
ಏಸು ಪರಿಯಲಿ ನರನ ಬಿನ್ನಣ
ವೈಸುಪರಿ ಕರ್ಣನಲಿ ಕರ್ಣನ
ಕೌಶಲವದೆನಿತನಿತು ಪರಿಯನು ಕಂಡೆನಾತನಲಿ ‖ ೪೧

ಬಲುಹು ಭೀಷ್ಮದ್ರೋಣರಿಂದ
ಗ್ಗಳವಲಾ ಕರ್ಣಂಗೆನುತ ಪಡಿ
ಬಲಕೆ ಬಂದರು ಭೀಮ ಸಾತ್ಯಕಿ ನಕುಲ ಸಹದೇವ ।
ದಳದೊಳದಟುಳ್ಳವರು ಪಾರ್ಥನ
ಕೆಲಬಲದಲುರವಣಿಸಿದರು ವೆ
ಗ್ಗಳೆಯನೈ ನಿನ್ನಾತನಿಂದಿನಲೆರಡು ಥಟ್ಟಿನಲಿ ‖ ೪೨

ಎಲೆ ಧನಂಜಯ ಸಾಲದೇ ಹೆ
ಬ್ಬುಲಿಯ ಕಾಲಾಟದಲಿ ಮೃಗಶಿಶು
ಮಲೆತಡೇನಗ್ಗಳೆಯನೇ ಮೂಲೋಕವಱಿವುದಲೇ ।
ಅಳವಿಗೊಡದಿರು ಸೂತತನಯನ
ತಲೆಯ ಬೆಸುಗೆಯ ಬಿಡಿಸುವಂಬಿನ
ಹಿಳುಕನುಗಿಯಾ ಹೊಳ್ಳುಗಣೆಯೇಕೆಂದನಾ ಭೀಮ ‖ ೪೩

ಪುಸಿಯೆ ಭೀಮನ ಮಾತು ಹೂಸುಕ
ದೆಸುಗೆ ತಾನೇಕಿನ್ನು ರಿಪು ನಿ
ಪ್ಪಸರದಲಿ ಕಲಿಯೇಱಿದರೆ ಕೈಕೊಳ್ಳನೀಶ್ವರನ ।
[2]ಹು[2]ಸಿಕಣೆಯಲೇನಹುದು ತೆಗೆ ಹರ
ವಿಶಿಖವನು ತೊಡು ಬೇಗವಾಡೆಂ
ದಸುರರಿಪುವರ್ಜುನನ ಜಱೆದನು ಭೂಪ ಕೇಳೆಂದ ‖ ೪೪

[1] ತುಳು (ಕ). [2] ನು (ಟ.ತ.ದ.ಪ).

ಕ್ರೋಧಶಿಖಿ ಭುಲ್ಲವಿಸೆ ಮುಳಿದು ವಿ
ರೋಧಿಯನು ನೋಡಿದನು ಮುಳುಗಲಿ
ರಾಧೆ ಕಂಬನಿಗಳಲಿ ಕುದಿಯಲಿ ಪುತ್ರಶೋಕದಲಿ ।
ಆಧಿ ತೀರಲಿ ನಮ್ಮ ಸೇನಾ
ವ್ಯಾಧಿಗಿದೆ ಮದ್ದೆನುತ ಪರಬಲ
ಸಾಧಕನು ಬ್ರಹ್ಮಾಸ್ತ್ರವನು ತೊಟ್ಟೆಚ್ಚನಾ ಪಾರ್ಥ ॥ ೪೫

ಶಿವಶಿವಾ ಬ್ರಹ್ಮಾಸ್ತ್ರವಿದಲಾ
ಭುವನಜನ ಸಂಹಾರಶರ ಸಂ
ಭವಿಸಿತೋ ಹಾ ಎನುತ ಹರೆದುದು ಮೇಲೆ ದಿವಿಜಗಣ ।
ತವಕದಲಿ ತತ್ಪ್ರತಿಮಹಾಸ್ತ್ರವ
ಜವಳಿವೆರಳಿಂದುಗಿದು ಬಿಡೆ ತಿವಿ
ತಿವಿದು ತಮ್ಮೊಳಗಡಗಿದವು ದಿವ್ಯಾಸ್ತ್ರವಭ್ರದಲಿ ॥ ೪೬

ಆ ಮಹಾಸ್ತ್ರದ ಹಾನಿ ರೋಷದ
ತಾಮಸಾಗ್ನಿಯ [1]ನೋಡಿ[1] ಬಿಡ[2]ಲು
ದ್ದಾಮನರ್ಜುನ ಕೊಂಡ[2]ನಗ್ಗದ ಜಾತಮನ್ಯುವನು ।
ಆ ಮಹಾಬಾಣಾಭಿಮುಖದಲಿ
ಸೋಮಧರಮಾರ್ಗಣವನಿಂತೀ
ಭೀಮವಿಕ್ರಮ ಕರ್ಣನೆಚ್ಚನು ರಾಯ ಕೇಳೆಂದ ॥ ೪೭

ಆತನಲಿ ಕೌಬೇರಮಾರ್ಗಣ
ವೀತನಲಿ ವಾಯುವ್ಯಶರ ಬಳಿ
ಕಾತನಲಿ ನೈರುತ್ಯವಿತ್ತಲು ಸೋಮವರ್ತಿಶರ ।
ಆತನಲಿ ಸಾಮುದ್ರ ರೋಷಣ
ವೀತನಲಿ ವಡಬಾಸ್ತ್ರವಿಂತಿರ
ಲಾತನೀತನ ಸಮರ ಸರಿ ನರನಾಥ ಕೇಳೆಂದ ॥ ೪೮

ಇಪ್ಪತ್ತಮೂಱನೆಯ ಸಂಧಿ ಮುಗಿದುದು.

---

[1] ನೊದೆದು (ಚ), ಉರಿದು (ತ.ದ.ಪ). [2] ದುದ್ದಾಮನರ್ಜುನನೆಚ್ಚ (ತ).

ಇಪ್ಪತ್ತನಾಲ್ಕನೆಯ ಸಂಧಿ

ಸೂಚನೆ ॥ ರಾಯಸಾಹಸಮಲ್ಲ ವೆಗ್ಗಳ
ರಾಯ ಸುಭಟಶಿರೋರತುನ್ನರಾ
ಧೇಯ ಪಾರ್ಥರ ವಿಷಮರಣ ರಂಜಿಸಿತು ಮೂಜಗವ ॥

ರಾಯ ಕೇಳೈ ಮತ್ತೆ ಕರ್ಣರ
ಸಾಯನವ ಕಟ್ವಾಳು ರಣದಲಿ
ಸಾಯಲಾಗದೆ ಶಿವಶಿವಾ ಸಾಯರೆ ಸುರಾಸುರರು ।
ಬಾಯಬಿಡೆ ಪರಸೇನೆ ಭೀತಿಯ
ಲಾಯದಲಿ ಕಟ್ಟಿದನು ಪಾರ್ಥನ
ವಾಯುಜನ ಕರಣೇಂದ್ರಿ[1]ಯಾ[1]ಶ್ವಂಗಳನು ಕಲಿ ಕರ್ಣ ॥ ೧

ಎಲೆ ಮುರಾಂತಕ ಸಾಕು ರಥದಿಂ
ದಿಳಿ ಸುದರ್ಶನವೆಲ್ಲಿ ಚಾಪವ
ಕಳೆದುಕೊಳು ಕೌಮೋದಕಿಯ ಹಿಡಿ ಹಾಯ್ಕು ವಾಘೆಯವ ।
ಉಳುಹುವವರಾವಲ್ಲ ಕೊಳ್ಳೆನು
ತಳವಿಯಲಿ ಕೈಕೊಂಡು ಕೃಷ್ಣನ
ನಳುಕದೆಚ್ಚನು ನೂಱು ಶರದಲಿ ಕರ್ಣ ಬೊಬ್ಬಿಱಿದು ॥ ೨

ಜೋಡಿನಲಿ ಸೀಸಕದ ಮೇಲ
ಕ್ಕಾಡಿದವು ಕವಲಂಬು ಕವಚವ
ತೋಡಿ ನಟ್ಟವು ನೂಕಿದವು ನಾರಾಚ ಗಱಿಸಹಿತ ।
ನೋಡಲೀ ವ್ಯಥೆಯುಂಟೆ ಭುವನದ
ಗೂಡು ಕೃಷ್ಣನ ದೇಹವಿದು ನಾ
ಡಾಡಿಗಳ ನಾಟಕವಲ್ಲೈ ನರನಾಥ ಕೇಳೆಂದ ॥ ೩

ಏನ [2]ಹೇಳುವೆ[2] ಹೂಡಿದಾ ಸಂ
ಧಾನವನು ರಥಹಯದ ವಾಘೆಯ
ಜೀನಗೆಲಸದ ಹಕ್ಕರಿಕೆಗಳ ನೊಗನ ಜೊತ್ತಗೆಯ ।

[1] ಯ (ಸ-ಫ). [2] ಹೇಳ್ವೆನು (ಕ).

ಭಾನುಸುತ ಮುಱಿಯೆಚ್ಚು ನಿನಗಿ
ನ್ನೇನು ಹದನೈ ಹನುಮ ಲೆಂಕೆಯು
ದಾನವರು ನಾವಲ್ಲೆನುತ ಕೈಮಾಡಿ ಬೊಬ್ಬಿಱಿದ ॥ ೪

ಸೈರಿಸರ್ಜುನ ಶಿವನೊಡನೆ ನೀ
ಹೋರಿದಾತನು ನಿನ್ನ ಕೊಲುವಡೆ
ತೀರದೇ ತಪ್ಪೇನು ತಳುವಿತು ಪೇಳಲೇಕೆನುತ ।
ಕೂರಲಗಿನಂಬುಗಳ ಹಿಳುಕಿನ
ಸಾರದಲಿ ಮುದ್ರಿಸಿದನುದಯದ
ಲಾರನಿದಿರಲಿ ಕಂಡನೋ ಕಡುನೊಂದನಾ ಪಾರ್ಥ ॥ ೫

ಹಱಿದುದಿಮ್ಮೈಜೋಡು ನೆತ್ತರಿ
ನೊಱತೆ ನೂಕಿತು ಭದ್ರ ಪೀಠದ
ಹೊಱಗು ನನೆದುದು ಝೊಮ್ಮಿನಲಿ ಜೋಲಿದನು ಮಲಗಿನಲಿ ।
ಉಱುಕುಗೊಂಡುದು ಕರಣಚಯವರೆ
ದೆಱದ ಕಂಗಳು ರೋಮಕಂಪದೂ
ಳಱಿದುದಿಲ್ಲರೆಘಳಿಗೆ ಕೋಳಾಹಳವನಾ ಪಾರ್ಥ ॥ ೬

ಮತ್ತೆ ಕೇಳವನೀಶ ಭೀಮನ
ನೆತ್ತಿ ಬಿಸುಟವು ಬಾಣ ನಕುಲನ
ಕುತ್ತಿದವು ಸಹದೇವನೊಡಲಲಿ ಮಾಡಿದವು ಪಥವ ।
ಇತ್ತ ಸಾತ್ಯಕಿ ಚೇಕಿತಾನಕ
ನುತ್ತಮೌಂಜ ಶಿಖಂಡಿ ದಳಪತಿ
ಕೆತ್ತಿದೊಡಲಿನ ಜೋಱನಲಿ ಹೊರಳಿದರು ಹುಡಿ ನನೆಯೆ ॥ ೭

ಒಸಗೆಯಾದುದು ನೆಲನ ದಿಕ್ಕಿನ
ಬೆಸುಗೆ ಬಿಡೆ ನಿಸ್ಸಾಳತತಿ ಗ
ರ್ಜಿಸಿದವುಬ್ಬಿದ ಬೊಬ್ಬೆ ಬಿಡಿಸಿತು ಧ್ರುವನ ಮಂಡಲವ ।
ಅಸಮ ಭುಜಬಲ ಪೂತುರೇ ಸಾ
ಹಸಿಕ ಮಝುರೇ ಭಾಪು ಧಣುಧಣು
ವಿಷಮರಣನರಸಿಂಹ ಜಾಗೆಂದುದು ಭಟಸ್ತೋಮ ॥ ೮

ಜನಪ ಕೇಳ್ಕೈ ಮತ್ತೆ ಸುತಸೋ
ಮನ ಶತಾನೀಕಾದಿ ರಿಪುನಂ
ದನರನೈವರನೆಚ್ಚು ಬೆರಸಿದನವರ ಸೀಮೆಯಲಿ ।

ಅನಿಲಜನ ಮರಳೆಚ್ಚು ಪಾಂಚಾ
ಳನ ವಿಭಾಡಿಸಿ ಥಟ್ಟಿನೊಳು ಮು
ಮ್ಮೊನೆಯ ಬೋಳೆಯ ಸರಿಯ ಸುರಿದುದು ಕರ್ಣನವಮೋಘ ॥ ೯

ಸಾಲ ಝುಲ್ಲರಿಗಳ ಪತಾಕಾ
ಜಾಲವನು ಚಾಮರವ ಗೋವಳಿ
ಗೋಲ ಡೊಂಕಣಿಯೊಡ್ಡನೆತ್ತಿದ ಸಿಂಧ ಸೀಗುರಿಯ ।
ಧೂಳಿಪಟಮಾಡಿದನು ಮಿಡುಕು
ಳ್ಳಾಳ ಕೊಂದನು ಗಜರಥಾಶ್ವದ
ಮಾಲೆಯನು ಮುತ್ತಿದುದು ಕರ್ಣನ ಶಿಳಿಮುಖವ್ರಾತ ॥ ೧೦

ಅರಸ ಕೇಳಾ ನರನನಾ ವಾ
ನರನನಾ ಮುರಹರನನಾ ರಥ
ತುರಗ ನಿಚಯವನಾ ರಥವನಾ ಶರವನಾ ಧನುವ ।
ಹುರುಳುಗೆಡಿಸಿ[1]ದು[1] ಭುಜಪರಾಕ್ರಮ
ದುರಿಯೊಳಗೆ ಬಿಡೆಕಾಸಿ ಹಗೆನೆ
ತ್ತರಲಿ ನೀರೂಡಿದನು ನಿಜ ಶರ ನಿಕರವನು ಕರ್ಣ ॥ ೧೧

ಹೇಳಲಱಿಯೆನು ವಿಕ್ರಮಾಗ್ನಿ ಛ
ಡಾಳಿಸಿದುದಡಿಗಡಿಗೆ ಸೇನಾ
ಜಾಳವನು ಬೇಳಿದನು ಕೂರಂಬುಗಳ ಕೊಂಡದಲಿ ।
ಆಲಿಗಳು ಸವಿನೋಡಲಿಂದಿನ
ಕಾಳೆಗವ ಬರಹೇಳು ಕುರುಭೂ
ಪಾಲಕನ ಬರಹೇಳು ಬರಹೇಳೆನುತ ಬೊಬ್ಬಿಱಿದ ॥ ೧೨

ಶರಹತಿಗೆ ಮುಖದಿರುಹಿ ಕಾಲಾಳ್
ತುರಗಸೇನೆಯ ಮಱೆಯ ಸಾರಿತು
ತುರಗದಳ ಬಗಿದಂಡುಗೊಂಡುದು ಗಜಘಟಾವಳಿಯ ।
ಕರಿಘಟಾವಳಿ ಕೋಲಿನುರುಬೆಗೆ
ತೆರಳಿದವು ತೇರುಗಳ ಮಱೆಯಲಿ
ಹೊರಳಿಯೊಡೆದುದು ತೇರ ಥಟ್ಟು ನಿಹಾರದೆಸುಗೆಯಲಿ ॥ ೧೩

[1] ದ (ಕ), ಯ (ಘ.ತ.ದ).

ಕೋಲ ಕೋಳಾಹಳಕೆ ತೇರಿನ
ಗಾಲಿಗಳನೊಡ್ಡಿದರು ಹರಿಗೆಯ
[1]ಹೇಳಿದರು[1] ಹಮ್ಮುಗೆಯ ಕೊಯ್ದೊಡ್ಡಿದರು ಜೆಂಚೆಗಳ ।
ಮೇಳೆಯುವ ಮೋಹಿದರು ಕಂಬುಗೆ
ನೂಲು ಹರಿಗೆ ತನುತ್ರ ಸೀಸಕ
[2]ಜಾಲ[2] ಗುಳ ಹಕ್ಕರಿಕೆ ಹಲ್ಲಣ ಬಾಹುರಕ್ಷೆಗಳ ॥ ೧೪

ಉರಿಯ ಮಳೆಗಾಲದಲಿ ದಡ್ಡಿಯ
ನರಗಿನಲಿ ಮಾಡಿದರೊ ಗಡ ಕಾ
ರಿರುಳ ಕೋಟೆಯ ರಚಿಸಿದರು ಗಡ ರವಿಯ ಮುತ್ತಿಗೆಗೆ ।
ಹರಿಗೆ ಸೀಸಕ ಜೋಡು ಕಾವವೆ
ಕೆರಳಿದಡೆ ಕರ್ಣಾಸ್ತ್ರವನು ನಿ
ಬ್ಬರದ ರಣದುಬ್ಬಟೆಯ ಕಂಡುಬ್ಬಿದನು ಕುರುರಾಯ ॥ ೧೫

ನೋಡಿರೈ ನಿಮ್ಮವರ ದಳ ಕೈ
ಮಾಡುತದೆ ನಮ್ಮಾತನನು ನೀವ್
ಖೋಡಿಗಾಬರಿ ನಿಮ್ಮ ಫಲುಗುಣ ಭೀಮರುಬ್ಬಟೆಯು ।
ನೋಡಿರೈ ಲೇಸಾಗಿ ನೀವ್ ಮಾ
ತಾಡಲಾಗದೆ ನಿಮ್ಮ ನಾಲಗೆ
ಗೂಡುಗೊಂ[3]ಡವೆ[3]ಯೆಂದನವನಿಪ ಕೃಪನ ಗುರುಸುತನ ॥ ೧೬

ನರನ ಬಿಗಿದುದು ಮೂರ್ಛೆ ಭೀಮನ
ಹರಣ ಕೊರಳಲಿ ಮಿಡುಕುತದೆ ಮುರ
ಹರನು ಸುರ ವೈಹಾಳಿಯದೆ ಮೂಗಿನಲಿ ಮೋಹರಿಸಿ ।
ಬಿರುದ ಸಾತ್ಯಕಿ ನಕುಲ ಸಹದೇ
ವರಿಗದಾವದು ಹದನು ನಾವಿ
ನ್ನಱಿಯೆವೈ ನೀವ್ ನೋಡಿಯೆಂದನು ನಗುತ ಕುರುರಾಯ ॥ ೧೭

[4]ನೋಡಿ[4] ಮಕ್ಕಳ[5]ನಿಕ್ಕಿ[5] ತಂದೆಗ
ಳೋಡುತದೆ ಸರಳಿಂಗೆ ತಮ್ಮನ
ನೀಡಿ ತೋಱಿಸಿ ಜಾಱುತದೆಯಣ್ಣಂದಿರಾದವರು ।

---

[1] ಹೇಳಿಗೆಯ (ಕ). [2] ಚಾಳು (ಕ.ಫ), ಜಾಲ (ಖ). [3] ಡುದೆ (ಖ.ಫ. ಟ.ತ). [4] ಕೂಡೆ (ಕ). [5] ನೊಡ್ಡಿ (ಕ).

ಓಡುತದೆ ಆಳೊಡೆಯನನು ಬೀ
ಸಾಡಿ ತಾಯಿಗೆ ಮಕ್ಕಳಾಗದೆ
ಕೂಡೆ ಮು[1]ಮ್ಮ[1]ಳಿಮಸಗುತದೆ ಗುರುತನುಜ ನೋಡೆಂದ ॥ ೧೮

ಅರಿಬಲದ ಕಡುಗೇಡು ಹಬ್ಬಿತು
ಸುರಬಲದೊಳಕಟಕಟ ನೋಡೈ
ಸುರಪತಿಗೆ ದುಮ್ಮಾನವಡಸಿತಲಾ ಮಹಾದೇವ ।
ಸುರನದೀಜದ್ರೋಣರೀ ಪರಿ
ಪರಮ ಶೌರ್ಯದಲೊದಗಿದರೆ ನಿ
ಷ್ಠುರದ ನುಡಿಯೆನ್ನದಿರಿ ಕಂಡುದನಾಡಬೇಕೆಂದ ॥ ೧೯

ಉಂಟು ಜೀಯ ವಿರೋಧಿಬಲವತಿ
ಕಂಟಣಿಸುತದೆ ಪಾಂಡು ತನಯರ
ನಂಟರಿಷ್ಟರಿಗಾದುದೈ ದುಮ್ಮಾನ ಪುಸಿಯೇಕೆ ।
ಎಂಟುಮಡಿ ನಿಮಗಾದ ಜಯ ಹದಿ
ನೆಂಟುಮಡಿಯಾಚೆಯಲಿ ಸೇರುವು
ದುಂಟು ಪುಸಿದರೆ ಕೊಯ್ಸಿಕೊಟ್ಟೆವು ನಮ್ಮ ನಾಲಗೆಯ ॥ ೨೦

ಮುಗುಳುನಗೆಯೊಬ್ಬರಲಿ ಸವಿವಾ
ತುಗಳ ರಸವೊಬ್ಬರಲಿ ಕಡೆಗ
ಣ್ಣುಗಳ ಮಿಂಚೊಬ್ಬರಲಿ ನೇವುರದೆಳವೊಳಗು ಸಹಿತ ।
ಸೊಗಸು ಬೇಟೊಬ್ಬರಲಿ ನೇಹದ
ತಗಹು ಬೇಟೊಬ್ಬರಲಿ ಸತಿಯರ
ವಿಗಡತನವಿದು ಸಹಜ ಜಯವಧು[2] ಜಾರೆ[2] ನೋಡೆಂದ ॥ ೨೧

ಒಂದು ಕಡೆಗಣ್ಣಿನಲಿ ಕೌರವ
ನಂದವನು ನೋಡುವಳು ಕಯ್ಯೊಡ
ನೊಂದು ಕಡೆಗಣ್ಣಿನಲಿ ಮಾತಾಡಿಸುವಳರಿಬಲವ ।
ಇಂದು ಜಯವಧು [3]ದೃಢ[3]ಪತಿವ್ರತೆ
ಯೆಂದು ಬಗೆದೈ ಭೂಪ ಹುಸಿ ಹೋ
ಗೆಂದು ಗುರುಸುತ ನಗುತ [4]ಹೋದನು ತನ್ನ ಮೋಹರಕೆ[4] ॥ ೨೨

---

[1] ಮ್ಮು (ಕ.ಖ). [2] ವಾರು (ಕ). [3] ದಿಟ (ಕ). [4] ಹೊಕ್ಕನು ತನ್ನ ಪಾಳೆಯವ (ಟ.ದ.ನ.ಪ).

ಅರಸ ಚಿತ್ತೈಸಿತ್ತಲರ್ಜುನ
ನರೆಮುಗಿದ ಕಣ್ಣರಳ್ದವಂತಃ
ಕರಣ ಪಂಚೇಂದ್ರಿಯಕೆ ಬಿಟ್ಟುದು ತಗಹು ಕಳಕಳವ ।
ಮುರಿದು ಮುರಿದೆಡಬಲದ ತನ್ನವ
ರಿರವನೀಕ್ಷಿಸಿ ಕೋಪಶಿಖಿಯು
ಬ್ಬರದಲಿಬ್ಬಗಿಯಾದು[1]ದಂತರ್ಭಾವವಡಿಗಡಿಗೆ[1] ॥ ೨೩

ಕಳಶಜಲದಲಿ ಮೆಯ್ಯ ನೆತ್ತರ
ತೊಳೆದು ಪೊಸಮಡಿವರ್ಗದಲಿ ಮುರಿ
ಮಲಕ ಬಿಗಿದನು ಧರಿಸಿ ಸಾಧು ಜವಾಜಿ ಕಸ್ತುರಿಯ ।
ಉಳಿಯ ಹೊಸ ಸೀಸಕದ ಕವಚವ
ನಳವಡಿಸಿ ಕರ್ಪುರದ ಕವಳದ
ಹಳುಕ ಹಾಯಿಕಿಕೊಳುತ ಕೊಂಡನು ಮತ್ತೆ ಗಾಂಡಿವವ ॥ ೨೪

ನಿಮ್ಮ ಸಿರಿಯೊಡಲಿನಲಿ ಜೋಡಿನ
ಹಮ್ಮುಗೆಯನುಡಿದಂಬು ಹಾಯ್ದವು
ನಮ್ಮ ದುಷ್ಕೃತವ್ಯೆಸಲೇ ನಿಮಗೆತ್ತಲೀ ವ್ಯಸನ ।
ನಿಮ್ಮಡಿಗಳೇ ಬಲ್ಲಿರಿಂತಿ[2]ರ
ಲೆ[2]ಮ್ಮ ರಾಜ್ಯದ ಹುದು[3]ವೆ[3] [4]ನೊಂದನು[4]
ನಿಮ್ಮ ಹನುಮನ ನೋಡಿಯೆಂದನು ಹರಿಗೆ ಕಲಿ ಪಾರ್ಥ ॥ ೨೫

ಸಾಕದಂತಿರಲಾಹವಕೆ ಬರ
ಲೇಕೆ ಕಬ್ಬಿನ ಬನವೆ ಬಾಣಾ
ನೀಕಕಭಿಮುಖವಾಗೆ ಸಾವರು ನೋವರಿದಕೇನು ।
ಈ ಕುಠಾರನನೀಕ್ಷಣಕೆ ಕೈ
ತೂಕದಲಿ ಕಾದದೆ ವಿವೇಕದೊ
ಳಾಕರಿಸು ಜಯವಧುವನೆಂದನು ಕೃಷ್ಣನರ್ಜುನನ ॥ ೨೬

ಹರಿಸು ರಥವನು ವೈರಿಯುಬ್ಬೆಗೆ
ತೆರಳುತದೆ ನಮ್ಮವರು ಕರ್ಣನ
ಕೊರಳ ಬಾ[5]ರ[5]ಲಿ ನಿಲುಕಿಸುವೆನೀ ಶರಸಲಾಕೆಗಳ ।

---

[1] ದರ್ಜುನನಂತರಂಗದಲಿ (ದ.ಪ.ಬ). [2] ದನ (ಕ). [3] ವ (ಕ.ಗ.ಚ.ಟ.ದ). [4] ಬಯಸನು (ಟ), ಬಯಸುವ (ದ). [5] ಯ (ಟ.ದ).

ಅರಸ ಕೇಳ್ಳೈ ಮಾತು ಹಿಂಚಿತು
ನರನ ರಥ ಜೋಡಿಸಿತು ಕರ್ಣನ
ಸರಿಸದಲಿ ಜೀವಿಸಿತು ಪಾಂಡವಸೇನೆ [1]ನಿಮಿಷ[1]ದಲಿ ‖ ೨೭

ಎಲೆಲೆ ಕರ್ಣ ಕಿರೀಟಿಯುಱುಬೆಗೆ
ನಿಲುವುದರಿದ್ದೈ ಹಾವನರೆಗಡಿ
ದುಳುಹಿ ಕೆಡಿಸಿದೆ ಪಾಪಿ ರಾಯನ ರಾಜಕಾರಿಯವ ।
ತೊಲಗಿಸುವೆನೇ ರಥವನೆನೆ ಹೆ
ಕ್ಕಳಿಸಿ ಜಱೆದನು ಕರ್ಣ ಶಲ್ಯನ
ನೆಲವೊ ಘಡ ನೋಡೆನುತ ತೆಗೆದೆಚ್ಚನು ಧನಂಜಯನ ‖ ೨೮

ಎಡೆಯುಲೀತನ ಸರಳ ಸಾರವ
ಕಡಿದು ಕಯ್ಯೊಡನೆಚ್ಚು ಮಗುಳೆ
ಚ್ಚಡಿಗಡಿಗೆ ಬಿಡದೆಚ್ಚು ಪುನರಪಿ ಮತ್ತೆ ಮಗುಳೆಚ್ಚು ।
ಪಡಿಬಲಕೆ ರೋಷಾಗ್ನಿಯದನಿ
ಮ್ಮಡಿಸಿ ಬೀಸುವ ಖೇದಪವನನು
ಸುಡದೆ ಬಿಡುವನೆ ಕಲಿ ಧನಂಜಯನಹಿತ ತೃಣವನವ ‖ ೨೯

ಒದೆದು ಕವಚವನೊಡೆದು ಗಱೆದೋ
ಱೆದವು [2]ಚೌಕದ[2] ಮೇಲೆ ಮೊನೆಮೂ
ಡಿದವು ಬೆನ್ನಲಿ ಕರ್ಣ ನನೆದನು ರುಧಿರ ಧಾರೆಯಲಿ ।
ಉದುರಿದವು ಕಯ್ಯಂಬು ಬಲು ಕಾ
ಱೆದನು ರಕುತವ ಕಳವಳದ ಕಂ
ಪದಲಿ ಝೊಂಪಿಸಿ ಮಲಗಿದನು ಮಣಿಮಯದ ಗದ್ದುಗೆಯ ‖ ೩೦

ತೋಱೆಸಾ ನಿನ್ನೊಡೆಯನೋಲೆಯ
ಕಾಱತನವನು ನಮ್ಮ ಬಲವನು
ಮೂಱು ಮೂಲೆಯ ಹೊಗಿಸಿ [3]ಬೆಚ್ಚನೆ ಬೆಱತ[3] ಗರುವನಲೆ ।
ಜಾಱೆದ[4]ವೆ ಕಯ್ಯಂಬು ಬಲು ರಣ
ವೀರಸಿರಿ ಹಾಱೆದುದೆ ಶೌರ್ಯದ
ಮೋಱೆಗೇಕೈ ಮುಱುಕವೆಂದನು ನಗುತ ಕಲಿ ಪಾರ್ಥ[4] ‖ ೩೧

---

[1] ಪುಣ್ಯ (ಗ.ಪ.ನ). [2] ವಕ್ಷದ (ಟ.ದ). [3] ಬೆಚ್ಚಿಸಿಗೆಲಿದ (ಖ.ಘ.ಟ), ಮೆಚ್ಚಿಸಿಗೆಲಿದ (ತ.ದ). [4] ವು ಬಿಲ್ಲಂಬು ರಣದಲಿ ಹಾಱೆಹೋಯಿತೆ ನಿನ್ನ ಜಯ ಜಯ ಸಿರಿಯ ಕೊಂಡೆನು ಮುಱುಕವೇಕೆಲೆ ಕರ್ಣ ನಿನಗೆಂದ (ಕ).

ಮುರಳಿ ಶಲ್ಯನನೆಚ್ಚನಾತನ
ಕರದ ವಾಘೆಯ ಕಡಿದನಾ ರಥ
ತುರಗದೊಡಲಲಿ ಹೂಳಿದನು ಹೇರಾಳದಂಬುಗಳ |
ಹೊರೆಯ ಹಡ[1]ಪಿಗ ಚಾಹಿಯರ ಚಾ
ಮರಿಯರನು[1] ನೋಯಿಸಿದ ಗೆಲವಿನ
ಗರುವತನವನು ಬಡ್ಡಿಸಹಿತುಗುಳಿಚಿದನಾ ಪಾರ್ಥ || ೩೨

ದಳಪತಿಯ ದುಮ್ಮಾನದಲಿ ಕಳ
ವಳಿಸಿತೀಚೆಯ ಥಟ್ಟು ಪಾರ್ಥನ
ಹಿಳುಕು ಹೊಕ್ಕವು ಹರಹಿ ತಿವಿದುವು ರಾಯನಿದಿರಿನಲಿ |
ಹಲವು ಮಾತೇನಾ ಕೃಪನ ಕೌ
ಸಲನನಾ ಗುರುಸುತನನಾ ಸೌ
ಬಲನನಾ ಕೃತವರ್ಮಕನ ಮುಱಿಯೆಚ್ಚು ಬೊಬ್ಬಿಱಿದ || ೩೩

ಸಿಕ್ಕಿದನು ಕುರುರಾಯನಾದುದು
ಮಕ್ಕಳಾಟಿಕೆ ಗುರುನದೀಸುತ
ರಿಕ್ಕಿ ಹೋದರು ನಮ್ಮ ದಳಪತಿ ಕಾದಿ ಬಳಲಿದನು |
ಫೊಕ್ಕನರ್ಜುನನಿವರ ದರ್ಪವ
ನೊಕ್ಕಿ ತೂಱಿದನಿನ್ನು ಪರಿವಾ
ರಕ್ಕೆ ಬಂದುದು ಪಂಥವೆನುತಿದ್ದುದು ಭಟಸ್ತೋಮ || ೩೪

ಅರಸ ಚಿತ್ತೈಸಾಱು ಸಾವಿರ
ವರ ಮಹಾರಥರೌಕಿದರು ಝು
ಲ್ಲರಿಯ ಝಾಡಿಯ ಸೆಳೆಯ ಸಿಂಧದ ಸುಳಿವ ಸೀಗುರಿಯ |
ಬಿರಿಯೆ ನೆಲನುಬ್ಬೇಳ್ವ ಬೊಬ್ಬೆಯ
ಮುರಜ ಡಿಂಡಿಮ ಪಟಹದಾಡಂ
ಬರದಲೊದಗಿತು ಕೆಲನ ಕೈವಾರಿಗಳ ರಭಸದಲಿ || ೩೫

ಫಡಫಡೆಲವೋ ಪಾರ್ಥ ರಾಯನ
ತುಡುಕಲಹುದೇ ಕೂಟಗಿರಿಯಲಿ
ಕಡಲು ಹೂಳುವುದೇ ಸಧಾರನಲಾ ಮಹಾದೇವ |

---

[1] ಪದ ಚಾಮರದ ಸೀಗುರಿಯವರ (ಗ.ತ.ಬ).

ಹಿಡಿ ಮಹಾಸ್ತ್ರವನಿನ್ನು ಮುಂದಡಿ
ಮಿಡುಕಿದಡೆ ತಮ್ಮಾಣೆಯೆನುತವ
ಗಡಿಸಿ ನೂಕಿತು ನಿನ್ನವನ ಮನ್ನಣೆಯ ಪರಿವಾರ ॥ ೩೬

ಜನಪ ಕೇಳೈ ರಕುತಜಲದಲಿ
ನನೆದ ನೆಲ ಪುಡಿಮುಸಗೆ ಕೆಂಧೂ
ಳಿನಲಿ ಕತ್ತಲಿಸಿತ್ತು ದಿಗ್ಭ್ರಮೆಯಾದುದಡಿಗಡಿಗೆ ।
ಇನಿಬರಾವೆಡೆ ಕರ್ಣನೋ ಫಲು
ಗುಣನೊ ಪಾಂಡವಬಲವೊ ನಿನ್ನಾ
ತನೊ ನಿಧಾನಿಸಲಱಿಯೆನೊಂದರೆಗಳಿಗೆ ಮಾತ್ರದಲಿ ॥ ೩೭

ಮಳೆಗೆ ಹೆಚ್ಚಿದ ಧೂಳಿನಬ್ಬರ
ವಳಿವವೊಲು ವಿಜಯಾಸ್ತ್ರಹತಿಯಲಿ
ಹಿಳಿದ ಕರಿ ನರ ತುರಗದೊಡಲರುಣಾಂಬುಧಾರೆಯಲಿ ।
ಕಳಚಿತೀ ಕೆಂಧೂಳಿ ಬಾಣಾ
ವಳಿಯ ಕತ್ತಲೆಯೊಳಗೆ ಕಾಣೆನು
ದಳದೊಳಾರಾರೆಂದು ಮತ್ತರೆಘಳಿಗೆ ಮಾತ್ರದಲಿ ॥ ೩೮

ಬೆರಸಿ ಹೊಯ್ದರು ರಾವುತರು ರಥ
ತುರಗ ನಿಕರದ ಬೆಸುಗೆ ಬಿಡೆ ಮದ
ಕರಿಗಳಂಘವಿಸಿದವು ರಥ ಚಾಚಿದವು ಮುಂ[1]ದ[1]ಣಿಗೆ ।
ಹರಿಗೆಗಳ ತಲೆಗೊಡ್ಡಿ ಕಕ್ಕಡ
ಪರಶು ಖಂಡೆಯದವರು ಮುಂಡಿಯ
ತೆರಳದಾಂತರು ಫಲುಗುಣನ ರಥದೆರಡು ಪಕ್ಕದಲಿ ॥ ೩೯

ಅರಸ ಕೇಳು ಜಯದ್ರಥನ ಮೋ
ಹರದ ಮಧ್ಯದೊಳೆಂದು ಸಿಲುಕದ
ನರನ ರಥವೀ ಹೊಳ್ಳುಗರ ಹೋರಟೆಗೆ ಹೆದಱುವುದೇ ।
ಕರಿಘಟಾವಳಿಗೊಂದು ಶರವಾ
ತುರಗದಳಕೊಂದಂಬು ಬಳಿಕೆರ
ಡೆರಡು ಶರದಲಿ ಕೆಡಹಿದನು ಕಾಲಾಳು ತೇರುಗಳ ॥ ೪೦

---

[1] ಕ (ಘ.ತ).

ಆಳು ಮುರಿದುದಲ್ಲೈ ಮಹಾರಥ
ರೇಳಿರೈ ನೀವಾಱು ಸಾವಿರ
ಮೇಲುದಳದವರಾಕೆವಾಳರು ನಿಮ್ಮ ಥಟ್ಟಿನಲಿ ।
ಮೇಳವದ ಪರಿ ಲೇಸು ಕರ್ಣನ
ಸೋಲದಲಿ ಸೀವರಿಸಿದರೆ ಭೂ
ಪಾಲನಾಣೆ ದೊರಾರರಹಿರೆನುತೆಚ್ಚನಾ ಪಾರ್ಥ ॥ ೪೧

ಬಾಣಹತಿಗಕ್ಕುಡಿಸಿ ರಾಜ್ಯ
ಶ್ರೇಣಿ [1]ಜಱುಗಿತು[1] ಶೌರ್ಯನಗರದ
ವಾಣಿಯರು [2]ಹೊಕ್ಕಱಿದು[2] ಪೋಗಾಡಿದರು ಪತಿರಿಣವ ।
ಗೋಣಕೊಯ್ಲಿನ [3]ಕಾ[3]ವಣಕೆ ಮುಂ
ಗೇಣಿಕಾಱನು ಮೊಳಗಿದನು ಘಡ
ಕೇಣವಿನ್ನೇಕೆನುತ ಕೈದೋಱಿತು ಭಟಸ್ತೋಮ ॥ ೪೨

ಸೀಳಿದನು ಸಮರಥರ ಸುಳಿಗೊಂ
ಡಾಳ ಸದೆದನು ಸವಱಿದನು ಭೂ
ಪಾಲಪುತ್ರರನಖಿಳದೇಶದ [4]ರಾಜಸಂತತಿಯ[4] ।
ಆಳು ಮುಱಿದುದು ಮಾನಹಾನಿಯು
ಹೇಳುವಡೆ ನಗೆ[5]ಯದನು[5] ಕುರುಬಲ
ಜಾಲದಲಿ ಜಳ್ಳುಗರು ಬಿದ್ದುದು ಭಂಗ ಶರಧಿಯಲಿ ॥ ೪೩

ಬಿಡುದಲೆಯಲೋಡಿದರು ಬಿರುದಿನ
ತೋಡರ ಬಿಸುಟರು ವಾಹನಂಗಳ
ತೊಡಕ ಬಿಟ್ಟರು ನೆಲಕೆ ಕೈಲೆಡೆಗೊಟ್ಟು ಕೈದುಗಳ ।
ಅಡಸಿ [6]ಕಾವ ನರಪ್ರ[6]ತಾಪದ
ಕಡುವಿಸಿಲ ಬೇಗೆಯಲಿ ವೀರದ
ಮಡುಗಳುಱೆ ಬತ್ತಿದವು ಮೋಱೆಗಳೊಣಗಿ ಪಟುಭಟರ ॥ ೪೪

ಹೋಗದಿರಿ ಹೋಗದಿರಿ ದಳಪತಿ
ಯಾಗುಹೋಗಱಿಯದೆ ನೃಪಾಲನ
ಮೂಗನಾರಿಗೆ ಮಾಱಿದಿರಿ ಕೊಂಬವರು ನಾವಲ್ಲ ।

[1] ಹೆದಱಿತು (ಕ). [2] ಹೊಕ್ಕಚ್ಚು (ಕ). [3] ಕೇ (ಕ.ಗ.ಚ). [4] ದ್ವೀಪ ಸಂಭವರ (ಘ.ತ.ದ.ಪ), ದೇಶಾಧಿ ಭೂಭುಜರ (ನ). [5] ಯೆಂದು (ಕ), ಯೆಂದು (ಖ). [6] ದೀತನ ಸತ್ಪ್ರ (ತ).

ಈ ಗರುವರೀ ಪರಿ ಪಲಾಯನ
ಯೋಗಸಿದ್ಧರೆ[1]ಸಾಹಸಿಕರೈ[1]
ಜಾಗೆನುತ ಬೆಂಬತ್ತಿ ಹುಡಿಗುಟ್ಟಿದ ಮಹಾರಥರ ॥ ೪೫

ಇವರ ಹದನಿದು [2]ಕರ್ಣ[2]ನಾಡಿದ
ಕವಡಿಕೆಯ ಬೆಸಗೊಳ್ಳಿರೈ ಕೌ
ರವನ ಸರ್ವಗ್ರಾಸಕಿವೆ ರಾಹುಗಳು ಲಟಕಟಿಸಿ ।
ನಿವಗೆ ಹರಿಬದೊಳೊಂದು ಮುಟ್ಟಿಗೆ
ರವಣವುಂಟೇ ಹಾಯ್ಕಿ ನಿಮ್ಮಾ
ಟವನು ನೋಡುವೆನೆಂದು ಕರೆದನು ಕೃಪನ ಗುರುಸುತನ ॥ ೪೬

ಅರಸ ಕೇಳಾಕ್ಷಣಕೆ ಮುಗ್ಗಿತು
ಮಱವೆ ನೆಗ್ಗಿತು ಭೀತಿ ಧೈರ್ಯದ
ತಿರುಳು ಬಲಿದುದು ಕೋಪ ತಳಿದುದು ಖೋಡಿ ನೀ[3]ರೊಱೆಯೆ[3] ।
ಕರಣಪಲ್ಲಟಪಾಡಿನಲಿ ಸಂ
ವರಿಸಿಕೊಂಡುದು ವೀರರಸವು
ಬ್ಬರಿಸಿ ಸರ್ವೇಂದ್ರಿಯವ ಮುಸುಕಿತು ನಿಮ್ಮ ದಳಪತಿಯ ॥ ೪೭

ನೋಡಿದನು ಕೆಲಬಲನನುಗಿದೀ
ಡಾಡಿದನು ನಟ್ಟಂಬುಗಳ ಹಱ
ಜೋಡಬಿಟ್ಟನು ತೊಳೆದನಂಗೋಪಾಂಗಶೋಣಿತವ ।
ಕೂಡೆ ಕಸ್ತುರಿಗಂಧದಲಿ ಮುಳು
ಗಾಡಿ ದಿವ್ಯದುಕೂಲದಲಿ ಮೈ
ಗೂಡಿ ಮೆಱೆದನು ಕರ್ಣನನುಪಮ ತೀವ್ರತೇಜದಲಿ ॥ ೪೮

ಬೋಳವಿಸಿದನು ಶಲ್ಯನನು ಮಿಗೆ
ಸೂಳವಿಸಿದನು ಭುಜವನುಬ್ಬಿನೊ
ಳಾಳವಿಸಿದನು ಚಾಪಗಾನ[4]ಸ್ವಾ[4]ನಕವನಱಿದ ।
ಮೇಳವಿಸಿ ನಿಜರಥವ ಕೆಲದಲಿ
ಜೋಳವಿಸಿ ಹೊದೆಯಂಬನಹಿತನ
ಪಾಳಿಸುವಡಂಬಿದೆಯೆನುತ ತೂಗಿದನು ಮಾರ್ಗಣೆಯ ॥ ೪೯

---

[1] ಪೊತು ಮಝುರೇ (ಕ). [2] ಪಾರ್ಥ (ಕ). [3] ರೇಱೆ (ಗ.ಘ.ತ).
[4] ಸ್ರಾ (ಕ).

ಘಡಘಡೆಲವೋ ಪಾರ್ಥ ಜೂಜಿಂ
ಗೊಡಬಡಿಕೆ ನಿಮಗೆಮಗೆ ಹಾರುವ
ರೊಡನೆ ಹೆಕ್ಕಳವೇಕೆ [1]ಹೋಗದಿರಿತ್ತಲಿದಿರಾಗು[1] ।
ಹಿಡಿದ ಮುಷ್ಟಿಗೆ ಸರ್ವರವಣವ
ಕೊಡಹಿ ನಿನ್ನ[2]ದೆ [ವೆ]ರ[2]ಳಕೊಳ್ಳದೆ
ಬಿಡುವೆನೇ ಬಾ ಎನುತ ಕರೆದನು ಕರ್ಣನರ್ಜುನನ ॥ ೫೦

ಅರಸ ಕೇಳ್ಳೈ ಸಿಡಿಲಗರ್ಜನೆ
ಗುರವಣಿಪ ಕೇಸರಿಯುವೊಲು ಕೃಪ
ಗುರುಸುತರ ಬಿಸುಟಿತ್ತ ಹಾಯ್ದನು ಹಗೆಯ ಸಮ್ಮುಖಕೆ ।
ತಿರುಪು ಸದರವು ನಿನಗೆ ಗತಿಕಾ
ಹುರ ಕಣಾವಳಿ ಕಂಠಗತ ಬಾ
ಹಿರನು ನೀನೆಲೆ ಕರ್ಣ ಘಡ ಹೋಗೆನುತ ತೆಗೆದೆಚ್ಚ ॥ ೫೧

ಭರತಭಾಷೆಯಲಾ ವಿಧಾವಂ
ತರು ವಿರಾಟನ ಮನೆಯಲಿದ್ದುದ
ನಱಿಯೆವೇ ನಾವೆತ್ತ ಬಲ್ಲೆವು ನಿಮ್ಮ ವಿದ್ಯೆಗಳ ।
ಸರಸಮಾತಂತಿರಲಿ ಚಾಪ
ಸ್ಫುರಣದಭಿನಯದಂಗಹಾರದ
ಪರಿಯ ತೋಱಾ ಎನುತ ತೆಗೆದೆಚ್ಚನು ಧನಂಜಯನ ॥ ೫೨

ಝಳಪಿಸಿದುದೆರಡಂಕದಲಿ ನಿ
ಷ್ಕಲಿತ ತೇಜಃಪುಂಜವಿಬ್ಬರ
ಹಳಹಳಿಕೆ ಹಬ್ಬಿದುದು ಗಬ್ಬರಿಸಿದುದು ಗಗನದಲಿ ।
ಹಿಳುಕನೀದವೊ ಹಿಳುಕು ಮೊನೆಯಲ
ಗಲಗನುಗುಳ್ದವೊ ಕಣೆಗಳಲಿ ಕಣೆ
ತಳಿತವೋ ತ್ರೈಲೋಕ್ಯಬಾಣಾದ್ವೈತವಾಯ್ತೆಂದ ॥ ೫೩

ಪರಶುರಾಮನ ಕಾರ್ತವೀರ್ಯನ
ವರ ದಿಳೀಪನ ದುಂದುಮಾರನ
ಭರತ ದಶರಥ ನಹುಷ ನಳ ರಾಘವನ ಲಕ್ಷ್ಮಣನ ।

---

[1] ಹಾರದಿರಿತ್ತಲನುವಾಗು ಕ). [2] ಡೆಬೆರ (ಕ.ನ), ದೆದಿರು (ಗ), ದೆಬೆರ (ತ.ದ.ನ).

ಸರಿಮಿಗಿಲು ಕಲಿ ಪಾರ್ಥನೀ ಮಿ
ಕ್ಕರಸುಗಳ ಪಾಡೇ ಕಿರೀಟಿಯು
[1]ದೊರೆಯುದಾವವನೆನುತ ಕೊಂಡಾಡಿತು ಸುರಸ್ತೋಮ[1] ॥ ೫೪

ತಾರಕನ ಜಂಭನ ನಿಕುಂಭನ
ತಾರಕಾಕ್ಷನ ಕಾಲನೇಮಿಯ
ವೀರ ಮಹಿಷಾಸುರನ ಬಾಣಾಸುರನ ರಾವಣನ ।
ತೋರಹತ್ತರ ಬಾಹು ಬಲವನು
ಸಾರಿಯಾ ಕರ್ಣಂಗೆ ಮಿಕ್ಕಿನ
[2]ಸಾರಿಹೃದಯರು ನಿನಗೆ ಸರಿಯಿಲ್ಲೆಂದು[2]ದಮರಗಣ ॥ ೫೫

ಪೂತು ಮಝರೇ ಕರ್ಣ ವಿಶಿಖ
ವ್ರಾತವೊಂದಿನಿತಿಲ್ಲ ಲಂಕೆಯ
ಘಾತಕರ ಚಾಪಳವ ಕಂಡೆನು ಚಾಪತಂತ್ರದಲಿ ।
ಈತನತಿಶಯಬಾಣರಚನಾ
ಜಾತಿಯಿದು ಭೀಷ್ಮಾದಿಸುಭಟ
ವ್ರಾತಕಿಲ್ಲಿಯದೆಂದು ತಲೆದೂಗಿದನು ಹನುಮಂತ ॥ ೫೬

ಅದ್ದು ದುಮ್ಮಾನದಲಿ ಹೊಡೆಮಗು
ಳೆದ್ದುದೀ ಕುರುಸೇನೆ ತಡೆಯಲಿ
ಬಿದ್ದುದತಿಸಂತೋಷ ಸಾರಕ್ಷೀರಜಲಧಿಯಲಿ ।
ಗೆದ್ದನೈ ನಿನ್ನಾತನೊಸಗೆಯ
ಬಿದ್ದಿನರಲೈ ನಾವು ಪರರಿಗೆ
ಬಿದ್ದುದೊಂದು ವಿಘಾತಿಯೆಂದನು ಸಂಜಯನು ನಗುತ ॥ ೫೭

ಇಪ್ಪತ್ತನಾಲ್ಕನೆಯ ಸಂಧಿ ಮುಗಿದುದು.

---

[1] ದೊರೆಗೆನುತ ಕೊಂಡಾಡಿತಮರಸ್ತೋಮವರ್ಜುನನ (ಕ.ಗ.ಚ). [2] ಸಾರಥಿಯ ಸಜೀವಿಸರಿಯಿಲ್ಲೆಂದು (ಕ), ಭೂರಿರಥಿಕರು ಪಾಡೆ ಕರ್ಣಂಗೆಂದು (ಕ.ಫ).

ಇಪ್ಪತ್ತೈದನೆಯ ಸಂಧಿ

ಸೂಚನೆ ॥ ರಾಯಪರಬಲಮಥನ ಕೌರವ
ರಾಯಧರಣಿವರಾಹ ಕಲಿರಾ
ಧೇಯನೆಚ್ಚನು ರೌದ್ರದರ್ಪದ ಸರ್ಪಬಾಣದಲಿ ॥

ಹೇಳು ಸಂಜಯ ಹಗೆಗೆ ಬಿದ್ದ ವಿ
ತಾಳವಾವುದು ಕಿವಿಗಳೈದವು
ನಾಲಗೆಯನೊಡ್ಡುವೆನು ವಚನಾಮೃತದ ಸವಿ ಹಿರಿದೆ ।
ಜಾಳಿಸಿತೆ ಹಗೆ ಕರ್ಣ ಗೆಲಿದನೆ
ಕಾಳೆಗವನೀ ಮಾತುಗಳನೇ
ಹೇಳುತಿರು ಸಾಕೆಂದು ನುಡಿದನು ನಗುತ ಜನನಾಥ ॥ ೧

ಅವನಿಪತಿ ಕೇಳುವಡೆ ಸಾವಿರ
ಕಿವಿಗಳೈದವು ನಿಮ್ಮ ಕರ್ಣನ
ಬವರದಲಿ [1]ರೂ[1]ಢಿಸಿದ ರೌದ್ರದ ರಾಜಕಾರಿಯವ ।
ಸವಡಿವೆರಳಿನ ಸೇದುವಂಬಿನ
ತವಕಿಗನ ತಗ್ಗಿಸುವೆ ನಿಲ್ಲೆನು
ತವಗಡದ ಕೋಪದಲಿ ಕಿಡಿಕಿಡಿವೋದನಾ ಕರ್ಣ ॥ ೨

ಮಿಾಱಿತುರಿ ಸುಯ್ಲಿನಲಿ ಕಂಗಳು
ಹೇಱಿದವು ಕಡುಗೆಂಪನೊಗಡಿಸಿ
ಕಾಱಿದವು ರೋಮಾಳಿ ರೋಷಸ್ವೇದಬಿಂದುಗಳ ।
ಕೌಱಿದವು ಕುಡಿಮಿಾಸೆ ಕಾದುದು
ಮೋಱೆ ಬದ್ಧಭ್ರುಕುಟಿಯಲಿ ಹುರಿ
ಯೇಱಿತಧಿಕಕ್ರೋಧತಾಮಸ ನಿಮ್ಮ ದಳಪತಿಯ ॥ ೩

ಉಗಿದನುರಗಾಸ್ತ್ರವನು ಹೊಮ್ಮೊ
ಡಿಗೆಯೊಳಗೆ ಹೊರಕಯ್ಯ ಗಾಳಿಗೆ
ಹೊಗೆಯ ಹೊದರಿನ ಹೊರಳಿ ಹಬ್ಬಿತು ಕೂಡೆ ಕಿಡಿಯಿಡುತ ।

[1] ಝಾ (ಖ.ಘ.ಟ.ತ.ದ), ಜೋ (ಬ).

ಗಗನ ಗಮನದ ನಿಖಿಳ ವಿಹಗಾ
ಳಿಗಳು ಬೆಂದವು ಗಾಢ ಗರಳದ
ಸೊಗಡ ಸೋಹಿಗೆ ಕಂಠಣಿಸಿತೆರಡೊಡ್ಡು ಕಳವಳಿಸಿ ॥ ೪

ಬೆರಳಲಂಬನು ತೂಗಲುರಿ ಫೂ
ತ್ಕರಣೆಯಲಿ [1]ಪಂಠಿಸಿ[1]ತು ಸುಯ್ಲಿನ
ಧರಧುರದ ಬೆಳುನೊರೆಯು ಲಹರಿಯ ವಿಷದ ಲೋಳೆ[2]ಗಳ[2] ।
ಉರವಣಿಸಿದವು ಗರಳ ರಸದ
ಬ್ಬರದ ಬೊಬ್ಬುಳಿಕೆಗಳು ಮುಸುಕಿತು
ಹೊರಳಿಗಿಡಿಗಳ ಛಟಛಟಧ್ವನಿ ಮಸಗಿತಡಿಗಡಿಗೆ ॥ ೫

ಹೊರೆಯುವರು ಮರನಾದರಾ ರಥ
ತುರಗತತಿ ಲಟಕಟಿಸಿದವು ನಿ
ಬ್ಬರದ ಬೆಱಗಿನೊಳದ್ದು ಹೋದನು ಶಲ್ಯ ನಿಮಿಷದಲಿ ।
ಉರಿ ಛಡಾಳಿಸಿ ಫೂತ್ಕೃತಿಯ ಪಂ
ಜರದೊಳಗೆ ಪಲ್ಲವಿಸಿತುಬ್ಬಿದ
ಹೊರಳಿಹೊಗೆಯಂಬರವ ತುಂಬಿತು ಭೂಪ ಕೇಳೆಂದ ॥ ೬

ಆವರಿಸಿದವು ಪುಷ್ಕಳಾವ
ರ್ತಾವಳಿಗಳೆನೆ ಬಹಳವಿಷಧೂ
ಮಾವಳಿಯಲೇ ಧಾತುಗೆಟ್ಟುದು ಸಕಳ ಭುವನಜನ ।
ದೇವತತಿ ಬೆಂಡಾಯ್ತು ಮೊದಲಿನ
ದೇವರುಬ್ಬಿದರುರಗಪತಿಯ ಫ
ಣಾವಳಿಯು ಗುಡಿಯೆತ್ತಿದವು ಪಾತಾಳಲೋಕದಲಿ ॥ ೭

ಭುಜವ ಹೊಯ್ದರು ಸೂರ್ಯ ತಕ್ಷಕ
ರಜನ ಸಭೆಯಲಿ ಭಯದಿ ಸುರಪತಿ
ಭಜಿಸಿದನು ಗರುಡನನು ನಿರ್ವಿಷಮಸ್ತು ನರಗೆನುತ ।
ಗಜಱಿದವು ನಿಸ್ಸಾಳವಾದ್ಯ
ವ್ರಜದ ಕಹಳೆಯ [3]ಭಟರ ಬೊಬ್ಬೆಯ[3]
ಗಜಬಜಿಕೆ ಘಾಡಿಸಿತು ಕೌರವಸೈನ್ಯಶರಧಿಯಲಿ ॥ ೮

---

[1] ಪಸರಿಸಿ (ಟ.ದ). [2] ಯಲಿ (ತ.ದ). [3] ಜರೆವ ಸುಭಟರ (ಕ).

ಹಣುಗಿದರು ಭೀಮಾದಿಗಳು ಕ
ಟ್ಟೊಣಗಿಲಾದವು ಭಟರ ಮೋಱೆಗ
ಳೆಣಿಸುತಿರ್ದರು ಜಪವನರ್ಜುನ ಕೃಷ್ಣನೆಂಬವರು ।
ಸೆಣಸುವನು ಗಡ ಕೌರವನೊಳಿ
ನ್ನುಣಲಿ ಧರೆಯನು ಧರ್ಮಸುತನೆಂ
ದಣಕವಾಡಿತು ನಿನ್ನ ದುಷ್ಪರಿವಾರ ಹರುಷದಲಿ ॥ ೯

ಮೂಡಿಗೆಯೊಳಂಬುಗಿದು ತಿರುವಿಗೆ
ಹೂಡಲೀ ಹದನಾಯ್ತು ಚಾಪದೊ
ಳೋಡಿಸಿದಡೇನಹುದು ಹರಹರ ಹರ ಮಹಾಸ್ತ್ರವಲೆ ।
ನೋಡಿರೈ ಗುರುಸುತಕೃಪಾದಿಗ
ಳೋಡದಿರಿ ನೀವೆನುತ ಪುಳಕದ
ಬೀಡಿನಲಿ ಮೈಮುೞುಗಿ ತೂಗಾಡಿದನು ಕುರುರಾಯ ॥ ೧೦

ಉರಿಯ ಜೀರ್ಕೊಳವಿಗಳವೊಲು ಪೂ
ತ್ಕರಿಸಿದವು ಫಣಿ ವದನದಲಿ ದ
ಳ್ಳುರಿಯ ಸಿಮಿಸಿಮಿಗಳ ತುಷಾರದ ಕಿಡಿಯ ತುಂತುಱಿನ ।
ಹೊರಳಿಗಿಡಿಗಳ ಕರ್ಬೊಗೆಯ ಕಾ
ಹುರದ ಸುಯ್ಲಿನ ಝಳದ ಗರಳಾ
ಕ್ಷರದ ಜಿಗಿಯಲಿ ಮೂತು ತೋಱಿತು ಬೆಸನು ಬೆಸಸೆನುತ ॥ ೧೧

ಹೂಡಿದನು ತಿರುವಿನಲಿ ಬಾಣದ
ಝಾಡಿಯುರಿನಾಲಗೆ'ಯ[1] ನಿರುತವ
ನೋಡಿ ಪಾರ್ಥನ ಗಳಕೆ ಸಂಧಾನವ ನಿಧಾನಿಸುತ ।
ನೋಡಿದನು ಶಲ್ಯನನು ಮಿಗೆ ತೂ
ಗಾಡಿದನು ಕೌರವನ ಪುಣ್ಯದ
ಬೀಡು ಬಿಡುವಡೆ ಕಾಣಲಹುದಿಂದೆಂದನಾ ಕರ್ಣ ॥ ೧೨

ಏನು ಸಾರಥಿ ಸರಳು ಪಾಂಡವ
ಸೇನೆಯನು ಗೆಲಲಹುದೆ ಪಾರ್ಥನ
ಮಾನಿನಿಗೆ ವೈಧವ್ಯದೀಕ್ಷಾವಿಧಿಯ ಕೊಡಲಹುದೆ ।

[1] ಗೆ (ಫು.ತ).

ಆನಲಮ್ಮುವರುಂಟೆ ನಿನಗಿದು
ಸಾನುರಾಗವೆ ಹೇಳೆನಲು ರವಿ
ಸೂನುವಿನ ರೌದ್ರಾಸ್ತ್ರವನು ಹೊಗಳಿದನು ಮಾದ್ರೇಶ ॥ ೧೩

ಲೇಸುಮಾಡಿದೆ ಕರ್ಣ ಕೌರವ
ನೀಸುದಿನ ಸಾಕಿದ ಫಲವ ನೀ
ನೈಸಲೇ ತೋಱಿದವ[1]ನೀ ನೃಪಸೈನ್ಯಶರಧಿಯಲಿ[1] ।
ಈಸು ಕಾಳೆಗವಾದುದೀ ಕ
ಟ್ಟಾಸುರದ ಸರಳೆಲ್ಲಿ [2]ಗು[2]ಪ್ತಾ
ವಾಸವಾದುದು ಪೂತುರೆಂದನು ಶಲ್ಯನಿನಸುತನ ॥ ೧೪

ಆಯಿತಿದು ಸರಳೊಳ್ಳಿತೈ ಕುರು
ರಾಯನಭ್ಯುದಯ ಪ್ರಪಂಚವಿ
ದಾಯಿತೌ ಸಂಧಾನವೊಡಬಡದೆನ್ನ ಚಿತ್ತದಲಿ ।
ಸಾಯಕವ ನೀ ತಿರುಗಿ ತೊಡು ನಿ
ರ್ದಾಯದಲಿ ನೆಲನಹುದಲಾ ರಾ
ಧೇಯ ಎಂದನು ಶಲ್ಯನವನೀಪಾಲ ಕೇಳೆಂದ ॥ ೧೫

ಕೊರಳಿಗೊಡ್ಡಲು ಹೊಳ್ಳುವಾಱಿದ
ಸರಳು ಮಕುಟವ ತಾಗುವುದು ಮೇ
ಣುರಕೆ ತೊಟ್ಟರೆ ಕೊಯ್ವುದೀಗಳೆ ಕೊರಳನರ್ಜುನನ ।
ಮರಳಿ ತೊಡು ತೊಡು ಬೇಗ ಕೌರವ
ನರಸುತನವುಳಿವುದು ಕಣಾ ಹೇ
ವರಿಸದಿರು ಹೇಳುವುದು ಪಥ್ಯವಿದೆಂದನಾ ಶಲ್ಯ ॥ ೧೬

ಒಂದು ಶರಸಂಧಾನ ನಾಲಗೆ
ಯೊಂದು ನಮ್ಮಲಿ ಕುಟಿಲವಿದ್ಯವ
ನೆಂದು ಕಂಡೈ ಶಲ್ಯನಾವಡಿಯಿಡೆವಧರ್ಮದಲಿ ।
ಇಂದು ಹೂಡಿದ ಶರವನಿಳುಹುವು
ದಂದವೇ ನೀನಱಿಯೆ ಹೇಱಿಸಾ
ರೆಂದು ತಿರುವಿನೊಳಂಬನೊದೆದನು ಕರ್ಣ ಬೊಬ್ಬಿಡುತ ॥ ೧೭

---

[1] ನು ಶಿವಶಿವಾ ಮಹಾದೇವ (ಕ.ಖ.ಚ.ನ). [2] ಸು (ಕ.ಗ.ಪ).

ಏನಹೇಳುವೆ ಬಳಿಕ ಭುವನ
ಗ್ಲಾನಿಯನು ತೆಗೆದೋಡಿದರು ವೈ
ಮಾನಿಕರು ವೆಂಠಣಿಸಿತುರಿಯಪ್ಪಳಿಸಿತಂಬರವ ।
ಕಾನಿಡುವ ಕಬ್ಬೊಗೆಯ ಚೂರಿಸು
ವಾನನದ ಕಟುವಾಯ ಲೋಳೆಯ
ಜೇನಹುಟ್ಟಿಯ [1]ಬಸಿವ ವಿಷದಲಿ[1] ಬಂದುದುರಗಾಸ್ತ್ರ ॥ ೧೮

ಕಾದಲೆಳಸಿದ ಪಾಂಡವರ ಸಂ
ವಾದ ತೀರಿತು ಕೌರವೇಂದ್ರನು
ಸಾಧಿಸಿದ ಹಗೆ ಸಫಲವಾದುದುಸಮರಭೂಮಿಯಲಿ ।
ಹೋದನರ್ಜುನನೀಮಹಾಸ್ತ್ರದ
ಬಾಧೆಗಿದಿರಿಲ್ಲೆನುತ ಘನ ಚಿಂ
ತೋದಧಿಯಲುಱೆ ಮುಳುಗಿ ಮಱುಗಿತು ಮೇಲೆ ಸುರಕಟಕ ॥ ೧೯

ಹಾ ವೃಕೋದರ ನಕುಲ ಹಾ ಸಹ
ದೇವ ಹಾ ಧರ್ಮಜ ಧನಂಜಯ
ಹಾವಿನಗ್ನಿಗೆ ಹವಿಗಳಾದಿರೆ ಹಾ ಮಹಾದೇವ ।
ಸಾವಡೆಯು ಶಸ್ತ್ರಪ್ರಹಾರದ
ಸಾವು ಕ್ಷತ್ರಿಯಕುಲಕೆ [2]ಭಂಗವೆ[2]
ಹಾ ವಿಧಿಯೆ ಎಂದೊದಱಿ ಮಱುಗಿತು ಪಾಂಡುಸುತಸೇನೆ ॥ ೨೦

ತುರಗತತಿ ತಲೆಗುತ್ತಿದವು ಮದ
ಕರಿಗಳೊದಱಿದವಸ[3]ವಳಿದು[3] ರಥ
ತುರಗವೆಳೆದವು ರಥವನಾಗಳೆ ವಿಷದ ಝಳಹೊಯ್ದು ।
ಸುರಿವ ಗರಳದ ಗಾಳಿ ಸೋಂಕಿದ
ನರಗೆ ನಂಜೇಱಿತು ಭಯಂಕರ
ತರದ ಭಾರಿಯ ವಿಷಕೆ ಕೊಳ್ಗುದಿಗೊಂಡುದರಿಸೇನೆ ॥ ೨೧

ಗರುಡಪಂಚಾಕ್ಷರಿಯ ಮಂತ್ರೋ
ಚ್ಚರಣೆಯಲಿ ಭೂನಾಗಸತ್ವದ
ಬೆರಳ ಮುದ್ರಿಕೆಗಳಲಿ ರಕ್ಷಾಯಂತ್ರಮಂತ್ರದಲಿ ।

---

1 ವಿಷದ ಉಳಿಯಲಿ (ಕ.ಟ.ದ). 2 ವಿಹಿತವು (ಘ.ತ.ಪ). 3 ಬಡಿದ: (ಕ.ಖ).

ಮರಕತದ ಘುಟಿಕೆಯಲಿ ವಿಷಸಂ
ಹರಣ ವಿವಿಧೋಪಾಯದಲಿ ನೃಪ
ವರರು ನಿಂದುದು ಭೀಮಸೇನಾದಿಗಳು ದುಗುಡದಲಿ ॥ ೨೨

ಹಿಂದೆ ಭಗದ[1]ತ್ತಾಯುಧದಿ ನೆಱೆ[1]
ಬೆಂದು ಬದುಕಿತು ಬಳಿಕಲೀ ಗುರು
ನಂದನನ ನಾರಾಯಣಾಸ್ತ್ರದಿನಾದುದಪಘಾತ ।
ಅಂದುಪಾಯದಲುಳಿದೆವೀ ಗೋ
ವಿಂದನಿಂದಪಮೃತ್ಯುವಿದನು ಮು
ಕುಂದ ತಾನೇ ಬಲ್ಲನೆನುತಿರ್ದುದು ಭಟಸ್ತೋಮ ॥ ೨೩

ಜನಪ ಕೇಳೈ ಬಳಿಕ ಭೀಮಾ
ರ್ಜುನ ನಕುಲ ಸಹದೇವ ಸಾತ್ಯಕಿ
ತನತನಗೆ ದಿವ್ಯಾಸ್ತ್ರನಿಕರದಲೆಚ್ಚರಹಿಶರವ ।
ಅನಿತು ಶರವನು ನುಂಗಿ ಮಗುಳೆ
ಚ್ಚನಿತನೊಳುಕೊಳುತಾಜ್ಯಧಾರೆಗೆ
ನನೆದ ಹುತವಹನಂತೆ ಹೆಚ್ಚಿತು ತೀವ್ರಫಣಿಬಾಣ ॥ ೨೪

ಆರು ನಿಲಿಸುವರಕಟ ದುಷ್ಪ್ರತಿ
ಕಾರ ಶರವಿದು ಭೀಮಪಾರ್ಥರ
ಕೂರಲಗುಗಳು ಶಿವಶಿವಾ ಕೆಚ್ಚಾಯ್ತು ಕದಳಿಗಳ ।
ಕೌರವನ ಜಯವಧುವಿನೊಡ[2]ನೆಯು[2]
ಸೇರುಗೆಯ ಕೂಟಣಿಯೊ ಶರವಿ
ನ್ನಾರಿಗೊಱಲೆವೆವಕಟೆನುತ ತಲ್ಲಣಿಸಿತರಿಸೇನೆ ॥ ೨೫

ನಾಲಗೆಯ ಚೂರಣದ ದಳ್ಳುರಿ
ಜಾಳಿಗೆಯ ಚಮ್ಮಟದ [3]ಗರಳದ
ಲೋಳೆಗಳ ಚಾರಣದ ಕಿಡಿಗಳ ಖಡುಗ ಪೂರಯದ[3] ।

---

[1] ತ್ತಾಂಕುಶದಲುರೆ (ಗ.ಟ ತ.ದ.ನ). [2] ಗಯಿ (ಕ). [3] ಗರಳಜ್ವಾಲೆಗಳ ಚಾರಣದ ಕಿಡಿಗಳ ಗಡಣ ಕುಡಿಯಿಡಲು (ಕ), ಗರಳದ ಚಾರಣದ ಸಂಭ್ರಮದ ಕೋಳಾಹಳದ ಕಿಡಿಗಳಲಿ (ಖ), ಗರಳಜ್ವಾಲೆಗಳ ಭಾರಣೆಯ ಕಿಡಿಗಳ ಕಡಹ ಸಾಗರದ (ದ).

ಧೂಳಿ[1]ಯುಗೆಯುಬ್ಬರದ ಬಲುಗೈ
ಯಾಳವೊಲು ಭುಗಿಲೆಂಬ ರವದಲಿ[1]
ಮೇಲುವಾಯ್ದುದು ಕೊರಳ ಸರಿಸಕೆ ಕಲಿ ಧನಂಜಯನಾ ॥ ೨೬

ಅರಸ ಕೇಳೇಸೇಸು ಬಾರಿಯ
ಕೊರಳಡಾಯುಧ ಕಳಚದೇಸು
ಬ್ಬರದ ಮಾರಿಯು ಬಿಂಕ ಮುಱಿಯದು ಪಾಂಡುತನಯರಿಗೆ ।
ಹರಿಯು ಹರಹಿನ ವಜ್ರಪಂಜರ
ದರಗಿಣಿಯಲೇ ಪಾರ್ಥನಹಿಮಂ
ಜರನ ಮುಱುಕವ ಕೊಂಬುದೇ ಧೃತರಾಷ್ಟ್ರ ಕೇಳೆಂದ ॥* ೨೭

ನಡುಗುತಿರ್ದುದು ಸುರಕಟಕ ಬೊ
ಬ್ಬಿಡುತಲಿರ್ದುದು ನಮ್ಮ ಬಲ ಮೊಱೆ
ಯಿಡುತಲಿರ್ದುದು ಪಾರ್ಥನಳವಿಗೆ ಪಾಂಡುಸುತಸೇನೆ ।
ತಡೆಯದೈದಂಗುಲಕೆ ರಥವನು
ನೆಡಿಸಿದನು ಹರಿ ಧರೆಗೆ ಪಾರ್ಥನ
ಮುಡಿಯ ಸರಿಸಕೆ ಬಾಣ ಬಂದುದು ಕೊಲುವ ತವಕದಲಿ ॥ ೨೮

ಅಣಿದುದಹಿ ಮಕುಟವನು ತಾರಾ
ಗಣದ ಮಧ್ಯದ ಚಂದ್ರಮನ ಹೊ
ಯ್ದಣಲೊಳಡಸಿದ ರಾಹುವಿನ ರಹಿಯಾಯ್ತು ನಿಮಿಷದಲಿ ।
ಕುಣಿಕೆ ಮುಱಿದುದು ಮೌಕ್ತಿಕದ ಕೀ
ಲಣದ ವಜ್ರದ ಮಾಣಿಕದ ವರ
ಮಣಿಗಳೊಕ್ಕವು ರಕುತ ಮಿದುಳೊಡಸೂಸಿದಂದದಲಿ ॥ ೨೯

---

[1] ಧೂಳಿವೊಗೆಯುಬ್ಬರದ ಬಲುಗಯ್ಯಾಳವೊಲು ಭುಗಿಭುಗಿಲ ರೌದ್ರದಿ (ಖ), ಯೊಗೆಯುಪ್ಪರದ ಬಲುಗೈಯಾಳುವೊಲು ಭುಗಿಭುಗಿಲ ಹಡೆಯಲಿ (ತ.ದ).

* ಈ ಪದ್ಯವಾದಮೇಲೆ (ಕ.ಖ) ಪ್ರತಿಗಳಲ್ಲಿ ವಿನಾ ಉಳಿದ ಪ್ರತಿಗಳಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ :—

ಸಾಹಸವು ಬಲುಹರ್ಜುನನ ಬಿಲು
ಗಾಹು ಕೊಳ್ಳದು ಬಿರುಬಿನಲಿ ಬಾ
ಣಾಹಿ ಬರುತಿದೆ ಕಾಳಕೂಟದ ಕಡಲ ಚೂಣಿಯಲಿ ।
ಆಹವಕೆ ಪಾಂಡವ ಮಮಪ್ರಾ
ಣಾಹಿಯೆಂಬೀ ಬಿರುದ ಸಲಿಸುವ
ಕಾಹು ತನ್ನದೆನುತ್ತ ದಾನವವೈರಿ ಚಿಂತಿಸಿದ ॥

ಬಿದ್ದುದೇ ಫಲುಗುಣನ ತಲೆಯುಡಿ
ಗದ್ದುದೇ ನಮ್ಮಾಟ ಜಯವಧು
ಕದ್ದಳೇ ರಣದೊಸಗೆ[1]ಗೇಳ್ವಳೆ[1] ದ್ರೌಪದಾದೇವಿ ।
[2]ಇ[2]ದ್ದುದೇ ಧರ್ಮಜನ ಸಿರಿ ತಳ
ಕದ್ದುದೇ ನಮ್ಮೊಡಲನಸು ಬಿಡ
ದಿದ್ದುದೇ ಹಾ ಎನುತ ಭೀಮಾದಿಗಳು ಹೊರಳಿದರು ॥ ೩೦

ವಿಷವ ತೆಗೆದಳು ದ್ರುಪದಸುತೆ ಕೈ
ಮುಸುಕಿನಲಿ ಚೀಲಾಯು[3]ವು[3]ಗಿದನು
ವಸುಮತೀಶ್ವರನಾ ಮುಹೂರ್ತಕೆ ದೂತರೈತಂದು ।
ಒಸಗೆ ಜೀಯರ್ಜುನನ ಮಕುಟದ
ದೆಸುಗೆ ಮುಱಿದುದು ಹರಿ ವರೂಥವ
ಕುಸಿಯಲೊತ್ತಿದನಿಂದು ತಪ್ಪಿತು ತೀವ್ರ ಫಣಿಬಾಣ ॥ ೩೧

ಎನಲು ಸಂತೈಸಿತ್ತು ರಾಯನ
ಮನೆಯವರು ಪಾಂಡವರ ಸೇನಾ
ವನಧಿ ಬಿಡೆ ಗರ್ಜಿಸಿತು ಬಹುವಿಧ ವಾದ್ಯರಭಸದಲಿ ।
ವಿನುತ ಮಕುಟವ ಕಡಿದು ಕಂಗನೆ
ಕನಲಿತಹಿ [4]ತಲೆ ಬದುಕಿತೇ[4] ಹಾ
ಎನುತ ಹಲುಮೊರೆಯುತ್ತ ಹರಿದದು ಕರ್ಣನಿದ್ದೆಡೆಗೆ ॥ ೩೨

ತೊಡು ತೊಡಿನ್ನೊಮ್ಮೆನ್ನನಕಟಾ
ಕೆಡಿಸಿದೆಯಲಾ ರಾಜಕಾರ್ಯವ
ನುಡಿದು ಹೇಳನೆ ನಿನ್ನ ಸಾರಥಿ ಲಕ್ಷ್ಯಭೇದನವಾ ।
ಅಡಗಲಿನ್ನೀರೇಳು ಭುವನವೊ
ಳಡಗಿ ತಿಂಬೆನು ನರನನೆಂದವ
ಗಡಿಸಿ ಕರ್ಣನ ಬೆಸನ ಬೇಡಿತು ಮತ್ತೆ ಫಣಿಬಾಣ ॥ ೩೩

ಶಿವನ ಮಱೆಯನು ಹೊಗಲಿ ಮೇಣ್ ವಾ
ಸವನ ಸೀಮೆಯೊಳಿರಲಿ ಪಾತಾ
ಳವನು ಹೊಗಲಂಬುಧಿಯ ಮುಳುಗಲಿ ಜವನ ಕೆಳೆಗೊಳಲಿ ।

---

[1] ಗಳ್ಳಿಳೆ (ಕ). [2] ಅ (ಟ). [3] ನು (ಕ). [4] ತನ ತಲೆ ಬದುಕೆ (ಘ.ಟ.ತ).

[1]ಭುವನಕತಿಶಯವಾಗಿ ರಣದಲಿ
ತಿವಿವೆ ಪಾರ್ಥನನೆನಲು ಕೇಳಿದು
ರವಿಯ ಮಗ ಬೆಱಗಾಗಿ ಬೆಸಗೊಂಡನು ಶಿಲೀಮುಖವ[1] ॥* ೩೪

ಎಸಲು ಸರಳುಗಳತ್ತಲೇ ಕೀ
ಲಿಸುವವಲ್ಲದೆ ಮತ್ತೆ ಮರಳಿದು
ಬೆಸನ ಬೇಡುವ ಬಾಣವೆಂಬುದನಱಿಯೆ ನಾ ಕೇಳ್ದು ।
ವಿಶಿಖ ನೀನಾರೆನಲು ಕಿಡಿಗಳ
ಕುಸುರಿಗಳನುದ್ಗರಿಸಿ ನುಡಿದುದು
ವಿಷಮನಱಿಯಾ ಕಾಳಕೂಟ ಕರಂಡ ಕಾನನದ ॥ ೩೫

ಉರಗಪತಿ ತಾನಶ್ವಸೇನನು
ಸುರಪತಿಯು ಖಾಂಡವದೊಳಿಹೆನದ
ನುರುಹ-ವಂದಿನೊಳೆನ್ನನರೆಗಡಿದೀ ದುರಾತ್ಮಕನ ।
ಶಿರವನರಿವೆನು ಬೇಗ ತೊಡು ತೊಡು
ಬೆ[2]ರ[2]ಗ ಹಾರದಿರೆನಲು ಸತ್ಯದ
ಪರಮಸೀಮೆಗೆ ತಪ್ಪಲಮ್ಮದೆ ಕರ್ಣನಿಂತೆಂದ ॥ ೩೬

ಅಱಿಯೆ ನಾ ನೀನೆಂದು ಲೋಗರ
ಮಱೆಯುಲರಿಗಳ ಗೆಲುವ ಕರ್ಣನೆ
[3]ಯ[3]ಱಿಯಲಾ ನೀನೆನ್ನ ಹವಣನು ತೊಡುವುದಿಲ್ಲೆನಲು ।
ಮಱುಗಿದನು ಶಲ್ಯನು ನೃಪಾಲನ
ನಿಱಿದೆಯೋ ರಾಧೇಯ ನೀನೆಂ
ದುಱುಬ[4]ಯಲಿ ಕೋಪಿಸುತ ಕರ್ಣನ ಬಯ್ದು ಗಜಱಿದನು[4] ॥ ೩೭

---

[1] ತಿವಿದು ಕೆಡುಹುವೆನಹಿತನನು ಪಂ । ಥವನು ಹಾರದಿರೆನಲು ಕೇಳಿದು । ರವಿಯ ಮಗ ಬೆಱಗಾಗಿ ನೋಡಿದನಂದು ಫಣಿಶಿರವ (ಕ).

* ಈ ಪದ್ಯವಾದಮೇಲೆ (ಕ.ಘ.ತ.ದ.ನ) ಪ್ರತಿಗಳಲ್ಲಿ ಮಾತ್ರ ಕೆಳಗಣ ಪದ್ಯವು ಹೆಚ್ಚಾಗಿದೆ :—

ತಿರುಗಿ ತೊಡು ಸಂಧಾನವಿದು ನ
ಮ್ಮರಸರಿಗೆ ಹಿತವಹುದಲೇ ಧಿ
ಕ್ಕರಿಸಿ ನಮ್ಮನು ನೂಕಿ ಕಳೆದೆ ಮಹಾಹಿಮಾರ್ಗಣವ ।
ನರನ ತಲೆ ಬದುಕಿದುದು ಸಾಕಂ
ತಿರಲಿ ಶರವೇ ತನ್ನ ಕಳುಹೆಂ
ದೊಱಲುತದೆ ತೊಡು ಪಾಪಿಯೆಂದನು ಶಲ್ಯನಿನಸುತನ ॥

[2] ಱ (ಕ.ತ). [3] ನ (ಕ). [4] ಮಿಗೆ ಖತಿಗೊಂಡು ಬಯ್ದನು ಸೂತನಂದ
ನನ (ಘ.ತ.ದ)

ತೊಡು ತೊಡೆಲವೋ ಶರವು ರಿಪುವನು
ತಡೆಗಡಿವೆನೆಂದೊದಱುತದೆ ನೃಪ
ನೊಡೆತನಕೆ ನೀ ಬಯಸಿದಾ ಮತವುಂಟೆ ರಿಪುಗಳಲಿ ।
ನುಡಿದ ಭಾಷೆಗೆ ನಾವು ಹೇಳಿತ
ನೊಡಬಡುವ ನೀನಲ್ಲ ಕುರುಪತಿ
ಬಿಡದೆ ನಿನ್ನನು ಸಲಹಿತಕ್ಕುಪಕಾರಿ ನೀನೆಂದ ॥ ೩೮

ಎಲವೊ ನಿನ್ನನು ಜಗವಱಿಯೆ ಕ
ಬ್ಬಿಲನ ಮಗನನು ಮಱಸಿ ಕುರುಪತಿ
ಕುಲಜನನು ಮಾಡಿದನಲಾ ಒಡನುಂಡು ಪತಿಕರಿಸಿ ।
ನೆಲನು ಹೇಸದೆ ನಿನ್ನ ಕೀರ್ತಿಯು
ಬೆಳಗು ಮಾಸದೆ ಬಿಡದೆ ಸಾಕಿದ
ಹೊಲೆಯನವಸರಕೊದಗುವನು ನೀ ಕಷ್ಟ ಹೋಗೆಂದ ॥ ೩೯

ನಂಬಿ ಹಿಡಿದರೆ ನದಿಯು ಮಗ ಹಗೆ
ಯಂಬಿಗಿತ್ತನು ಕಾಯುವನು ಮಗ
ನೆಂಬ ನೆವದಲಿ ತನುವ ಬಿಸುಟನು ಗರುಡಿಯಾಚಾರ್ಯ ।
ಅಂಬು ಬೆಸನನು ಬೇಡಿದಡೆ [1]ನೀ
ನೆಂಬನೀ ವಿಧಿಯಾದೆ[1] ಮೂವರ
ನಂಬಿ ಕೌರವ ಕೆಟ್ಟನಕಟಕಟೆಂದನಾ ಶಲ್ಯ ॥ ೪೦

ಮಾತೆಗಿತ್ತನು ಭಾಷೆಯನು ನಿ
ನ್ನಾತಗಳೊಳೈವರೊಳಗಾರಿದಿ
ರಾತಡೆಯು ತಲೆಗಾ[2]ದು ಬಿಡುವೆನು[2] ಕೊಲುವುದಿಲ್ಲೆಂದು ।
ಮಾತುಗಳು ಕವಲಾದ ಬಳಿಕಿ
ನ್ನೇತಕೀ ತನುವಿದನು ಪಾರ್ಥನ
ಖಾತಿಗೊಪ್ಪಿಸಿ ಕಳೆವೆನೆಂದನು ತನ್ನ ಮನದೊಳಗೆ ॥ ೪೧

ಮರುಳಲಾ ಮಾದ್ರೇಶ ಮರಳಿದ
ಶರವ ತೊಡುವೆನೆ ಸ್ವೈರಿಸೆನೆ ಕಾ
ತರಿಸಿ ವಾಘೆಯ ಬಿಸುಟು ಕಿಡಿಕಿಡಿವೋಗಿ ಖಾತಿಯಲಿ ।

---

[1] ತೊಟ್ಟಂಬ ತೊಡಲೊಲ್ಲೆಂಬ (ಟ), ಮರಳಂಬ ತೊಡಚದೆ ಕರ್ಣ (ಫ.ದ), ಮರಳಂಬ ತೊಡದಾ ಕರ್ಣ (ಬ). [2] ಯ್ವನಲ್ಲದೆ (ಗ.ಫ.ತ.ದ).

ಅರಸನೊಲಿದಂತಾಗಲೆನ್ನದು
ಮರುಳುತನ ಕುಲಹೀನನಲಿ ಗುಣ
ವಱಸಲೇಕೆಂದೆನುತ ಧುಮ್ಮಿಕ್ಕಿದನು ಧಾರುಣಿಗೆ ॥ ೪೨

ಕಂಡುದೀ ವ್ಯತಿಕರವನೀತನ
ನಂಡಲೆದು ಫಲವಿಲ್ಲಲಾ ಕೈ
ಕೊಂಡು ನೋಡುವೆನೆನ್ನ ಸಾಮರ್ಥ್ಯದ ಸಘಾಡದಲಿ ।
ಚಂಡಿಯಾದೆನು ತಾನೆನುತ ಖತಿ
ಗೊಂಡು ಮರಳಿತು ಸರ್ಪಶರವಾ
ಖಂಡಳಾತ್ಮಜನತ್ತ ಹಾಳಾಹಳದ ಚೂಣಿಯಲಿ ॥ ೪೩

ಇವನ ಬಲ್ಲೈ ಪಾರ್ಥ ಚಕ್ಷು
ಶ್ರವನಿವನು ತಕ್ಷಕನ ಮಗ ಖಾಂ
ಡವದ ಬೇಳಂಬದಲಿ ಬದುಕಿದ ತಲೆಯೊಳಡಹಾಯ್ದು ।
ಇವನ ಮೂಡಿಗೆಯೊಳಗೆ ಶರವಾ
ಯ್ತಿವನು ತಾನೇ ಮರಳಿದನು ನೀ
ನವಧರಿಸಿಕೊಳ್ಳೆನುತ ನುಡಿದನು ದೈತ್ಯರಿಪು ನಗುತ ॥ ೪೪

ಅರಸ ಕೇಳೈ ಕರ್ಣಶಕ್ತಿ
ಸ್ಫುರಣಸಹಿತೀ ಬಾಣವತಿ ದು
ರ್ಧರವದಲ್ಲದೆ ಬಱಯ ವಿಷಮುಬ್ಬರದ ಸಾಹಸವ ।
ನರನಲೇ ಕೈಕೊಳ್ಳದೀ ಬಹ
ಸರಳನೈದಂಬುಗಳಲೆಡೆಯಲಿ
ತಱದು ಬಿಸುಟನು ವೀರನಾರಾಯಣನ ನೇಮದಲಿ ॥ ೪೫

ಇಪ್ಪತ್ತೈದನೆಯ ಸಂಧಿ ಮುಗಿದುದು.

ಇಪ್ಪತ್ತಾರನೆಯ ಸಂಧಿ

ಸೂಚನೆ ॥ ಚಂಡ ಭುಜಬಲ ವಿಕ್ರಮನ ಮಾ
ರ್ತಂಡತನಯನ ವಿಜಯಸಿರಿ ಮುಂ
ಕೊಂಡು ಮನ್ನಿಸಿ ಭುಜಕೆ ಬಂ[1]ದಳು[1] ಕಲಿ ಧನಂಜಯನ ॥

ಕೇಳು ಧೃತರಾಷ್ಟ್ರಾವನಿಪ ನಿ
ನ್ನಾಳ ಜಯಸಿರಿ ಸರ್ಪಬಾಣದ
ಮೇಳೆಯದ ಸೀಮೆಯಲಿ ನಿಂದುದು ಹಲವು ಮಾತೇನು ।
ಹೇಳಿ ಫಲವೇನಿನ್ನು ಮುಂದಣ
ಕಾಳೆಗದ ಕರ್ಣಾಮೃತದ ಮಳೆ
ಗಾಲ ಮಾದು ವಿಲೋಚನದ ಮಳೆಗಾಲವಾಯ್ತೆಂದ ॥ ೧

ಕಳಿದ ಹೂವಿನ ಪರಿಮಳವೊ ಧರೆ
ಗಿಳಿದ ಸೂರ್ಯಪ್ರಭೆಯೊ ಶರದದ
ಹೊಳೆಯೊ ಮೇಘಸ್ಥಿತಿಯೊ ಸುರಪತಿ ಚಾಪ ವಿಭ್ರಮವೋ ।
ಇಳಿದ ಜವ್ವನದೊಲುಮೆಯೋ ಕುರು
ಬಲವ ಕಂಡೆನು ಜೀಯ ಜಯದ
ಗ್ಗಳಿಕೆಗಳ ಜಾಱುಗಳ ನಿನ್ನ ಕುಮಾರನೊಡ್ಡಿನಲಿ ॥ ೨

ಆಗಳಳಿದುದು ಸರ್ಪಶರ ತಾ
ನಾಗಳೇ ಕುರುರಾಯ ಭುಜವನು
ನೀಗಿದಳು ಜಯವಧು ಧರಾವಧು ಭಾಗ್ಯವಧು ಸಹಿತ ।
ಆಗಳೇ ಬಿನ್ನೈಸೆನೇ ರಣ
ದಾಗುಹೋಗಿನ ಹೊಱಗೆಯನು ತಾ
ನೀಗಿ ಬಿಸುಟನು ತನ್ನ ಸತ್ಯಸ್ಥಿತಿಗೆ ಕಲಿ ಕರ್ಣ ॥ ೩

ಆದ[2]ರೇನದು[2] ಮತ್ತೆ ಕರ್ಣನ
ಕೈದುಕಾಱತನಕ್ಕೆ ಸುಭಟರು
ಮೇದಿನಿಯೊಳಾರುಂಟು ಪಡಿ ದ್ವೈವಾಭಿಮುಖವುಳಿಯೆ ।

[1] ದುದು (ಕ). [2] ಡೇನ್ಯೆ (ಕ).

ಹೋದೆ ಹೋಗಿನ್ನೆನುತ ಕಣೆಗಳ
ಸಾದುಗಳ ತನಿವೀರರಸದಲಿ
ತೇದು ಚಿತ್ರವ ಬರೆದನರ್ಜುನನಂಗಭಿತ್ತಿಯಲಿ ‖* ೪

ಮತ್ತೆ ಕೃಷ್ಣನನೆಚ್ಚು ಹನುಮನ
ತೆತ್ತಿಸಿದ ಕೂರಂಬಿನಲಿ ಕೈ
ವರ್ತಿಸಿದನೀರೆಂಟು ಶರವನು ತುರಗದೇಹದಲಿ ।
ಹೊ[1]ತ್ತಿದುದು[1] ಕಡುಗೋಪ ವಹ್ನಿಯೊ
ಳತ್ತಲದೆ ನಿಲ್ಲೆನುತ ಪಾರ್ಥನ
ಮೆತ್ತಿ ನೂಱಂಬಿನಲಿ ಪುನರಪಿ ಕಪಿಯನೊಡೆಯೆಚ್ಚ ‖ ೫

ನೆಲನ ಬೇಟದ ಬೇಗೆಗೋಸುಗ
ರಳಿವರಿವದಿರು ಪಾಂಡುನಂದನ
ರಳಿಯಲವದಿರ ಬಳಿಯ ವೇಳಾಯಿತನು ಕೃಷ್ಣ ಗಡ ।
ಅಳಿಯಲಥವಾ ನಿಲಲಿ ಹಣುಹಂ
ಪಲು ಮೆಲಿದು ನೀನಿವರ ಬಲೆಯಲಿ
ಸಿಲುಕಿ ನೊಂದ್ಯೆ ತಂದೆ ಪವನಜ ಎಂದನಾ ಕರ್ಣ ‖ ೬

ಬಾಯಿಬಡಿಕನಲಾ ವೃಥಾ ರಾ
ಧೇಯ ಮದವೇಕಿನ್ನು ನಿನಗಹಿ
ಸಾಯಕದ ಸಾವಿನಲಿ ನೀರಿಳಿಸುವೆನು ನೆತ್ತರಲಿ ।

---

* ಈ ಪದ್ಯವಾದಮೇಲೆ (ಗ.ನ.ಬ) ಪ್ರತಿಗಳಲ್ಲಿ ಕೆಳಗಿನ ಪದ್ಯಗಳು ಹೆಚ್ಚಾಗಿವೆ :—

ಇಳಿದು ಹೋದಡೆ ಶಲ್ಯನೊಡನ
ಗ್ಗಳಿಕೆ ಹೋಯಿತೆ ತನ್ನ ಭುಜಬಲ
ತೊಲಗಿತೇಯಸಹಾಯಶೂರಗೆ ಪರರ ಹಂಗೇಕೆ ।
ಗೆಲುವೆನಹಿತನನೆಂದು ತಾವರೆ
ಗೆಳೆಯನಣುಗನು ಧೃತಿಮಿಗಲು ಕೈ
ಚಳಕದಲಿ ತೆಗೆದೆಸಲು ಬೆಱಗಾಯಿತ್ತು ಸುರಕಟಕ ‖ ೧

ಚಳಕದಲಿ ತೆಗೆದೆಸುವ ಚಾಪವ
ನಿಳುಹುವನು ರಥದೊಳಗೆ ವಾಘೆಯು
ಸೆಳೆದು ತುರಗವನದುಕಿ ಸುಳಿಸುವನೆಡಬಲಕೆ ರಥವ ।
ಬಲುಹು ತನ್ನದು ಸಾರಥಿತ್ವದ
ಕಲುಹೆ ತನ್ನದು ರಣದ ಕೌತೂ
ಹಳದ ಕರ್ಣನೊಳಾರು ಸರಿಯೆನುತಿರ್ದುದಮರಗಣ ‖ ೨

[1] ತ್ತಿಕೀ (ಬ), ತ್ತುತಿದೆ (ಘ.ತ).

ತಾಯ ಬಸುಱಿಂಬಿಲ್ಲ ನೀನುಳಿ
ವಾಯತಿಕೆಯಿನ್ನೆಂತು ಕೌರವ
ರಾಯ ನೋಡಲಿ ಕರೆಯೆನುತ ತೆಗೆದೆಚ್ಚನಾ ಪಾರ್ಥ ॥ ೭

ಆಱು ಶರದಿಂದೆಚ್ಚು ಮಗುಳೀ
ರಾಱು ಬಾಣದಲೌಕಿ ಮೂವ
ತ್ತಾಱು ಮಾರ್ಗಣದಿಂದ ಮುಕ್ಕುಱುಕಿದನು ರಿಪುಭಟನ ।
ಮೂಱು ಬಾಣದಲರಿಯ ದೇಹವ
ಕೀಱಿದನು ಮತ್ತೆರಡು ಶರದಲಿ
ಜಾಱಲೆಚ್ಚನು ಜಱಿದು ಕರ್ಣನ ಕರ್ಣಕುಂಡಲವ ॥ ೮

ಜೋಡ ಕಡಿದನು ಸೀಸಕವನೀ
ಡಾಡಿದನು ಕೆಲಬಲದ ಕಣೆಗಳ
ನೀಡುಕಾಱರನಿಕ್ಕಿದನು ಗಱಿಸಹಿತ ಸರಳುಗಿಯೆ ।
ಹೂಡಿದಂಬಿನ ಹೊದೆಯ ಬಂಡಿಯ
ತೋಡ ಕಡಿದನು ಛತ್ರ ಚಮರದ
ಝಾಡಿಗಳ ತಱಿದೊಟ್ಟಿದನು ಕಲಿ ಪಾರ್ಥ ನಿಮಿಷದಲಿ ॥ ೯

ಈತನಬ್ಬುಡಿಸುವನೆ ಬಳಿಕಿನೊ
ಳಾ ತತುಕ್ಷಣವರ್ಜುನನ ಚಮು
ರಾತಪತ್ರವ್ಯೂಹವನು ಕೈದುಗಳ ಬಂಡಿಗಳ ।
ಘಾತಿಸಿದನೆಡಬಲದ ಸುಭಟ
ವ್ರಾತವನು ಕೆದಱಿದನು ಸರಳ ವಿ
ಘಾತಿಯಲಿ ಬಲುಘಾಯವಡೆದನು ಪಾರ್ಥನಡಿಗಡಿಗೆ ॥ ೧೦

ಅರಸ ಹೇಳುವುದೇನು ರಾಯನ
ಸಿರಿಯ ಪ್ರೈಸರವನು ಸುಯೋಧನ
ನರಸುತನದಾಧಾರ ಮೂಲಸ್ತಂಭ ಭಂಜನವ ।
ನರನ [1]ಜಯವೆಲ್ಲಿಯದು[1] ದೈವವ
ಮರುಳುಮಾಡಿದರವರು ನಿಮ್ಮಯ
ಧರಣಿ ನಿಮಗನುಚಿತವ ನೆನೆದಳು ಹೇಳಲೇನೆಂದ ॥ ೧೧

---

[1] ಗೆಲವಿನಿತಿಲ್ಲ (ಕ).

ಧರೆ ನೆನೆದ ದುಷ್ಕೃತವದೇನೆಂ
ದರಸ ಬೆಸಗೊಂಬೈ ನಿರಂತರ
ಸುರಿವ ರುಧಿರಾಸಾರದಲಿ ಕೆಸಱುದ್ದು ಕಳನೊಳಗೆ ।
ಹರಿವ ಬಿಂಕದ ರಥದ ಗಾಲಿಯ
ಗರುವತನ ಗಾಳಾಯ್ತಲೇ ಖೊ
ಪ್ಪರಿಸಿ ತಗ್ಗಿತು ತೇರು ತಡೆದುದು ಭಟನ ಸಾಹಸವ ॥* ೧೨

ಗಾಲಿಯದ್ದವು ಕೂಡೆ ಯಂತ್ರದ
ಕೀಲುಗಳು ಕಳಚಿದವು ಹಯತತಿ
ತೂಳಿ ಸತ್ವದಲೌಕಿ ಸೆಳೆದವು ಕುಸಿದು ನಿಜಮುಖವ ।
ಮೇಲು ಮಿಡುಕದು ತೇರು ಕುರುಬಲ
ಜಾಲ ಜರಿದುದು ವೈರಿಬಲದಲಿ
ಸೂಳವಿಸಿದರು ಭುಜವನೊದಱುತು ಬೆರಳ ಬಾಯ್ಗಳಲಿ ॥ ೧೩

ಮೂಗಿನಲಿ ಬೆರಳಿಟ್ಟು ಮಕುಟವ
ತೂಗಿ ತೊನೆದನು ಪೂತು ಮಝು ನಿ
ರ್ಭಾಗಧೇಯನು ರಾಯನಕಟಾ ಶಿವ ಮಹಾದೇವ ।
ಈಗಳದು ತಾನೇನು ವಿಧಿ ಬರೆ
ದೋಗಟೆಯೊ ಕುರುವಂಶ ವಜ್ರದ
ಬೇಗಡೆಯೊ ಮಾವಾ ಎನುತ ಮಱುಗಿದನು ಕಲಿ ಕರ್ಣ ॥ ೧೪

ಶಿವನ ಬಲುಹುಂಟೆಂಬೆನೇ ಶಿವ
ನವರ ಕಡೆ ಹರಿಯೆಂಬೆನೇ ಪಾಂ
ಡವರ ಬಂಡಿಯ ಬೋವನಿಂದ್ರಾದ್ಯರು ಸಹಾಯಿಗಳು ।
ಅವರು ಸಾಕ್ಷಾತರ್ಜುನರು ನ
ಮ್ಮವನಿ ನಮಗುಂಟೆಂಬೆನೇ ಕೌ
ರವನ ಪುಣ್ಯವನಱಿಯೆನಿದು ಹದನೆಂದನಾ ಕರ್ಣ ॥ ೧೫

---

* ಈ ಪದ್ಯವಾದಮೇಲೆ (ಕ.ಘ.ಟ.ದ.ಪ) ಪ್ರತಿಗಳಲ್ಲಿ ಕೆಳಗಿನ ಪದ್ಯ ಹೆಚ್ಚಾಗಿದೆ :—

ದುರುಳ ದುರಿಯೋಧನನ ರಾಜ್ಯೈ
ಶ್ವರಿಯುವಡಗಿದ್ದಂತೆ ಕರ್ಣನ
ತುರಗ ಸಹಿತವನಿಯೊಳಗದ್ದುದು ತೇರು ಕುಕ್ಕಿಱುಸಿ ।
ತೆರಳ ವಾಘೆಯು ಸೆಳದು ಕಟ್ಟಿಯ
ತಿರುಹಿ ಚಪ್ಪರಿಸಿದರೆ ಸತ್ವದ
ಉರವಣಿಸಿ ಜವಗುಂದಿ ತಲೆವಾಗಿದವು ತೇಜಿಗಳು ॥

ಇಳುಹಿದನು ರಥದೊಳಗೆ ಚಾಪವ
ನೆಳವಡಿಸಿದನು ಸೆಱಗನಲ್ಲಿಂ
ದಿಳಿದು ಗಾಲಿಯನಲುಗಿ ಪಾರ್ಥನ ನೋಡಿ ನಸುನಗುತ ।
ಎಲೆ ಧನಂಜಯ ಸೈರಿಸುವುದರೆ
ಗಳಿಗೆಯನು ರಥವೆತ್ತಿ ನಿನಗಾ
ನೆಳವಿಗೊಡುವೆನು ತನ್ನ ಪರಿಯನು ಬಳಿಕ ನೋಡೆಂದ ॥ ೧೬

*ರೂಢಿಸಿದ ಭಟ ನೀನು ಪಂಥದ
ಪಾಡುಗಳ ಬಲ್ಲವನು ಶಾಸ್ತ್ರವ
ಖೋಡಿಗಳೆವವನಲ್ಲ ಲೌಕಿಕ ವೈದಿಕ ಸ್ಥಿತಿಯ ।
[1]ನಾಡೆ[1] ಬಲ್ಲಿರಿ ಶಸ್ತ್ರಹೀನರ
ಕೂಡೆ ವಾಹನಹೀನರಲಿ ಕೈ
ಮಾಡಲನುಚಿತವೆಂಬ [2]ಮಾರ್ಗ[2]ವನೆಂದನಾ ಕರ್ಣ ॥ ೧೭

ಎನುತ ಗಾಲಿಯನಲುಗಿ ಕೀಲ
ಚ್ಚಿನಲಿ ಮುಂಗೈಗೊಟ್ಟು ಮೊಳಕಾ
ಲಿನಲಿ ಧರಣಿಯನೌಕಿ ತಗ್ಗಿದ ರಥವ ನೆಗಹುತಿರೆ ।
ದನುಜರಿಪು ಚಮ್ಮಟಿಗೆಯಲಿ ಫಲು
ಗುಣನ ತಿವಿದನು ನೋಡು ರಾಧಾ
ತನುಜನಿರವನು ಬೇಗಮಾಡೆಂದರ್ಜುನನ ಜಱೆದ ॥ ೧೮

ಎಸು ಮರುಳೆ ಗಾಂಡೀವಿಯಾಪ
ತ್ತೆಸಗಿದಾಗಳೆ ಹಗೆಯ ಗೆಲುವುದು
ವಸುಮತೀಶರ ನೀತಿ ತೊಡು ತೊಡು ದಿವ್ಯಮಾರ್ಗಣವ
ವಿಷಮವೀರನು ರಥವ ಮೇಳಾ
ಪಿಸದ ಮುನ್ನವೆ ಹ[3]ಱು[3]ವ ನೆನೆ ಸೈ
ರಿಸಿದ ಬಳಿಕೀ ಕರ್ಣ ಕೈಕೊಂಬನೆ ತ್ರಿಯಂಬಕನ ॥ ೧೯

ಏನನೆಂಬೆನು ಜೀಯ ಕರ್ಣಂ
ಗೇನಹನೊ ಫಲುಗುಣನು ಬಳಿಕಾ
ದಾನವಾರಿಯ ನುಡಿಯ ಕೇಳಿದು ಕೇಳಿದಾಕ್ಷಣಕೆ ।

---

* 'ರೂಢಿಸಿದ' ಎಂಬ ಶಬ್ದವು ಪದ್ಯದ ಆದಿಯಲ್ಲಿ ಬರುವೆಡೆಯಲ್ಲೆಲ್ಲಾ ಓಲೆ ಪ್ರತಿಗಳಲ್ಲಿ ಆದಿ ರಕಾರವು ಶಕಟರೇಫವಾಗಿಯೇ ಬರೆದಿರುತ್ತದೆ.

[1] ನಾಡ (ಕ.ಖ.ತ), ಆಡ (ಫ). [2] ಶಾಸ್ತ್ರ (ಕ.ಗ). [3] ೞು (ಕ.ಖ.ತ).

ಗ್ಲಾನಿಯಲಿ ಮುಳುಗಿದನು ಮನದಭಿ
ಮಾನ ಸರ್ಪನ ಕೆಡಹಿ ಧೈರ್ಯನಿ
ಧಾನವನು [1]ಕೈ[1]ಸೂರೆಗೊಂಡುದು ಶೋಕವರ್ಜುನನ ॥ ೨೦

ಮುಕ್ಕಿದನು ಮಹಿಮೆಯನು ಕಂಗಳು
ಮುಕ್ಕುಳಿಸಿದವು ನೀರನಹಿತನೊ
ಳುಕ್ಕುವನುರಾಗದಲಿ ಕೊಂಡನು ಬಳಿಕ ಪೀಳಿಯವ ।
ಸಿಕ್ಕಿದನು ಕರುಣಾಲತಾಂಗಿಯ
ತೆಕ್ಕೆಯಲಿ ನಾನೇನ ಹೇಳುವೆ
ನೊಕ್ಕಲಿಕ್ಕಿತು ಶೋಕವರ್ಜುನನಂತರಂಗದಲಿ ॥* ೨೧

ತೇರಿನಲಿ ಚಾಚಿದನು ಮೆಲ್ಲನೆ
ಭಾರಿ ಧನುವನು ಕಯ್ಯ ಕಣೆಗಳ
ನೋರೆಯಲಿ [2]ಸೈತಿರಿಸೆ[2] ಕಂಡನು ಮತ್ತೆ ಮುರವೈರಿ ।
ಹಾರವೇಕೈ ಕಂಗಳಲಿ ಕ
ಸ್ತೂರಿಯೇಕೈ ಕದಪಿನಲಿ ಶೃಂ
ಗಾರವಿದು ವಿಪರೀತವೇನೈ ಪಾರ್ಥ ಹೇಳೆಂದ ॥† ೨೨

ದೇವ ಹಗೆಯಾಗಿರನು ಕರ್ಣನಿ
ದಾವ ಹದನೆಂದಱಿಯೆ ಮನದಲಿ
ನೋವು ಮಿಗುವುದು ಕೈಗಳೇಳವು ತುಡುಕುವಡೆ ಧನುವ ।
ಜೀವವೀತನಮೇಲೆ ಕರಗುವು
ದಾವ ಸಖನೋ ಶತ್ರುವೆಂಬೀ
ಭಾವನೆಯು ಬಗೆ ಬೀಳುಕೊಂಡುದು ಕರ್ಣನಾರೆಂದ ॥ ೨೩

ಕೌರವನ ಮೇಲಿಲ್ಲದಗ್ಗದ
ವೈರವೀತನಮೇಲೆ ನಮಗಪ
ಕಾರಿಯಾತನು ಮರಣದನುಸಂಧಾನವಿನ್ನೆಬರ ।
ವೈರವುಪಶಮಿಸಿತು ಯುಧಿಷ್ಠಿರ
ವೀರನಿಂದಿಮ್ಮಡಿಯು ನೇಹದ
ಭಾರವಣೆ ತೋಱುವುದಿದೇನೈ ಕರ್ಣನಾರೆಂದ ॥ ೨೪

---

[1] ಸರೆ (ಕ ಖ.ಘ.ಚ.ದ). * ಈ ಪದ್ಯ (ದ) ಪ್ರತಿಯಲ್ಲಿಲ್ಲ. [2] ಸಸಿನೆಯಲಿ (ತ). † ಇಲ್ಲಿಂದ ಮುಂದಕ್ಕೆ ಬೇರೆಬೇರೆ ಪ್ರತಿಗಳಲ್ಲಿ ಪದ್ಯಗಳ ಕ್ರಮವು ಬೇರೆ ಬೇರೆ ರೀತಿಯಾಗಿದೆ.

ಆಸುರದ ವ್ಯಾಮೋಹವಿದು ಡೊ
ಳ್ಳಾಸವೋ ಕೌರವರ ಥಟ್ಟಿನ
ವೈಸಿಕವೊ ನಿಮ್ಮಡಿಯ ಮಾಯಾಮಯದ ಮಾಲೆಗಳೊ ।
ವಾಸಿ ಬೀತುದು ಛಲಗಿಲದ ಕಾ
ಳಾಸ ಸೋತುದು ಕರ್ಣನಲಿ ಹಿರಿ
ದಾಸೆಯಾಯಿತು ಕೃಷ್ಣ ಕರುಣಿಸು ಕರ್ಣನಾರೆಂದ ॥ ೨೫

ಕಾಲಯವನನುಪಾಯದಿಂದವೆ
ಬೀಳಿಸಿದೆ ಮಾಗಧನನಾ ಪರಿ
ಸೀಳಿಸಿದೆ ಭೀಷ್ಮಾದಿಗಳ ಸೋಲಿಸಿದೆ ಸಾಮದಲಿ ।
ಡಾಳನತಿ ಡೊಂಕಣಿಯ ಠಕ್ಕಿನ
ಠೌಳಿಕಾಱನು ನಿನ್ನ ಮಾಯೆಯ
ಹೇಳಲಮ್ಮೆನು ಕೃಷ್ಣ ಕರುಣಿಸು ಕರ್ಣನಾರೆಂದ ॥ ೨೬

ಋಷಿಗಳನುಮತದಿಂದ ಕುಂತಿಯ
ಬಸುಱಲೇನುದಯಿಸನಲೇ ನೀ
ನಸುರರಿಪು ಬಹುಕಪಟ ನಾಟಕ ಸೂತ್ರಧಾರನಲೆ ।
ವಸುಮತಿಯ ಭಾರವನು ಸಲೆ ಹಿಂ
ಗಿಸುವ ಕೃತ್ಯವು ನಿನ್ನದೆನಗು
ಬ್ಬಸವಿದೇನೆಂದಱಿಯೆನಕಟಾ ಕರ್ಣನಾರೆಂದ ॥ ೨೭

ಧರೆಯ [1]ಬಿಡುವೆವು[1] ಕುರುಪತಿಗೆ ನಾ
ವಱುವರೊಡವುಟ್ಟಿದರು ವಿಪಿನಾಂ
ತರದೊಳಗೆ ಭಜಿಸುವೆವು ನಿನ್ನನು ಭಾವಶುದ್ಧಿಯಲಿ ।
ತೆರಳುವೀ ಸಿರಿಗೋಸುಗರ ಸೋ
ದರನ ಕೊಲುವೆನೆ ಕೃಷ್ಣ ಕರುಣಿಸು
ಕರುಣಿಸಕಟಾ ಕೃಷ್ಣ ಕರುಣಿಸು ಕರ್ಣನಾರೆಂದ ॥ ೨೮

ದೂಱುವವರಾವಲ್ಲ ಕರುಣವ
ತೋಱು ಬಿನ್ನಹಮಾಡಿದೆನು ಹಗೆ
ಯೋಱದಿವನಲಿ ಸೇರುವುದು ಸೋದರದ ಸಂಬಂಧ ।

---

[1] ಬಿಟ್ಟೆವು (ಕ.ಗ).

ಆಱೆನೀತನ ಕೊಲೆಗೆ ಹೃದಯವ
ಸೂಱೆಗೊಂಡನು ಕರ್ಣನಕಟಾ
ತೋಱು ನುಡಿಯಾ ಕೃಷ್ಣ ಕರುಣಿಸು ಕರ್ಣನಾರೆಂದ ॥ ೨೯

ಅರಸ ಕೇಳ್ಕೈ ಬಳಿಕ ಪಾರ್ಥನ
ಕರುಣರಸದಾಳಾಪ ವಾಗ್ವಿ
ಸ್ತರಕೆ ಮನದಲಿ ಮಱುಗಿದನು ಮುರವೈರಿ ನಸುನಗುತ ।
ಕೆರಳಿದನು ಮಾತಿನಲಿ ಸುಡು ಬಾ
ಹಿರನಲಾ ನೀ ನಿನ್ನ ವಂಶಕೆ
ಸರಿಯೆ ಸೂತನ ಮಗನಿದೇನೆಂದಸುರರಿಪು ಜಱೆದ ॥ ೩೦

ವಾಸಿಗಾದುದೆ ಜಾತಿಸಂಕರ
ಬೇಸಱಾಯಿತೆ ಧೃತಿಗೆ ಕಲಿತನ
ಕೀಸು ವೊಲೆಗಳು ಮೂಡಿದವಲಾ ಪಾರ್ಥ ಸಮರದಲಿ ।
[1]ಹೂಸಕದ ಛಲವೀಯಹಂ[1]ಕೃತಿ
ಮೀಸಲಳಿದುದೆ ಶಿವಶಿವಾ ನಿ
ರ್ದೋಷದಲಿ ಬಹುದೋಷವಿದು ವಿಪರೀತವಾಯ್ತೆಂದ ॥ ೩೧

ಕ್ಷಿತಿಯೊಳೀ ಕ್ಷತ್ರಿಯರ ಧರ್ಮ
ಸ್ಥಿತಿಯನಱಿಯಾ ಕೃಷ್ಣ ಚಾಪ
ಚ್ಯುತರನಪಗತ ವಾಹನರ ಪರಿಮುಕ್ತ ಕೇಶಿಗಳ ।
ಗತಿವಿಹೀನರ ದೈನ್ಯವಾಚಾ
ಯುತರ ತರು ವಲ್ಮೀಕ ಜಲ ಸಂ
ಗತರನಿಱುವುದು ಧರ್ಮವೇ ನಾವಱಿಯೆವಿದನೆಂದ ॥ ೩೨

ಹೇಳು ಹೇಳಿನ್ನೊಮ್ಮೆ ಧರ್ಮವ
ಕೇಳಿದಱಿಯೆವು ನಿಮ್ಮ ಕಯ್ಯಲಿ
ಕೇಳಲಾಗದೆ ರಾಜಧರ್ಮ ಪುರಾಣ ಸಂಗತಿಯ ।
ಆಳವನಘಾಟವೆ ದೊಠಾರಿಸಿ
ಸೋಲಿಸುವುದೇನರಿದೆ ಬಲುಗೈ
ಯಾಳಲಾ ನೀ ರಣಕೆ ದಿಟ ವಸುದೇವನಾಣೆಂದ ॥ ೩೩

---

[1] ದೂಸಕದ ಛಲಛಲವಹಂ (ಘ), ದೂಸಕದ ಫಲವೀಯಹಂ (ತ). ದೂಸಕನ ಛಲವೀಯಹಂ (ಪ).

ಈಗಲೀ ಧರ್ಮಶ್ರವಣ ನೀ
ನಾಗಳೇಱಸಿ ನುಡಿದ ಭಾಷೆಗೆ
ಮೂಗುಹೋದುದೆ ಮಱದೆಲಾ ಮಾತುಗಳು ಹಳಸುವವೆ ।
ಹೋಗಲೆಲೆ ಮರುಳೇ ವಿಭಾಡಿಸು
ಬೇಗದಲಿ ಬಹುರಾಜಕಾರ್ಯವ
ನೀಗಳೇ ತಿದ್ದುವೆನು ತೊಲಗಿಸು ಸೂತಜನ ಶಿರವ ॥ ೩೪

ಅಕಟ ನಿಷ್ಕರುಣಿಯೆ ವೃಥಾ ಪಾ
ತಕವಿದೇಕ್ಕೆ ಹೇಳು ಜಯಕಾ
ಮುಕರು ನಾವೊಲ್ಲದಡೆ ನಿಮಗೇಕೀಸು ನಿರ್ಬಂಧ ।
ಪ್ರಕಟ ಕುರುವಂಶದಲಿ ಯದುರಾ
ಜಕರೊಡನೆ ಹಗೆಯಿಲ್ಲಲೇ ಮತಿ
ವಿಕಳನಾದೆನು ಕೃಷ್ಣ ಕರ್ಣನ ಕೊಲುವನಲ್ಲೆಂದ ॥ ೩೫

ಬಿಸುಟು ಹೋದನು ರಥವ ಸಾರಥಿ
ವಸುಧೆಯಲಿ ರಥವದ್ದು ಕೆಡೆದುದು
ನಿಶಿತಮಾರ್ಗಣವಿಲ್ಲ ಕಯ್ಯಲಿ ದಿವ್ಯಧನುವಿಲ್ಲ ।
ಎಸುವಡೆಂತೇಳುವುವು ಕಯ್ ನೀ
ದೆಸನುವಡೆ ಮನವೆಂತು ಬಂದುದು
ಬಸುಱ ಶಿಖಿ ಬಲುಹಾಯ್ತು ಕರ್ಣನ ಕೊಲುವನಲ್ಲೆಂದ ॥ ೩೬

ಗುರುವನೆಸುವಡೆ ಮೇಣು ಭೀಷ್ಮನ
ಸರಳ ತಡಿಕೆಗೆ ಚಾಚುವಡೆ ಧಿ
ಕ್ಕರಿಸುವಡೆ ಕೃಪ ಶಲ್ಯ ಸೈಂಧವ ಮುಖ್ಯ ಬಾಂಧವರ ।
ತೆರಳಿದೆನೆ ತೇರೈಸಿದೆನೆ ಹೇ
ವರಿಸಿದೆನೆ ಹೋರಿದೆನೆ ಕಲಿತನ
ಕರಗಿತೇನೆಂದಱಯೆ ಕರ್ಣನ ಕೊಲುವನಲ್ಲೆಂದ ॥ ೩೭

ಬಳಿಕ ಭೀಮಾದಿಗಳ ಮನದಲಿ
ಸುಳಿದುದೈ ಸಂದೇಹವೀತನ
ಕೊಲುವುದೇನನುಚಿತವೊ ಮೇಣುಚಿತವೊ ಶಿವಾ ಎನುತ ।
ಅಳುಕಿದರು ದ್ರೌಪದಿ ಯುಧಿಷ್ಠಿರ
ರೊಳಗೊಳಗೆ ಸಂತಾಪಶಿಖಿಯಲಿ
[1]ತಳತ ದುಗುಡದ[1] ಬಿಗಿದ ಬೆಱಗಿನೊಳಿದ್ದುದಾಚೆಯಲಿ ॥ ೩೮

---

[1] ಗಳಿತಧೈರ್ಯದ (ಘ.ಟ.ತ.ದ.ಬ).

ಮೊದಲಲೆರಡೊಡ್ಡಿನಲಿ ಸುಷ್ಮಾ
ನದ ಸಘಾಡವ ಕಂಡೆನೀಗಳು
ತುದಿಗೆ ಬರೆವರೆ ಕಂಡೆನಿವರವರೆರಡು ಥಟ್ಟಿನಲಿ ।
ತುದಿವೆರಳ ಕಂಬನಿಯ ಬಳಸಿದ
ಬೆದಱುಗಳ ಕುಕ್ಕುಳಿಸಿದುತ್ಸಾ
ಹದ [1]ವಿಘಾತಿಯ[1] ನಟ್ಟ ಚಿಂತೆಯನರಸ ಕೇಳೆಂದ ॥ ೩೯

ಮತ್ತೆ ಜಱೆದನು ದನುಜರಿಪು ತಲೆ
ಗುತ್ತಿದನು ಕಲಿ ಪಾರ್ಥನಾತನ
ಕುತ್ತಿ ಬರಸೆಳೆದಂತೆ ಭಂಗಿಸಿದನು ಮುರಧ್ವಂಸಿ ।
ಒತ್ತುವವು ಫಲುಗುಣನ ನುಡಿ ಮಿಗೆ
ಕೆತ್ತುವವು ಹರಿವಚನವಾತನ
ಚಿತ್ತವನು ಸಂತೈಸಿ ಹರಿ ತಿಳುಹಿದನು ಸಾಮದಲಿ ॥ ೪೦

ಎಲೆ ಧನಂಜಯ [2]ನೀನು[2] ಹಿಮಕರ
ಕುಲದ ಸುಕುಮಾರಕನು ಲೋಕದ
ಕುಲವಿಹೀನನು ಕರ್ಣನಿವ ನಿನಗೆಂತು ಸರಿಯಹನು ।
ತಲೆಯ ಮಾಱಿ ಶರೀರವನು ಸಲೆ
ಸಲಹಲೋಸುಗ ಕೌರವನ ತಂ
ಬುಲಕೆ ಕಯ್ಯಾಂತವನು ಬಂಧುವೆ ಪಾರ್ಥ ಹೇಳೆಂದ ॥* ೪೧

---

[1] ನಿಹಾರದ (ಖ.ಘ.ತ). [2] ವಿಮಳ (ಕ.ಟ.ದ). * ಈ ಪದ್ಯವಾದ ಮೇಲೆ (ಕ.ಗ.ಟ.ದ) ಪ್ರತಿಗಳಲ್ಲಿ ಮುಂದಿನೆರಡು ಪದ್ಯಗಳು ಹೆಚ್ಚಾಗಿವೆ :—

ಮರುಳೆ ವೀರಭಟಂಗೆ ರಣದಲಿ
ಕರಗುವುದೆ ಶೂರತ್ವವು ನಗುವರ
ನಱುಯಲಾ ನೀನಾರು ದುಷ್ಕುಲ ಕರ್ಣನಿವನಾರು ।
ಸರಳ ಸೆಳೆ ನೀನಹಿತಕರ್ಣನ
ಕೊರಳ ಬಳೆಯನು ಬಳಸು ಬಯಲನು
ಕರುಣೆ ಬೇಡೆಂದಸುರರಿಪು ಥಟ್ಟಿಸಿದನರ್ಜುನನ ॥ ೧

ಮೊರೆಯ ಮೇಲಱದವನನಗ್ಗಿಸಿ
ಸಲಹುವರು ಪುರುಷಾರ್ಥಜೀವಿಯ
ನಿಳಿಕೆ ಗಾಬರು ಸ್ವಾಮಿದ್ರೋಹರನೊಲಿದು ನಂಬುವರು ।
ಕಳಿಯಲದು ಕ್ಷತ್ರಿಯರ ಸಹಜದ
ಬಳಿಕೆ ನೀನರಸಾಗಿ ನಿನ್ನನು
ಕೊಲುವ ಕರ್ಣಂಗೊಲಿದೆ ನೀತಿಯ ವಚನ ದಿಟವೆಂದ ॥ ೨

ಕೇಡ ಹೊತ್ತಿಸಿ ನಿಮ್ಮ ಬೇಂಟೆಯು
ನಾಡಿಸಿ[1]ದನಿವ[1] ಜೂಜನಾಡಿಸಿ
ನಾಡ ಕೊಳಿಸಿದ ಹಿಸುಣನಿವ ನಿಮ್ಮೆಲ್ಲರನು ಕೆಡಿಸಿ ।
ನಾಡ ಸಂಧಾನವನು ನಾವ್ ಮಾ
ತಾಡಲೆಮ್ಮನು ಬಿಗಿಯಲನುವನು
ಮಾಡಿ[2]ಸಿದ[2]ನೀ ಕರ್ಣ ನಿಮಗತಿಹಿತವನಹನೆಂದ ॥ ४೨

ಕೊಲ್ಲನೇ ಅಭಿಮನ್ಯುವನು ಹಗೆ
ಯಲ್ಲವೇ ಮಾರುತಿಯ ಕೊರಳನು
ಬಿಲ್ಲ ಕೊಪ್ಪಿನೊಳೆಳೆಯನೇ ಕೆಡೆಯೆಸನೆ ಧರ್ಮಜನ ।
[3]ಖುಲ್ಲ[3]ನೀತಿಯ ನೆನೆಯದಿರು ನೀ
ನೆಲ್ಲಿಯವನೀ ವೈರಿ ಕರ್ಣನ
ದೆಲ್ಲಿಯವನೆಸು ಮರುಳೆ ಎಂದನು [4]ನಿಜವ ತೋಱಿಸದೆ[4] ॥ ४೩

ಬೀಸಿದನು ನಿಜ ಮಾಯೆಯನು ಡೊ
ಳ್ಳಾಸದಲಿ ಹರಹಿದನು ತಮವನು
ರೋಷವನು ಬಿತ್ತಿದನು ಮನದಲಿ ನರನ ಕಲಿ ಮಾಡಿ ।
ಐಸೆ ಬಳಿಕೇನೆನ್ನಖಿಳ ಗುಣ
ದೋಷ ನಿನ್ನದು ಪುಣ್ಯ ಪಾಪದ
ವಾಸಿ ನಮಗೇಕೆನುತ ಕೊಂಡನು ಧನುವನಾ ಪಾರ್ಥ ॥ ४४

ಹಿಡಿ ಧನುವನನುವಾಗು ಸಾಕಿ
ನ್ನೆಡಬಲನ ಹಾರದಿರೆನುತ ಕಯ್
ಗಡಿಯನೆಚ್ಚನು ನೂಱು ಶರದಲಿ ಸೂತನಂದನನ ।
ತೊಡಗಿತೇ ಕಕ್ಕುಲಿತೆ ಮನದಲಿ
ಫಡ ಎನುತ ನೂಱಿಂಬನೆಡೆಯಲಿ
ಕಡಿದು ಬಿಸುಟನು ಸೆಳೆದು ಕಿಗ್ಗಟ್ಟಿನ ಕಠಾರಿಯಲಿ ॥ ४೫

ರಥವ ಸಂತೈಸಿದನು ಬಳಿಕತಿ
ರಥ ಭಯಂಕರನೇಱಿದನು [5]ನಿಜ
ರಥವನತಿಹರುಷದಲಿ[5] ತೊಳೆದನು ಚರಣ ಕರತಳವ ।
ಪೃಥಿವಿ ನೆನೆದಪಕಾರ ಲೋಕ
ಪ್ರಥಿತವಾಯಿತು ಸಾಕು ಬದುಕಲಿ
ಪೃಥೆಯ ಮಕ್ಕಳೆನುತ್ತ ಕೊಂಡನು ನಗುತ ವೀಳೆಯವ ॥ ४೬

---

[1] ದವನಿ (ಖ.ಟ). [2] ದವ (ಘ.ತ.ದ.ಪ). [3] ಇಲ್ಲಿ (ತ.ಪ). [4] ನಿಜವ ತೋಱಿಸಿದ (ಕ), ಜಱೆದು ಮುರವೈರಿ (ಘ.ತ). [5] ಹಯತತಿಯ ಚಪ್ಪರಿಸಿದನು (ತ).

ಧನುವ ಕೊಂಡನು ಹಯವ ಜಡಿದ
ರ್ಜುನನ ತಟಿಬಿದನಖಿಳ ಕುರುಬಲ
ವನಧಿಗಭಯುವನಿತ್ತು ಮುಸುಕಿದನಂಬಿನಲಿ ನರನ ।
ಕನಲಿದವು ನಿಸ್ಸಾಳ ರಿಪುನೃಪ
ಜನವ ಬಯ್ದವು ಕಹಳೆ ಬಹುವಿಧ
ನಿನದದಲಿ ಗರ್ಜಿಸಿದವೆರಡೊಡ್ಡಿನಲಿ ಘನವಾದ್ಯ ॥ ೪೭

ಅಳುಕಿದನೆ ರಥ ಮುಗ್ಗಿದರೆ ಕಳ
ವಳಿಸಿದನೆ ಶಲ್ಯಾಪಸರಣಕೆ
ಕೆಲಬಲನ ಹಾರಿದನೆ ನರನವಗಡಿಸಿ ಕಾದಿದಡೆ ।
ಬಲಿಮಥನ ಮಝು ಭಾಪು ಪಾಂಡವ
ಬಲ ದಿಶಾಪಟ ರಾಯುಮದನ
ಪ್ರಳಯುಹರ ಭಾಪೆಂದು ಹೊಗಳಿತು ವಂದಿ ಸಂದೋಹ ॥ ೪೮

ಅರಸ ಕೇಳ್ಳೈ ಜೂಜುಗಾಱರ
ಸಿರಿಯ ಸಡಗರ ಕಳಿವಗಲ ತಾ
ವರೆಯ ನಗೆ ಸಜ್ಜನರ ಖ್ಯಾತಿ ನಿತಂಬಿನೀ ಸ್ನೇಹ ।
ಪರಮಯೋಗಿಯ ಲೀಲೆ ಕೌರವ
ರರಸನೊಡ್ಡಿನ ಜಯುವಿದೀಸಱ
ಗರುಡಿಯೊಂದೇ ಶ್ರಮವ ಕೊಡುವುದು ಶಕ್ರಧನುವೆಂದ ॥ ೪೯

*ಉಬ್ಬಿದನು ನಿಸ್ನಾತನಾತನ
ತುಬ್ಬಿನಲಿ ಕುರುಬಲದ ಹರುಷದ
ಜಬ್ಬುರಿಯ ಹುರಿಗೂಡಿ ತೋಱಿತು ಚಾರು ಚತುರಂಗ ।
[1]ತೆಬ್ಬಿ[1] ತುಳುಕುವ ಕಣೆಯ ಕಣೆಯುಲಿ
ಹಬ್ಬಿ ಹರೆದುದು ತೋರದಲಿ ಬಲಿ
ದುಬ್ಬುಗವಳದ ಕಣ್ಣುಗಳು [2]ಕರ್ಣಾರ್ಣವಸಾನದಲಿ[2] ? ॥* ೫೦

---

*ಉಬ್ಬಿದನು ನಿಸ್ನಾತನೀತನ
ತಬ್ಬಿದನು ಕುರುಬಲದ ಹರುಷದ
ಜಬ್ಬುರಿಯ ಹುರಿಗೂಡಿತೊದಱಿತು ಚತುರ ಚತುರಂಗ ।
ತಬ್ಬಿ ತುಳ ಕಣೆಯು ಕಣಗಿಲೆ ಹಬ್ಬಿ
ಹರೆದುದು ಶೋಕದಲಿ ಬಲ
ದುಬ್ಬುಗವಳವ ಕೊಂಡಪೊಲು ಕರ್ಣಾರ್ಣವಸಾನದಲಿ ॥ (ಕ).

[1] ತುಬ್ಬಿ (ಗ.ಟ.ತ.ದ.ಪ). [2] ಕರ್ಣನ ಸಘಾಡದಲಿ (ದ), ಕರ್ಣಾರ್ಣವಹಾನದಲಿ (ಪ).

ಹತ್ತು ಶರದಲಿ ತುರಗವನು ಮೂ
ವತ್ತರಿಲಿ ಮುರವೈರಿಯನು ತೊಂ
ಬತ್ತರಿಲಿ ಫಲುಗುಣನನೈವತ್ತಂಬಿನಲಿ ಕಪಿಯ ।
ಮತ್ತೆ ಮೂವತ್ತರಿಲಿ ಮಗುಳಱು
ವತ್ತರಿಲಿ ನರರಥವ ನೂಱ್ಱೈ
ವತ್ತು ಶರದಲಿ ಘಾಯಗಾಣಿಸಿದನು ಚತುರ್ಬಲವ ॥ ೫೧

ಬಲಜಲಧಿ ಸುಳಿಗೊಂಡು ಪಾರ್ಥನ
ಬಳಿಗೆ ತೆಗೆದುದು ತೆಗೆದುದೀತನ
ಕಲಿತನದ ವಿಕ್ರಮ ಧನಂಜಯನಾ ಧನಂಜಯನ ।
ಅಳುಕಿದರು ಭೀಮಾದಿಗಳು ತ
ಲ್ಲಳಿಸಿತಾಚೆಯ ಥಟ್ಟು ಕೌರವ
ದಳದ ಕಳಕಳ ಕೆಟ್ಟುದೊಂದರೆಗಳಿಗೆ ಮಾತ್ರದಲಿ ॥ ೫೨

ಇಪ್ಪತ್ತಾಱನೆಯ ಸಂಧಿ ಮುಗಿದುದು.

ಇಪ್ಪತ್ತೇಳನೆಯ ಸಂಧಿ

ಸೂಚನೆ ॥ ಸಮರ ಸಾಹಸ[1]ವೀರನನುಪಮ[1]
ಕಮಲಸಖನ ಕುಮಾರನದಟಿಂ
ದಮರನಗರಿಗೆ ನಡೆಯೆ ಹಲುಬಿದ ಕೌರವರ ರಾಯ ॥

ಸಾಲದೇ ಕಥೆಯಿನ್ನು ಮೇಲಣ
ಕಾಳೆಗದ ಮಾತುಗಳನಕಟಾ
ಕೇಳಿ ಜೀವವ [2]ಹಿಡಿ[2]ಯಲಾಪ್ಪೈ ತಂದೆ ಧೃತರಾಷ್ಟ್ರ ।
ಹೇಳುವಡೆ ಕರ್ಣವ್ಯಥೆಯ ಸಂ
ಭಾಳಿಸುವಡೆನಗರಿದು ನುಡಿಗಳ
ಕಾಳಕೂಟವ ಬಡಿಸುವೆನು ಕಿವಿಯಾರೆ ಸವಿಯೆಂದ ॥ ೧

ತೂಳಿದನು ಕಲಿ ಪಾರ್ಥನೀತನ
ಮೇಲೆ ಶಿವಶಿವ ಕಣೆಯ ಕಡೆವಳೆ
ಗಾಲ ತಪ್ಪಲ್ಲೆನುತ ಕಡಿದನು ಕರ್ಣನಂಬುಗಳ ।
ಮೇಲೆಮೇಲೆಚ್ಚಂಬುಗಳ ಸಲೆ
ಸೀಳಿ ಕರ್ಣಧ್ವಜದ ಕಂಭದ
ಕೂಲ ಮುಱಿಯೆಸಲುಡಿದು ಬಿದ್ದುದು ವರ ರಥಾಗ್ರದಲಿ ॥ ೨

ಆ ಮಹಾಧ್ವಜ ದಂಡ ಪಾತದ
[3]ಡಾಮರದ ದಳವುಳಕೆ ಹೆದಱಿತು[3]
ಹಾ ಮಹಾದೇವೇನ ಹೇಳುವೆನೈ ಮಹೀಪತಿಯೆ ।
ಧೂಮ ಚುಂಬಿತ ಚಿತ್ರದಂತೆ ಸ
ನಾಮರಿದ್ದುದು ಸೌಬಲಾಶ್ವ
ತ್ಥಾಮ ಕೃಪ ಕೃತವರ್ಮಕಾದಿಗಳೊಂದು ನಿಮಿಷದಲಿ ॥ ೩

---

[1] ಶೌರ್ಯವೀರನು (ಕ), ಧೀರನನುಪಮ (ಟ.ದ), ವೀರಭುಜಬಲ (ತ.ನ.ಪ.ಬ). [2] ತಡೆ (ಟ.ತ.ದ). [3] ಡಾಮರಕೆ ಪೈಸರಿಸಿತಾಗಳೆ (ಟ.ದ), ಡಾಮರದಲಳ್ಳಿಱುವ ರವವನು (ತ.ಪ).

ಮತ್ತೆ ಕೇಳರಿವಿಕ್ರಮವ ನಭ
ಕೊತ್ತತೀತನ ಶೌರ್ಯವಾತನ
ನೆತ್ತರಲಿ ನಾದಿದನು ನಾನಾವಿಧ ಶರಾವಳಿಯ ।
ಹತ್ತು ಶರದಲಿ ಕರ್ಣ ಚಾಪವ
ಕತ್ತರಿಸಿದನು ಪಾರ್ಥನೀತನ
ಚಿತ್ತದಲಿ ಕರುಣಾರಸಕೆ ಕಾಲಾಟವಾಯ್ತೆಂದ ॥ ४

ದ್ರೋಣ ಭೀಷ್ಮರ ನಚ್ಚಿದರೆ ಮುಂ
ಗಾಣಿಕೆಯಲೇ ಮಾಡಿದರೆನ್ನಯ
ಗೋಣ ಕೊಯ್ದನು ಕೃಷ್ಣ ಮುನ್ನಿನ ಕುಲವನೆಚ್ಚರಿಸಿ ।
ಪ್ರಾಣ ಪಾಂಡವರೆಂಬ [1]ನುಡಿಯನು[1]
ಜಾಣಿನಲಿ ಹರಿ ಬಲಿದನೊಡೆಯುಗೆ
ಕಾಣೆನಾಪ್ತರನೆಂದು ಮನದಲಿ ಮಱುಗಿದನು ಕರ್ಣ ॥ ೫

ಕುಲಕೆ ಕೀಳಿವನೆಂದು ಟಿಕ್ಕರಿ
ಗಳೆದಡಾ ಬಹುಬಂಧುವರ್ಗವ
ನುಳಿದು ಸಿಂಹಾಸನದಲೆನಗಭಿಷೇಕವನು ಮಾಡಿ ।
ಕುಲದ ಮಲಿನವ ತೊಳೆದು ಕೌರವ
ಕುಲದೊಳೊಡವೆಚ್ಚವನಿಪಾಲಕ
ತಿಲಕ ಕುರುಪತಿಗಾಪ್ತರಿಲ್ಲೆಂದಳಲಿದನು ಕರ್ಣ ॥ ೬

ನೋಡಿ ದಣಿಯನು ನಿಚ್ಚಲುಚಿತವ
ಮಾಡಿ ದಣಿಯನು ಖೇಳ ಮೇಳದ
ಲಾಡಿ ದಣಿಯನು ಶಿವಶಿವಾ ತನ್ನೊಡನೆ ಕುರುರಾಯ ।
ಓಡಲಱಿಯದೆ ದ್ರೋಣ ಭೀಷ್ಮರು
ಗೂಡ ತಲೆಗೊಟ್ಟೈಸಱಿಲಿ ತಾ
ಮಾಡಿತೇನರಸಂಗೆನುತ ಮಱುಗಿದನು ಕಲಿ ಕರ್ಣ ॥ ೭

ಮೊದಲಲಾತ್ಮಜರಳಿವನೊಡವು
ಟ್ಟಿದರ [2]ಮೆಯ್ಯಲಿ[2] ಮಱೆದನೊಡವು
ಟ್ಟಿದರು ನೂರ್ವರು ಮಡಿಯೆ ಮಱೆದನು ತನ್ನ ಸುಳಿವಿನಲಿ ।

---

[1] ಬಿರುದನು (ಟ.ತ.ದ.ಪ). [2] ಮರೆಯಲ (ಟ.ನ.ಬ).

ಕದನವೆನ್ನಯ ಸುಳಿವನೊಳಕೊಂ
ಡುದು ಸುಯೋಧನನೃಪತಿಗಿನ್ನಾ
ಸ್ಪದರ ಕಾಣೆನು ಶಿವಶಿವಾ ಎಂದಳಲಿದನು ಕರ್ಣ ॥ ೮

ಸಲಹಿದೊಡೆಯನ ಜೋಳವಾಳಿಗೆ
ತಲೆಯ ಮಾಱುವುದೊಂದು ಪುಣ್ಯದ
[1]ಫಲವು[1] ಮರಣದ ಹೊತ್ತು ಕೃಷ್ಣನ ಕಾಬ ಸುಕೃತಫಲ ।
ಇಳೆಯಮೇಲೆನಗಲ್ಲದಾರಿಗೆ
ಫಲಿಸುವುದು ತಾ ಧನ್ಯನೆನುತವೆ
ಹಳಚದಸುರಾಂತಕನನೀಕ್ಷಿಸುತಿರ್ದನಾ ಕರ್ಣ ॥ ೯

ಒಳಗೆ ಹೃದಯಾಂಬುಜದ ಮಧ್ಯ
ಸ್ಥಳದೊಳಗೆ ಮುರವೈರಿಯನು ಹೊಱ
ವಳಯದಲಿ ಫಲುಗುಣನ ಮಣಿರಥದಗ್ರಭಾಗದಲಿ ।
ಹೊಳೆವ ಹರಿಯನು ಕಂಡನಿದು ಹೊಱ[2]
ಗೊಳಗೆ ಹರಿ ತಾನೆಂಬ[2]ಭೇದವ
ತಿಳಿದು ನಿಜದೆಚ್ಚಱ ಸಮಾಧಿಯೊಳಿರ್ದನಾ ಕರ್ಣ ॥ ೧೦

ಅರಸ ಚಿತ್ತೈಸಾಚೆಯಲಿ ಮುರ
ಹರನಲೇ ನಿಮ್ಮನ್ವಯವ ಸಂ
ಹರಿಸಿದಾತನು ಭೀಮಸೇನನೊ ಮೇಣ್ ಧನಂಜಯನೊ ।
ಸರಳ ತೊಡು ತೊಡು ಪಾರ್ಥ ಕರ್ಣನ
ಶಿರವನಿಳುಹಾ ಹಾರದಿರು ಹೇ
ವರಿಸದಿರು ತೆಗೆ ದಿವ್ಯಶರವನು ಬೇಗಮಾಡೆಂದ ॥ ೧೧

ಕರಗುವರೆ ನೀ ಸಾರು ಭೀಮನ
ಕರೆದು ಕೊಲಿಸುವೆನೀತನನು ನಿ
ಷ್ಠುರನಲಾ ನೀನೆನ್ನದಿರು ತೆಗೆ ನಿನ್ನ ತನ್ನಿಂದ ।
ಹಱಿಯದೇ ಹಗೆ ನಮ್ಮ ಚಕ್ರದ
ಲರಿಭಟನ ಮುಱಿವೆನು ಯುಧಿಷ್ಠಿರ
ನರಸುತನವದು ನಿಲಲಿ ನೀನಂಜುವರೆ ಸಾರೆಂದ ॥ ೧೨

[1] ಬೆಳಸು (ಖ.ತ.ನ). [2] ತಾವೂಳಗು ಹೊಱಗೆಂದೆಂಬ (ಟ.ದ).

ಈಸು ಕರ್ಣನ ಮೇಲೆ ಬಹಳ
ದ್ವೇಷವೇತೋ ಎನುತ ಮನದಲಿ
ಘಾಸಿಯಾದನು ಪಾರ್ಥ ಕರುಣಕ್ರೋಧದುಪಟಳಕೆ ।
ಆಸೆಯಿನ್ನೇಕೆನುತ ಸೆಳೆದನು
ಸೂಸುಗಿಡಿಗಳ ಹೊಗೆಯ ಹೊದಱಿನ
ಮೀಸಲಳಿದಾರೆಂಜಲಿಸದಂಜ[1]ಳಿ [ಕ][1] ಮಾರ್ಗಣವ ॥ ೧೩

ಉರಿಯನುಗುಳುವ ಬಾಣದಲಿ ಕ
ತ್ತರಿಸಿ ಕರ್ಣನನೆಸಲು ಸಮರದ
ಲುರವ ಕೀಲಿಸಿತಂಬು ಗಱಿಗಡಿಯಾಗಿ ಗಾಢದಲಿ ।
ಹರಣ ತೊಲಗದ ಮರ್ಮವನು ಮುರ
ಹರನು ಕಂಡನು ರಥದ ವಾಘೆಯ
ನಿರಿಸಿ ಕರ್ಣನ ಹೊರೆಗೆ ಬಂದನು ವಿಪ್ರವೇಷದಲಿ ॥ ೧೪

ತ್ಯಾಗಿ ಜಗದೊಳಗೆಂಬ ಕೀರ್ತಿಯ
ಲೋಗರಿಂದವೆ [2]ಕೇಳ್ದು ಬಂದೆನು[2]
[3]ಮೇಗಳತಿಶಯ ಪದವನೊಲುವಡೆ ಮನದ ಬಯಕೆಗಳ[3] ।
ಈಗಳೀವುದು ನಮ್ಮಭೀಷ್ಟ
ಶ್ರೀಗೆ ಮಂಗಳವೆಂದು ಹರಸಿದ
ಡಾಗಳಱಿದಾ ಕರ್ಣ ನಸುನಗುತಿರ್ದ ಮನದೊಳಗೆ ॥ ೧೫

ತ್ಯಾಗಿ ಸಿಂಹಾಸನದ ಮೇಲಿ
ದ್ದಾಗ ಬೇಡಿತನೀಯಬೇಹುದು
[4]ಈಗಳೀವುದ ಬೆಸಸಿಯೆನೆ ನಗುತೆಂದನಾ ವಿಪ್ರ[4] ।
ತೂಗುವೀ ಕುಂಡಲವನೀವುದು
ಬೇಗ ಧಾರೆಯನೆಱೆದು ಕೊಡಿ[5]ಯೆನ
ಲಾಗಳುದಕವನಱಸಿ ಕಾಣದೆ ನೋಡಿದನು ಕೆಲನ[5] ॥ ೧೬

ಉದಕವನು ಹೊಱಗಱಸುತಿರಲಾ
ಪದುಮನಾಭನು ನಗುತ ನಿನ್ನಯ
ಹೃದಯದೊಳಗಿರ್ದಮಲಗಂಗಾಜಲವ ತೆಗೆದೆನಗೆ ।

---

1 ಳಿಯ (ತ.ಪ) ಳಿತ (ಕ) ನೆಯ (ನ). 2 ಕೇಳಿ ಬಲ್ಲೆನು (ಕ). 3 ಮೇಗಣತಿಶಯ ಗತಿಯನೊಲುವಡೆ ಮನದಭೀಷ್ಟವನು (ಕ). 4 ಈಗಲೇನುಂಟೆನುತ ಕಂಬನಿದುಂಬಿ ಮರುಗುತಿರೆ (ಖ.ಪು.ನ). 5 ನೀವೆನಲೀಪಾರ್ವರಣದಲಿ ಬಂದು ಬೇಡುವುದುಂಟೆ ಹೇಳೆನಲು (ತ).

ಹದುಳದಿಂದೆಱೆ ಧಾರೆಯನು ಸಂ
ಪದದ ಮುಕುತಿಯ ಪದವನೊಲುವಡೆ
ಇದು ಶುಭೋದಯವೆಂದು ಮಾಯಾವಿಪ್ರನಱುಹಿದನು ॥ ೧೭

ಸರಳ ತೆಗೆದನು[1] ಸರಸಿಜಪ್ರಿಯ
ವರ ಸುತನು ತನ್ನುರವ ಬಗಿದನು
ಘರಿಘರಿಲು ಘರಿಲೆನಲು ತೆಗೆದನು ನಿರ್ಮಲೋದಕವ[1] ।
ಪರಮ ಸಂತೋಷದಲಿ ಧಾರೆಯ
ನೆಱೆದು [2]ಕುಂಡಲವೀಯೆ ಮಿಗೆ ಪು
ಷ್ಕರದ ಜನ ಜಯಯೆನಲು ಮುರರಿಪುವೊಲಿದು ಕೈಕೊಂಡ[2] ॥ ೧೮

ಪರಮ ಕರುಣಾಸಿಂಧು ಕರ್ಣಂ
ಗಿರದೆ ನಿಜಮೂರ್ತಿಯನು ತೋಱಿದ
ನುರುತರ ಪ್ರೇಮದಲಿ ಮುಕುತಿಯ ಪದವ ನೇಮಿಸಿದ ।
ನರನನೆಚ್ಚಱಿಸಿದನು ಕರುಣಿಗೆ
ಕರುಣದನುಸಂಧಾನ ಮಾಣದು
ಧರೆಯೊಳಚ್ಚರಿಯೆನುತ ಬೆಱಗಿನೊಳಿದ್ದುದಮರಗಣ ॥ ೧೯

ಹಿಂದೆ ಪಾಶುಪತಕ್ಕೆ ಬಳುವಳಿ
ಬಂದುದಂಜನ ಬಾಣವದಱೆಣೆ
ಯಿಂದ ತೆಗೆದನು ಗಿರಿಜೆಯಂಘ್ರಿಯ ನೆನೆದು ಮಂತ್ರಿಸುತ ।
ಮಂದರಾಚಲ ನಡುಗೆ ಕಿಡಿಗಳ
ಸಂದಣಿಯ ಸುರಿವಂಬನಾ ರವಿ
ನಂದನನ ಕೊರಳೆಡೆಯೊಳೆಚ್ಚನು ವಾಸವನ ಸೂನು ॥ ೨೦

ಅರಸ ಕೇಳೈ ಕರ್ಣನೊಡಲಲಿ
ಪರಮ ತೇಜಃಪುಂಜವೊದೆದು
ಪ್ಪರಿಸಿ ಹಾಯ್ದುದು ಹೊಳೆದುದಿನಮಂಡಲದ ಮಧ್ಯದಲಿ ।
ಅರರೆ ಭಾಪುರೆ ಕರ್ಣ ಮಝು ಭಾ
ಪುರೆ ಭಟಾಗ್ರಣಿ ನಿನ್ನ ಸರಿದೊರೆ
ಯೆರಡು ಯುಗದಲಿ ಕಾಣೆನೆಂದಳಲಿದನು ಹನುಮಂತ ॥ ೨೧

---

[1] ತನ್ನಹೃದಯುವ ನರಿದು ಘರಿಘರಿದೆನಲು ನಿರ್ಮಳತರವೆನಿಪ ಅಮೃತೋದಕವ ದಕ್ಷಿಣಕರದಿ ಪಿಡಿದು (ತ). [2] ದಾನವನಿರದೆ ಮಾಡುತ್ತಿರಲು ಮೇಲಣ ಸುರರುಘೋಯೆನಲು ಪುಷ್ಪಕವಿಳಿದುದಂಬರದಿ (ತ.ಪ.ಬ).

ಕೊಟ್ಟ ಭಾಷೆಗೆ ಮರಳಿ ಬಾಣವ
ತೊಟ್ಟನೇ ತಾನೊಡೆಯನೆಂದ[1]ಱು
ಯಟ್ಟಿದನೆ[1] ಪಾಂಡವರೊಳನುಸಂಧಾನವನು [2]ಬಿಸುಟು[2] ।
ನಟ್ಟ ಕಣೆಗಳುಕಿದನೆ ಕೌರವ
ಕೆಟ್ಟನಕಟಕಟೆಂದು ಕಾಯುವ
ಬಿಟ್ಟ ಕರ್ಣನೊಳಾರು ಸರಿಯೆನುತಿರ್ದುದಮರಗಣ ॥ ೨೨

ಬಲುವಿಡಿಯ ಬಿಲು ವಾಮದಲಿ ಬೆರ
ಳೊಳಗೆ ಸವಡಿಸಿ ತೆಗೆವ ತಿರುವಿನ
ಹಿಳುಕು ನಿಮಿರಿದ ತೋಳ ತೋಱಿಕೆ ಬಲದ ಭಾಗದಲಿ ।
ಬಲಿದ ಮಂಡಿಯ ಬಾಗಿದೊಡಲಿನ
ಹೊಳೆವ ತನುಕಾಂತಿಯ ಮಹೀಪತಿ
ತಿಲಕ ಕೇಳ್ಕೈ ಕರ್ಣನೆಸೆದನು ರಥದ ಮಧ್ಯದಲಿ ॥ ೨೩

ಕಳಚಿ ದುರಿಯೋಧನನ ಬೆಳುಗೊಡೆ
ನೆಲಕೆ ಬೀಳ್ವಂದದಲಿ ಕೌರವ
ಕುಲದ ನಿಖಿಳೈಶ್ವರ್ಯವಿಳೆಗೊರ್ಗುಡಿಸಿ ಕೆಡೆವಂತೆ ।
ಥಳಥಳಿಪ ನಗೆಮೊಗದ ಗಂ[3]ಟು[3]
ಬಲಿದ ಹುಬ್ಬಿನ ಬಿಟ್ಟ ಕಂಗಳ
ಹೊಳೆವ ಹಲುಗಳ ಕರ್ಣಶಿರ ಕೆಡೆದುದು ಧರಿತ್ರಿಯಲಿ ॥ ೨೪

ಕರ್ಣ ಹಾ ಹಾ ಸೂತಸುತ ಹಾ
ಕರ್ಣ ಹಾ ರಾಧಾತನುಜ ಹಾ
ಕರ್ಣ ಹಾ ಎನ್ನಾನೆ ಹಾ ಬಹಿರಂಗ ಜೀವನವೆ
ನಿರ್ಣಯವು ಕುರುಕುಲಕೆ ಹಾ ಹಾ
ಕರ್ಣ ಮಡಿದ್ಯೆ ತಂದೆಯೆನುತವೆ
ನಿನ್ನ ಮಗ [4]ರಥದಿಂದ[4] ಧೊಪ್ಪನೆ ಕೆಡೆದನವನಿಯಲಿ ॥ ೨೫

ರಾಯ ಹಮ್ಮೈಸಿದನು ಹಾ ರಾ
ಧೇಯ ಹಾ ರಾಧೇಯ ಹಾ ರಾ
ಧೇಯ ಹಾ ಎನ್ನಾನೆ ಬಾರೈ ನಿನ್ನ ತೋಱೆನುತ ।

---

[1] ಱುದಟ್ಟಿದರೆ (ಕ). [2] ಮಾಡಿ (ತ). [3] ಟಂ (ಟ.ದ). [4] ಹಾರೈಸಿ (ಕ.ಗ.ಟ.ದ).

ಬಾಯಬಿಟ್ಟುದು ಕಯ್ಯ ಕೈದುವ
ಹಾಯಿಕಿತು ಕಂಬನಿಯು ಕಡಲೊಳು
ಹಾಯಿದೆದ್ದುದು ಹೊರಳುತಿರ್ದುದು ಕೂಡೆ ಪರಿವಾರ ॥ ೨೬

ವರಗೆ ಸ್ಮೈರಣೆಯೆತ್ತಣದು ಕರಿ
ತುರಗ ಕಂಬನಿಗಱೆದುದದ್ಭುತ
ತರದ ಶೋಕಾಂಬುಧಿಯ ಸುಳಿ[1]ಯಲಿ ಸಿಕ್ಕಿತೀ ಸೇನೆ[2] ।
ಅರಸ ಕೇಳಾಚೆಯಲಿ ಭೀಮನ
ನರ ನಕುಲ ಸಹದೇವ ಸಾತ್ಯಕಿ
ಧರಣಿಪನ ದ್ರೌಪದಿಯ ಚಿಂತೆ ದುರಂತವಾಯ್ತೆಂದ ೨೭

ಕಿತ್ತರೋ ಕಲ್ಪದ್ರುಮವ ಕೆಡೆ
ಗುತ್ತಿದರೊ ಸುರಧೇನುವನು ಕೈ
ವರ್ತಿಸಿದರೋ ಪರುಷವನು ಹಾ ಜಲಧಿ ಮಧ್ಯದಲಿ ।
ಎತ್ತಣದು ಭಾರತದ ರಣ ನಮ
ಗೆತ್ತಲಱಸುತ ಬಂದುದಕಟಾ
ಮಿತ್ತುವೆಂದೊಱಲಿದರು ವಂದಿಗಳೆರಡು ಥಟ್ಟಿನಲಿ ॥ ೨೮

ಅರಸ ನೀ ಸ್ಮೈರಿಸಿದೆಲಾ ಶಂ
ಕರ ವಿರಿಂಚಾದಿಗಳು ಕರ್ಣನ
ಪರಮ ಸತ್ಯವ್ರತವ ಕೊಂಡಾಡಿದರು ಅಕಟೆನುತ ।
ಎರಡು ಥಟ್ಟಿನ ದುಃಖಮಯಸಾ
ಗರವ ಹವಣಿಸಲಱಿಯೆನರ್ಜುನ
ತಿರುಗಿದನು ದುಮ್ಮಾನದಲಿ ಪಾಳೆಯಕೆ ಹರಿಸಹಿತ ॥ ೨೯

ಇತ್ತ ಪರವಶವಾದ ರಾಯನ
ತೆತ್ತಿಗರು ದಂಡಿಗೆಯೊಳೀತನ
ನೆತ್ತಿ ತಂದರು ಪಾಳೆಯಕೆ ದುಃಸ್ಥಿತಿಯ ಮೇಳಯಕೆ ।
ತೆತ್ತನೇ ಮಗನಸುವನಕಟ ಎ
ನುತ್ತ ಚಿಂತಾರಾಗದಲಿ ಕಡ
ಲತ್ತ ಹಾಯ್ದನು ಬಿಸುಟನಂಬುಜಮಿತ್ರನಂಬರವ ॥ ೩೦

---

[1] ಯೊಳಗದ್ದುದುಭಯಬಲ (ಕ.ಗ.ದ).

ದ್ಯುಮಣಿ ಕರ್ಣದ್ಯುಮಣಿಸಹಿತ
ಸ್ತಮಿಸೆ ಕಮಲಿನಿ ಕೌರವನ ಮುಖ
ಕಮಲ ಬಾಡಿತು ತಿಮಿರ ಹೆಚ್ಚಿತು ಶೋಕತಮದೊಡನೆ ।
ಅಮಳ ಚಕ್ರಾಂಗಕ್ಕೆ ಭೂಪೋ
ತ್ತಮನ ವಿಜಯಾಂಗನೆಗೆಯಗಲಿಕೆ
ಸಮನಿಸಿತು ಕೇಳಯ್ಯ ಜನಮೇಜಯ ಮಹೀಪಾಲ ॥ ೩೧

ಇಪ್ಪತ್ತೇಳನೆಯ ಸಂಧಿ ಮುಗಿದುದು.

ಇತಿ ಶ್ರೀಮದಚಿಂತ್ಯ ಗದುಗಿನ ವೀರನಾರಾಯಣನ ಚರಣಾರವಿಂದ
ಮಕರಂದ ಮಧುಪಾನಪರಿಪುಷ್ಟ ವಚಷ್ಷಟ್ಟದೀನಿಕಾಯ
ಶ್ರೀಮತ್ಕುಮಾರವ್ಯಾಸಯೋಗೀಂದ್ರ ವಿರಚಿತ
ಮಪ್ಪ ಕರ್ಣಾಟಭಾರತ ಕಥಾಮಂಜರಿ
ಯೊಳ್ ಕರ್ಣಪರ್ವಂ ಸಮಾಪ್ತಂ.

ಪರಿಶಿಷ್ಟ

ಈ ಕರ್ಣಪರ್ವವನ್ನು ಶೋಧಿಸುವುದಕ್ಕೆ ಉಪಯೋಗಿಸಿಕೊಂಡಿರುವ ಎಲ್ಲ ಮಾತೃಕೆಗಳಲ್ಲೂ ಇಲ್ಲದೆ ಕೆಲವು ಮಾತೃಕೆಗಳಲ್ಲಿ ಮಾತ್ರವಿರುವ ಮೂಲಗ್ರಂಥಕ್ಕೆ ಸೇರಿರಲಾರವೆಂದು ತೋರಿಬಂದಿರುವ ಪದ್ಯಗಳನ್ನು ಈ ಕೆಳಗೆ ಕೊಟ್ಟಿದೆ. *

ಮುಂದಿನ ಪದ್ಯಗಳು (ಗ) ಪ್ರತಿಯಲ್ಲಿ ೨೦ನೆಯ ಸಂಧಿಯ ಅಂತ್ಯದಲ್ಲಿಯೂ (ದ) ಪ್ರತಿಯಲ್ಲಿ ೨೧ನೆಯ ಸಂಧಿಯ ೩, ೪, ೫, ೬ನೆಯ ಪದ್ಯಗಳಾಗಿಯೂ ಹೆಚ್ಚಾಗಿವೆ.

ಸೇನೆ ಮುರಿದುದು ಸಮರದಲಿ ವೃಷ
ಸೇನ ಮಡಿದನು ಕುರುಬಲಕೆ ಕಡು
ಹಾನಿ ಹಬ್ಬುಗೆಯಾಯ್ತು ಪಾಂಡವ ವೀರರುಪಟಳಕೆ ।
ಆನಲಮ್ಮುವರಿಲ್ಲೆನುತ ದು
ಮ್ಮಾನದಲಿ ದಾತಾರನಿರಲಾ
ಭಾನುನಂದನನಾಹವಕೆ ಮುಂಕೊಂಡು ನಡೆತಂದ ॥ ೧

ಮೊಗ ನೆಗಹಿ ತಮ್ಮಯ್ಯನಂಘ್ರಿಗೆ
ಮುಗಿದ ಕರಗಳ ಲೆರಗಿದನು ದೃಗು
ಯುಗವನೆವೆಯಲಿ ಬಲಿದು ಮುನಿಪತಿಗೆಱಗಿ ಭಜಿಸಿದನು ।
ಬಗಿದ ಬಿಲ್ಲಿಂಗೆಱಗಿ ಬಾಣವ
ನುಗಿದು ತಿರುಹುತ ಕೌರವೇಂದ್ರನ
ದುಗುಡವನು ಪರಿಹರಿಸಿ ಸಮರಕೆ ಕರ್ಣನನುವಾದ ॥ ೨

ಇಂದು ದುರಿಯೋಧನನ ರಿಣವನು
ಬಂದುದೆನಿಸುವೆನಿಂದು ಕೊಂತಿಯ
ನಂದನನ ನಿಶಿತಾಸ್ತ್ರ ಸಂತತಿಗೆನ್ನ ಕಾಯವನು ।
ಇಂದು ದಾರೆಯನೆಱೆದು ಕೊಡುವೆನು
ಹಿಂದುಗಳೆವುದು ಪಂಥವಲ್ಲೆನ
ಗೆಂದು ಭಾರತಮಲ್ಲನೆಱಗಿದ ಶಲ್ಯನಂಘ್ರಿಯಲಿ ॥ ೩

---

* ಈ ಪದ್ಯಗಳಿಗೆ ಹೆಚ್ಚು ಮಾತೃಕೆಗಳ ಸಹಾಯವಿಲ್ಲದುದರಿಂದ ಇವುಗಳನ್ನು ಶೋಧಿಸದೆ ಮಾತೃಕೆಗಳಲ್ಲಿ ಇರುವಹಾಗೆಯೇ ಕೊಟ್ಟಿದೆ.

ಸುರಪ ಮೊದಲಾದವರಿಗಾನ
ಚ್ಚರಿಯಮಾಡುವೆನಾಳಿದನ ಸ
ತ್ಕರಣೆಗಿಂತಿದು ಪಂಥವೆನಿಸುವೆನಖಿಳಜನ ಹೊಗಳೆ ।
ಧುರದಲಹುದೆನಿಸುವೆನು ಪಾರ್ಥನ
ಹರಣಕೆಳತಟಮಾಡಿ ರಣದಲಿ
ಮರಣವೇ ಮಹನವಮಿಯಲ್ಲದೆ ಬಱಿದೆ ಬಿಡೆನೆಂದ ॥ ೪

ಇಪ್ಪತ್ತೊಂದನೆಯ ಸಂಧಿಯಲ್ಲಿ ೭ನೆಯ ಪದ್ಯವಾದಮೇಲೆ (ಗ.ಬ.ನ). ಪ್ರತಿಗಳಲ್ಲಿ ಕೆಳಗಿನೆರಡು ಪದ್ಯಗಳು ಹೆಚ್ಚಾಗಿವೆ.

ಎಡಬಲದ ನಿಸ್ಸಾಳತತಿಯಲಿ
ಕಡುಹು ಕವಿದವು ಲಗ್ಗೆವರಿಯಲಿ
ಬಿಡದೆ ಸೂಳೈಸಿದವು ಬಿಯ್ದವು ಗೌಱುಗಹಳೆಗಳು ।
ತುಡುಕಿದವು ಝಲ್ಲರಿಗಳಭ್ರದೊ
ಳಡಗಿದವು ಸೀಗುರಿಗಳಾಹವ
ದೆಡೆಗೆ ಬಾಣವ ಕೊಂಡು ಕರ್ಣನು ಹೊಳಸಿದನು ರಥವ ॥ ೧

ಕರೆಸಿ ದುರ್ಯೋಧನನು ಮಿಗೆ ಸರ
ಸಿರುಹಮುಖಿಯರ ಮೋಹರಕೆ ವಿ
ಸ್ತರಿಸಿ ಕರ್ಣಗೆ ಸೇಸೆದಳಿಯಲು ಕಲಶ ಕನ್ನಡಿಯ ।
ವರ ಸತಿಯರೈತಂದು ಬಂದಾ
ದರಿಸಿದರು ರವಿಜಂಗೆ ಸಲೆ ವಿ
ಸ್ತರಿಸಿದನಲೈ ರಾಯ ಜನಮೇಜಯ ಮಹೀಪಾಲ ॥ ೨

ಎಂಟನೆಯ ಪದ್ಯವಾದ ಮೇಲೆ (ಗ.ಟ.ದ.ಬ.ನ) ಪ್ರತಿಗಳಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ.

ಸಾಕಿದೊಡೆಯನ ರಿಣವನಿಂದೇ
ನೂಕುವೆನು ಕೈವಾರವೇತಕೆ
ತೋಕುಫೆನು ರಿಪುಜಲಧಿ ಕಟಕವನಿಂದು ರಣದೊಳಗೆ ।
ಜೋಕೆಯನು ನೋಡುವುದು ನಿಮ್ಮ ಪ
ದಾಕರುಣದವ ನಾನು ಎಂದೇ
ಲೋಕಲೋಚನಸೂನು ಪರಿವಾರಕ್ಕೆ ಕೈಮುಗಿದ ॥

ಹದಿಮೂರನೆಯ ಪದ್ಯವಾದ ಮೇಲೆ (ಗ) ಪ್ರತಿಯಲ್ಲಿ ಕೆಳಗಿನೆರಡು ಪದ್ಯಗಳು ಹೆಚ್ಚಾಗಿವೆ.

ಹೊಗಳದಿರಿ ನಾಗಾದಿಗಳ ತಾ
ಳಿಗೆಗೆ ನಿರಸನವಾಯ್ತು ಬಿರುದಾ
ವನಿಯನಿವನವ್ವಳಿಸಿ ಕರ್ಣನ ವೀರವಿತರಣವ ।
ನೆಗಹಲೀ ಧೂಮಾಂಧಕಾರವ
ಜಗವ ಜಕ್ಕುಲಿಸುವ ಮಹಾಸ್ತ್ರವ
ನುಗಿದು ಪಾರ್ಥನ ಕರೆಯೆನುತ ಕಲಿಕರ್ಣನಿದಿರಾದ ॥ ೧

ತಳಿತರಣ್ಯದ ಮಧ್ಯದಿಂದ
ವ್ವಳಿಪ ಕೇಸರಿ ಮಿಕ್ಕು ದಂತಿಯ
ತಳಿತ ಸೇನಾರಣ್ಯದಿಂ ರವಿಸುತನ ರಥ ಬರಲು ।
ಉಲುಕಲಮ್ಮದೆ ಪಟುಭಟರು ಜವ
ವಿಳುಹಿದರು ಹೂಣಿಗರು ಸಲೆ ತ
ಲ್ಲಳಿಸಿ ಧೃತಿಗೆಟ್ಟೋಡಿ ಹೋಯಿತು ಪಾಂಡವರ ಸೇನೆ ॥ ೨

೧೯ನೆಯ ಪದ್ಯವಾದಮೇಲೆ (ಗ) ಪ್ರತಿಯಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ.

ಗರುಡಿಯಧಿಪತಿಯಂಘ್ರಿಯುಗಳ
ಕ್ಕೆಱಗಿದನು ಮನದೊಳಗೆ ಗಗನದೊ
ಳಿರುವ ಸೂರ್ಯಗೆ ನಮಿಸಿಕೊಂಡನು ಅತುಳ ಗಾಂಡಿವವ ।
ತಿರುಗಿ ಚೌರಿಗೆಗೆದರಿ ನಚ್ಚಿನ
ಸರಳ ಸೆಳೆದನು ಪಾರ್ಥನರಿಭಟ
ನುರವಣೆಗೆ ಮುಯ್ಯಾಂತು ನಿಂದನು ಸಿಂಹನಾದದಲಿ ॥

೧೮ನೆಯ ಪದ್ಯವಾದ ಮೇಲೆ (ಗ.ವ) ಪ್ರತಿಯಲ್ಲಿ ಕೆಳಗಿನ ನಾಲ್ಕು ಪದ್ಯಗಳು ಹೆಚ್ಚಾಗಿವೆ.

ದೇವಕುಲ ಸಂಭಾಳು ಜಯಜಯ
ದೇವರಾಯಘುರಟ್ಟ ರಿಪುವನ
ದೇವರಾಯ ಮುರಾರಿ ರಾಯವಿಭಾಡ ನಿಶ್ಶಂಕ ।
ರಾವುತೋ ಛಲದಂಕ ಹೊವಿತಾ
ವೀವಾರತ್ಯಾಗಸುಭಟಯೆಂ
ದೋವಿತಾ ನಾಗಾದಿಗಳು ಕೈವಾರಿಸಿತು ಕರ್ಣನನು ॥ ೧

ಧೀರ ಬಂದನು ಅಹಿತಕುಲಸಂ
ಹಾರ ಬಂದನು ವೈರಿವಿಜಯಕು
ಠಾರನಿದೆ ಬಂದನು ಮಹಾನಿಧಿರಾಯಭಂಜನನು ।
ವೀರನಿದೆ ಬಂದನು ಕಿರೀಟಿವಿ
ದಾರನಿದೆ ಬಂದನು ಜಯಜಯ ಸೋ
ದಾರಭಾರತಮಲ್ಲನೆಂದೊದರಿದವು ಕಹಳೆಗಳು ॥ ೧

ರಾಯರಾಜನ ತೋಟಿ ಬೇಡರಿ
ರಾಯಮಥನನ ತೋಟಿ ಬೇಡಸ
ಹಾಯಶೂರನ ತೋಟಿ ಬೇಡ ವಿರೋಧಿಭಂಜನನ ।
ಜೀಯಮದನನ ತೋಟಿ ಬೇಡರಿ
ರಾಯವಿಜಯನ ತೋಟಿ ಬೇಡರಿ
ರಾಯ ಕರ್ಣನ ತೋಟಿ ಬೇಡೆಂದೊದರಿದವು ಕಹಳೆ ॥ ೨

ರಣದೊಳಂಧಾಸುರನ ಖಾತಿಗೆ
ತ್ರಿಣಯ ಸೈರಿಸುವಂತೆ ರಿಂಗಣ
ಗುಣಿವ ರಥದಲಿ ಪಾರ್ಥನಿದ್ದನು ಕರ್ಣನುರವಣೆಗೆ ।
ಮಣಿದನಸುರವಿರೋಧಿಯಂಘ್ರಿಗೆ
ರಣಚಮತ್ಕೃತಿ ಚಟುಲತರಮಾ
ರ್ಗಣವ ಹೊದೆಗೆದಱಿದನು ಗಾಂಡೀವವನು ಜೇವಡೆದು ॥ ೪

೨೧ನೆಯ ಪದ್ಯವಾದ ಮೇಲೆ (ಗ) ಪ್ರತಿಯಲ್ಲಿ ಕೆಳಗಿನ ಪದ್ಯ ಹೆಚ್ಚಾಗಿದೆ.

ಎಡಬಲಕೆ ತೋರಿದನು ವಾಘೆಯ
ತುಡುಕಿ ಚಮ್ಮಟಿಗೆಯಲಿ ತುರಗವ
ಜಡಿದು ಪಕ್ಕೆಯದೊಳಗೆ ಲವಣಿಯ ಹೊಳಹಿನಲಿ ಕುಣಿಸಿ ।
ಪೊಡವಿ ಖುರಪುಟದೊಳಗೆ ನಡನಡ
ನಡೆಸಿ ದೂವ್ವಾಳಿಸುತ ರಥವನು
ನಡೆಸಿ ಸಾರಥಿತನವ ತೋಱಿದನಂದು ಕಲಿ ಶಲ್ಯ ॥

೨೨ನೆಯ ಪದ್ಯವಾದ ಮೇಲೆ (ಗ.ದ.ಬ) ಪ್ರತಿಗಳಲ್ಲಿ ಕೆಳಗಣ ಮೂರು ಪದ್ಯಗಳು ಹೆಚ್ಚಾಗಿವೆ.

ಹೊಳೆಹೊಳೆವ ಕುಡಿಮಿಂಚಿನಂತಿರೆ
ಲುಳಿವಡೆದು ತುರಗಾಳಿಸಹಿತೆಡ
ಬಲಕೆ ಉಳಿಯುಪ್ಪರಿಸಿತಳಸರಿ ಬೀದಿ ಲವಣಿಯಲಿ ।

ಹೊಳೆದು ದೂವ್ವಾಳಿಸುತ ರಥವನು
ಬಳಚಿ ವಾಹಕನಾಗಿ ಕೌತೂ
ಹಲವೆನಿಸಿ ಸಾರಥಿತನವ ತೋರಿದನು ಮುರವೈರಿ ॥ ೧

ಸಮಬಲರು ಸಾಧಕರು ಸಮರಸ
ಸಮರು ರಥಿಕರು ವೀರವಿತರಣ
ಸಮಸಮಗ್ರರು ಸಮಪರಾಕ್ರಮ ಸಮಸಹೋದರರು ।
ಸಮಸುಶೇಖರು ಸಮಮಯೂಖರು
ಸಮವಿಳಾಸರು ನಡೆದರಾಹವ
ಕಮಮ ಹಳಚಿದರಂದು ಕರ್ಣಾರ್ಜುನರು ಕೈಮಿಾರಿ ॥ ೨

ಖುರಪುಟದ ಕೆಂಧೂಳಿ ಸೂರ್ಯನ
ಕಿರಣವನು ಗವಸಣಿಸಿದುದು ರಥ
ದುರವಣಿಗೆ ತಲೆಗೊಡಹಿದವು ದಿಗುವಳೆಯದಂತಿಗಳು ।
ಕೊರಳು ಸಾವಿರವಳುಕಿ ವಾಸುಕಿ
ಗರಳವನು ಕಾರಿದನು ಕಮಠನ
ಹರಣಕೆಳತಟವಾಯ್ತೆನಲು ಹೆಣಗಿದರು ಪಟುಭಟರು ॥ ೩

ಇಪ್ಪತ್ತೆರಡನೆಯ ಸಂಧಿಯಲ್ಲಿ ಮೂರನೆಯ ಪದ್ಯವಾದ ಮೇಲೆ (ಗ) ಪ್ರತಿಯಲ್ಲಿ ಕೆಳಗಣ ಪದ್ಯ ಹೆಚ್ಚಾಗಿದೆ.

ಮಡಿವನೀಗಳೆ ಕರ್ಣ ಎಂಬರು
ಕಡೆಗೆ ಪಾಂಡವಸೇನೆಯನು ಮಿಗೆ
ಕಡಿದು ದಿಗುಬಲಿಗೊಡುವೆನೆಂಬರು ಕರ್ಣಗೊಲಿದವರು ।
ಪೊಡವಿ ಪಾರ್ಥನ ಪಕ್ಷವಾಯಿತು
ಕಡಲು ಕರ್ಣನ ಗುಣವ ಹೊಗಳಿತು
ಒಡನೊಡನೆ ತ್ರೈಲೋಕ್ಯವೆರಡಾಯ್ತರಸ ಕೇಳೆಂದ ॥

ನಾಲ್ಕನೆಯ ಪದ್ಯವಾದ ಮೇಲೆ (ಗ) ಪ್ರತಿಯಲ್ಲಿ ಕೆಳಗಣ ಪದ್ಯ ಹೆಚ್ಚಾಗಿದೆ.

ತಳೆದ ವಾಸುಕಿ ಕರ್ಣನತ್ತಲು
ನೆಲಸಿತಾ ಕಮಠಂಗೆ ಹೇಳಿಕೆ
ಫಲುಗುಣನ ದೆಸೆಯಾಯ್ತು ದಿಗುದಂತಿಗಳು ಕರ್ಣನಲಿ ।
ನೆಲನೊಳಿರ್ದ ಮಹಾಮಹೀಧರ
ರೊಲಿದರಾ ಪಾರ್ಥಂಗೆ ಲೋಕದ
ಹುಲುವೊರಡಿಗಳು ಕರ್ಣಗೊಲಿದವು ನೃಪತಿ ಕೇಳೆಂದ ॥

೫ನೆಯ ಪದ್ಯವಾದ ಮೇಲೆ (ಗ) ಪ್ರತಿಯಲ್ಲಿ ಕೆಳಗಿನ ಮೂರು ಪದ್ಯಗಳು ಹೆಚ್ಚಾಗಿವೆ.

ಶರಭ ತತಿ ಭೇರುಂಡ ಮೃಗಗಣ
ವರ ನಿಕಾಯವು ಪಾರ್ಥನನು ಕೈ
ವರಿಸಿದವು ನಾಗಾದಿಗಳವೊಲು ಕೂಡೆ ದೆಸೆದೆಸೆಗೆ ।
ನರನ ಹಿಡಿದವು ಕುಮುದ ತತಿ ತಾ
ವರೆಗಳಾ ಕರ್ಣನನು ಹೊಗಳಿದ
ವೆರಡು ದೆಸೆಯಾಯ್ತು ಸ್ವಯಂಭುವ ಸೃಷ್ಟಿಯಾ ಕ್ಷಣಕೆ ॥ ೧

ಸುರರು ಪಾರ್ಥನ ಕಡೆಗೆ ರಾಕ್ಷಸ
ವರರು ಕರ್ಣನ ಕೂರ್ಮೆ ಗಂಧ
ರ್ವರಿಗೆ ಫಲುಗುಣನೊಲುಮೆ ಕಿನ್ನರರಬ್ಜಸಖಸುತಗೆ ।
ಗುರುವರರ್ಜುನನತ್ತ ಲುಬ್ಧಕ
ರಿರವು ಕರ್ಣನ ಕೂಡೆಯಿಂತಿ
ಬ್ಬರಿಗೆ ಬೆಂಬಲವಾಗಿ ಪಕ್ಷಾದ್ಯಖಿಲ ಲೋಕಗಳು ॥ ೨

ಪರಮ ವಸುಗಳು ನಿಖಿಲ ಮುನಿಗಳು
ವರಸುಧಾಕರ ಬುಧರು ಪಾರ್ಥನ
ಧುರಕೆ ಪಕ್ಷೀಕರಿಸಿದರು ಸಂಗ್ರಾಮ ಚೆಲುವಾಯ್ತು ।
ಧರಣಿತನಯನು ರಾಹು ರವಿ ಭೃಗು
ವರರು ಕರ್ಣನ ದೆಸೆಯಲಾ ಶನಿ
ಗುರುಗಳುಪಕರಿಸಿದರು ಪಾರ್ಥನನರಸ ಕೇಳೆಂದ ॥ ೩

೬ನೆಯ ಪದ್ಯವಾದ ಮೇಲೆ (ಗ) ಪ್ರತಿಯಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ.

ಹಗಲು ಕರ್ಣನ ಪಕ್ಷವಾದುದು
ಬಗೆವಡೆಯು ಇರುಳರ್ಜುನಗೆ ಭೋ
ಗಿಗಳು ಕರ್ಣನ ಕೂಡೆ ಧನಲೋಭಿಗಳು ನರನೊಡನೆ ।
ಮಿಗೆ ಯಮನು ನೈರುತಿ ಕುಬೇರಾ
ದಿಗಳು ಪಾರ್ಥನ ಪಕ್ಷ ಭೂತಾ
ದಿಗಳು ಕರ್ಣನವೊಗಳಿದವು ಸಂಗ್ರಾಮಭೂಮಿಯಲಿ ॥

೧೩ನೆಯ ಪದ್ಯವಾದ ಮೇಲೆ (ಗ.ಚ.ನ) ಪ್ರತಿಗಳಲ್ಲಿ ಮುಂದಿನ ಮೂರು ಪದ್ಯಗಳು ಹೆಚ್ಚಾಗಿವೆ. (ಕ) ಪ್ರತಿಯಲ್ಲಿ ಈ ಸ್ಥಳದಲ್ಲಿ ಅವಕಾಶವನ್ನು ಸೂಚಿಸಿದೆ.

ಎನ್ನ ಮಗನನು ರಣದೊಳಗೆ ಗೆಲ
ಲಿನ್ನದಾರಿಗೆ ನೂಕುವುದು ಸುರ
ಪನ್ನಗರ ಕಿನ್ನರರ ಹವಣೇ ಮಗನ ಬಾಹುಬಲ ।
ತನ್ನ ಮೆಯ್ಯಲಿ ವೀರನೆನ್ನಯ
ಕರ್ಣನೀಗಳೆ ರಣದಿ ಪಾರ್ಥನ
ಬೆನ್ನಡಗ ಬಿಡಿಸುವನು ನೋಡೆನೆ ಸುರಪನಿಂತೆಂದ ॥ ೧

ಮೀಸೆಗಳ ಬೆರಳಿನಲಿ ಮುರಿದು ಸು
ರೇಶ ನುಡಿದನದೇಕೆ ರವಿ ನಿಮು
ಗಾಸೆ ಕರ್ಣನ ಮೇಲೆ ಫಲುಗುಣನಂಬುಗಳು ಕವಿಯೆ ।
ಈ ಸಮರದಲಿ ನಿನ್ನ ಕಂದನ
ಮಾಸಲಡಗನು ಪದ್ದು ಕಾಗೆಗೆ
ಸೂಸುವದ ತೋಱಿಸುವನೊಂದೇ ನಿಮಿಷ ನಿಲ್ಲೆಂದ ॥ ೨

ಎಲವೊ ಭೂಸುರನಾಗಿ ಕರ್ಣನ
ಬಲದ ಕವಚವ ಕೊಂಡು ಪಾರ್ಥನ
ಗೆಲುವ ಹೊಗಳುವೆ ಕರ್ಣಗಿದಿರಾರುಂಟು ರಣದೊಳಗೆ ।
ಗೆಲುವನಱಿಯಲುಬಹುದು ನಿನ್ನೀ
ಫಲುಗುಣನನಿನ್ನೊಂದು ನಿಮಿಷಕೆ
ತಲೆಯ ಕೊಯ್ದೀಡಾಡಿ ಬಿಸುಡವನೆನ್ನ ಮಗನೆಂದ ॥ ೩

ಇವಲ್ಲದೆ (ಗ) ಪ್ರತಿಯಲ್ಲಿ ಮುಂದಿನ ಎಂಟು ಪದ್ಯಗಳು ಹೆಚ್ಚಾಗಿವೆ.

ತ್ರಿಜಗಲೋಚನ ಜಗವ ತಗುಳಲು
ಗಜವ ತಿರುಹಿದ ಸುರಪನಾಗಂ
ಬುಜಜ ಸಂತೈಸಿದನು ಸಕಳಾಮರರ ಕಳಕಳವ ।
ವಿಜಯಸಹಸರು ಸಮರದಲಿ ಗಜ
ಬಜದ ಕೋಂಟೆಯ ತೆಗೆದನಮಳ
ಪ್ರಜೆ ಬೆದಱೆ ಹಳಚಿದರು ಕರ್ಣಾರ್ಜುನರು ಕೈಮಿಗಿಱೆ ॥ ೧

ಖರೆಯವೈ ನೀನೆಂದ ನುಡಿಯೈ
ಸರಲಿ ನಿನ್ನೀ ನಿನ್ನ ಕಂದನ
ಶಿರವನರಿಯದೆ ಬರಿದೆ ಬಿಡುವನೆ ತೋರಿಸುವೆ ನಿಮಗೆ ।

ಮರುಳುತನ ನಿಮಗಾಗೆ ನುಡಿದರೆ
ಗರುವತನ ಕೆಟ್ಟೀತು ನಿನ್ನೀ
ತರರನಾವುದು ಕೇಳ್ವೆ ನೋಡರ್ಜುನನ ಸಾಹಸವ ॥ ೬

ಗರುವನಹೆನಾವರಿಯವೇ ಹಾ
ದರದಲಾಯಿತ್ತೈ ನಿಮಗಲಾ ಸಾ
ವಿರದ ಮೈಗಣ್ಣುಗಳು ಸಾಕದನೆಂದು ಫಲವೇನು ।
ಮರಳುತನ ಬೇಡುಸಿರದಿಹುದೆನೆ
ಸುರಪ ಗಹಗಹಿಸುತ್ತ ನುಡಿದನು
ಹಿರಿಯರೆಮಗಂದೊಂದು ಮರ್ಮವ ಕಾಣೆನಿದಿರೆಂದ ॥ ೩

ನಿಮ್ಮ ಹೊದ್ದಲು ನಿಮ್ಮ ಮುಟ್ಟಲು
ನಿಮ್ಮಗನ ಗರ್ವವನು ಕೆಡಿಸಲು
ನಮ್ಮ ಹವಣೇ ರಾಹುವಲ್ಲದೆ ನಮಗೆ ತಕ್ಕವರೇ ।
ನಿಮ್ಮ ಹವಣೇಕೊಂದು ವಾಘೆಯೊ
ಳೊಮ್ಮೆ ನಿಲ್ಲದೆ ತೊಳಲದಿಹುದೆನೆ
ಮರ್ಮವಿಲ್ಲದ ದಿವಿಜ ನೀನೆನೆ ಜಾಣ ಕೇಳೆಂದ ॥ ೪

ರಕ್ಕಸರ ಬಡಿಹೋರಿ ನಿನಗೀ
ಸೊಕ್ಕಿದೇತಕೆ ನಿನ್ನ ಕಂದನ
ನಿಕ್ಕಿ ತೋರುವನೀಗ ನೋಡಾ ಮಗನ ಸಾಹಸವ ।
ಮಿಕ್ಕ ನಾರಾಯಣನ ಮರೆಯನು
ಹೊಕ್ಕು ಪಾಂಡವರುಳಿವ ಬಯಸುವ
ಚುಕ್ಕಿಗಳು ಕರ್ಣಂಗೆ ಸರಿಯೇ ಸಾರು ನೀನೆಂದ ॥ ೫

ಎನಲು ಗುಡುಗುಡಿಸಿದನು ಸುರಪತಿ
ಮನದೊಳಗೆ ಕಡುನೊಂದು ಚೌದಂತಿ
ಯನು ಸನ್ನೆಯೊಳೌಂಕಿ ಕರದಲಿ ವಜ್ರವನು ತುಡುಕಿ ।
ಎನಗೆ ನಿನಗೆಯುುಯಿಾಗ ಕಾಳೆಗ
ವನುಕರಿಸಬೇಕೆಂದು ಹಾಯಿಸೆ
ವನಧಿ ಕದಡಿದ ಪರಿಯಲಾದುದು ಮೇಲೆ ಸುರಕಟಕ ॥ ೬

ಮೇಲೆ ಗಜಬಜವಾಯ್ತು ವರ ದಿಗು
ಪಾಲಕರ ಬರಸಿದನು ಸುರಪತಿ
ಯಾಳು ಕವಿದುದು ಕರಿಯ ನೂಕಿದ ರವಿಯ ರಥಕಾಗಿ ।
ಕಾಲು ಕೈಯುಡಗಿರ್ದ ಸಾರಥಿ
ಮೇಳವಿಸಿದನು ರಥದ ಕುದುರೆಗ
ಳೇಳೆ ಚಮ್ಮಟಿಗೆಯನು ತುಡುಕಲು ಸೂರ್ಯನನುವಾದ ॥ ೭

ರವಿ ಸಹಸ್ರಕರಂಗಳಲಿ ಚ
ಕ್ರವನು ತುಡುಕಿದನಿತ್ತ ಸುರಪನು
ಕವಿಸಿದನು ತನ್ನಾನೆಯನು ದಿನಮಣಿಯ ಸಮ್ಮುಖಕೆ ।
ದಿವಿಜರಿರದೋಡಿದರು ಪಾರ್ವತಿ
ಶಿವನ ತಕ್ಕೈಸಿದಳು ಜಲರುಹ
ಭವನು ಬಂದೆಡೆಯೊಟ್ಟಿ ನಿಂದನು ಸೂರ್ಯ ಸುರಪತಿಯ ॥ ೮

೧೭ನೆಯ ಪದ್ಯವಾದ ಮೇಲೆ (ಗ) ಪ್ರತಿಯಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ.

ಮರುಳುಗಳಲಾ ನೀವು ನಿಮ್ಮೊಳು
ಘುರುಳಿದೇತಕೆ ನಿಮ್ಮ ತಮ್ಮ
ಬ್ಬರ ಕುಮಾರರು ಕಾದುತ್ತೈದರೆ ಗೆಲವು ಸೋಲವನು ।
ಹರನು ಮೊದಲಾಗೆಲ್ಲ ಕಾಬರು
ಧುರಕೆ ಹೆರವೆಗೆಯೆನುತ ಸುರಪನ
ಕರಿಯ ನೂಕಿದ ರವಿಯ ಬಂಡಿಯನತ್ತ ತೆರಳಿಚಿದ ॥

೩೬ನೆಯ ಪದ್ಯವಾದಮೇಲೆ (ಗ.ದ.ನ.ಬ) ಪ್ರತಿಗಳಲ್ಲಿ ಕೆಳಗಿನ ಪದ್ಯ ಹೆಚ್ಚಾಗಿದೆ.

ಅಂಬಿಗನು ನೀನಾದರಹಿತಗೆ
ನಂಬಿದೊಡೆಯನ ಘೋಷಯಾತ್ರೆಯು
ಲಂಬುಕೇಳಿಯಲಾದ ಕದನವೊಳೊಪ್ಪಗೊಡದಿಹೆಯ ।
ಶಂಬರಾರಿಯ ಸರಳವೋಲ್ ನಿ
ನ್ನಂಬು ಬಲ್ಲಿದವೆಂದು ಖೇಚರ
ರೆಂಬರದು ಹುಸಿಯಲ್ಲೆನುತ ತೆಗೆದೆಚ್ಚನಾ ಪಾರ್ಥ ॥

ಇಪ್ಪತ್ತುಮೂರನೆಯ ಸಂಧಿಯಲ್ಲಿ ೧೩ನೆಯ ಪದ್ಯವಾದ ಮೇಲೆ (ಗ ಟ.ದ) ಪ್ರತಿಗಳಲ್ಲಿ ಮುಂದಿನ ಪದ್ಯಗಳು ಹೆಚ್ಚಾಗಿವೆ.

ನಿನಗೆ ಗುರುವಹ ಪರಶುರಾಮನ
ನನುವರದಲೋಡಿಸಿದ ಗಾಂಗೇ
ಯನನು ಗೆಲಿದೀ ಗಾಂಡಿವಕೆ ನಿನ್ನೊಡಲಾವ ಗಹನವಿದು ।
ಮನದ ಫಲವನು ನಿಲುವ ಹೂಣಿಗ
ತನವ ಬಿಡಿಸುವೆನೆನುತ ಶಕ್ರನ
ತನಯನಂಬುಜಸಖಸುತನ ಕೆಡೆಯೆಚ್ಚು ಬೊಬ್ಬಿಱದ ॥ ೧

ತಳಿರವನೆಯಲಿ ಕಂದಮೂಲದ
ಗೆಳಸುಗಳ ಮೆಲಮೆಲಿದು ಕಾಲವ
ಕಳೆದು ಸಮರವ ಬಯಸಿದಿರಿ ರಾಜ್ಯಾಭಿಲಾಷೆಯಲಿ ।
ಅಳಲಿದರೆ ನಿಮಗಿನ್ನು ಮರಣವೆ
ಫಲಿಸುವುದು ಕೌರವನ ರಾಜ್ಯದ
ಸಲುಗೆಯನು ಹೊಗಲೀಯೆ ಎಂದನು ಭಾನುಸುತ ಮುಳಿದು ॥ ೨

ಪ್ರತಿಸುಭಟ ಕಾನನಕೆ ಕೇಶ
ಪ್ರತತಿ ಪಾವಕದಾನವಾದಿಗ
ಳತುಳ ಬಲರಿದ್ದದರೊಳಗೆ ನೀನೆಂಬ ಹುಲುನರನ ।
ಹುತವ ಮಾಡುವದಾವಘನವಿ
ನ್ನತಿಬಹಳ ಬಾಣದಲಿ ವೈವ
ಸ್ವತನ ನಗರಿಗೆ ನಿನ್ನ ಕಳುಹುವೆನೆಂದನಾ ಕರ್ಣ ॥ ೩

೨೪ನೆಯ ಪದ್ಯವಾದಮೇಲೆ (ಗ.ದ) ಪ್ರತಿಯಲ್ಲಿ ಕೆಳಗಿನ ಪದ್ಯ ಹೆಚ್ಚಾಗಿದೆ.

ಪ್ರತಿಸುಭಟಕೋದಂಡದಂಡಾ
ಯುತಶಿಳೀಮುಖಮುಖಪ್ರಚಂಡ
ಪ್ರತಿಮಹಾಮಂತ್ರಾಸ್ತ್ರವನು ಹೂಡಿದನು ಧನುವಿನಲಿ ।
ಕ್ಷಿತಿ ಬೆದಱೆಯಿನತನುಜನೆಸುಗೆಗೆ
ಪ್ರತಿಸಹಸ್ರವನುಗುಳೆ ಸಮರ
ವ್ಯತಿಕರೊಡಲೊಳು ಭಂಗಿಸಿತು ತಾ ಮೂರು ಲೋಕದಲಿ ॥

ಇಪ್ಪತ್ತನಾಲ್ಕನೆಯ ಸಂಧಿಯಲ್ಲಿ ೨೦ನೆಯ ಪದ್ಯವಾದಮೇಲೆ (ಗ) ಪ್ರತಿಯಲ್ಲಿ ಕೆಳಗಿನ ಪದ್ಯ ಹೆಚ್ಚಾಗಿದೆ.—

ಎನಲು ಬಿಗುಹೇರಿದನು ಕೌರವ
ಜನಪ ಭಾರದ್ವಾಜತನುಜನ
ತನಯನನು ಕೋಪಿಸುತ ಕರ್ಣನ ಒರವ ಹೊಗಳುತಿರೆ ।

ಮನದೊಳಗೆ ಗುರುಸೂನು ರಾಯನ
ಮನದ ಕೋಪವನಱಿದು ಪಕ್ಷದ
ನೆನಹು ನಮಗಿಲ್ಲರಸ ಜಯವಧುವಿರವ ಕೇಳೆಂದ ॥

೨೧ನೆಯ ಪದ್ಯವಾದಮೇಲೆ (ಗ.ಟ.ದ) ಪ್ರತಿಯಲ್ಲಿ ಮುಂದಿನೆರಡು ಪದ್ಯಗಳು ಹೆಚ್ಚಾಗಿವೆ.—

ಹರುಷವೊಬ್ಬರಿಗೆ ಸ್ನೇಹದ ಪರ
ಮರಸವೊಬ್ಬರಿಗೆ ತನುವಿನ
ಕರುಣರಸವೊಬ್ಬಂಗೆ ಕೂಟದ ಭಾವವೊಬ್ಬಂಗೆ ।
ಎರಡುಮನೆಯೆರಡೊಲವು ಚಿತ್ತದ
ಪರಿಯೆರಡು ಮೈಯೆರಡು ನಾರಿಯ
ರೆರಡನಲ್ಲದೆ ಬಗೆಯರವನೀಪಾಲ ಕೇಳೆಂದ ॥ ೧

ಕೇಳು ನೀ ರಾಜೇಂದ್ರ ಚಿತ್ತದೊ
ಳಾಲಿಸಾದರೆ ಪೇಳ್ವೆ ನಾರಿಯ
ರಾಳಿಗೊಂಬರುಜನವ ಚಿತ್ತದ ಬಯಕೆಯದು ಬೇಱೆ ।
ಸೋಲುವರು ತಾವಲ್ಲ ಪರರನು
ಸೋಲಿಸಿಯೆ ಹಿಂಗುವರು ಮನದೊಳ
ಗೇಳು ಕವಲಾಗಿಹರಲ್ಲೈ ಭೂಪಾಲ ಕೇಳೆಂದ ॥ ೨

೫೨ನೆಯ ಪದ್ಯವಾದಮೇಲೆ (ಬ.ನ) ಪ್ರತಿಗಳಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ.

ಎಸೆದುದಿನಿಬರ ನಿರುಪಮದ ಪೌ
ರುಷದ ಪಂಥಪ್ರೌಢಿ ಸಲೆ ಸೋ
ಲಿಸಿತು ಸುರರಾಲಿಗಳನಿಬ್ಬರ ಸಮರಸಾರಂಭ ।
ಎಸುಗೆಗಳು ಕೈಮಿಾರಿದವು ಮುಂ
ಡಿಸಿದ ಮಹಿಮರ ಬಿಲ್ಲ ಮಹಿಮೆಗೆ
ಪಶುಪತಿಯ ಪರಿವಾರ ಬಿದ್ದುದು ಕಯ್ಯ ಗಲ್ಲದಲಿ ॥

ಇಪ್ಪತ್ತೆರಡನೆಯ ಸಂಧಿಯಲ್ಲಿ ೧೫ನೆಯ ಪದ್ಯವಾದಮೇಲೆ (ಬ.ನ) ಪ್ರತಿಗಳಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ.—

ತೊಡೆಗೆ ತೊಡೆ ನಡುನಡುಗ ತೊಟ್ಟರೆ
ಬಿಡದೆ ತಾಗುವುದುರವ ನಡುಕೊರ
ಲೆಡೆಗೆ ತೊಟ್ಟರೆ ಕೊಯ್ವುದುರವಣೆಯಿಂದ ಮಕುಟವನು ।

ಒಡೆಯ ದುರ್ಯೋಧನನ ಕಾರ್ಯವ
ಪಡೆವೆಯಾದರೆ ತೊಡು ನರನುರ
ದೆಡೆಗೆ ಬಾಣಪ್ರಯೋಗವನೆಂದನಾ ಶಲ್ಯ ॥

೩೭ನೆಯ ಪದ್ಯವಾದಮೇಲೆ (ಗ.ನ.ಬ) ಪ್ರತಿಗಳಲ್ಲಿ ಮುಂದಿನೆರಡು ಪದ್ಯಗಳು ಹೆಚ್ಚಾಗಿವೆ.—

ಹೊಗೆಯ ಹೊರಳಿಗಳೊಳಗೆ ಕ
ಬ್ಬೊಗೆದೆಗೆದುದುರವಣಿಯಿಂದ
ಗಗನವನುಗುಹಿ ಪುಟಗೊಳಿಸಿದವು ರಿಪುಮಾರ್ಗಣದ ಬರವಿನಲಿ ।
ಭುಗಿಭುಗಿಲು ಧಗಧಗಿಲು ಧಿಗಿಧಿಗಿ
ಧಿಗಿಲು ಖೋಯೆಂದೆನುತ ಬರುತಿದೆ
ನಗವ ನೆಗಹಿದ ದೇವ ಕಂಡನು ಪ್ರಳಯವಾಯ್ತೆನುತ ॥ ೧

ಕಾದಲೆಳಸಿದ ಪಾಂಡವರ ಸಂ
ವಾದ ತೀರಿತು ಕೌರವೇಂದ್ರನು
ಸಾಧಿಸಿದ ಫಲ ಸಫಲವಾಯಿತು ಸಮರಮುಖದೊಳಗೆ ।
ಹೋದನರ್ಜುನನೀ ಮಹಾಸ್ತ್ರದ
ಬಾಧೆಗಿದಿರಿಲ್ಲೆನುತ ಘನ ಪರಿ
ವಾದದಲಿ ನೆರೆ ಕುದಿಯುತಿದ್ದುದು ದೇವಸಂದೋಹ ॥ ೨

೪೦ನೆಯ ಪದ್ಯವಾದಮೇಲೆ (ಖ.ಗ.ನ.ಬ) ಪ್ರತಿಗಳಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ.—

ಕೌರವನ ಮನ್ನಣೆಯಲಾವುದು
ದೂರವಾದುದು ನಿನಗೆ ನಿಜದಾ
ತಾರನಲಿ ವಂಚಿಸಿದೆ ನಿನಗಿನ್ನಾವ ಗತಿಯಹುದು ।
ಭಾರವಿದು ವಿಶ್ವಾಸಘಾತಕ
ರೌರವಾಕರ್ಷಣವು ಸ್ವರ್ಗಕೆ
ದೂರವಹರೇ ಕರ್ಣ ಕೆಡಿಸಿದೆಯಿಹಪರವನೆಂದ ॥

೪೧ನೆಯ ಪದ್ಯವಾದಮೇಲೆ (ಗ.ಟ.ದ) ಪ್ರತಿಗಳಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ.—

ನಚ್ಚಿದೆಮ್ಮೆಯು ಕೋಣನೀದುದ
ನಚ್ಚರಿಯು ನಿನ್ನಲ್ಲಿ ಕಂಡೆನು
ನಚ್ಚಲಾಗದು ನರರನಕಟಾ ಪಾಪಿ ಕೌರವನು ।

ನಟ್ಟದವನಿನ್ನುಣಲಿ ಮಾನವ
ರಿಚ್ಚೆಕಾಱರು ಸುಡು ಸುಡೆಲವೋ
ಕೆಟ್ಟಹೃದಯನು ನೀನೆನುತ ಭಂಗಿಸಿದನಾ ಶಲ್ಯ ॥

ಇಪ್ಪತ್ತಾರನೆಯ ಸಂಧಿಯಲ್ಲಿ ೧೨ನೆಯ ಪದ್ಯವಾದಮೇಲೆ (ಗ) ಪ್ರತಿಯಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ.—

ಮುರಳಿ ಕೃಷ್ಣನನೆಚ್ಚ ಬಾವುರ
ನರನ ಮುಖವನು ಮುರಿದನಾತನ
ತುರಗದೊಡಲಲಿ ಹೂಳಿದನು ಹೇರಾಳದಂಬುಗಳ ।
ವರ ನಕುಲ ಸಹದೇವ ಸಾತ್ಯಕಿ
ಮರುತತನಯ ಶಿಖಂಡಿ ಪಾಂಚಾ
ಲರನು ಧೃಷ್ಟದ್ಯುಮ್ನರನು ಕೆಡೆಯೆಚ್ಚು ಬೊಬ್ಬಿಱಿದ ॥

೧೯ನೆಯ ಪದ್ಯವಾದಮೇಲೆ (ಗ.ನ.ಬ) ಪ್ರತಿಗಳಲ್ಲಿ ಮುಂದಿನ ಎರಡು ಪದ್ಯಗಳು ಹೆಚ್ಚಾಗಿವೆ.—

ಬಲುಹು ಫಲಿಸುವುದುಂಟೆ ದೈವದ
ವೋಲವು ತಪ್ಪಿದ ಮುನ್ನ ಕೌರವ
ನುಳಿವು ಹುಸಿ ಮುರವೈರಿ ಪಾಂಡವರತ್ತಲಾದಂದು ।
ಗೆಲವಗೋಚರವೆನುತ ಚಾಪವ
ನಿಳುಹಿದನು ಬತ್ತಳಿಕೆ ಕವಚವ
ಕಳೆದು ನೀತಿಯ ಸೆರಗನೋಸರಿಸಿದನು ಕಲಿ ಕರ್ಣ ॥ ೧

ಕೇಳು ಫಲುಗುಣ ನಿಜವರೂಥದ
ಗಾಲಿಯೋಸರಿಸಿದವು ರಥತುರ
ಗಾಳಿಗಳು ಪೈಸರದಲೊಲೆದವು ನೆಗಹುವೆನು ರಥವ ।
ಆಳುತನದಲಿ ಪ್ರೌಢಿ ನಿನಗುಂ
ಟೇಳಿಸದಿರಿದಿರಾಗದಿರು ಕೆಂ
ಗೋಲ ತೊಡಚದಿರೆನುತ ಪಾರ್ಥಂಗೆ ನುಡಿದನಾ ಕರ್ಣ ॥ ೨

೨೦ನೆಯ ಪದ್ಯವಾದಮೇಲೆ (ಗ.ನ.ಬ) ಪ್ರತಿಗಳಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ. —

ನೆಗಹುವೆನು ನಿಜರಥವ ತುರಗಾ
ಳಿಗಳ ಸಂತೈಸುವೆನು ಕೀಲ
ಚ್ಚುಗಳ ಮೇಳೈಸುವೆನು ಸೈರಿಸು ನಿಮಿಷಮಾತ್ರದಲಿ ।

ಬಿಗಿದ ಬಿಲ್ಲನು ತೆಗೆದು ಬಾಣವ
ನುಗಿದು ನೆಱೆ ಸಾಹಸದ ಕೋಟಿಯ
ತೆಗೆವ ಪರಿಯನು ಮಾಳ್ಪೆನೆಂದನು ಶಕ್ರತನಯಂಗೆ ॥

೪೧ನೆಯ ಪದ್ಯವಾದಮೇಲೆ (ಬ.ನ) ಪ್ರತಿಗಳಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ.

ಆದ ಕಾಳೆಗ ಕರ್ಣನದು ದು
ರ್ಯೋಧನನ ಮನಖಾತಿ ಕರ್ಣನ
ಭೇದ ಭೀಷ್ಮಾದಿಗಳ ಮರಣವ ಕರ್ಣಗೋಸುಗರ ।
ಈ ದುರಾತ್ಮನು ನಿನ್ನ ಕೊಲವಿಯೆ
ಸಾಧಸಿದನವ ನಿನಗೆ ಮೋಹವ
ನಾದರಿಸದಿರು ಕೊಲಲು ಗುಣವಹುದೆಂದನಸುರಾರಿ ॥

೪೨ನೆಯ ಪದ್ಯವಾದಮೇಲೆ (ನ) ಪ್ರತಿಯಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ.

ಬಱಿಯ ಬಯಕೆಯ ಮಾಡಿ ಕರ್ಣನ
ನಿಱಿಯಲೀಯದೆ ವೈರವೃತ್ತಿಯ
ಮೆಱೆದು ಮಾಯಾನಟನಸೂತ್ರನು ನಿನ್ನರಚನೆಯನು ।
ಅಱಿಯಲೆನ್ನಳವಲ್ಲ ಕರ್ಣನೊ
ಳೆಱಗುವುದು ಕಡುಮೋಹವೇನೆಂ
ದಱೆಯೆನಂತಃಕರಣ ಕರಗುವುದೆಂದನಾ ಕರ್ಣ ॥

ಇಪ್ಪತ್ತೇಳನೆಯ ಸಂಧಿಯಲ್ಲಿ ೧೩ನೆಯ ಪದ್ಯವಾದಮೇಲೆ (ಕ.ದ.ನ) ಪ್ರತಿಗಳಲ್ಲಿ ಮುಂದಿನೆರಡು ಪದ್ಯಗಳು ಹೆಚ್ಚಾಗಿವೆ.—

ಗಿರಿಜೆಯಂಘ್ರಿಯ ನೆನೆದು ತಿರುವಿಗೆ
ಭರದಿ ಹೂಡಿದನಂಜನಾಸ್ತ್ರವ
ಪರಮ ಮಂತ್ರೋಚ್ಚರಣೆಯಿಂ ಬೊಬ್ಬಿಱಿದು ನರನೆಸಲು ।
ಕರಕಿರಣ ಸಾವಿರದ ತೇಜವ
ನಿರದೆ ಮಸುಳಿಸಿ ಸರಳು ಕರ್ಣನ
ಶಿರದ ಹೊರಗೈದಿದುದಲೇ ಧೃತರಾಷ್ಟ್ರ ಕೇಳೆಂದ ॥ ೧

ಶಿವಶಿವಾ ಎನುತಿರ್ದುದೈ ತ್ರೈ
ಭುವನಜನ ಗಾಂಡಿವವನೊದೆದುದು
ಹಾಯ್ದುದ್ದೈ ದಿನಮಣಿಯ ತೇಜದ ಬಹಳ ರಶ್ಮಿಯಲಿ ।
ಅವಗಡಿಸಿತೀಯುಭಯಬಲ ದೃಗು
ನಿವಹವನು ಧಾರಾಳಿವಹ್ನೀ
ವಿವಱ ಬಹಳಜ್ವಾಲೆಯಲಿ ಜಡಿದೈದಿತರಿಭಟನ ॥ ೨

೧೬ನೆಯ ಪದ್ಯವಾದಮೇಲೆ ಅದೇ ಪ್ರತಿಗಳಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ.

ಬಳಲಿದನು ಬಸವಳಿದು ಮೆಲ್ಲನೆ
ಹಳವಿಗೆಯು ಮಲಗಿದನು ಲಕ್ಷ್ಮೀ
ನಿಳಯನನು ನೋಡುತ್ತ ರವಿಸುತನಿರಲು ಕಂಡಾಗ ।
ಹೊಳೆವ ಕೊಂಡಲವಿರಲು ಹರಣವು
ತೊಲಗದೀತಂಗೆನುತ ಕೃಷ್ಣನು
ತಿಳಿದು ವಿಪ್ರನ ರೂಪ ತಾಳ್ದವನಲ್ಲಿಗೈತಂದ ॥

೧೯ನೆಯ ಪದ್ಯವಾದಮೇಲೆ (ಖ.ಘ.ತ.ಪ) ಪ್ರತಿಗಳು ಬಿಟ್ಟು ಉಳಿದ ಪ್ರತಿಗಳಲ್ಲಿ ಮುಂದಿನ ಪದ್ಯ ಹೆಚ್ಚಾಗಿದೆ.—

ಬೇಡಿದಡೆ ಕೊಂಡಲವ ತೆಗೆದೀ
ಡಾಡಿದನು ಲೋಕೈಕನಾಥನ
ನೋಡಿ ಪರಮಪ್ರೀತಿಭಕ್ತಿಯಲಿರ್ದನಾ ಕರ್ಣ ।
ಊಧಿಯೊಳಗೆನ್ನಿಂದ ಸುಕೃತವ
ಮಾಡಿದವರುಂಟೇ ಮುರಾರಿಯ
ನೋಡೆ ಕಂಡೆನೆನುತ್ತ ಎವೆಯಿಕ್ಕದೆ ನಿರೀಕ್ಷಿಸಿದ ॥

೨೩ನೆಯ ಪದ್ಯವಾದಮೇಲೆ (ಗ.ಟ.ದ ನ.ಬ) ಪ್ರತಿಗಳಲ್ಲಿ ಮುಂದಿನ ಪದ್ಯಗಳು ಹೆಚ್ಚಾಗಿವೆ.—

ಅರಸ ಕೇಳಾದಿಯಲಿ ಕರ್ಣಗೆ
ಕುರುಹನಱಿದುದವಲ್ಲದೀ ಸಂ
ಗರದ ಮಧ್ಯದಿ ಕೊರಳ ಕೊಯ್ದುದ ಕೇಳ್ದಲೈ ನೀನು ।
ನರನನೆಚ್ಚರಿಸಿದನು ತರಣಿಗೆ
ಕರುಣದನುಸಂಧಾನವಾದುದು
ಧರೆಯೊಳಚ್ಚರಿಯೆನಲು ಬೆರಗಿನೊಳಿದ್ದುದಮರಗಣ ॥ ೧

ಇತ್ತಲರ್ಜುನ ಕರುಣದಲಿ ಶರ
ಗುತ್ತ ಗಾಂಡೀವದಲಿ ತೊಡಚಿದ
ನೆತ್ತಿಗೇಱಿದು ಬಸುರ ಶಿಖಿ ಮುರವೈರಿಯುಪಟಳಕೆ ।
ಒತ್ತಳಿಕೆಯಲಿ ದಿವ್ಯ ಶರವನು
ಕಿತ್ತು ಶರಸಂಧಾನದಲಿ ಕೈ
ವರ್ತಿಸುತ ಕಿವಿಗಡಿಯ ತೆಗೆದನು ನಿಶಿತಮಾರ್ಗಣವ ॥ ೨

ಕಿಡಿಯ ಕಾರುವ ವಡಬವಹ್ನಿಯ
ಕಡುಹನೇರಿತು ಬಿಱುಬುಗಣೆಗಳ
ಗಡಣೆ ಕಲಿಯಲು ಗರಿಯ ಗಾಳಿಯ ಲಳಿಯನೆಬ್ಬಿಸುತ ।
ನಡೆತರಲು ರವಿಸುತನ ಕಲಿಮನ
ಗುಡಿಯ ಕಟ್ಟಿತು ನಟ್ಟ ಕಣೆಯಲಿ
ತಡೆಗಡಿದು ಶಿರವುಡಿಯೆ ಕರ್ಣನ ಕೊರಳ ಬಳೆ ಹರಿದು ॥ ೩

ಧೀರನೋ ನೀನೆನುತ ತಲೆ ಕೈ
ವಾರಿಸುತ ಪುಟನೆಗೆಯೆ ರಕುತದ
ಧಾರೆಗಳು ನೂಕಿದವು ಗಗನದ ತಲೆಯ ಬಳಿವಿಡಿದ. ।
ವೀರ ಕರ್ಣನು ವಿಜಯಲಕ್ಷ್ಮಿಯ
ಸಾರಿದನು ಎನೆ ಛತ್ರನಿಚಯವ
ಸೇರಿಸಿದನೆನೆ ರಚನೆ ಮಿಗೆ ಚೆಲುವಾಯ್ತು ಗಗನದಲಿ ॥ ೪

ಲಾಗಿನಲಿ ತಲೆ ಹರಿದುಊಣೆಯ
ವಾಗಲೆಂದಱಿಯದೆ ನಿರಂತರ
ಪೋಗಬಿಡದೆಸುತಿರ್ದುದೀತನ ಮುಂಡವರ್ಜುನನ ।
ಬೇಗ ಮಿಗಿಲು ಕುಲಾಲಚಕ್ರವ
ತೂಗಿಬಿಟ್ಟರೆ ತಿರುಗಿ ನಿಲುವವೊ
ಲಾಗಲೋಸರಿಸಿತ್ತು ಕರ್ಣನ ಬಾಹುಬಲವಿಂದು ॥ ೫

೨೯ನೆಯ ಪದ್ಯವಾದಮೇಲೆ (ಗ) ಪ್ರತಿಯಲ್ಲಿ ಮುಂದಿನ ಮೂರು ಪದ್ಯಗಳು ಹೆಚ್ಚಾಗಿವೆ.—

ಉರಗಬಾಣವನೆಚ್ಚು ಪಾರ್ಥನ
ಶಿರವನರಿಯದೆ ಮರಳಿ ತೊಡು ತೊಡು
ಧುರದಿ ನೀನೆಂದೆನಲು ಪ್ರತಿಮಾರ್ಗಣೆಯ ತುಡುಕದರೆ ।
ಧುರದೊಳಹಿತರು ಸಿಕ್ಕಿದಾಗಳೆ
ಕರುಳನುಗಿಯದೆ ಕಾಯ್ವರೇನೈ
ಮರುಳಲಾ ಕಲಿ ಕರ್ಣ ಹಾಯೆಂದರಸ ಬಿಸುಸುಯ್ದ ॥ ೧

ದ್ರೋಣಭೀಷ್ಮರು ಮಡಿಯಲನಿತ
ಕ್ಷೋಣಿ ಚಾತುರ್ಬಲವು ಕೆಡೆಯಲು
ಪ್ರಾಣದಾತ್ಮಸಹೋದರರು ಕಡಿವಡೆದು ಬಿದ್ದಿರಲು ।

ತ್ರಾಣಗುಂದಿದುದಿಲ್ಲ ನಿನ್ನಯ
ಗೋಣಿಯೊಡೆಯಲೆನಗಾದುದಪಜಯ
ಕಾಣೆನಾರ ಸಹಾಯವನು ಕಲಿಕರ್ಣ ಹಾಯೆಂದ ॥ ೨

ಬಂದು ಸಂಜೆಯ ರಣದ ವಾರ್ತೆಯ
ನಂದು ನೃಪರಿಗೆಯರುಹಿದರೆ ಕಡು
ನೊಂದು ಹಮ್ಮೈಸಿದನು ಹಾ ಹಾ ಕರ್ಣ ಹಾಯೆನುತ ।
ಕಂದಿದನು ಕಡುಶೋಕ ಶಿಖಿಯಲಿ
ಬೆಂದು ಮಿಗೆ ಜವಗುಂದಿ ಯೆಚ್ಚಱು
ತಂದು ಮೇಲಣ ಕಥೆಯ ವಿಸ್ತರಿಸೆಂದನಂಧನೃಪ ॥ ೩

೩೩ನೆಯ ಪದ್ಯವಾದಮೇಲೆ (ಗ.ಟ.ದ) ಪ್ರತಿಗಳಲ್ಲಿ ಮುಂದಿನ ಪದ್ಯಗಳು ಹೆಚ್ಚಾಗಿವೆ.—

ಕೊಂತವೊಡಲೊಳಗೆದ್ದ ತೆರದಲಿ
ಕೊಂತಿ ಕರ್ಣನ ಸಾವ ಕೇಳಿದು
ಚಿಂತೆ ಮಿಗಿಲೊಳಗೊಗೆ ನೆನೆದಳು ನಯನವಾರಿಗಳ ।
ಭ್ರಾಂತಿ ಕವಿದುದು ಮನಕೆ ಕರುಣವ
ಸಂತವಿಡಳಡವಡದೆ ಕರ್ಣನ
ನೆಂತು ಕೊಂದರೆನುತ್ತ ಧರ್ಮಜ ಬಳಿಕ ಮರುಗಿದನು ॥ ೧

ಕರುಳು ಕಂಟಣಿಸಿದವು ಚಿತ್ತಕೆ
ಹಿರಿದು ಶೋಕದ ಬೀಡು ಬಿಟ್ಟುದು
ಕರುಣದಲಿ ಕಡು ಮೋಹವಾಯಿತು ಕರ್ಣ ಮಡಿದನೆನೆ ।
ಪರಮಬಂಧುಗಳಳಿದರಾ ದಿನ
ಪರಿಯು ಧಗೆಯವಗಡಿಸಿತಿಂದೇ
ನರಿಯನರಸಂಗೆನುತ ಬಿನ್ನಹಮಾಡಿದನು ಭೀಮ ॥ ೨

ತೆಗೆದು ಹೋದುದು ಸೇನೆ ಬಲುಗಾ
ಳಗವ ಗೆಲಿದನು ಪಾರ್ಥ ಚಿತ್ತದ
ದುಗುಡದಲಿ ಬಂದೆರಗಿದನು ಧರ್ಮಜನ ಚರಣದಲಿ ।
ಮಗುಟವನು ನೆಗಹಿದನು ತಮ್ಮನ
ಮೊಗವ ನೋಡುತ ಕರ್ಣನನು
ನೀಗಿದನುಚಿತವೆನುತ ಮರುಗಿದನಂದು ಯಮಸೂನು ॥ ೩

ಹಗೆಗೆ ಹರುವಾಯ್ತೆನಲು ಚಿತ್ತಕೆ
ದುಗುಡ ಬಿಡುವುದು ಮಾತು ಬೀಗಳು
ನೆಗೆದುದುರಿಯುದರದಲಿ ಮನ ಶಂಕಿಸುವುದಡಿಗಡಿಗೆ ।
ಮಗನೆನಿಸಿದಭಿಮನ್ಯು ಮಡಿದಾ
ಬಗೆಯೊಳೀವ್ಯಥೆ ತೋರದೆನುತವೆ
ದೃಗುಜಲವನೊರಸುತ್ತ ನಕುಲ ತಂಬುಲವನುಗುಳ್ದ ॥ ೪

ನುಡಿಯಬಾರದು ಕೃಷ್ಣನಾಜ್ಞೆಯು
ಮಿಡುಕಲಮ್ಮದೆ ತನ್ನ ನಿಳಯಕೆ
ನಡೆದು ಕಡುದುಃಖದಲಿ ಧರಣಿಗೆ ತನುವನೀಡಾಡಿ ।
ಒಡನೆ ಹುಟ್ಟಿದ ಹಿರಿಯನಳಿವಿನ
ಕಡು ನಿರೋಧವ ಕಂಡೆನೆನಗಿದು
ನುಡಿಯಬಾರದೆನುತ್ತ ಹೊರಳಿದನೊದರಿ ಸಹದೇವ ॥ ೫

ಬೆದಕಲಮ್ಮಳು ಕರ್ಣನಾರೆಂ
ಬುದ ವಚನಿಸಳಮ್ಮಲತಿಶೋ
ಕದಲಿ ತಾ ತನ್ನೊಳಗೆ ದ್ರೌಪದಿ ಕಂದಿ ಕರಗಿದಳು ।
ಕದಲಿ ಕರ್ಣಂಗೆ ಹರುವಾದುದು
ನಿದಾನವು ಜೀಯಯೆನೆ ಬಳ
ಲಿದನು ಕೌರವರಾಯ ನಸು ನಡುನೆತ್ತಿಗೇರುತಿರೆ ॥ ೬

೩೫ನೆಯ ಪದ್ಯವಾದಮೇಲೆ (ಕ) ಪ್ರತಿಯಲ್ಲಿ ಮುಂದಿನ ಪದ್ಯವು ಹೆಚ್ಚಾಗಿದೆ.

ಕುದಿದು ಕೃಷ್ಣನು ಕರ್ಣನಳಿವನು
ವಿದಿತದಿಂದವೆ ಮಾಡಿಸಿದನತಿ
ಮುದದಿ ಹೆಚ್ಚಿದ ಹರುಷದಲಿ ಭೂಭಾರ ಹೋಯ್ತೆನುತ ।
ಸದನವನು ಹೊಕ್ಕನು ನಿರಂತರ
ಕದಡು ದುರಿಯೋಧನನ ಮೇಲಿರೆ
ಕದನದಲಿ ಪಾಂಡವರ ಸಲಹಿದ ವೀರನಾರಯಣ ॥